₹ 6 @vishwavaninews epaper.vishwavani.news vishwavani.news ಬೆಂಗಳೂರು | ಹುಬ್ಬಳ್ಳಿ | ಮಂಗಳೂರು | ದಾವಣಗೆರೆ | ಕಲಬುರಗಿ | ಬೆಳಗಾವಿ ಬುಧವಾರ 18.09.2024 ಸಂಪುಟ: 09 ಸಂಚಿಕೆ: 268 ಪುಟಗಳು: 12 ಪ್ರಧಾನ ಸಂಪಾದಕ: ವಿಶ್ವೇಶ್ವರ ಭಟ್

ವಿಶ್ವವಾಣಿ
ವಿಶ್ವಾಸವೇ ವಿಶ್ವ

ಭಾರತ ಚಾಂಪಿಯನ್

ಚಾಂಪಿಯನ್ಸ್ ಟ್ರೋಫಿ ಹಾಕಿಯಲ್ಲಿ ಆತಿಥೇಯ ಚೀನಾ ವಿರುದ್ಧ ನಡೆಸಿ 1-0 ಅಂತರದಿಂದ ಗೆದ್ದ ಭಾರತಕ್ಕೆ ಐದನೇ ಬಾರಿ ಚಾಂಪಿಯನ್ ಪಟ್ಟ ಅಲಂಕರಿಸಿದೆ.

ಪುಟ ತೆರೆದಂತೆ...

ಸಯನೇಡ್ ಜೀವವನ್ನು ಸೃಜಿಸಬಲ್ಲದೆ?
ಹಿಂದಿರುಗಿ ನೋಡಿದಾಗ
ಡಾ. ನಾ.ಸೋಮೇಶ್ವರ
ಸಂ.ಪುಟ | 6

ವ್ಯವಸ್ಥೆ ಆಫ್‌ಲೈನ್, ವಂಚನೆ ಆನ್‌ಲೈನ್
ಲೋಕಮತ
ಲೋಕೇಶ್ ಕಾಯರ್ಗ
ಸಂ.ಗಮ | 7

ಮಾತಂದ್ರೆ ಮಾತು

ನನ್ನ ಕುಟುಂಬದೊಂದಿಗೆ ಅಮೆರಿಕ ಪ್ರವಾಸ ಕೈಗೊಂಡಿದ್ದೆ. ಅಲ್ಲಿ ರಾಹುಲ್ ಗಾಂಧಿ ಅವರನ್ನು ಭೇಟಿ ಮಾಡಿದ್ದೇನೆ. ಅವರನ್ನು ಭೇಟಿ ಮಾಡಲು ನಾನು ಯಾರ ಅನುಮತಿ ಪಡೆಯಬೇಕು? ನಮ್ಮ ಪಕ್ಷದ ನಾಯಕರನ್ನು ಭೇಟಿಯಾಗಲು ಯಾವ ಅನುಮತಿ ಬೇಕಿದೆ..?

ಡಿ.ಕೆ. ಶಿವಕುಮಾರ್
ಉಪಮುಖ್ಯಮಂತ್ರಿ

ದಾರಿದೀಪೋಕ್ತಿ

ನಾನು ನಿನಗಾಗಿ ಬಹಳ ಕಾಳಜಿವಹಿಸುತ್ತೇನೆ ಎಂದು ಯಾರಾದರೂ ಹೇಳಿದರೆ, ಅದನ್ನು ಕೇಳಬೇಕು, ನಂಬಬಾರದು. ಈ ವಿಷಯದಲ್ಲಿ ಕ್ರಿಯೆಯೊಂದೇ ಸತ್ಯ. ಹೇಳುವುದಕ್ಕಿಂತ, ಮಾಡುವುದು ಮುಖ್ಯ. ಮಾಡುವ ಮೊದಲು ಹೇಳಬಾರದು. ಮಾಡಿದ ನಂತರ ಹೇಳುವ ಅಗತ್ಯವಿಲ್ಲ.

ವಕ್ರತುಂಡೋಕ್ತಿ

ಹೆಂಗಸರು ಆಲೋಚನಾಪ್ರಿಯರು, ತಮ್ಮ ಉಗುರಿಗೆ ಯಾವ ಬಣ್ಣ ಹಾಕಿಕೊಳ್ಳಬೇಕು ಎಂದು ತಾಸುಗಟ್ಟಲೆ ಆಲೋಚಿಸುತ್ತಾರೆ.

ಸಂಪುಟದಲ್ಲಿ 11,770 ಕೋಟಿ ಮೊತ್ತದ ಯೋಜನೆಗಳ ಭರ್ಜರಿ ಘೋಷಣೆ
1,685 ಕೋಟಿ ರು. ವೆಚ್ಚದಲ್ಲಿ ಸ್ಮಾರ್ಟ್‌ಸಿಟಿಯಾಗಿ ಕಲಬುರಗಿಯ ಅಭಿವೃದ್ಧಿ

ಕಲ್ಯಾಣ ಕರ್ನಾಟಕಕ್ಕೆ ಪ್ರತ್ಯೇಕ ಸಚಿವಾಲಯ

ಕಲಬುರಗಿ: ಕಲ್ಯಾಣ ಕರ್ನಾಟಕಕ್ಕೆ ವಿಶೇಷ ಸ್ಥಾನಮಾನ ನೀಡಿದ ದಶಮಾನೋತ್ಸವ ಸಂಭ್ರಮದ ದಿನವೇ ಆ ಭಾಗದ ಬಹುದಿನದ ಬೇಡಿಕೆಯಾಗಿದ್ದ 'ಪ್ರತ್ಯೇಕ ಸಚಿವಾಲಯ'ಕ್ಕೆ ಅಸ್ತು ಎನ್ನುವ ಮಹತ್ವದ ತೀರ್ಮಾನವನ್ನು ರಾಜ್ಯ ಸರಕಾರ ಕೈಗೊಂಡಿದೆ.

76ನೇ ಕಲ್ಯಾಣ ಕರ್ನಾಟಕ ಉತ್ಸವ, 371ಜೆ ಸ್ಥಾನದ ದಶಮಾನೋತ್ಸವದ ಹಿನ್ನೆಲೆಯಲ್ಲಿ ಕಲಬುರಗಿಯಲ್ಲಿ ಹಮ್ಮಿಕೊಂಡಿದ್ದ ವಿಶೇಷ ಸಚಿವ ಸಂಪುಟ ಸಭೆಯಲ್ಲಿ ಮಹತ್ವದ ತೀರ್ಮಾನವನ್ನು ಸಿದ್ದರಾಮಯ್ಯ ನೇತೃತ್ವದ ಸರಕಾರ ಕೈಗೊಂಡಿದೆ. ಸಂಪುಟದ ಶೇ.75ಕ್ಕಿಂತ ಹೆಚ್ಚು ಕಾರ್ಯಸೂಚಿ ಕಲ್ಯಾಣ ಕರ್ನಾಟಕ ಭಾಗಕ್ಕೆ ಸಂಬಂಧಿಸಿದ ವಿಷಯಗಳೇ ಆಗಿದ್ದವು. ಒಟ್ಟು 46 ಯೋಜನೆಗಳಿಗೆ ಒಪ್ಪಿಗೆ ನೀಡಿದ ಸಚಿವ ಸಂಪುಟ ಸಭೆ ಸುಮಾರು 11ಸಾವಿರ ಕೋಟಿ ರು. ಯೋಜನೆಗಳಿಗೆ ಅನುಮೋದನೆ ನೀಡುವ ಮೂಲಕ ಈ ಭಾಗದ ಸರ್ವಾಂಗೀಣ ಅಭಿವೃದ್ಧಿಗೆ ಮಹತ್ವದ ಕ್ರಮವನ್ನು ಕೈಗೊಂಡಿದೆ.

ಈ ಎಲ್ಲ ಯೋಜನೆಗಳಿಗಿಂತ ಪ್ರಮುಖವಾಗಿ ರಾಜ್ಯ ಸರಕಾರ ಪ್ರತ್ಯೇಕ ಸಚಿವಾಲಯವನ್ನು ಸ್ಥಾಪಿಸಲು ತೀರ್ಮಾನಿಸಿದೆ. ಈ ಮೂಲಕ ಪ್ರತ್ಯೇಕ ಸಚಿವಾಲಯದ ದಶಕಗಳ ಬೇಡಿಕೆಗೆ ಸಿದ್ದರಾಮಯ್ಯ ಆಡಳಿತ ಅಸ್ತು ಎಂದಿದೆ. ಈ ಮೂಲಕ ಇದೇ ಮೊದಲ ಬಾರಿಗೆ ಪ್ರಾದೇಶಿಕವಾರು ಸಚಿವಾಲಯ ಆರಂಭ ಗೊಂಡಿದೆ. ಬೀದರ್ ಹಾಗೂ ರಾಯಚೂರು ಪಟ್ಟಣಗಳನ್ನು ನಗರಪಾಲಿಕೆ ಮಾಡಲು ಒಪ್ಪಿಗೆ ನೀಡುವುದರೊಂದಿಗೆ, ಕಲ್ಯಾಣ ಕರ್ನಾಟಕ ಭಾಗದಲ್ಲಿ ಖಾಲಿಯಿರುವ 17ಸಾವಿರಕ್ಕೂ ಹೆಚ್ಚು ಹುದ್ದೆಗಳ ಭರ್ತಿ ತೀರ್ಮಾನಿಸಲಾಗಿದೆ.

→ 4

ಕಲಬುರಗಿಯಲ್ಲಿ ನಡೆದ ಸಂಪುಟ ಸಭೆಯಲ್ಲಿ ಭಾಗಿಯಾದ ಸಿಎಂ ಸಿದ್ದರಾಮಯ್ಯ, ಡಿಸಿಎಂ ಡಿ.ಕೆ. ಶಿವಕುಮಾರ್, ಸಚಿವರಾದ ಡಾ.ಜಿ. ಪರಮೇಶ್ವರ,ಎಚ್.ಕೆ ಪಾಟೀಲ್ ಮತ್ತಿತರರು ಉಪಸ್ಥಿತರಿದ್ದರು.

ಕಲ್ಯಾಣ ಕರ್ನಾಟಕದ ಅಭಿವೃದ್ಧಿಗೆ ಪ್ರತಿವರ್ಷ 5000 ಕೋಟಿ ಬಿಡುಗಡೆ ಮಾಡಲಾಗಿದೆ. ಆದರೆ ಕೇಂದ್ರ ಸರಕಾರ ಈ ಭಾಗಕ್ಕೆ ಒಂದು ರು. ನೀಡಿಲ್ಲ. ಸಂವಿಧಾನ ತಿದ್ದುಪಡಿಗೊಂಡು 371 ಜೆ ಬಂದ ನಂತರ ಈವರೆಗೆ ಅನುದಾನ ನೀಡಿಲ್ಲ. ಆದ್ದರಿಂದ ಈ ಭಾಗದ ಅಭಿವೃದ್ಧಿಗೆ 5000 ಕೋಟಿ ನೀಡಲು ಕೇಂದ್ರಕ್ಕೆ ಮನವಿ ಮಾಡಲು ನಿರ್ಣಯ ಕೈಗೊಳ್ಳಲಾಯಿತು.
– **ಸಿದ್ದರಾಮಯ್ಯ**, ಮುಖ್ಯಮಂತ್ರಿ

ಕಲ್ಯಾಣ ಕರ್ನಾಟಕಕ್ಕೆ ಸಿಕ್ಕಿದ್ದೇನು?

- ಕಲ್ಯಾಣ ಕರ್ನಾಟಕ ಭಾಗದಲ್ಲಿ ಖಾಲಿಯಿರುವ 17439 ಹುದ್ದೆಯ ಭರ್ತಿಗೆ ಅನುಮೋದನೆ.
- ಕ. ಕರ್ನಾಟಕ ಭಾಗದಲ್ಲಿ 45 ಪ್ರಾಥಮಿಕ ಆರೋಗ್ಯ ಕೇಂದ್ರ, 31 ಸಮುದಾಯ ಆರೋಗ್ಯ ಕೇಂದ್ರ ಆರಂಭಿಸಲು ಒಪ್ಪಿಗೆ
- ಕ. ಕರ್ನಾಟಕ ಭಾಗದಲ್ಲಿ ವಿವಿಧ ಆಸ್ಪತ್ರೆಗಳನ್ನು ಮೇಲ್ದರ್ಜೆಗೇರಿಸಲು 890 ಕೋಟಿ ಒಪ್ಪಿಗೆ.
- 12692 ಕೋಟಿ ಯೋಜನೆಯ 56 ವಿಷಯಗಳನ್ನು ಚರ್ಚಿಸಿ, 11770 ಕೋಟಿ ಮೌಲ್ಯದ 46 ವಿಷಯಗಳಿಗೆ ಒಪ್ಪಿಗೆ.
- ಬೀದರ್-ಕಲಬುರಗಿಯ ಜನ ವಸತಿ ಪ್ರದೇಶಕ್ಕೆ 7200 ಕೋಟಿ ವೆಚ್ಚದಲ್ಲಿ ಕುಡಿಯುವ ನೀರಿನ ಯೋಜನೆ.
- ಮಿನಿ ವಿಧಾನಸೌಧಗಳಿಗೆ ಪ್ರಜಾಸೌಧ ಎಂದು ಮರುನಾಮಕರಣ ಮಾಡಲು ತೀರ್ಮಾನ
- ನಾರಾಯಣಪುರ ಜಲಾಶಯದಿಂದ ನೀರು ತರುವ ಯೋಜನೆಗೆ ಶೇ.50ರಷ್ಟು ಅನುದಾನ ನೀಡಲು ಕೇಂದ್ರಕ್ಕೆ ಮನವಿಗೆ ತೀರ್ಮಾನ

ಕೇಜ್ರಿ ರಾಜೀನಾಮೆ ಬೆನ್ನಲ್ಲೇ ನೂತನ ಸಿಎಂ ಸ್ಥಾನಕ್ಕೆ ಆಪ್ತೆ ಆಯ್ಕೆ | ಹಕ್ಕು ಪ್ರತಿಪಾದನೆ

ಆತಿಶಿ ಮರ್ಲೆನಾ ದೆಹಲಿ ಹೊಸ ಸಿಎಂ

ದೆಹಲಿ: ಶಿಕ್ಷಣ ಸೇರಿದಂತೆ ಹಲವಾರು ಖಾತೆಗಳನ್ನು ಅರವಿಂದ್ ಕೇಜ್ರಿವಾಲ್ ಸಂಪುಟದಲ್ಲಿ ನಿರ್ವಹಿಸಿದ್ದ, ಸರಕಾರದ ಪರ ಹೆಚ್ಚಾಗಿ ಸುದ್ದಿಗೋಷ್ಠಿಗಳನ್ನು ನಡೆಸುತ್ತಿದ್ದ, ಲಂಡನ್‌ನಲ್ಲಿ ಉನ್ನತ ವ್ಯಾಸಂಗ ಮಾಡಿರುವ ಆತಿಶಿ ಮರ್ಲೆನಾ ದೆಹಲಿಗೆ ನೂತನ ಮುಖ್ಯಮಂತ್ರಿ ಆಗಲಿದ್ದಾರೆ.

ದೆಹಲಿಯಲ್ಲಿ ಮಂಗಳವಾರ ಬೆಳಗ್ಗೆ ನಡೆದ ಆಮ್ ಆದ್ಮಿ ಪಕ್ಷದ(ಎಎಪಿ) ಶಾಸಕಾಂಗ ಪಕ್ಷದ ಸಭೆಯಲ್ಲಿ ಕಲ್ಕಾಜಿ ಕ್ಷೇತ್ರದ ಶಾಸಕಿ, ಸಚಿವೆ ಆತಿಷಿ ಅವರನ್ನು ಮುಖ್ಯಮಂತ್ರಿ ಹುದ್ದೆಗೆ ಆಯ್ಕೆ ಮಾಡಲು ಕೇಜ್ರಿವಾಲ್ ಪ್ರಸ್ತಾಪ ಮಂಡಿಸಿದಾಗ ಸಭೆ ಸರ್ವಾನುಮತದ ಒಪ್ಪಿಗೆ ನೀಡಿತು. ಈ ಮೂಲಕ ದೆಹಲಿಯ ಮೂರನೇ ಮಹಿಳಾ ಸಿಎಂ ಎಂಬ ಹೆಗ್ಗಳಿಕೆಗೆ ಆತಿಶಿ ಪಾತ್ರರಾದರು.

ಸಿಎಂ ಸ್ಥಾನಕ್ಕೆ ರಾಜೀನಾಮೆ ನೀಡುವುದಾಗಿ ಕೇಜ್ರಿವಾಲ್ ಘೋಷಿಸಿದ ಎರಡು ದಿನದ ಬಳಿಕ ನೂತನ ಸಿಎಂ ಆಯ್ಕೆ ನಡೆದಿದೆ. ಅಬಕಾರಿ ನೀತಿ ಹಗರಣದಲ್ಲಿನ ಅಕ್ರಮ ಹಣ ವರ್ಗಾವಣೆ ಪ್ರಕರಣದಲ್ಲಿ ಜಾರಿ ನಿರ್ದೇಶನಾಲಯ(ಇ.ಡಿ)ದಿಂದ ಹಾಗೂ ಭ್ರಷ್ಟಾಚಾರ ಪ್ರಕರಣದಲ್ಲಿ ಕೇಂದ್ರ ತನಿಖಾ ದಳ(ಸಿಬಿಐ)ದಿಂದ ಬಂಧನಕ್ಕೊಳ ಗಾಗಿ ನ್ಯಾಯಾಂಗ ಬಂಧನದಲ್ಲಿದ್ದ ಕೇಜ್ರಿ ವಾಲ್‌ಗೆ ಸುಪ್ರೀಂಕೋರ್ಟ್ ಷರತ್ತುಬದ್ಧ ಮಧ್ಯಂತರ ಜಾಮೀನು ನೀಡಿದೆ. ತಿಹಾರ್ ಜೈಲಿನಿಂದ ಹೊರಬಂದ ಬಳಿಕ ಕೇಜ್ರಿವಾಲ್ ಭಾನುವಾರ ಪಕ್ಷದ ಕಾರ್ಯಕರ್ತರ ಸಭೆಯಲ್ಲಿ ರಾಜೀನಾಮೆ ನಿರ್ಧಾರ ಪ್ರಕಟಿಸಿದ್ದರು.

ಕೇಜ್ರಿವಾಲರನ್ನು ಮತ್ತೆ ಸಿಎಂ ಮಾಡಲು ಮುಂದಿನ ಕೆಲ ತಿಂಗಳ ಕಾಲ ಕೆಲಸ ಮಾಡುತ್ತೇನೆ. ದೆಹಲಿಯ ಜನರನ್ನು ರಕ್ಷಿಸುತ್ತೇನೆ. ಮೊದಲ ಬಾರಿಗೆ ರಾಜಕಾರಣಿಯೊಬ್ಬರು ಎಎಪಿಯಲ್ಲಿ ಮಾತ್ರ ಇಂತಹ ಅವಕಾಶ ಪಡೆಯಬಹುದು. ಬೇರೆ ಪಕ್ಷದಲ್ಲಾಗಿದ್ದರೆ ಚುನಾವಣೆಯಲ್ಲಿ ಸ್ಪರ್ಧಿಸಲು ಟಿಕೆಟ್ ಕೂಡ ಸಿಗುತ್ತಿರಲಿಲ್ಲ.
– **ಆತಿಶಿ ಮರ್ಲೆನ್**, ನೂತನ ಸಿಎಂ

ಕೇಜ್ರಿವಾಲರೇ ಸಿಎಂ: ಸಿಎಂ ಸ್ಥಾನಕ್ಕೆ ಆಯ್ಕೆಯಾದ ಬಳಿಕ ಪ್ರತಿಕ್ರಿಯೆ ನೀಡಿದ ಆತಿಶಿ, ತಮ್ಮ ಹಿರಿಯಣ್ಣ ಅರವಿಂದ ಕೇಜ್ರಿವಾಲ್ ರಾಜೀನಾಮೆ ನೀಡಿದ್ದಕ್ಕೆ ಬೇಸರವಾಗಿದೆ. ಅವರನ್ನು ಮತ್ತೆ ಮುಖ್ಯಮಂತ್ರಿ ಸ್ಥಾನಕ್ಕೆ ತರಲು ಶ್ರಮಿಸುತ್ತೇನೆ ಎಂದರು. ಕೇಜ್ರಿವಾಲ್ ತಮ್ಮ ಮೇಲೆ ಇಟ್ಟ ವಿಶ್ವಾಸಕ್ಕೆ ಕೃತಜ್ಞಳಾಗಿದ್ದೇನೆ.

→ 4

ಯತ್ನಾಳ್ ಮೇಲ್ಮನವಿ ಅರ್ಜಿ, ಸರಕಾರಕ್ಕೂ ನೋಟಿಸ್

ಡಿಕೆಶಿಗೆ ಸುಪ್ರೀಂ ನೋಟಿಸ್

ಬೆಂಗಳೂರು: ಡಿಸಿಎಂ ಡಿ.ಕೆ.ಶಿವಕುಮಾರ್ ವಿರುದ್ಧದ ಆದಾಯಕ್ಕಿಂತ ಹೆಚ್ಚಿನ ಆಸ್ತಿ ವಿಷಯದ ಪ್ರಕರಣವನ್ನು ಸಿಬಿಐನಿಂದ ಲೋಕಾಯುಕ್ತಕ್ಕೆ ಹಸ್ತಾಂತರಿಸಿದ ನಡೆ ಪ್ರಶ್ನಿಸಿ ಬಿಜೆಪಿ ಶಾಸಕ ಬಸನಗೌಡ ಪಾಟೀಲ್ ಯತ್ನಾಳ್ ಸುಪ್ರೀಂ ಕೋರ್ಟ್‌ನಲ್ಲಿ ಸಲ್ಲಿಸಿರುವ ಅರ್ಜಿ ವಿಚಾರಣೆ ನಡೆಸಿ, ನಾಲ್ಕು ವಾರಗಳ ಕಾಲ ಮುಂದೂಡಿದೆ.

ಮಂಗಳವಾರ ನ್ಯಾಯಮೂರ್ತಿಗಳಾದ ಸೂರ್ಯಕಾಂತ್ ಹಾಗೂ ಉಜ್ಜಲ್ ಬುಯಾನ್ ಅವರ ದ್ವಿಸದಸ್ಯ ಪೀಠ ಪ್ರಕರಣದ ವಿಚಾರಣೆ ನಡೆಸಿತು. ಈ ವೇಳೆ ಪ್ರತಿವಾದಿಗಳಿಗೆ ಸುಪ್ರೀಂ ಕೋರ್ಟ್ ನೋಟಿಸ್ ಜಾರಿಮಾಡಿ ಅರ್ಜಿ ವಿಚಾರಣೆಯನ್ನು ನಾಲ್ಕು ವಾರಗಳ ಕಾಲ ಮುಂದೂಡಿದೆ. ವಿಚಾರಣೆ ನಡೆಸಿ, ಕರ್ನಾಟಕ ಲೋಕಾಯುಕ್ತ, ಸಿಬಿಐ, ರಾಜ್ಯ ಸರಕಾರ ಮತ್ತು ಡಿ.ಕೆ.ಶಿವಕುಮಾರ್‌ಗೆ ತಕರಾರು ಅರ್ಜಿ ಸಲ್ಲಿಸಲು ಕಾಲಾವಕಾಶ ನೀಡಲಾಗಿದೆ.

ಆದಾಯಕ್ಕಿಂತ ಹೆಚ್ಚಿನ ಆಸ್ತಿ ಸಂಪಾದಿಸಿದ ಪ್ರಕರಣ ಸಂಬಂಧ ಸಂಪುಟದಲ್ಲಿ ಹಿಂದಿನ ಬಿಜೆಪಿ ಸರಕಾರ ನೀಡಿದ್ದ ಸಿಬಿಐ ತನಿಖೆಯನ್ನು ಹಿಂಪಡೆಯಲಾಗಿತ್ತು. ವಿಚಾರಣೆ ನಡೆಸಿದ ಹೈಕೋರ್ಟ್ ದ್ವಿಸದಸ್ಯ ಪೀಠ ಇದನ್ನು ಸುಪ್ರಿಂಕೋರ್ಟ್‌ನಲ್ಲಿ ಪ್ರಶ್ನಿಸುವಂತೆ ಸೂಚಿಸಿ ಯತ್ನಾಳ್ ಅರ್ಜಿಯನ್ನು ವಜಾಗೊಳಿಸಿತ್ತು. ಇದರಂತೆ ಯತ್ನಾಳ್ ಸುಪ್ರಿಂ ಕೋರ್ಟ್‌ಗೆ ಮೇಲ್ಮನವಿ ಸಲ್ಲಿಸಿದ್ದರು.

74 ಕ್ಕೆ ಕಾಲಿಟ್ಟ ಪ್ರಧಾನಿ ನರೇಂದ್ರ ಮೋದಿ

ಸರಕಾರಕ್ಕೆ ನೂರು ದಿನ: ದೇಶಾದ್ಯಂತ ಸೇವಾ ಪರ್ವ

ದೆಹಲಿ: ಪ್ರಧಾನಿ ನರೇಂದ್ರ ಮೋದಿ 74ನೇ ಜನ್ಮದಿನ ನಿಮಿತ್ತ ಒಡಿಶಾದಲ್ಲಿ 'ಸುಭದ್ರಾ' ಯೋಜನೆಗೆ ಮಂಗಳವಾರ ಚಾಲನೆ ನೀಡುವ ಮೂಲಕ ರಾಜ್ಯದ ಮಹಿಳೆಯರಿಗೆ ಎನ್‌ಡಿಎ ಸರಕಾರ ಉಡುಗೊರೆ ನೀಡಿದೆ. ರಾಜ್ಯದ 21ರಿಂದ 60 ವರ್ಷದ ಮಹಿಳೆಯರಿಗೆ ವಾರ್ಷಿಕ 10 ಸಾವಿರ ರು. ಗಳಂತೆ 5 ವರ್ಷ ಕಾಲ ನೀಡುವ ಯೋಜನೆ ಇದಾಗಿದೆ. ಒಂದು ಕೋಟಿ ಮಹಿಳೆಯರು ಇದರ ಲಾಭ ಪಡೆಯಲಿದ್ದಾರೆ.

ಮೋದಿ ಜನ್ಮದಿನ ಪ್ರಯುಕ್ತ ಈ ವರ್ಷವೂ ಬಿಜೆಪಿ ದೇಶಾದ್ಯಂತ 'ಸೇವಾ ಪರ್ವ' ಅಭಿಯಾನ ನಡೆಸಿದೆ. 15 ದಿನಗಳ ಕಾಲ ಸ್ವಚ್ಛತಾ ಕಾರ್ಯಕ್ರಮ, ರಕ್ತದಾನ ಶಿಬಿರ ಸೇರಿ ಹಲವು ಸೇವಾ ಕಾರ್ಯಕ್ರಮ ಆಯೋಜಿಸಲಾಗಿದೆ.

ಒಂದು ರಾಷ್ಟ್ರ, ಒಂದು ಚುನಾವಣೆಯೂ ಸಾಕಾರ

ದೇಶದಲ್ಲಿ ಶೀಘ್ರ ಡಿಜಿಟಲ್ ಜನಗಣತಿ ಶುರು: ಅಮಿತ್ ಶಾ

ನವದೆಹಲಿ: ದೇಶದಲ್ಲಿ ಶೀಘ್ರವೇ ಡಿಜಿಟಲ್ ಜನಗಣತಿ ನಡೆಸಲಾಗುವುದು ಎಂದು ಕೇಂದ್ರ ಗೃಹ ಸಚಿವ ಅಮಿತ್ ಶಾ ಮಂಗಳವಾರ ಪ್ರಕಟಿಸಿದ್ದಾರೆ.

ಮೋದಿ ನೇತೃತ್ವದಲ್ಲಿ ಸತತ ಮೂರನೆಯ ಅವಧಿಗೆ ರಚನೆಯಾಗಿರುವ ಸರ್ಕಾರವು 100 ದಿನಗಳನ್ನು ಪೂರೈಸಿದ ಹಿನ್ನೆಲೆಯಲ್ಲಿ ಸುದ್ದಿಗೋಷ್ಠಿ ನಡೆಸಿದ ಶಾ , ಡಿಜಿಟಲ್ ಜನಗಣತಿ ಬಗ್ಗೆ ತಿಳಿಸಿದರು.

1881ರಿಂದ ಪ್ರತಿ 10 ವರ್ಷಗಳಿಗೊಮ್ಮೆ ಜನಗಣತಿಯನ್ನು ನಡೆಸಲಾಗುತ್ತದೆ. ಈ ದಶವಾರ್ಷಿಕ ಜನಗಣತಿಯ ಮೊದಲ ಹಂತವು 2020ರ ಏ.1 ರಂದು ಪ್ರಾರಂಭವಾಗಬೇಕಿತ್ತು. ಆದರೆ ಕೋವಿಡ್ ನಿಂದಾಗಿ ಅದನ್ನು ಮುಂದೂಡಬೇಕಾಯಿತು ಎಂದರು. 2011ರ ನಂತರ ದೇಶದಲ್ಲಿ ಜನಗಣತಿ ನಡೆದಿಲ್ಲ. ಆದರೆ ಡಿಜಿಟಲ್ ಜನಗಣತಿ ಯಾವಾಗ ನಡೆಸಲಾಗುತ್ತದೆ ಎಂಬ ಬಗ್ಗೆ ಶಾ ಸ್ಪಷ್ಟ ಉತ್ತರ ನೀಡಿಲ್ಲ.

ಒಂದು ರಾಷ್ಟ್ರ, ಒಂದು ಚುನಾವಣೆ :ಎನ್‌ಡಿಎ ಸರ್ಕಾರವು ಒಂದು ರಾಷ್ಟ್ರ, ಒಂದು ಚುನಾವಣೆ ವ್ಯವಸ್ಥೆಯನ್ನು ತನ್ನ ಈಗಿನ ಅವಧಿಯಲ್ಲೇ ಜಾರಿಗೆ ತರಲಿದೆ ಎಂದು ಕೇಂದ್ರ ಗೃಹ ಸಚಿವರು ತಿಳಿಸಿದರು.

ಮುಷ್ಕರಕ್ಕೆ ಮಣಿದ ಮಮತಾ, ಪೊಲೀಸ್ ಆಯುಕ್ತರ ಎತ್ತಂಗಡಿ

ಕೋಲ್ಕತಾ: ಕಿರಿಯ ವೈದ್ಯೆ ಅತ್ಯಾಚಾರ ಮತ್ತು ಹತ್ಯೆ ಪ್ರಕರಣದಲ್ಲಿ ನ್ಯಾಯಕ್ಕೆ ಆಗ್ರಹಿಸಿ ನಿರಂತರ ಮುಷ್ಕರಕ್ಕೆ ನಡೆಸುತ್ತಿರುವ ಕೋಲ್ಕತಾ ವೈದ್ಯರ ಹೋರಾಟಕ್ಕೆ ಪಶ್ಚಿಮ ಬಂಗಾಳ ಸಿಎಂ ಮಮತಾ ಬ್ಯಾನರ್ಜಿ ಮಣಿದಿದ್ದಾರೆ. ಸರಕಾರ ಮತ್ತು ಪ್ರತಿಭಟನಾನಿರತ ಕಿರಿಯ ವೈದ್ಯರ ನಡುವಣ 5ನೇ ಸಭೆ ಭಾಗಶಃ ಯಶಸ್ವಿಯಾಗಿದೆ. ವೈದ್ಯರ ಬೇಡಿಕೆಯಂತೆ ನಗರ ಪೊಲೀಸ್ ಆಯುಕ್ತ ವಿನೀತ್ ಗೋಯಲ್, ಉತ್ತರ ವಿಭಾಗದ ಉಪ ಆಯುಕ್ತ ಅಭಿಷೇಕ್ ಗುಪ್ತಾ, ಆರೋಗ್ಯ ಇಲಾಖೆ ನಿರ್ದೇಶಕರನ್ನು ಮಂಗಳವಾರ ವರ್ಗಾವಣೆ ಮಾಡಿದೆ.

ಪಟಾಕಿ ಘಟಕ ಸ್ಫೋಟ: ಇಬ್ಬರು ಮಕ್ಕಳು ಸೇರಿ 12 ಸಾವು

ಲಖನೌ: ಉತ್ತರ ಪ್ರದೇಶದ ಫಿರೋಜಾಬಾದ್‌ನಲ್ಲಿನ ಪಟಾಕಿ ಘಟಕದಲ್ಲಿ ಸ್ಫೋಟ ವಾಗಿದ್ದು, ಪಕ್ಕದಲ್ಲಿದ್ದ ಮನೆ ಕುಸಿದಿದೆ. ಪರಿ ಣಾಮ 3 ವರ್ಷ ಮತ್ತು 1.5 ವರ್ಷದ ಇಬ್ಬರು ಮಕ್ಕಳು ಸೇರಿ ದಂತೆ 12 ಮಂದಿ ಮೃತಪಟ್ಟಿದ್ದಾರೆ. 10ಕ್ಕೂ ಹೆಚ್ಚು ಮಂದಿ ಗಾಯಗೊಂಡಿದ್ದು, ಆಸ್ಪತ್ರೆಗೆ ದಾಖಲಿಸಲಾಗಿದೆ.

ದರ್ಶನ್ ಗ್ಯಾಂಗ್ ಕಸ್ಟಡಿ ವಿಸ್ತರಣೆ

ಬೆಂಗಳೂರು: ರೇಣುಕಾಸ್ವಾಮಿ ಕೊಲೆ ಪ್ರಕರಣದ ಆರೋಪಿ ನಟ ದರ್ಶನ್ ಮತ್ತು ಸಹಚರರ ನ್ಯಾಯಾಂಗ ಬಂಧನವನ್ನು ಸೆ.30 ರವರೆಗೆ ವಿಸ್ತರಿಸಿ ನ್ಯಾಯಾಲಯ ಆದೇಶ ಹೊರಡಿಸಿದೆ.

ನ್ಯಾಯಾಂಗ ಅವಧಿ ಮಂಗಳವಾರಕ್ಕೆ ಅಂತ್ಯವಾದ ಹಿನ್ನಲೆಯಲ್ಲಿ ಆರೋಪಿಗಳೆಲ್ಲರೂ ವಿಡಿಯೊ ಕಾನ್ಫರೆನ್ಸ್ ಮೂಲಕ 24 ನೇ ಎಸಿಎಂಎಂ ನ್ಯಾಯಾಲಯದ ಎದುರು ಹಾಜರಾದರು. ಈ ವೇಳೆ ತಾಂತ್ರಿಕ ಸಾಕ್ಷ್ಯಾಧಾರ ವರದಿಯನ್ನು ಪೊಲೀಸರ ಪರ ವಕೀಲರು ಸಲ್ಲಿಸಿದರು.

ಮರಕ್ಕೆ ಕಾರು ಡಿಕ್ಕಿ ಐವರ ದುರ್ಮರಣ

ಮಾಗಡಿ: ತಾಲೂಕಿನ ಗುಡೇಮಾರನಹಳ್ಳಿ ಸಮೀಪ ಬೆಂಗಳೂರು-ಮಂಗಳೂರು ರಾಷ್ಟ್ರೀಯ ಹೆದ್ದಾರಿಯಲ್ಲಿ ಮಂಗಳವಾರ ಸಂಜೆ ಕಾರೊಂದು ಮರಕ್ಕೆ ಡಿಕ್ಕಿಹೊಡೆದ ಪರಿಣಾಮ ಒಂದೇ ಕುಟುಂಬದ ಐವರು ದುರ್ಮರಣಕ್ಕೀಡಾಗಿದ್ದಾರೆ. ಸಂಬಂಧಿಕರೊಬ್ಬರ ತಿಥಿ ಮುಗಿಸಿ ಕುಣಿಗಲ್‌ನಿಂದ ಬೆಂಗಳೂರಿಗೆ ತೆರಳುತ್ತಿದ್ದಾಗ ಕಾರು ನಿಯಂತ್ರಣ ತಪ್ಪಿ ಈ ದುರ್ಘಟನೆ ಸಂಭವಿಸಿದೆ. ಮೃತರಲ್ಲಿ ಮೂವರು ಮಹಿಳೆಯರು ಮತ್ತು ಇಬ್ಬರು ಪುರುಷರು ಸೇರಿದ್ದಾರೆ. ತುಮಕೂರು ಜಿಲ್ಲೆ ಹುಲಿಯೂರು ದುರ್ಗದ ಹುಲಿವಾನದ ಈ ಕುಟುಂಬ ಬೆಂಗಳೂರಿನ ಬಾಗಲಗುಂಟೆಯಲ್ಲಿ ನೆಲೆಸಿತ್ತು.

ಪಡಿತರ: ಬೇಳೆ ವಿತರಣೆಗೆ ಚಿಂತನೆ

ಕಲಬುರಗಿ: ಪಡಿತರದಲ್ಲಿ ತೊಗರಿ ಬೇಳೆ ವಿತರಣೆ ಮಾಡಬೇಕು ಎಂಬುದರ ಬಗ್ಗೆ ಚಿಂತನೆ ನಡೆಸಲಾಗುತ್ತಿದೆ ಎಂದು ಗ್ರಾಹಕರ ಹಾಗೂ ವ್ಯವಹಾರಗಳ ಮತ್ತು ಸಾರ್ವಜನಿಕ ಪಡಿತರ ವಿತರಣಾ ಸಚಿವ ವಿ.ಮುನಿಯಪ್ಪ ಹೇಳಿದ್ದಾರೆ. ಸುದ್ದಿಗಾರರೊಂದಿಗೆ ಅವರು ಮಾತನಾಡಿ, ಪಡಿತರ ದಲ್ಲಿ ತೊಗರಿಬೇಳೆ ಸೇರಿ ಸಬೇಕೆಂಬುದು ಬಹಳ ದಿನಗಳ ಬೇಡಿಕೆಯಾಗಿದೆ. ಪಡಿತರದಲ್ಲಿ ಸೇರ್ಪಡೆಯಾದರೆ ರೈತರಿಗೆ ಅನುಕೂಲ ಜತೆಗೆ ಗ್ರಾಹಕರಿಗೂ ಅನುಕೂಲವಾಗಲಿದೆ ಎಂದರು.

ಜಮ್ಮು- ಕಾಶ್ಮೀರ: ಇಂದು ಮೊದಲ ಹಂತದ ಚುನಾವಣೆ

ಶ್ರೀನಗರ: ಕೇಂದ್ರಾಡಳಿತ ಪ್ರದೇಶವಾದ ಜಮ್ಮು-ಕಾಶ್ಮೀರ ವಿಧಾನಸಭೆಗೆ ಬುಧವಾರ ಮೊದಲ ಹಂತದ ಚುನಾವಣೆ ನಡೆಯುತ್ತಿದೆ. ಕಾಶ್ಮೀರದ 4 ದಕ್ಷಿಣ ಜಿಲ್ಲೆಗಳು ಮತ್ತು ಬಿಜ್‌ಬೆಹರಾದ 24 ಕ್ಷೇತ್ರಗಳಿಗೆ ಚುನಾವಣೆ ನಡೆಯುತ್ತಿದ್ದು 23 ಲಕ್ಷ ಮತದಾರರು ಹಕ್ಕು ಚಲಾಯಿಸಲಿದ್ದಾರೆ. ಕಣಿವೆ ರಾಜ್ಯದಲ್ಲಿ 370 ನೇ ವಿಧಿ ರದ್ದಾದ ಬಳಿಕ ನಡೆದಿರುವ ಮೊದಲ ಚುನಾವಣೆ ಇದಾಗಿದೆ. ಮುನ್ನೆಚ್ಚರಿಕೆಯಿಂದಾಗಿ ಕೇಂದ್ರ ಸಶಸ್ತ್ರ ಅರೆ ಸೇನಾಪಡೆ, ಪೊಲೀಸ್ ಭದ್ರತೆಗೆ ನಿಯೋಜನೆಗೊಂಡಿದೆ.

ಮಿನಿ ವಿಧಾನಸೌಧಗಳಿಗೆ ಪ್ರಜಾಸೌಧ ಹೆಸರು

ಕಲಬುರಗಿ: ತಾಲೂಕು ಕೇಂದ್ರಗಳು ಸೇರಿದಂತೆ ಎಲ್ಲೆಲ್ಲಿ ಮಿನಿ ವಿಧಾನಸೌಧಗಳಿವೆ ಅವುಗಳ ಹೆಸರನ್ನು ಪ್ರಜಾಸೌಧ'ಗಳು ಎಂದು ಬದಲಾವಣೆ ಮಾಡಲಾಗುವುದು ಎಂದು ಡಿಸಿಎಂ ಡಿ.ಕೆ. ಶಿವಕುಮಾರ್ ತಿಳಿಸಿದರು. ಮಾಧ್ಯಮಗೋಷ್ಠಿಯಲ್ಲಿ ಮಾತನಾಡಿದ ಅವರು, ಈ ಮೂಲಕ ಆಡಳಿತ ಯಂತ್ರಕ್ಕೆ ಚುರುಕು ಹಾಗೂ ಆಡಳಿತ ವಿಕೇಂದ್ರೀಕರಣಕ್ಕೆ ಆದ್ಯತೆ ನೀಡಲಾಗುವುದು. ರಾಯಚೂರು ಮತ್ತು ಬೀದರ್ ಅನ್ನು ಮಹಾನಗರ ಪಾಲಿಕೆಗಳನ್ನಾಗಿ ಘೋಷಣೆ ಮಾಡಲಾಗುತ್ತಿದೆ ಎಂದರು.

ಬುಲ್ಡೋಜರ್ ನ್ಯಾಯಕ್ಕೆ ಸುಪ್ರೀಂ ಕೋರ್ಟ್ ತಡೆ

ದೆಹಲಿ: ಉ.ಪ್ರದೇಶ ಸೇರಿ ವಿವಿಧ ರಾಜ್ಯ ಗಳಲ್ಲಿ ನಡೆಸುತ್ತಿರುವ 'ಬುಲ್ಡೋಜರ್ ಕ್ರಮ' ಸುಪ್ರೀಂ ಕೋರ್ಟ್ ಮಂಗಳವಾರ ತಡೆ ನೀಡಿದೆ. ಬುಲ್ಡೋಜರ್ ಕಾರ್ಯಾಚರಣೆ ವಿರುದ್ಧ ಸಲ್ಲಿಕೆಯಾದ ಅರ್ಜಿಗಳ ವಿಚಾರಣೆ ವೇಳೆ ಅಸಮಾಧಾನ ವ್ಯಕ್ತಪಡಿಸಿದ ನ್ಯಾ.ಬಿ. ಆರ್.ಗವಾಯಿ ಮತ್ತು ನ್ಯಾ.ಕೆ.ವಿ.ವಿಶ್ವನಾಥನ್ ಅವರಿದ್ದ ಪೀಠ, ಅ.1ರವರೆಗೆ ಅಕ್ರಮ ಕಟ್ಟಡ ತೆರವು ಹೊರತುಪಡಿಸಿ ಖಾಸಗಿ ಆಸ್ತಿಗಳ ವಿರುದ್ಧ ಕಾರ್ಯಾಚರಣೆ ನಡೆಸು ವಂತಿಲ್ಲ ಎಂದು ಆದೇಶಿಸಿದೆ. ಆದರೆ ಈ ಆದೇಶ ಅಕ್ರಮ ಕಟ್ಟಡ-ಜಾಗಗಳ ತೆರವು ಕಾರ್ಯಾಚರಣೆಗೆ ಅನ್ವಯಿಸುವುದಿಲ್ಲ ಎಂದು ಕೋರ್ಟ್ ಸ್ಪಷ್ಟಪಡಿಸಿದೆ.

ನಿರ್ಮಲಾನಂದ ಶ್ರೀಗಳ ಬೇಸರ | ಶಾಸಕರಿಗೆ 14 ದಿನಗಳ ನ್ಯಾಯಾಂಗ ಕಸ್ಟಡಿ

ಮುನಿರತ್ನ ವಿರುದ್ಧ ಒಕ್ಕಲಿಗರ ಮುನಿಸು

ಬೆಂಗಳೂರು: ಒಕ್ಕಲಿಗರನ್ನು 'ಟೀಕಿಸುವ' ಭರದಲ್ಲಿ ನಾಲಿಗೆ ಹರಿಬಿಟ್ಟಿದ್ದ ಮುನಿರತ್ನ ವಿರುದ್ಧ ಇದೀಗ ಒಕ್ಕಲಿಗ ಸಮುದಾಯ ಸ್ವಾಮೀಜಿಗಳು ಮುನಿಸಿಕೊಂಡು ಬಹಿರಂಗವಾಗಿ ಅಸಮಾಧಾನ ಹೊರಹಾಕಿರುವುದು ಇದೀಗ ಬಿಜೆಪಿಯನ್ನು ಇಕ್ಕಟ್ಟಿಗೆ ಸಿಲುಕಿಸಿದೆ. ಈ ನಡುವೆ ಇದೇ ಪ್ರಕರಣದಲ್ಲಿ ಸೆ.30ರವರೆಗೆ ನ್ಯಾಯಾಂಗ ಬಂಧನಕ್ಕೆ ಒಳಗಾಗಿರುವ ಮುನಿರತ್ನ ಅವರನ್ನು ಪರಪ್ಪನ ಅಗ್ರಹಾರಕ್ಕೆ ಶಿಫ್ಟ್ ಮಾಡಲಾಗಿದೆ.

ವಿಶ್ವವಾಣಿ ವಿಶೇಷ

ಒಕ್ಕಲಿಗರು ಹಾಗೂ ದಲಿತರನ್ನು ಶಾಸಕ ಮುನಿರತ್ನ ನಿಂದಿಸಿದ್ದಾರೆ ಎನ್ನಲಾದ ಪ್ರಕರಣ ಮೈತ್ರಿ ನಾಯಕರಿಗೆ ಮಗ್ಗುಲ ಮುಳ್ಳಾಗಿ ಪರಿಣಮಿ ಸಿದೆ. ಈ ವಿಚಾರ ಜೆಡಿಎಸ್-ಬಿಜೆಪಿಗೆ ನುಂಗಲಾರದ ತುತ್ತಾಗಿದೆ. ರಾಜಕೀಯದ ಹೊರತಾಗಿ ಕಾನೂನಾತ್ಮಕವಾಗಿ ಜಾಮೀನಿಗೆ ಅರ್ಜಿ ಸಲ್ಲಿಸಿದ್ದ ಮುನಿರತ್ನ ಅರ್ಜಿ ವಿಚಾರಣೆ ನ್ಯಾಯಾಲಯ ಬುಧವಾರಕ್ಕೆ ಮುಂದೂಡಲಾಗಿದೆ. ಈ ಎಲ್ಲದರ ನಡುವೆ ಆದಿಚುಂಚನಗಿರಿ ಮಠದ ಪೀಠಾಧ್ಯಕ್ಷ ಶ್ರೀ ನಿರ್ಮಲಾ ನಂದ ಸ್ವಾಮೀಜಿ ಅವರು, ಮುನಿರತ್ನ ನಡೆಯನ್ನು ವಿರೋಧಿಸಿರುವುದು ಜೆಡಿಎಸ್ ಹಾಗೂ ಬಿಜೆಪಿ ಪಕ್ಷದ ಒಕ್ಕಲಿಗ ನಾಯಕರ ಬಾಯಿ ಮುಚ್ಚಿದಂತಾ ಗಿದೆ. ಹಳೇ ಮೈಸೂರು ಭಾಗದಲ್ಲಿ ಮೈತ್ರಿ ಸಂಘಟನೆ ಭದ್ರಪಡಿಸಿಕೊಳ್ಳಲು ಭಾರಿ ಪ್ರಯತ್ನ ನಡೆಸುತ್ತಿದ್ದ ಮೈತ್ರಿಗಳ ನಿದ್ದೆಗೆಡಿಸಿದೆ. ಇದೇ ವಿಚಾರ ಮುಂದಿಟ್ಟುಕೊಂಡು ಒಕ್ಕಲಿಗ ಹಾಗೂ ದಲಿತರನ್ನು ಮತ್ತಷ್ಟು ಸೆಳೆದು ಕಾಂಗ್ರೆಸ್ ತನ್ನ ಪ್ರಭಾವ ವಿಸ್ತರಿಸಿಕೊಳ್ಳುತ್ತಿದೆ ಎನ್ನುವ ಮಾತುಗಳು ಕೇಳಿಬಂದಿದೆ.

→ 4



ಕ್ಷಮಿಸಲು ಸಾಧ್ಯವಿಲ್ಲ: ಡಾ.ನಿರ್ಮಲಾನಂದ ಸ್ವಾಮೀಜಿ



ಧ್ವನಿಮುದ್ರಿಕೆ ನಿಜವೇ ಆಗಿದ್ದಲ್ಲಿ ಕ್ಷಮಿಸಲು ಸಾಧ್ಯವಿಲ್ಲ ಎಂದು ಆದಿಚುಂಚನಗಿರಿ ಪೀಠದ ಡಾ.ನಿರ್ಮಲಾನಂದ ಸ್ವಾಮೀಜಿ ಎಚ್ಚರಿಕೆ ನೀಡಿ ದ್ದಾರೆ. ಮುನಿರತ್ನ ಧ್ವನಿ ವಿಚಾರಕ್ಕೆ ಸಂಬಂಧಿ ಸಿದಂತೆ ಪ್ರತಿಕ್ರಿಯಿಸಿದ ಶ್ರೀಗಳು, ಧ್ವನಿಮುದ್ರಿಕೆ ಯನ್ನು ನಾನೂ ಕೂಡ ಕೇಳಿಸಿಕೊಂಡಿದ್ದೇನೆ. ಅದನ್ನು ಪರೀಕ್ಷೆಗೆ ಕಳಿಸಿಕೊಡಲಾಗಿದೆ ಎಂದು ಗೊತ್ತಾಗಿದೆ. ಇದರಲ್ಲಿ ಅವರು ಮಾತನಾಡಿದ್ದಾರೋ ಮತ್ತೊಬ್ಬರು ಮಾತನಾಡಿ ದ್ದಾರೋ ಗೊತ್ತಾಗಲಿದೆ. ಆದರೆ ಈ ರೀತಿ ಯಾರೇ ಮಾತನಾಡಿ ದ್ದರೂ ಕೂಡ ನಾಗರಿಕ ಸಮಾಜದಲ್ಲಿ ಒಪ್ಪುವುದು ಖಂಡನೀಯ ಎಂದರು. ಕೇವಲ ಒಕ್ಕಲಿಗ ಸಮುದಾಯಕ್ಕೆ ಮಾತನಾಡಿದ್ದಾರೆ ಅಥವಾ ದಲಿತ ಸಮುದಾಯಕ್ಕೆ ಮಾತನಾಡಿದ್ದಾರೆ ಎನ್ನುವುದು ಎಷ್ಟು ಮುಖ್ಯನೋ, ಅದೇ ರೀತಿ ಸಮಾಜದಲ್ಲಿರುವ ಜನಾಂಗ ಗಳೂ ಅಷ್ಟೇ ಮುಖ್ಯ. ಪ್ರತಿ ಜನಾಂಗವನ್ನು ನಮ್ಮ ಸಂವಿಧಾನ ಒಪ್ಪಿಕೊಂಡಿದೆ. ಸಮಸ್ತ ತಾಯಂದಿರ ಬಗ್ಗೆ ಮಾತನಾಡಿ ರುವುದು ಸರಿಯಲ್ಲ. ತಾಯಂದಿರ ಬಗ್ಗೆ ಹೇಳಲು ಆಗದ ಪದಗಳು ಆ ಧ್ವನಿಯಲ್ಲಿದೆ. ಇದು ಕ್ಷಮಿಸಲು ಸಾಧ್ಯವಿಲ್ಲ. ಆಧುನಿಕತೆ ಬೆಳೆದಿದೆ ಎಂದು ನಮ್ಮ ಸಂಸ್ಕೃತಿ ಮರೆಯಬಾರದು. ಈ ರೀತಿ ಕೃತ್ಯ ಯಾರೇ ಮಾಡಿದ್ದರೂ ಕೂಡ ಅವರ ವಿರುದಧ ಕ್ರಮ ಕೈಗೊಳ್ಳಬೇಕು. ಈ ಹಿಂದೆ ಉರಿಗೌಡ ಹಾಗೂ ನಂಜೇಗೌಡ ವಿಚಾರಕ್ಕೆ ಸಂಬಂಧಿಸಿದಂತೆ ಮುನಿರತ್ನ ಅವರನ್ನು ಕರೆದು ಬುದ್ಧಿವಾದ ಹೇಳಲಾಗಿತ್ತು. ಇದಾದ ನಂತರ ಅವರು ಮಾತನಾಡಲಿಲ್ಲ. ಮುನಿರತ್ನ ವಿರುದ್ಧ ಕೆಂಗೇರಿಯಲ್ಲಿ ಒಕ್ಕಲಿಗರ ಸಂಘದಿಂದ ಪ್ರತಿಭಟನೆ ನಡೆಸಲಿರುವ ವಿಚಾರ ನಮ್ಮ ಗಮನಕ್ಕೆ ಬಂದಿಲ್ಲ ಎಂದರು.

ಪಿಎಸ್‌ಐ, ಕೆ-ಸೆಟ್, ಪಿಡಿಒ ಪರೀಕ್ಷೆಗಳಿಗೆ ಹೊಸ ವೇಳಾಪಟ್ಟಿ

ಬೆಂಗಳೂರು: ವಿವಿಧ ಕಾರಣಗಳಿಗೆ ಮುಂದೂಡಿಕೆಯಾಗಿದ್ದ ಪಿಎಸ್‌ಐ, ಗ್ರಾಮ ಆಡಳಿತಾಧಿಕಾರಿ, ಕೆ-ಸೆಟ್ ಸೇರಿದಂತೆ ವಿವಿಧ ಸ್ಪರ್ಧಾತ್ಮಕ ಪರೀಕ್ಷೆಗಳ ಪರಿಷ್ಕೃತ ವೇಳಾಪಟ್ಟಿಯನ್ನು ಕರ್ನಾಟಕ ಪರೀಕ್ಷಾ ಪ್ರಾಧಿಕಾರ ಪ್ರಕಟಿಸಿದೆ.

ಗ್ರೂಪ್ ಬಿ ಹಾಗೂ ಸಿ ಹುದ್ದೆಗಳಿಗೆ ರಾಜ್ಯ ಸರಕಾರ 3 ವರ್ಷಗಳ ವಯೋ ಮಿತಿ ಸಡಿಲಿಕೆ ಮಾಡಿರುವುದರಿಂದ ಹೊಸದಾಗಿ ಅರ್ಜಿ ಸಲ್ಲಿಸಲು ಅಭ್ಯರ್ಥಿಗಳಿಗೆ ಅವಕಾಶ ಮಾಡಿಕೊಡಬೇಕಾದ ಹಿನ್ನೆಲೆಯಲ್ಲಿ ಕೆಲವು ಸ್ಪರ್ಧಾತ್ಮಕ ಪರೀಕ್ಷೆಗಳನ್ನು ಕೆಇಎ ಮುಂದೂಡಿ, ಪರಿಷ್ಕೃತ ವೇಳಾಪಟ್ಟಿ ಬಿಡುಗಡೆ ಮಾಡಿದೆ. ಈ ಬಗ್ಗೆ ಕೆಇಎ ಪ್ರಕಟಣೆ ಹೊರಡಿ ಸಿದ್ದು, ಪಿಎಸ್‌ಐ ಸೇರಿದಂತೆ ವಿವಿಧ ಪರೀಕ್ಷೆ ಗಳ ಪರಿಷ್ಕೃತ ವೇಳಾಪಟ್ಟಿ ಬಿಡುಗಡೆ ಮಾಡಲಾಗಿದೆ. ಪಿಎಸ್‌ಐ ಪರೀಕ್ಷೆ ಅ.3ಕ್ಕೆ ನಡೆಯಲಿದೆ. ವಯೋಮಿತಿ ಸಡಿಲಿಕೆ ಮಾಡಿ ರುವ ಕಾರಣ ವಿಎಒ ಮತ್ತು ಜಿಟಿಟಿಸಿ ಹುದ್ದೆಗ ಳಿಗೆ ಸೆ.19ರಿಂದ 9 ದಿನ ಅರ್ಜಿ ಸಲ್ಲಿಸಲು ಮತ್ತೊಮ್ಮೆ ಅವಕಾಶ ನೀಡಲಾಗಿದೆ ಎಂದು ತಿಳಿಸಿದೆ.

ಈ ಹಿಂದೆ ಸೆ.22ಕ್ಕೆ ಪಿಎಸ್‌ಐ ಪರೀಕ್ಷೆ (ಕೆಇಎ) ಹಾಗೂ ಸೆ.14, 15ರಂದು ಗ್ರೂಪ್ ಬಿ ಹುದ್ದೆಗಳ ಪರೀಕ್ಷೆ (ಕೆಪಿಎಸ್ಸಿ) ನಿಗದಿಯಾಗಿತ್ತು. ಆದರೆ, ಸೆ. 22ಕ್ಕೆ ಯುಪಿಎಸ್ಸಿ ಪರೀಕ್ಷೆ ನಿಗದಿಯಾಗಿದ್ದರಿಂದ ಪಿಎಸ್‌ಐ ಪರೀಕ್ಷೆ ಮುಂದೂಡಲು ಅಭ್ಯರ್ಥಿಗಳು ಆಗ್ರಹಿಸಿದ್ದರು. ಹೀಗಾಗಿ ಪರೀಕ್ಷೆ ಮುಂದೂಡಿಕೆಯಾಗಿದೆ. ಇನ್ನು ರಾಜ್ಯ ಸರ್ಕಾರ ವಯೋಮಿತಿ ಸಡಿಲಿಕೆ ಮಾಡಿದ್ದರಿಂದ ಸೆ.14, 15ರಂದು ನಿಗದಿಯಾಗಿದ್ದ ಗ್ರೂಪ್ ಬಿ ಹುದ್ದೆಗಳ ಪರೀಕ್ಷೆಯನ್ನು ಕೆಪಿಎಸ್‌ಸಿ ಮುಂದೂಡಿತ್ತು.

ಪರಿಷ್ಕೃತ ವೇಳಾಪಟ್ಟಿ

- ಪಿಎಸ್‌ಐ ಪರೀಕ್ಷೆ- ಅ.3
- ಆಡಳಿತ ಅಧಿಕಾರಿ, ಜಿಟಿಟಿಸಿ ಹುದ್ದೆ (ಕಡ್ಡಾಯ ಕನ್ನಡ)- ಸೆ. 29 ಮತ್ತು ಅ.26 (ಹೊಸದಾಗಿ ಅರ್ಜಿ ಸಲ್ಲಿಸಿದವರಿಗೆ)
- ಗ್ರಾಮ ಆಡಳಿತ ಅಧಿಕಾರಿ ಪರೀಕ್ಷೆ- ಅ.27
- ಕೆ-ಸೆಟ್- ನ.24
- ಸಹಾಯಕ ಪ್ರಾಧ್ಯಾಪಕರು (ರಾಯಚೂರು ವಿವಿ)- ನ.24

ಫನ್‌ತರಂಗ
- ರಘುಪತಿ ಶೃಂಗೇರಿ -

ಬೆಂಗಳೂರು ಮಾಲ್‌ನಲ್ಲಿ ವಿಐಪಿ ಟಾಯ್ಲೆಟ್, ಮೂತ್ರ ಮಾಡಲು 1000ರೂ ವೆಚ್ಚ ಮಾಡಬೇಕು
ಸುದ್ದಿ



ಸಮಾಚಾರ ಸಣ್ಣದಲ್ಲ

ವಾಹನ ಕಳವು: ಐವರ ಬಂಧನ

ಬೆಂಗಳೂರು: ಸೋಲದೇವನಹಳ್ಳಿ ಠಾಣೆ ಪೊಲೀಸರು ಕಾರ್ಯಾಚರಣೆ ನಡೆಸಿ, ಹರೀಂದ್ರ(30), ಮುನಿಪ್ರಸಾದ್ ಅಲಿಯಾಸ್ ಮುನಿ(34) ಹಾಗೂ ಸಂಜಯ್ ಅಲಿಯಾಸ್ ಬ್ಲಾಕಿ(29) ಎಂಬುವವರನ್ನು ಬಂಧಿಸಿದ್ದಾರೆ. ಆರೋಪಿಗಳಿಂದ 17 ಲಕ್ಷ ರು. ಮೌಲ್ಯದ 12 ದ್ವಿಚಕ್ರ ವಾಹನಗಳನ್ನು ಜಪ್ತಿ ಮಾಡಲಾಗಿದ್ದು, ಇತ್ತೀಚೆಗೆ ಹೆಸರಘಟ್ಟ ಮುಖ್ಯರಸ್ತೆಯ ಎಜಿಬಿ ಲೇಔಟ್‌ನಲ್ಲಿ ವ್ಯಕ್ತಿಯೊಬ್ಬರ ಮನೆ ಎದುರು ನಿಲುಗಡೆ ಮಾಡಿದ್ದ ದ್ವಿಚಕ್ರ ವಾಹನ ಕಳವು ಮಾಡಲಾಗಿತ್ತು. ಈ ಸಂಬಂಧ ದಾಖಲಾದ ದೂರಿನ ಮೇರೆಗೆ ತನಿಖೆ ನಡೆಸಿ ಮೂವರು ಆರೋಪಿಗಳನ್ನು ಬಂಧಿಸಲಾಗಿದೆ ಎಂದು ಪೊಲೀಸರು ಹೇಳಿದರು. ಸುತ್ತಮುತ್ತಲ ಸಿಸಿಟಿವಿ ಕ್ಯಾಮೆರಾ ದೃಶ್ಯಾವಳಿ ಪರಿಶೀಲನೆ ನಡೆಸಿದಾಗ ಸಿಕ್ಕಿದ್ದ ಸುಳಿವು ಹಾಗೂ ಬಾತ್ಮೀದಾರರು ನೀಡಿದ ಮಾಹಿತಿ ಮೇರೆಗೆ ಹೆಸರ ಘಟ್ಟ ಮುಖ್ಯರಸ್ತೆಯ ಸಪ್ತಗಿರಿ ಜಂಕ್ಷನ್ ಬಳಿ ಎರಡು ದ್ವಿಚಕ್ರ ವಾಹನ ಸಹಿತ ಮೂವರು ಆರೋಪಿಗಳನ್ನು ವಶಕ್ಕೆ ಪಡೆಯಲಾಯಿತು ಎಂದು ಪೊಲೀಸರು ಹೇಳಿದರು. ಆರೋಪಿಗಳು ದುಶ್ಚಟಗಳ ದಾಸರಾಗಿದ್ದು, ತಮ್ಮ ಮೋಜು- ಮಸ್ತಿಗೆ ಸುಲಭವಾಗಿ ಹಣ ಗಳಿಸುವ ಉದ್ದೇಶದಿಂದ ದ್ವಿಚಕ್ರ ವಾಹನ ಕಳ್ಳತನ ಮಾಡುತ್ತಿದ್ದರು ಎಂದು ಪೊಲೀಸರು ಹೇಳಿದರು. ಆಟೋ ಹಾಗೂ ದ್ವಿಚಕ್ರ ವಾಹನ ಕಳವು ಮಾಡುತ್ತಿದ್ದ ವಿಶ್ವನಾಥ್ ಹಾಗೂ ಮಹಮ್ಮದ್ ನಯಾಜ್ ಎಂಬುವವರನ್ನು ಬ್ಯಾಡರಹಳ್ಳಿಯ ಠಾಣೆಯ ಪೊಲೀಸರು ಬಂಧಿಸಿದ್ದಾರೆ.

ವಿಶ್ವವಾಣಿ ಆರಾಮ
ಅನುದಿನವೂ ವಿರಾಮಕ್ಕೆ ಒಂದು ನೆಪ
ಪ್ರತಿದಿನ ಆರಾಮದಿಂದ ಓದಿ

ವೈಟ್‌ಫೀಲ್ಡ್‌ನ ಕಂಪನಿಯಲ್ಲಿ ಕೆಲಸ ಮಾಡುತ್ತಿದ್ದ ಸಾಫ್ಟ್‌ವೇರ್ ಎಂಜಿನಿಯರ್

7 ಲ್ಯಾಪ್‌ಟಾಪ್ ಖದೀಮ ಅಂದರ್

ಬೆಂಗಳೂರು: ವೈಟ್ ಫೀಲ್ಡ್‌ನ ಕಂಪನಿಯಲ್ಲಿ ಕೆಲಸ ಮಾಡುತ್ತಿದ್ದ ಸಾಫ್ಟ್ ವೇರ್ ಎಂಜಿನಿಯರ್ 57 ಲ್ಯಾಪ್‌ಟಾಪ್ ಕಳ್ಳತನ ಮಾಡಿ ಪೊಲೀಸರಿಗೆ ಸಿಕ್ಕಿಬಿದ್ದಿದ್ದಾರೆ ಎಂದು ನಗರ ಪೊಲೀಸ್ ಕಮಿಷನರ್ ಬಿ.ದಯಾನಂದ ಹೇಳಿದರು.

ಸುದ್ದಿಗೋಷ್ಠಿಯಲ್ಲಿ ಮಾತನಾಡಿ, ತಮಿಳುನಾಡಿನ ಕೃಷ್ಣಗಿರಿ ಜಿಲ್ಲೆಯ ಹೊಸೂರು ತಾಲೂಕಿನ ತೋರಪಲ್ಲಿ ಗ್ರಾಮದ ಮುರುಗೇಶ್ ಎಂಬುವವರನ್ನು ವೈಟ್‌ಫೀಲ್ಡ್ ಠಾಣೆ ಪೊಲೀಸರು ಬಂಧಿಸಿದ್ದಾರೆ. ಬಂಧಿತನಿಂದ 22 ಲಕ್ಷ ಮೌಲ್ಯದ 57 ಲ್ಯಾಪ್‌ಟಾಪ್ ಜಪ್ತಿ ಮಾಡಲಾಗಿದೆ. ವೈಟ್ ಫೀಲ್ಡ್‌ನ ಐಟಿಪಿಎಲ್‌ನ ಲ್ಯಾವಿಗೇಟರ್ ಕಟ್ಟಡದಲ್ಲಿರುವ ಟೆಲಿಕಲರ್ ಇಂಡಿಯಾದ ವ್ಯವಸ್ಥಾಪಕ ಅತುಲ್ ಹ್ಯಾವೆಲ್ ನೀಡಿದ ದೂರು ಆಧರಿಸಿ ಕಾರ್ಯಾಚರಣೆ ನಡೆಸಿ ಆರೋಪಿಯನ್ನು ತಮಿಳುನಾಡಿನಲ್ಲಿ ವಶಕ್ಕೆ ಪಡೆದು ಬಂಧಿಸಲಾಯಿತು ಎಂದು ಹೇಳಿದರು.

ಟೆಲಿಕಲರ್ ಇಂಡಿಯಾದಲ್ಲಿ ಕಳೆದ ಫೆಬ್ರವರಿಯಿಂದ ಸಿಸ್ಟಂ ಅಡ್ಮಿನ್ ಹುದ್ದೆಯಲ್ಲಿ ಆರೋಪಿ ಮುರುಗೇಶ್ ಕೆಲಸ ಮಾಡುತ್ತಿದ್ದು, ಕಂಪನಿಗೆ ಸೇರಿದ ಲ್ಯಾಪ್‌ಟಾಪ್‌ಗಳನ್ನು ಇಡುತ್ತಿದ್ದ ಸ್ಥಳ ಆರೋಪಿಗೆ ತಿಳಿದಿತ್ತು. ನಿತ್ಯ ಕೆಲಸಕ್ಕೆ ಬರುತ್ತಿದ್ದ ಆರೋಪಿ, ಒಂದೊಂದೇ ಲ್ಯಾಪ್‌ಟಾಪ್ ಕಳವು ಮಾಡಿದ್ದ. ಹೀಗೆ 57 ಲ್ಯಾಪ್‌ಟಾಪ್ ಕದ್ದು ಮಾತ್ರ ಸಂಸ್ಥೆ ತೊರೆದು ತಮಿಳುನಾಡಿನ ಕಂಪನಿಯೊಂದರಲ್ಲಿ ಕೆಲಸಕ್ಕೆ ಸೇರಿಕೊಂಡಿದ್ದ ಎಂದು ಮಾಹಿತಿ ನೀಡಿದರು.

ದೂರು ದಾಖಲಾದ ಮೇಲೆ ಕಂಪನಿಯ ಸುತ್ತಮುತ್ತ ಅಳವಡಿಸಿದ್ದ ಸಿಸಿಟಿವಿ ಕ್ಯಾಮೆರಾಗಳನ್ನು ಪರಿಶೀಲಿಸಲಾಯಿತು. ಸಿಸ್ಟಂ ಅಡ್ಮಿನ್ ಆಗಿ ಕೆಲಸ ಮಾಡುತ್ತಿದ್ದ ವ್ಯಕ್ತಿಯೇ ಲ್ಯಾಪ್‌ಟಾಪ್ ಕಳವು ಮಾಡಿರುವುದು ಎಂಬುದು ತನಿಖೆಯಿಂದ ತಿಳಿದು ಬಂದಿತ್ತು. ವೈಟ್ ಫೀಲ್ಡ್ ಠಾಣೆ ಪೊಲೀಸರು ಅಲ್ಲಿಗೆ ತೆರಳಿದಾಗ ತಮಿಳುನಾಡಿನ ಹೊಸೂರಿನ ರಾಘವೇಂದ್ರ ಚಿತ್ರಮಂದಿರದಲ್ಲಿ ಆರೋಪಿ ಸಿನಿಮಾ ವೀಕ್ಷಣೆ ಮಾಡುತ್ತಿದ್ದ. ಪೊಲೀಸರು ಆರೋಪಿ ಕುಳಿತಿದ್ದ ಆಸನದಿಂದ ಸ್ವಲ್ಪ ದೂರದಲ್ಲಿ ಕುಳಿತಿದ್ದರು. ಸಿನಿಮಾ ಪ್ರದರ್ಶನ ಮುಕ್ತಾಯವಾದ ತಕ್ಷಣವೇ ಆರೋಪಿಯನ್ನು ವಶಕ್ಕೆ ಪಡೆದುಕೊಂಡರು. ಆರೋಪಿಯನ್ನು ವಿಚಾರಣೆಗೆ ಒಳಪಡಿಸಿದಾಗ ಲ್ಯಾಪ್‌ಟಾಪ್ ಕಳವು ಮಾಡಿರುವುದಾಗಿ ತಪ್ಪೊಪ್ಪಿಕೊಂಡಿದ್ದಾನೆ ಎಂದು ಮೂಲಗಳು ತಿಳಿಸಿವೆ.



ಟೊಮೆಟೋ ಬೆಳೆಯಿಂದ 25 ಲಕ್ಷ ನಷ್ಟ

ಕೋವಿಡ್ ಸಂದರ್ಭದಲ್ಲಿ ಆರೋಪಿ ಆರು ಎಕರೆಯಲ್ಲಿ ಟೊಮೆಟೋ ಬೆಳೆದಿದ್ದ. ಟೊಮೆಟೋ ಬೆಳೆಯಿಂದ 25 ಲಕ್ಷ ರು.ನಷ್ಟವಾಗಿತ್ತು. ಸಾಲ ತೀರಿಸಲು ಕಳವು ಮಾಡಿದ್ದಾಗಿ ಹೇಳಿದ್ದಾನೆ. ಹೊಸೂರಿನಲ್ಲಿರುವ ಲ್ಯಾಪ್‌ಟಾಪ್ ರಿಪೇರಿ ಹಾಗೂ ಮಾರಾಟ ಮಾಡುವ ಅಂಗಡಿಗೆ 45 ಲ್ಯಾಪ್‌ಟಾಪ್‌ಗಳನ್ನು ಮಾರಾಟ ಮಾಡಿದ್ದ. ಮತ್ತೊಬ್ಬರಿಗೆ ಐದು ಲ್ಯಾಪ್‌ಟಾಪ್ ಮಾರಾಟ ಮಾಡಿದ್ದ ಎಂದು ನಗರ ಪೊಲೀಸ್ ಕಮಿಷನರ್ ಬಿ.ದಯಾನಂದ ತಿಳಿಸಿದರು.

ವಿಕೃತಿ ಮೆರೆದಿದ್ದ ರೌಡಿಗೆ ಪೊಲೀಸರ ಗುಂಡೇಟು

ಬೆಂಗಳೂರು: ಯುವಕನನ್ನು ನಡು ರಸ್ತೆಯಲ್ಲಿ ಬೆತ್ತಲೆಗೊಳಿಸಿ ಹಲ್ಲೆ ಮಾಡಿ ವಿಕೃತಿ ಮೆರೆದಿದ್ದ ರೌಡಿ ಪವನ್ ಪೊಲೀಸರ ಗುಂಡೇಟಿನಿಂದ ಗಾಯಗೊಂಡು ಸಿಕ್ಕಿಬಿದ್ದಿದ್ದಾನೆ.

ರೌಡಿ ಪವನ್ ಅಲಿಯಾಸ್ ಕಡಬು ಗುಂಡೇಟಿನಿಂದ ಗಾಯ ಗೊಂಡಿದ್ದು ಚಿಕಿತ್ಸೆಗಾಗಿ ಆಸ್ಪತ್ರೆಗೆ ದಾಖಲಿಸಲಾಗಿದೆ. ರಾಜ ಗೋಪಾಲನಗರದ ಠಾಣೆಯ ರೌಡಿ ಶೀಟರ್ ಪವನ್ ಕೆಲ ದಿನಗಳ ಹಿಂದೆ ಸುಂಕದಕಟ್ಟೆಯ ಬಳಿ ಯುವಕನೊಬ್ಬನನ್ನು ದ್ವೇಷದಿಂದ ಬೆದರಿಸಿ ಬಟ್ಟೆ ಬಿಚ್ಚಿಸಿ ಬೆತ್ತಲೆಗೊಳಿಸಿ ರಕ್ತ ಬರುವಂತೆ ಹಲ್ಲೆ ಮಾಡಿ ವಿಕೃತಿ ಮೆರೆದಿದ್ದ. ಈ ವೇಳೆ ಪ್ರಾಣ ಉಳಿಸಿಕೊಳ್ಳಲು ಸ್ಥಳದಿಂದ ಓಡಾಡಿದ್ದ ಯುವಕನ ವಿಡಿಯೊ ವೈರಲ್ ಆಗಿದ್ದು ಸಾರ್ವಜನಿಕ ವಲಯದಲ್ಲಿ ತೀವ್ರ ಆಕ್ರೋಶ ವ್ಯಕ್ತವಾಗಿತ್ತು. ಇದಲ್ಲದೆ ಇತ್ತೀಚಿಗೆ ರೌಡಿ ಪವನ್ ಸುಂಕದಕಟ್ಟೆ ಬಳಿ ವಿಶ್ವಾಸ್ ಎಂಬ ಯುವಕನ ಮೇಲೆ ಮಚ್ಚಿನಿಂದ ಹಲ್ಲೆ ಮಾಡಿದ್ದು ಈ ಸಂಬಂಧ ಕಾಮಾಕ್ಷಿಪಾಳ್ಯ ಠಾಣೆಯಲ್ಲಿ ಪ್ರಕರಣ ದಾಖಲಾ ಗಿತ್ತು. ರೌಡಿ ಪವನ್ ಮೇಲೆ ವಾರೆಂಟ್ ಇದ್ದರೂ ತಲೆ ಮರೆಸಿಕೊಂಡು ಓಡಾಡುತ್ತಿದ್ದ.

ಡ್ರ್ಯಾಗರ್‌ನಿಂದ ಹಲ್ಲೆ

ರೌಡಿ ಪತ್ತೆಗೆ ಪಶ್ಚಿಮ ವಿಭಾಗದ ಗಿರೀಶ್, ಕಾಮಾಕ್ಷಿಪಾಳ್ಯ ಹಾಗೂ ಗೋವಿಂದರಾಜನಗರ ಠಾಣೆಯ ಇನ್ಸ್‌ಪೆಕ್ಟರ್‌ಗಳ ನೇತೃತ್ವದಲ್ಲಿ ಎರಡು ತಂಡ ರಚಿಸಲಾಗಿತ್ತು. ರೌಡಿ ಪವನ್ ಜ್ಞಾನಭಾರತಿ ಬಳಿ ಉಲ್ಲಾಳದ ಹಿಲ್ ರಾಕ್ ಶಾಲೆ ಬಳಿ ಇರುವ ಮಾಹಿತಿ ಸಂಬಂಧ ಮಂಗಳವಾರ ಬೆಳಗಿನ ಜಾವ ಪೊಲೀಸರು ಅಡ್ಡಗಟ್ಟಿದ್ದಾಗ ಅವರ ಮೇಲೆ ಡ್ರ್ಯಾಗರ್‌ನಿಂದ ಹಲ್ಲೆ ಮಾಡಲು ಮುಂದಾಗಿದ್ದಾನೆ. ಈ ವೇಳೆ ಆತ್ಮರಕ್ಷಣೆಗೆ ಪೊಲೀಸರು ಹಾರಿಸಿದ ಗುಂಡು ರೌಡಿ ಪವನ್ ಕಾಲಿಗೆ ತಗುಲಿ ಕುಸಿದು ಬಿದ್ದು ವಶಕ್ಕೆ ಪಡೆಯಲಾಗಿದೆ.

ಜೈಲಲ್ಲಿ ಮೊಬೈಲ್, ಚಾಕು: ತನಿಖೆ ಶುರು

ಬೆಂಗಳೂರು: ಪರಪ್ಪನ ಅಗ್ರಹಾರ ಕೇಂದ್ರ ಕಾರಾಗೃಹದಲ್ಲಿರುವ ಕೈದಿಗಳ ಬಳಿ ಮೊಬೈಲ್, ಇಯರ್ ಫೋನ್ ಮತ್ತಿತರ ಎಲೆಕ್ಟ್ರಾನಿಕ್ ಉಪಕರಣಗಳು ಹಾಗೂ ಚಾಕು ಪತ್ತೆಯಾದ ಕುರಿತು ತನಿಖೆ ನಡೆಯುತ್ತಿದೆ ಎಂದು ನಗರ ಪೊಲೀಸ್ ಕಮಿಷನರ್ ಬಿ.ದಯಾನಂದ ಹೇಳಿದರು. ಸುದ್ದಿಗೋಷ್ಠಿಯಲ್ಲಿ ಮಾತನಾಡಿ, ಪೊಲೀಸರು ಕಾರಾಗೃಹದ ಮೇಲೆ ದಾಳಿಮಾಡಿ ಶೋಧ ನಡೆಸಿದಾಗ ನಿಷೇಧಿತ ವಸ್ತುಗಳು ಪತ್ತೆಯಾಗಿದ್ದು, ಜೈಲಾಧಿಕಾರಿಗಳು, ಭದ್ರತಾ ಸಿಬ್ಬಂದಿ, ಸಂಬಂಧಪಟ್ಟ ಬ್ಯಾರಕ್‌ನಲ್ಲಿರುವ ಕೈದಿಗಳ ವಿರುದ್ಧ ಪರಪ್ಪನ ಅಗ್ರಹಾರ ಪೊಲೀಸ್ ಠಾಣೆಯಲ್ಲಿ ಎಫ್‌ಐಆರ್ ದಾಖಲಾಗಿದೆ. ವರದಿ ಬಂದ ಬಳಿಕ ತಪ್ಪಿತಸ್ಥರ ವಿರುದ್ಧ ಕಾನೂನು ಕ್ರಮ ಕೈಗೊಳ್ಳಲಾಗುವುದು ಎಂದರು. ಚಿತ್ರದುರ್ಗದ ರೇಣುಕಾಸ್ವಾಮಿ ಕೊಲೆ ಪ್ರಕರಣದ ಆರೋಪಿ ನಟ ದರ್ಶನ್ ಹಾಗೂ ಸಹಚರರಿಗೆ ವಿಶೇಷ ಆತಿಥ್ಯ ನೀಡಿದ್ದ ಫೋಟೊ ಬಹಿರಂಗವಾದ ಹಿನ್ನೆಲೆ ಕಾರಾಗೃಹದ ಮೇಲೆ ಪೊಲೀಸರು ನಿಗಾ ವಹಿಸಿದ್ದರು. ಶನಿವಾರ ಆಗ್ನೇಯ ವಿಭಾಗದ ಪೊಲೀಸ್ ತಂಡ ಕೇಂದ್ರ ಕಾರಾಗೃಹದ ಮೇಲೆ ದಾಳಿ ನಡೆಸಿದ ಸಂದರ್ಭದಲ್ಲಿ ರೌಡಿಶೀಟರ್ ವಿಲ್ಸನ್ ಗಾರ್ಡನ್ ನಾಗ ಹಾಗೂ ಆತನ ಸಹಚರರ ಮೊಬೈಲ್ ಫೋನ್ ಜತೆಗೆ ಹಲವು ವಸ್ತುಗಳನ್ನು ವಶಕ್ಕೆ ಪಡೆಯಲಾಗಿತ್ತು.

ಐವರು ದರೋಡೆಕೋರರ ಸೆರೆ

ಬೆಂಗಳೂರು: ವಿಳಾಸ ಕೇಳುವ ನೆಪ ಹಾಗೂ ಮಾರಕಾಸ್ತ್ರದಿಂದ ಬೆದರಿಸಿ ಮೊಬೈಲ್‌ಗಳನ್ನು ದರೋಡೆ ಮಾಡಿಕೊಂಡು ಪರಾರಿಯಾಗುತ್ತಿದ್ದ 5 ಮಂದಿ ದರೋಡೆಕೋರರನ್ನು ಬಂಧಿಸಿರುವ ಪೊಲೀಸರು 5.75 ಲಕ್ಷ ರು. ಮೌಲ್ಯದ 26 ಮೊಬೈಲ್ ಫೋನ್ ವಶಪಡಿಸಿಕೊಂಡಿದ್ದಾರೆ. ಪುಟ್ಟೇನಹಳ್ಳಿ ಡೆಲಿವರಿ ಬಾಯ್ ಒಬ್ಬರು ಮೇಲ್ಸೇತುವೆ ಬಳಸಿ ಸ್ಥಳ ಹುಡುಕುತ್ತಿದ್ದಾಗ ಇಬ್ಬರು ದರೋಡೆಕೋರರು ವಿಳಾಸ ಕೇಳುವ ನೆಪದಲ್ಲಿ ಬಂದು ಮೊಬೈಲ್ ಕಿತ್ತುಕೊಂಡು ಪರಾರಿಯಾಗಿದ್ದರು. ಈ ಸಂಬಂಧ ಇಬ್ಬರನ್ನು ಬಂಧಿಸಿ 4.17 ಲಕ್ಷ ರು. ಬೆಲೆ ಬಾಳುವ 20 ಮೊಬೈಲ್‌ಗಳನ್ನು ವಶಪಡಿಸಿಕೊಂಡಿದ್ದಾರೆ. ಆರೋಪಿಗಳನ್ನು ವಿಚಾರಣೆಗೆ ಒಳಪಡಿಸಿದಾಗ ಬೆಂಗಳೂರು ಗ್ರಾಮಾಂತರ ಜಿಲ್ಲೆಯ ವಿವಿಧೆಡೆ ಮೊಬೈಲ್ ಸುಲಿಗೆ ಹಾಗೂ ಒಂದು ದ್ವಿಚಕ್ರ ವಾಹನ ಕಳವು ಮಾಡಿರುವುದು ತಿಳಿದು ಬಂದಿದೆ. ಇದನ್ನು ಸ್ನೇಹಿತರಿಗೆ ಕೊಟ್ಟಿರುವುದಾಗಿ ಅವರಿಂದ 20 ಫೋನ್‌ಗಳು ಹಾಗೂ ದ್ವಿಚಕ್ರ ವಾಹನ ವಶಪಡಿಸಿಕೊಳ್ಳುವಲ್ಲಿ ಇನ್ಸ್‌ಪೆಕ್ಟರ್ ರಾಧಾಕೃಷ್ಣ ಮತ್ತು ಸಿಬ್ಬಂದಿ ಯಶಸ್ವಿಯಾಗಿದ್ದಾರೆ. ಹನುಮಂತನಗರದಲ್ಲಿ ಆಟೋದಲ್ಲಿ ಬಂದು ಮೊಬೈಲ್ ಫೋನ್‌ಗಳನ್ನು ಸುಲಿಗೆ ಮಾಡುತ್ತಿದ್ದ ಮೂವರನ್ನು ಬಂಧಿಸಿ ಒಟ್ಟು 1.60 ಲಕ್ಷ ಮೌಲ್ಯದ 6 ಮೊಬೈಲ್ ಹಾಗೂ ಕೃತ್ಯಕ್ಕೆ ಬಳಸುತ್ತಿದ್ದ ಮಚ್ಚು ಹಾಗೂ ಆಟೋ ರಿಕ್ಷಾ ವಶಪಡಿಸಿಕೊಳ್ಳಲಾಗಿದೆ. ಆರೋಪಿಗಳ ಬಂಧನದಿಂದ ವಿಧಾನಸೌಧ, ಹನುಮಂತನಗರ, ಮಾಗಡಿ ರಸ್ತೆಯಲ್ಲಿನ ಹಲವು ಪ್ರಕರಣಗಳು ಪತ್ತೆಯಾಗಿದೆ.

ಜಾಗ ಬಿಡದಿದ್ದಕ್ಕೆ ಜಗಳ: ಚಾಲಕನ ಮೇಲೆ ಹಲ್ಲೆ

ಬೆಂಗಳೂರು: ಮುಂದೆ ಹೋಗಲು ಜಾಗ ಬಿಡಲಿಲ್ಲವೆಂಬ ಕಾರಣಕ್ಕೆ ಸ್ಕಾರ್ಪಿಯೊ ವಾಹನದ ಚಾಲಕ ಮತ್ತು ಆತನ ಸ್ನೇಹಿತರು ಶಾಲಾ ಬಸ್ ಅಡ್ಡಗಟ್ಟಿ, ಚಾಲಕನ ಮೇಲೆ ಹಲ್ಲೆ ನಡೆಸಿರುವ ಘಟನೆ ಎಲೆಕ್ಟ್ರಾನಿಕ್ ಸಿಟಿಯ ಮಾರಗೊಂಡನಹಳ್ಳಿಯಲ್ಲಿ ಸೋಮವಾರ ನಡೆದಿದೆ.

ಟರ್ಮಿಶ್ ಶಾಲೆಯ ಬಸ್ ಚಾಲಕ ಜೇಮ್ಸ್ ಥೋನ್ ಅವರು ಘಟನೆ ಸಂಬಂಧ ಹೆಬ್ಬಗೋಡಿ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಿಸಿದ್ದು, ಆರೋಪಿಗಳ ಪತ್ತೆಗೆ ಪೊಲೀಸರು ಕಾರ್ಯಾಚರಣೆ ನಡೆಸುತ್ತಿದ್ದಾರೆ. ತರಗತಿ ಮುಗಿದ ಬಳಿಕ ಮಕ್ಕಳನ್ನು ಮನೆಗೆ ಬಿಡಲು ಶಾಲಾ ಬಸ್‌ನಲ್ಲಿ ಕರೆದೊಯ್ಯಲಾಗುತ್ತಿತ್ತು. ಆಗ ಹಿಂದಿನಿಂದ ಬಂದ ವಾಹನ ಚಾಲಕ ಮುಂದೆ ಹೋಗಲು ದಾರಿ ಬಿಡುವಂತೆ ಹಾರ್ನ್ ಮಾಡಿದರೂ ಬಸ್ ಚಾಲಕ ಅವಕಾಶ ನೀಡಲಿಲ್ಲ. ಸ್ಕಾರ್ಪಿಯೊ ವಾಹನದಲ್ಲಿ ಬಂದ ಆರು ಜನರು ವಿ.ಆರ್.ಆರ್.ಕನ್ವೆಷನ್ ಹಾಲ್ ಬಳಿ ಶಾಲಾ ಬಸ್‌ನ್ನು ಅಡ್ಡಗಟ್ಟಿದರು. ಚಾಲಕ ಜೇಮ್ಸ್ ಥೋನ್‌ನನ್ನು ಕೆಳಗಿಳಿಸಿ, ಹಲ್ಲೆ ನಡೆಸಿದ್ದಾರೆ. ಅಲ್ಲದೇ ಬಸ್ ಕಿಟಕಿಯ ಗಾಜು ಒಡೆದು ಹಾಕಿದ್ದಾರೆ. ಈ ವೇಳೆ ಶಾಲಾ ಬಸ್‌ನಲ್ಲಿದ್ದ ಮಕ್ಕಳು ಹೆದರಿ ಕಿರುಚಾಡಿದ್ದಾರೆ ಎಂದು ಪೊಲೀಸರು ತಿಳಿಸಿದ್ದಾರೆ.

ಒಂದೇ ದಿನ 503 ಅರ್ಜಿ ವಿಲೇವಾರಿ

ಹೈಕೋರ್ಟ್ ಸುದ್ದಿಗಳು

ಬೆಂಗಳೂರು: ಕ್ಷಿಪ್ರಗತಿಯಲ್ಲಿ ಅರ್ಜಿಗಳ ವಿಲೇವಾರಿಗೆ ಹೆಸರಾಗಿರುವ ಹೈಕೋರ್ಟ್ ನ್ಯಾಯಮೂರ್ತಿ ಎಂ.ನಾಗಪ್ರಸನ್ನ ಅವರು ಮಂಗಳವಾರ ದಿನದ ಕಲಾಪದಲ್ಲಿ 503 ಅರ್ಜಿಗಳನ್ನು ವಿಚಾರಣೆ ನಡೆಸಿದರು.

ಬೆಂಗಳೂರು ಪ್ರಧಾನ ಪೀಠದಲ್ಲಿನ 17ನೇ ಕೋರ್ಟ್ ಹಾಲ್‌ನಲ್ಲಿ ಕಾರ್ಯ ನಿರ್ವಹಿಸುತ್ತಿರುವ ನ್ಯಾಯಮೂರ್ತಿ ಎಂ.ನಾಗಪ್ರಸನ್ನ ಅವರು ಮಂಗಳವಾರದ (ಸೆ.17) ಕಲಾಪದಲ್ಲಿ ಪಟ್ಟಿ ಮಾಡಲಾಗಿದ್ದ ಒಟ್ಟು 503 ಕ್ರಿಮಿನಲ್ ಹಾಗೂ ರಿಟ್ ಅರ್ಜಿಗಳನ್ನು ದಿನದ ಕಲಾಪದ ಅವಧಿ ಪೂರ್ಣಗೊಳ್ಳುವುದಕ್ಕೂ 45 ನಿಮಿಷಗಳ ಮುಂಚಿತವಾಗಿ ಮುಕ್ತಾಯಗೊಳಿಸಿದರು. ಇವುಗಳಲ್ಲಿ 187 ಪ್ರಕರಣಗಳನ್ನು ವಿಲೇವಾರಿ ಮಾಡಲಾಗಿದ್ದು, 125 ಪ್ರಕರಣಗಳಲ್ಲಿ ಮಧ್ಯಂತರ ಆದೇಶ ನೀಡಲಾಗಿದೆ. ಈ ಹಿಂದೆ ನ್ಯಾ.ನಾಗಪ್ರಸನ್ನ ಅವರು ಒಂದು ದಿನದ ಕಲಾಪದಲ್ಲಿ 600ಕ್ಕೂ ಹೆಚ್ಚು ಅರ್ಜಿ ಗಳ ವಿಲೇವಾರಿ ಮಾಡಿರುವ ಹೆಗ್ಗಳಿಕೆ ಹೊಂದಿದ್ದಾರೆ.

ತೆರಿಗೆ ನೋಟಿಸ್: ಹೈಕೋರ್ಟ್‌ಗೆ ದಿನೇಶ್

ಬೆಂಗಳೂರು: ತಮ್ಮ ಮಾಲೀಕತ್ವದ ಆಸ್ತಿಯಲ್ಲಿ ವಾಣಿಜ್ಯ ಕಟ್ಟಡ ನಿರ್ಮಾಣಕ್ಕೆ ನಕ್ಷೆ ಮಂಜೂರಾತಿ ನೀಡಲು ನೆಲ ಬಾಡಿಗೆ, ಪರವಾನಿಗೆ ಶುಲ್ಕ, ಕೆರೆ ಜೀರ್ಣೋದ್ಧಾರ ಶುಲ್ಕ ಸೇರಿದಂತೆ 41 ಲಕ್ಷಕ್ಕೂ ಅಧಿಕ ಮೊತ್ತದ ವಿವಿಧ ಬಗೆಯ 16ಕ್ಕೂ ಹೆಚ್ಚು ತೆರಿಗೆ, ಶುಲ್ಕಗಳನ್ನು ಪಾವತಿಸುವಂತೆ ಬಿಬಿಎಂಪಿ ಜಾರಿಗೊಳಿಸಿರುವ ಡಿಮ್ಯಾಂಡ್ ನೋಟಿಸ್ ಪ್ರಶ್ನಿಸಿ ಸಚಿವ ದಿನೇಶ್ ಗುಂಡೂರಾವ್ ಹೈಕೋರ್ಟ್ ಮೆಟ್ಟಿಲಿದ್ದಾರೆ.

ಸಚಿವ ದಿನೇಶ್ ಗುಂಡೂರಾವ್ ಹಾಗೂ ಅವರ ಪತ್ನಿ ತಬಸ್ಸುಮ್ ಗುಂಡೂರಾವ್ ಸಲ್ಲಿಸಿರುವ ತಕರಾರು ಅರ್ಜಿಯನ್ನು ನ್ಯಾಯಮೂರ್ತಿ ಅಶೋಕ್ ಎಸ್. ಕಿಣಗಿ ಅವರಿದ್ದ ಏಕಸದಸ್ಯ ವಿಚಾರಣೆ ನಡೆಸಿತು. ಕೆಲ ಕಾಲ ಅರ್ಜಿ ಆಲಿಸಿದ ನ್ಯಾಯಪೀಠ, ನಗರಾಭಿವೃದ್ಧಿ ಇಲಾಖೆ, ಸಂಸದೀಯ ವ್ಯವಹಾರ ಹಾಗೂ ಶಾಸನ ರಚನಾ ಇಲಾಖೆ, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಮುಖ್ಯ ಆಯುಕ್ತ, ನಗರ ಯೋಜನಾ ಸಹಾಯಕ ನಿರ್ದೇಶಕ ಬಿಬಿಎಂಪಿ ಪಶ್ಚಿಮ ವಿಭಾಗ ಇವರಿಗೆ ನೋಟಿಸ್ ಜಾರಿಗೊಳಿಸಿ, ಆಕ್ಷೇಪಣೆ ಸಲ್ಲಿಸುವಂತೆ ಸೂಚಿಸಿ ವಿಚಾರಣೆಯನ್ನು ಮುಂದೂಡಿತು.

ಅರ್ಜಿಯಲ್ಲಿ ಏನಿದೆ?: ಆರ್.ಟಿ. ನಗರದ ಮಠದಹಳ್ಳಿಯಲ್ಲಿ ತಮ್ಮ ಒಡೆತನದ 608.21 ಚದರ ಅಡಿ ಆಸ್ತಿಯಿದ್ದು, ಇದಕ್ಕೆ ಬಿಬಿಎಂಪಿ ಖಾತಾ ಸಹ ನೀಡಿದೆ. ಈ ಆಸ್ತಿಗೆ ಇಲ್ಲಿ ತನಕ ತೆರಿಗೆ ಕಟ್ಟಲಾಗಿದೆ. ಈಗ ಈ ಜಾಗದಲ್ಲಿ ವಾಣಿಜ್ಯ ಕಟ್ಟಡ ನಿರ್ಮಾ ಣಕ್ಕೆ ನಕ್ಷೆ ಮಂಜೂರಾತಿ ಕೋರಿ ಮನವಿ ಸಲ್ಲಿಸಲಾಗಿತ್ತು. 3.46 ಲಕ್ಷ ಕಾರ್ಮಿಕರ ಸೆಸ್ ಪಾವತಿಸುವಂತೆ ಆ.29ರಂದು ಡಿಮ್ಯಾಂಡ್ ನೋಟಿಸ್ ಜಾರಿಗೊಳಿಸಲಾಗಿದೆ. ತಾವು ಇದಕ್ಕೆ ಬಾಧ್ಯಸ್ಥರಲ್ಲ ಹಾಗೂ ಈ ಡಿಮ್ಯಾಂಡ್ ನೋಟಿಸ್ ಕಾನೂನು ಬಾಹಿರವಾಗಿದೆ ಎಂದು ಅರ್ಜಿಯಲ್ಲಿ ದೂರಲಾಗಿದೆ.

ದೇಗುಲದ ಬಳಿ ಶೌಚಾಲಯ: ನೋಟಿಸ್

ಬೆಂಗಳೂರು: ಬೆಂಗಳೂರಿನ ಬಾಳೆಕುಂದ್ರಿ ವೃತ್ತದಲ್ಲಿರುವ ಪಾರ್ಸಿ ಪ್ರಾರ್ಥನಾಲಯದ ಬಳಿ ಬಿಬಿಎಂಪಿ ಸಾರ್ವಜನಿಕ ಶೌಚಾಲಯ ನಿರ್ಮಿಸಿರುವುದನ್ನು ಆಕ್ಷೇಪಿಸಿ ಸಲ್ಲಿಕೆಯಾದ ಅರ್ಜಿ ಸಂಬಂಧ ಬಿಬಿಎಂಪಿಗೆ ಹೈಕೋರ್ಟ್ ನೋಟಿಸ್ ಜಾರಿಗೊಳಿಸಿದೆ.

ಬೆಂಗಳೂರು ಪಾರ್ಸಿ ಜೊರಾಸ್ಟ್ರಿಯನ್ ಅಂಜುಮಾನ್ ಸಂಸ್ಥೆ ಸಲ್ಲಿಸಿರುವ ಅರ್ಜಿಯನ್ನು ನ್ಯಾಯಮೂರ್ತಿ ಎಸ್. ಅಶೋಕ ಕಿಣಗಿ ಅವರ ಏಕಸದಸ್ಯ ಪೀಠ ವಿಚಾರಣೆ ನಡೆಸಿತು. ಅರ್ಜಿದಾರರ ಪರ ವಕೀಲರ ವಾದ ಆಲಿಸಿದ ನ್ಯಾಯಪೀಠ ಪ್ರಕರಣ ಸಂಬಂಧ ಬಿಬಿಎಂಪಿಗೆ ನೋಟಿಸ್ ಜಾರಿಗೊಳಿಸಿದೆ. ಅಲ್ಲದೇ ಶೌಚಾಲಯ ಉದ್ಘಾಟಿಸದಂತೆ ಮಧ್ಯಂತರ ತಡೆಯಾಜ್ಞೆ ನೀಡಿ ವಿಚಾರಣೆಯನ್ನು ಮುಂದೂಡಿದೆ.

ನಗರದ ಬಾಳೆಕುಂದ್ರಿ ವೃತ್ತದಲ್ಲಿರುವ ಫಾರ್ಸಿ ದೇವಾಲಯದ ಎದುರುಗಡೆ ಅನಧಿಕೃತವಾಗಿ ಬಿಬಿಎಂಪಿ ಸಾರ್ವಜನಿಕ ಶೌಚಾಲಯ ನಿರ್ಮಾಣ ಕಾರ್ಯ ತೊಡಗಿಕೊಂಡಿದೆ. ಇದು ಭಕ್ತಾಧಿಗಳ ಧಾರ್ಮಿಕ ಭಾವನೆಗೆ ಧಕ್ಕೆ ತರಲಿದ್ದು, ಸನ್ನಿಧಾನದ ಪಾವಿತ್ರ್ಯತೆಗೆ ಪರಿಣಾಮ ಬಿರಲಿದೆ. ಮಾತ್ರವಲ್ಲದೇ ಇದರಿಂದಾಗಿ ವಾಯು, ಶಬ್ದ, ಪರಿಸರ ಮಾಲಿನ್ಯ ಹೆಚ್ಚಾಗುವ ಸಾಧ್ಯತೆ ಇದೆ.

ಧಾರ್ಮಿಕ ಆಚರಣೆಗಳಿಗೆ ಅಗೌರವ: ಪಾರ್ಸಿ ಧರ್ಮದಲ್ಲಿ ಶುದ್ಧತೆಗೆ ಹೆಚ್ಚಿನ ಆದ್ಯತೆ ಇರುವುದರಿಂದ ಈ ರೀತಿಯಲ್ಲಿ ದೇವಾಲಯದ ಸಮೀಪದಲ್ಲಿ ಶೌಚಾಲಯ ನಿರ್ಮಿಸುತ್ತಿರುವುದು ನಮ್ಮ ಸಾಂಸ್ಕೃತಿಕ ಮತ್ತು ಧಾರ್ಮಿಕ ಆಚರಣೆಗಳಿಗೆ ಅಗೌರವ ಸೂಚಿಸಿದಂತೆ. ಭಕ್ತಾಧಿಗಳ ಧಾರ್ಮಿಕ ಹಕ್ಕುಗಳನ್ನು ರಕ್ಷಿಸಲು ಮತ್ತು ಪೂಜಾ ಸ್ಥಳದ ಪಾವಿತ್ರ್ಯತೆಯನ್ನು ಕಾಪಾಡುವ ನಿಟ್ಟಿನಲ್ಲಿ ನಿರ್ಮಾಣ ಕಾರ್ಯವನ್ನು ಸ್ಥಗಿತಗೊಳಿಸುವಂತೆ ಹಾಗೂ ನಿರ್ಮಾಣವಾಗಿರುವುದನ್ನು ಕಡೆವಲು ಪ್ರತಿವಾದಿಗಳಿಗೆ ನಿರ್ದೇಶಿಸುವಂತೆ ಅರ್ಜಿಯಲ್ಲಿ ಕೋರಲಾಗಿದೆ.

ಅದೃಷ್ಟವಶಾತ್ ಪ್ರಾಣಾಪಾಯದಿಂದ ಪಾರು

ಮೆಟ್ರೋ ಹಳಿಗೆ ಜಿಗಿದು ವ್ಯಕ್ತಿ ಆತ್ಮಹತ್ಯೆಗೆ ಯತ್ನ

ಬೆಂಗಳೂರು: ಬೆಂಗಳೂರಿನ ಜ್ಞಾನಭಾರತಿ ಮೆಟ್ರೋ ನಿಲ್ದಾಣದಲ್ಲಿ ಮೆಟ್ರೋ ಟ್ರ್ಯಾಕ್ ಮೇಲೆ ಹಾರಿ ವ್ಯಕ್ತಿ ಆತ್ಮಹತ್ಯೆಗೆ ಯತ್ನಿಸಿದ್ದು, ಅದೃಷ್ಟವಶಾತ್ ಪ್ರಾಣಾಪಾಯದಿಂದ ಪಾರು ಮಾಡಲಾಗಿದೆ. ಜ್ಞಾನ ಭಾರತಿ ಮೆಟ್ರೋ ನಿಲ್ದಾಣಕ್ಕೆ ಮಧ್ಯಾಹ್ನ 2.15ರ ಸುಮಾರಿಗೆ ರೈಲು ಬರುತ್ತಿದ್ದಂತೆಯೇ ಬಿಹಾರ ಮೂಲದ ಸಿದ್ಧಾರ್ಥ್ ಎಂಬುವವರು ಟ್ರ್ಯಾಕ್ ಮೇಲೆ ಹಾರಿದ್ದಾರೆ. ಈ ವೇಳೆ ಎಚ್ಚೆತ್ತ ಮಹಿಳಾ ಸಿಬ್ಬಂದಿ ತುರ್ತು ನಿರ್ವಹಣಾ ಬಟನ್ ಒತ್ತಿ ವಿದ್ಯುತ್ ಸರಬರಾಜನ್ನು ಸ್ಥಗಿತಗೊಳಿಸಿ ವ್ಯಕ್ತಿಯನ್ನು ರಕ್ಷಿಸಿದ್ದಾರೆ. ಇದರಿಂದಾಗಿ ಕೆಲ ಕಾಲ ರೈಲು ಸಂಚಾರದಲ್ಲಿ ವ್ಯತ್ಯಯವಾಗಿತ್ತು. ವೈಟ್ ಫೀಲ್ಡ್ ಕಡೆಯಿಂದ ಕೆಂಗೇರಿ ಕಡೆಗೆ ಮೆಟ್ರೋ ರೈಲು ತೆರಳುತ್ತಿತ್ತು. ಈ ವೇಳೆ ಜ್ಞಾನಭಾರತಿ ಮೆಟ್ರೋ ನಿಲ್ದಾಣದಲ್ಲಿ ಸಿದ್ಧಾರ್ಥ್ ಆತ್ಮಹತ್ಯೆಗೆ ಯತ್ನಿಸಿದ್ದಾರೆ. ಮೆಟ್ರೋ ನಡುವೆ ಸಿಲುಕಿದ ಕಾರಣ ಜೀವಕ್ಕೆ ತೊಂದರೆಯಾಗಿಲ್ಲ, ರೈಲಿನ ಕೆಳಗೆ ಸಿಲುಕಿದ ಯುವಕ ಹೊರ ಬರಲಾರದೇ ಪರದಾಡಿದ್ದು, ಸಿಬ್ಬಂದಿ ಆತನನ್ನು ಹಳಿಯಿಂದ ಹೊರಕ್ಕೆ ತಂದಿದ್ದಾರೆ. ರೈಲ್ವೆ ಚಾಲಕರು ವೇಗವನ್ನು ಗಣನೀಯವಾಗಿ ತಗ್ಗಿಸಿದ್ದರಿಂದ ರೈಲು ಸಂಚಾರ ಬಂದ್ ಮಾಡಿ ಈ ವ್ಯಕ್ತಿಯನ್ನು ರಕ್ಷಿಸಿ ಕರೆದುಕೊಂಡು ಹೋಗಲಾಗಿದೆ. ಪ್ರಾಥಮಿಕ ಮಾಹಿತಿ ಪ್ರಕಾರ ಯಾವುದೇ ಗಾಯಗಳು ವರದಿಯಾಗಿಲ್ಲ. ಆತ್ಮಹತ್ಯೆ ಮಾಡಿಕೊಳ್ಳಲು ಮುಂದಾಗಿದ್ದ ಸಿದ್ಧಾರ್ಥನನ್ನು ಜ್ಞಾನಭಾರತಿ ಸ್ಟೇಷನ್ ಪೊಲಿಸರು ವಶಕ್ಕೆ ಪಡೆದುಕೊಂಡಿದ್ದು, ವಿಚಾರಣೆ ಮಾಡುತ್ತಿದ್ದಾರೆ.

ಕೆಲಕಾಲ ಸಂಚಾರದಲ್ಲಿ ಅಸ್ತವ್ಯಸ್ತ

ಘಟನೆ ಹಿನ್ನೆಲೆ ನೇರಳೆ ಮಾರ್ಗದ ಮೆಟ್ರೋ ರೈಲು ಸಂಚಾರದಲ್ಲಿ ಕೆಲ ನಿಮಿಷ ಸಂಚಾರದಲ್ಲಿ ಅಸ್ತವ್ಯಸ್ತ ಉಂಟಾಗಿದ್ದು, 2:30 ಗಂಟೆಗೆ ಸೇವೆ ಪುನಾರಂಭಿಸಲಾಯಿತು. ಚಲ್ಲಘಟ್ಟ ಮೆಟ್ರೋ ನಿಲ್ದಾಣದ ಬದಲು ಮೈಸೂರು ರಸ್ತೆ ಮೆಟ್ರೋ ನಿಲ್ದಾಣದವರೆಗೆ 2 ರೈಲುಗಳು ಶಾರ್ಟ್ ಲೂಪ್‌ನಲ್ಲಿ ಕಾರ್ಯ ನಿರ್ವಹಿಸಿದೆ.

ಸಂಚಾರದ ವೇಳೆ ಸಂಯಮದಿಂದ ವರ್ತಿಸಿ

ಬೆಂಗಳೂರು: ನಗರದಲ್ಲಿ ರಸ್ತೆ ವಾಗ್ವಾದ (ರೋಡ್ ರೇಜ್) ಘಟನೆಗಳು ಮರುಕಳಿಸುತ್ತಿದ್ದು ಸಣ್ಣಪುಟ್ಟ ವಿಷಯಗಳಿಗೆ ಜಗಳ ಮಾಡಿಕೊಳ್ಳದೆ ಸಂಯಮದಿಂದ ವರ್ತಿಸಿ ಎಂದು ನಗರ ಪೊಲೀಸ್ ಆಯುಕ್ತ ಬಿ.ದಯಾನಂದ ಸಾರ್ವಜನಿಕರಲ್ಲಿ ಮನವಿ ಮಾಡಿದ್ದಾರೆ.

ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ವಾಹನ ಸಂಚಾರದ ವೇಳೆ ಸಣ್ಣಪುಟ್ಟ ವಿಷಯಕ್ಕೂ ಆವೇಶಕ್ಕೆ ಒಳಗಾಗಿ ವಾಗ್ವಾದಗಳು ನಡೆಯುತ್ತಿದೆ. ಏನೇ ವಿಷಯವಿದ್ದರೂ ಸಂಯಮದಿಂದ ವರ್ತಿಸಿ ಸಮಸ್ಯೆ ಬಗೆಹರಿಸಿಕೊಳ್ಳಿ. ಸಾರ್ವಜನಿಕರಿಗೆ ತೊಂದರೆಯಾದಲ್ಲಿ 112 ಗೆ ಕರೆ ಮಾಡಿದರೆ ತಕ್ಷಣ ಪೊಲೀಸರು ಸ್ಥಳಕ್ಕೆ ಬಂದು ಪರಿಶೀಲಿಸುತ್ತಾರೆ ಎಂದರು. ಕೆಲ ಸಂದರ್ಭದಲ್ಲಿ ವಾಹನಕ್ಕೆ ಡಿಕ್ಕಿ ಆಗಿದೆ, ಓವರ್ ಟೇಕ್ ಮಾಡಲಾಗಿದೆ ಎಂಬ ಕಾರಣಕ್ಕೆ ವಾಗ್ವಾದಗಳು ನಡೆಯುತ್ತಿದೆ. ರಸ್ತೆ ಬಳಸಲು ಎಲ್ಲರಿಗೂ ಹಕ್ಕಿದೆ. ಒಬ್ಬರ ಹಕ್ಕನ್ನು ಇನ್ನೊಬ್ಬರಿಗೆ ಕೇಳಲು ಆಗುವುದಿಲ್ಲ. ಹೀಗಾಗಿ ರಸ್ತೆಯಲ್ಲಿ ಸಂಚರಿಸುವವ ಎಲ್ಲರೂ ನಿಯಮಗಳನ್ನು ಪಾಲಿಸಬೇಕು. ಒಂದು ವೇಳೆ ಏನಾದರೂ ತೊಂದರೆಯಾದಲ್ಲಿ ತಕ್ಷಣ ಪೊಲೀಸರನ್ನು ಸಂಪರ್ಕಿಸಿ, ತೊಂದರೆ ನೀಡಿದ ವ್ಯಕ್ತಿಯ ಚಹರೆ ಹಾಗೂ ವಾಹನದ ಸಂಖ್ಯೆ ಫೋಟೋ ತೆಗೆದು ಪೊಲೀಸ್ ಆ್ಯಪ್‌ನಲ್ಲಿ ಹಾಕಿದರೆ ಅವರನ್ನು ಪತ್ತೆ ಹಚ್ಚಲು ನೆರವಾಗುತ್ತದೆ ಎಂದರು.

ತಂತ್ರಜ್ಞಾನ ಅಳವಡಿಸಿಕೊಳ್ಳಿ

ಮನೆಮುಂದೆ ವಾಹನ ನಿಲುಗಡೆ, ಮಾಲ್‌ಗಳಿಗೆ ಇಲ್ಲವೆ ಬೇರೆಡೆ ಅಥವಾ ಕೆಲಸಕ್ಕೆ ಹೋಗುವ ಸಂದರ್ಭಗಳಲ್ಲಿ ತಮ ದ್ವಿಚಕ್ರ ವಾಹನಗಳನ್ನು ನಿಲ್ಲಿಸುವಾಗ ಅವುಗಳ ಸುರಕ್ಷತೆ ಬಗ್ಗೆ ಗಮನ ಹರಿಸಬೇಕು. ತಾವು ವಾಹನ ನಿಲ್ಲಿಸಿರುವ ಸ್ಥಳ ಸುರಕ್ಷಿತವೇ ಎಂಬುದು ತಿಳಿದುಕೊಳ್ಳಬೇಕು ತಂತ್ರಜ್ಞಾನ ಸಾಕಷ್ಟು ಮುಂದುವರೆದಿದೆ. ಉತ್ತಮ ಲಾಕಿಂಗ್, ಜಿಪಿಎಸ್ ಅಳವಡಿಸಿಕೊಂಡರೆ ಕಳವು ನಿಯಂತ್ರಿಸಬಹುದು ಎಂದರು.

ಕರ್ಣಾಟಕ ಬ್ಯಾಂಕ್ ಲಿಮಿಟೆಡ್
(ನೋಂದಾಯಿತ ಹಾಗೂ ಕೇಂದ್ರ ಕಛೇರಿ: ಮಂಗಳೂರು-575002)
ನಿಮ್ಮ ಕುಟುಂಬದ ಬ್ಯಾಂಕ್, ಭಾರತದಾದ್ಯಂತ

ಶಾಖೆ: ಸಹಕಾರನಗರ
ನಂ. 2227, 'ಡಿ' ಬ್ಲಾಕ್, ಕೊಡಿಗೆಹಳ್ಳಿ ಮುಖ್ಯರಸ್ತೆ,
ಸ್ಟರ್ಲಿಂಗ್ ಅಪಾರ್ಟ್‌ಮೆಂಟ್ ಎದುರು, ಸಹಕಾರನಗರ,
ಬೆಂಗಳೂರು – 560092

ದೂ: 080-22955891 / 892
ಇ-ಮೇಲ್: blr.sahakaranagar@ktkbank.com
ವೆಬ್ ಸೈಟ್: www.karnatakabank.com
CIN: L85110KA1924PLC001128

ಚಿನ್ನಾಭರಣಗಳ ಸಾರ್ವಜನಿಕ ಹರಾಜು ಸೂಚನೆ

ಈ ಕೆಳಕಂಡ ವ್ಯಕ್ತಿ ಅಡಮಾನ ಮಾಡಿರುವ ಚಿನ್ನಾಭರಣಗಳ ಮೇಲೆ ಪಡೆದಿರುವ ಸಾಲಗಳನ್ನು ನಮ್ಮ ತಗಾದೆ ಸೂಚನೆ (ಡಿಮ್ಯಾಂಡ್ ನೋಟೀಸ್)ಗಳ ಹೊರತಾಗಿಯೂ ಮೊತ್ತವನ್ನು ಮರುಪಾವತಿ ಮಾಡಿರುವುದಿಲ್ಲ. ಆದ್ದರಿಂದ, ಈ ಕೆಳಗೆ ಪ್ರಕಟಿಸಲಾದ ಹರಾಜಿನ ದಿನಾಂಕದ ಒಂದು ದಿನ ಮೊದಲು ಅಥವಾ ಹರಾಜಿನ ಸಮಯದ ಒಳಗೆ ಅಸಲು/ ಬಡ್ಡಿ ಮತ್ತು ಇತರ ಶುಲ್ಕಗಳನ್ನು ಪಾವತಿಸದಿದ್ದರೆ, ಬ್ಯಾಂಕಿನ ನಿಯಮಗಳು ಮತ್ತು ನಿಬಂಧನೆಗಳಿಗೆ ಒಳಪಟ್ಟು ಅಡಮಾನ ಮಾಡಿರುವ ಚಿನ್ನಾಭರಣಗಳನ್ನು ಕೆಳಗೆ ತಿಳಿಸಿರುವ ದಿನಾಂಕದಂದು **ಮಧ್ಯಾಹ್ನ 3.00 ಗಂಟೆಗೆ** ಬ್ಯಾಂಕಿನ ಆವರಣದಲ್ಲಿ ಸಾರ್ವಜನಿಕವಾಗಿ ಹರಾಜು ಮಾಡಲಾಗುವುದು ಎಂಬುದನ್ನು ದಯವಿಟ್ಟು ಗಮನಿಸಿ.
ಯಾವುದೇ ಕಾರಣಗಳನ್ನು ಮತ್ತು ಸೂಚನೆಯನ್ನು ನೀಡದೆ ಹರಾಜನ್ನು ಯಾವುದೇ ಅನುಕೂಲಕರ ದಿನಾಂಕಕ್ಕೆ ಮುಂದೂಡುವ / ರದ್ದುಗೊಳಿಸುವ ಹಕ್ಕನ್ನು ಬ್ಯಾಂಕ್ ಕಾಯ್ದಿರಿಸಿಕೊಂಡಿರುತ್ತದೆ.

ಕ್ರಮ ಸಂಖ್ಯೆ	ಸಾಲದ ಖಾತೆ ಸಂಖ್ಯೆ	ಸಾಲದ ದಿನಾಂಕ	ಸಾಲಗಾರರ ಹೆಸರು	ರೂಪಾಯಿಗಳಲ್ಲಿ ಬಾಕಿ#	ಸ್ಥಳ ಮತ್ತು ಹರಾಜಿನ ದಿನಾಂಕ ಮತ್ತು ಸಂಪರ್ಕಿಸಬೇಕಾದ ಸಂಖ್ಯೆ
1	0121702400007201	24.06.2024	ಬಿಪಿನ್ ಸುರೇಶ್ ಜೈಸ್ವಾಲ್	ರೂ.1,01,448.68	ಕರ್ಣಾಟಕ ಬ್ಯಾಂಕ್ ಲಿ, ಸಹಕಾರನಗರ ಶಾಖೆ, ನಂ. 2227, 'ಡಿ' ಬ್ಲಾಕ್, ಕೊಡಿಗೆಹಳ್ಳಿ ಮುಖ್ಯರಸ್ತೆ, ಸ್ಟರ್ಲಿಂಗ್ ಅಪಾರ್ಟ್‌ಮೆಂಟ್ ಎದುರು, ಸಹಕಾರನಗರ, ಬೆಂಗಳೂರು – 560092. ಹರಾಜಿನ ದಿನಾಂಕ: 27.09.2024 ಮಧ್ಯಾಹ್ನ 3.00 ಗಂಟೆಗೆ ದೂ: 080-22955891 / 892 ಮೊಬೈಲ್ ಸಂಖ್ಯೆ: 9449595414

\# + ಮುರಿದ ಅವಧಿಯ ಬಡ್ಡಿ + ಇತರ ಶುಲ್ಕಗಳು

ದಿನಾಂಕ: 18.09.2024
ಸ್ಥಳ: ಬೆಂಗಳೂರು
ಸಹಿ/-
ಹಿರಿಯ ಶಾಖಾ ವ್ಯವಸ್ಥಾಪಕರು, ಕರ್ಣಾಟಕ ಬ್ಯಾಂಕ್ ಲಿ, ಸಹಕಾರನಗರ, ಬೆಂಗಳೂರು

ಆರ್ಥಿಕ ಆಸ್ತಿಯ ಭದ್ರತೆ ಮತ್ತು ಪುನನಿರ್ಮಾಣ ಮತ್ತು ಬಡ್ಡಿಯ ಹಿತಾಸಕ್ತಿ ರಕ್ಷಣಾಕ್ರಮದ ಅಧಿನಿಯಮ 2002 ಸೆಕ್ಷನ್ 13 (2) ಕಾಲಂನ ಪ್ರಕಾರ ಜಾರಿ ಮಾಡುವದಕ್ಕಾಗಿ ಕೊಟ್ಟ ಸೂಚನೆ (ಅಧಿನಿಯಮ)

ಅ ನಂ.	ಸಾಲಗಾರರ ಹೆಸರು (ಎ)	ಅಡವು ಇಟ್ಟ ಆಸ್ತಿಯ ವಿವರ (ಬಿ)	ಎನ್‌ಪಿಎಯ ತಾರೀಖು (ಸಿ)	ಬಾಕಿ ಉಳಿದ ಕೊಡಬೇಕಾದಹಣ (ಡಿ)
1.	ಸಾಲ ಖಾತೆ ನಂ. HHLDUB00295539 1. ವರ್ಷಾ ದೀಪಕ್ ತಲ್ರೇಜಾ 2. ಆಕಾಶ್ ದೀಪಕ್ ತಲ್ರೇಜಾ	ಫ್ಲಾಟ್ ನಂ. ಜಿ 08, ನೆಲ ಮಹಡಿ, ಬ್ಲಾಕ್-ಎ, (ವೆಂಕಟಾದ್ರಿ), ತಿರುಮಲ ಲಕ್ಷ್ಮಿ ಗ್ರಾಂಡ್, ಸರ್ವೆ ನಂ. 24/14, ಸೀಗೆಹಳ್ಳಿ ಗ್ರಾಮ, ಬಿದರಹಳ್ಳಿ ಹೋಬಳಿ, ಬೆಂಗಳೂರು ಪೂರ್ವ ತಾಲೂಕು, ಬೆಂಗಳೂರು-560067, ಕರ್ನಾಟಕ	04.07.2024	ದಿನಾಂಕ 04.09.2024 ರಂತೆ ರೂ. 44,02,475.18/- (ರೂಪಾಯಿ ನಲವತ್ತ ನಾಲ್ಕು ಲಕ್ಷ ಎರಡು ಸಾವಿರದ ನಾಲ್ಕು ನೂರ ಎಪ್ಪತ್ತ ಐದು ಮತ್ತು ಪೈಸೆ ಹದಿನೆಂಟು ಮಾತ್ರ)
2.	ಸಾಲ ಖಾತೆ ನಂ. HHLDUB00295523 1. ವರ್ಷಾ ದೀಪಕ್ ತಲ್ರೇಜಾ 2. ಆಕಾಶ್ ದೀಪಕ್ ತಲ್ರೇಜಾ	ಫ್ಲಾಟ್ ನಂ. 108, ಮೊದಲ ಮಹಡಿ, ಬ್ಲಾಕ್-ಬಿ, (ವೆಂಕಟಾದ್ರಿ), ತಿರುಮಲ ಲಕ್ಷ್ಮಿ ಗ್ರಾಂಡ್, ಸರ್ವೆ ನಂ. 24/14, ಸೀಗೆಹಳ್ಳಿ ಗ್ರಾಮ, ಬಿದರಹಳ್ಳಿ ಹೋಬಳಿ, ಬೆಂಗಳೂರು ಪೂರ್ವ ತಾಲೂಕು, ಬೆಂಗಳೂರು-560067, ಕರ್ನಾಟಕ	04.07.2024	ದಿನಾಂಕ 04.09.2024 ರಂತೆ ರೂ. 35,08,209.69/- (ರೂಪಾಯಿ ಮೂವತ್ತ ಐದು ಲಕ್ಷ ಎಂಟು ಸಾವಿರದ ಇನ್ನೂರ ಒಂಬತ್ತು ಮತ್ತು ಪೈಸೆ ಅರವತ್ತ ಒಂಬತ್ತು ಮಾತ್ರ)
3.	ಸಾಲ ಖಾತೆ ನಂ. HHLLPM00245450 1. ಸುನಂದಾ ವಿಷ್ಣು ದಾಂಡೇಕರ್	ಫ್ಲಾಟ್ ನಂ. ವಿ 702, 7 ನೇ ಮಹಡಿ, ಓರ್ಝೋನ್ ಅರ್ಬಾನಾ ಅವೆನ್ಯೂ, ಎನ್‌ಎಚ್-17, ಕನ್ನಮಂಗಲ ಗ್ರಾಮ, ಪೂಜನಹಳ್ಳಿ ಗ್ರಾಮ 83/5, 83/6, ಮತ್ತು 86/2 ಕಸಬಾ ಹೋಬಳಿ, ದೇವನಹಳ್ಳಿ ತಾಲ್ಲೂಕು, ಬೆಂಗಳೂರು ಗ್ರಾಮಾಂತರ ಜಿಲ್ಲೆ, ಬೆಂಗಳೂರು- 560045, ಕರ್ನಾಟಕ	05.05.2024	ದಿನಾಂಕ 03.09.2024 ರಂತೆ ರೂ. 40,75,752.52/- (ರೂಪಾಯಿ ನಲವತ್ತು ಲಕ್ಷ ಎಪ್ಪತ್ತ ಐದು ಸಾವಿರದ ಏಳು ನೂರ ಐವತ್ತ ಎರಡು ಮತ್ತು ಪೈಸೆ ಐವತ್ತ ಎರಡು ಮಾತ್ರ)

ಈ ಮೇಲೆಹೆಸರಿಸಲಾದಸಾಲಗಾರರುಆರ್ಥಿಕಶಿಸ್ತು ಮತ್ತು ಸಾಲದ ಖಾತೆಯಜವಾಬ್ದಾರಿಯಹೊಣೆಯನ್ನು ಸರಿಯಾಗಿ ಪಾಲಿಸದೇಇದ್ದುದರಿಂದಕಂಪನಿಯು ತಮ್ಮ ಲೆಕ್ಕಾಶಾಸ್ತ್ರಪುಸ್ತಕಗಳಆಧಾರದಿಂದ ಈ ಸಾಲ ಪಡೆದವರ ಈಗ ಕೊಡಬೇಕಾದಮೊತ್ತವನ್ನು ಕಾಲಮ್ ಡಿ ಸಾಮಾನ್ಯ ಉದ್ಯೋಗ ನಿರ್ವಹಣೆಯ ಪ್ರಕಾರ, ಕೊಡದೇವಿಫಲರಾಗಿದ್ದಾರೆಎಂದುತೋರಿಸಿಕೊಟ್ಟಿದೆ.

ಪ್ರತಿಯೊಬ್ಬ ಸಾಲ ಪಡೆದವ (ರು) ಮರಳಿ ಸಾಲ ತೀರಿಸುವಬಗ್ಗೆ ದೀರ್ಘಕಾಲದ ತೀವ್ರಉಪೇಕ್ಷೆತೋರಿಸಿದುದರಿಂದ ಅವರ ಸಾಲದ ಖಾತೆಯನ್ನು ಕಂಪನಿಯವರು ನಿರ್ದಿಷ್ಟಪಡಿಸಲಾದ ನಿಯಮಗಳಂತೆ ಅನುತ್ಪಾದಕ ಆಸ್ತಿ (ಕಾಲಮ್ ಸಿಯಲ್ಲಿನ ತಾರೀಖಿನಂದು) ಎಂದುವರ್ಗೀಕರಿಸಿದ್ದಾರೆ. ತತ್ಪರಿಣಾಮವಾಗಿ ಆ್ಯಕ್ಟ್‌ನಸೆಕ್ಷನ್ 13 (2) ಅಧಿನಿಯಮದಂತೆ ಪ್ರತಿಯೊಬ್ಬಸಾಲಗಾರನಿಗೆ (ರಿಗೆ) ಸೂಚನೆಗಳನ್ನುಕೂಡಾ ನೀಡಲಾಗಿದೆ.

ಈ ಮೇಲಿನದ್ದರ ಕಾರಣ ಈ ಮೇಲೆಹೆಸರಿಸಲಾದ ಪ್ರತೀಯೊಬ್ಬ ಸಾಲಗಾರನಿಗೆ (ರಿಗ)ಕಂಪೆನಿಯು ಈ ಮೇಲೆಕಾಲಮ್ ಡಿಯಲ್ಲಿ ದರ್ಶಿಸಲಾದ ಬಾಕಿ ಮೊತ್ತವನ್ನು ಈ ತನಕದಬಡ್ಡಿ ,ವೆಚ್ಚಗಳುಮತ್ತು ಚಾರ್ಜಸ್‌ನೊಂದಿಗೆ ಈ ಸೂಚನೆ ಪ್ರಕಟವಾದ 60 ದಿನಗಳಲ್ಲಿ ಪಾವತಿಸುವಮೂಲಕಕಂಪೆನಿಯ ಮೇಲಿನ ಅವನ/ಅವಳ ಸಂಪೂರ್ಣ ಬಾಧ್ಯತೆಯನ್ನುಪೂರ್ಣಗೊಳಿಸಬೇಕೆಂದು ಈ ಮೂಲಕಕೇಳಿಕೊಳ್ಳುತ್ತಿದ್ದು ಇದಕ್ಕೆ ತಪ್ಪಿದಲ್ಲಿ, ಕಂಪನಿಯು ಈ ಮೇಲೆಕಾಲಮ್ ಬಿಯಲ್ಲಿ ನಮೂದಿಸಲಾದಅಡವುಇಟ್ಟಆಸ್ತಿಯನ್ನು ಸ್ವಾಧೀನ ಪಡಿಸಿಕೊಳ್ಳಲುಅರ್ಹವಾಗಿದೆಮತ್ತು ಕಂಪೆನಿ ಕಾನೂನಿನಲ್ಲಿ ಉಪಲಬ್ಧವಿರುವಇತರಕ್ರಮಗಳನ್ನು ಕೂಡಾತೆಗೆದುಕೊಳ್ಳುತ್ತದೆ.

ಎಸ್‌ಎಆರ್‌ಎಫ್‌ಎಇಎಸ್‌ಐ (SARFAESI) ಆ್ಯಕ್ಟ್‌ನ ಸೆಕ್ಷನ್ 13ರ ಸೆಕ್ಷನ್ (8)ರ ನಿಬಂಧನೆಗಳ ವಿಶಿಷ್ಟ ಭಾಷೆಯಲ್ಲಿರುವ ಮುಂದಿನ ವಿಷಯವನ್ನು ದಯವಿಟ್ಟು ಗಮನಿಸಿರಿ: ''ಒಬ್ಬ ಸಾಲಗಾರನು ಅಡವಿನ ಆಧಾರದ ಮೇಲೆ ತನಗೆ ಸಾಲ ಕೊಟ್ಟಿರುವವನಿಗೆ, ಆತ ಸಾರ್ವಜನಿಕ ಹರಾಜಿನ ಮೂಲಕ, ಸಾರ್ವಜನಿಕರಿಂದ ಕೊಟೇಶನ್‌ಗಳನ್ನು, ಟೆಂಡರನ್ನು ಆಹ್ವಾನಿಸುವ ಮೂಲಕ ಅಥವಾ ಖಾಸಗಿ ಕರಾರಿನ ಮೂಲಕ ಅಡವಿಟ್ಟಿರುವ ಆಸ್ತಿಯನ್ನು(ಗಳನ್ನು) ಮಾರಾಟ ಮಾಡಲು ನೋಟೀಸನ್ನು ಪ್ರಕಟಿಸುವ ತಾರೀಖಿನ ತನಕ ಮಾತ್ರ, ಆತನ ಎಲ್ಲಾ ವ್ಯವಹಾರದ ವೆಚ್ಚಗಳು, ಚಾರ್ಜುಗಳು ಮತ್ತು ಖರ್ಚುಗಳೊಂದಿಗೆ ತನ್ನಿಂದ ಬಾಕಿ ಇರುವ ಹಣದ ಸಂಪೂರ್ಣ ಮೊತ್ತವನ್ನು ಸಲ್ಲಿಸಬಹುದು. ಜೊತೆಯಲ್ಲೇ ಇದನ್ನೂ ಗಮನಿಸಬಹುದು: ಸಾಲಗಾರನು ಮೇಲೆ ಹೇಳಿರುವ ಕಾಯಿದೆಬದ್ಧವಾಗಿ ಆದೇಶಿಸಿರುವ ಸಮಯದ ಚೌಕಟ್ಟಿನೊಳಗೆ ತಾನು ಅಡವಿಟ್ಟಿರುವ ಆಸ್ತಿಯನ್ನು ಬಿಡಿಸಿಕೊಳ್ಳದೆ ಹೋದರೆ, ಸಾಲಗಾರನು ಆ ಆಸ್ತಿಯನ್ನು ಬಿಡಿಸಿಕೊಳ್ಳುವ ಹಕ್ಕಿಗೆ ಅರ್ಹನಿಲ್ಲದಿರಬಹುದು''

ಎಸ್‌ಎಆರ್‌ಎಫ್‌ಎಇಎಸ್‌ಐ ಕಾಯ್ದೆಯ ಸೆಕ್ಷನ್ 13ರ ಉಪ-ಸೆಕ್ಷನ್ (13)ರ ನಿಬಂಧನೆ ಪ್ರಕಾರ ಒಂದೋ ಮಾರಾಟ, ಲೀಸ್ ಅಥವಾ ಅನ್ಯಥಾ (ಅವನ ವ್ಯಾಪಾರದ ಸಾಮಾನ್ಯ ವಿಧಾನದ ಹೊರತಾಗಿ)ವಿಧಾನದಿಂದ ಸೂಚನೆಯಲ್ಲಿ ಉಲ್ಲೇಖಿಸಲಾದ ಯಾವುದೇ ಸೆಕ್ಯೂರ್ಡ್ ಆಸ್ತಿಯನ್ನು ಸೆಕ್ಯೂರ್ಡ್ ಕ್ರೆಡಿಟರರ ಲಿಖಿತ ಪೂರ್ವ ಸಮ್ಮತಿ ಇಲ್ಲದೆ ನೀವು ವರ್ಗಾಯಿಸುವುದನ್ನು ಈ ಮೂಲಕ ನಿಷೇಧಿಸಲಾಗಿದೆ.

ಸಮ್ಮಾನ್ ಕ್ಯಾಪಿಟಲ್ ಲಿಮಿಟೆಡ್
(ಹಿಂದೆ ಇಂಡಿಯಾಬುಲ್ಸ್ ಹೌಸಿಂಗ್ ಫೈನಾನ್ಸ್ ಲಿಮಿಟೆಡ್ ಎಂದು ಕರೆಯಲಾಗುತ್ತಿತ್ತು)
ಸ್ಥಳ : ಬೆಂಗಳೂರು
ಅಧಿಕೃತ ಅಧಿಕಾರಿ

ಮಾನ್ಯ 1ನೇ ಅಪರ ಸಿವಿಲ್ ನ್ಯಾಯಾಧೀಶರ ನ್ಯಾಯಾಲಯ, ಮತ್ತು ಜೆ.ಎಂ.ಎಫ್.ಸಿ ಕನಕಪುರ
ಸಿ.ಮಿಸ್.ನಂ. 491/2024

ಅರ್ಜಿದಾರರು: ಶ್ರೀಮತಿ ಲಕ್ಷ್ಮಿದೇವಮ್ಮ ಕೋಂ ಲೇಟ್ ದೊಡ್ಡಸ್ವಾಮಿ ಬಿನ್ ಲೇಟ್ ತಿಮ್ಮೇಗೌಡ @ ಕರಗೌಡ ವಯಸ್ಸು 66 ವರ್ಷ ವಾಸ: ಚಿಕ್ಕೇಗೌಡನದೊಡ್ಡಿ ಗ್ರಾಮ, ಉಯ್ಯಂಬಳ್ಳಿ ಹೋಬಳಿ, ಕನಕಪುರ ತಾಲ್ಲೂಕು, ರಾಮನಗರ ಜಿಲ್ಲೆ. ಮತ್ತು ಇತರರು.

ವಿರುದ್ಧ

ಪ್ರತಿ ಅರ್ಜಿದಾರರು: 1. ಜನನ ಮತ್ತು ಮರಣ ನೊಂದಣಿ ಅಧಿಕಾರಿಗಳು, ತಹಶೀಲ್ದಾರ್ ಕನಕಪುರ ತಾಲ್ಲೂಕು, ರಾಮನಗರ ಜಿಲ್ಲೆ. ಮತ್ತು ಇನ್ನೊಬ್ಬರು

ಪ್ರಕಟಣೆ

ಮೇಲ್ಕಾಣಿಸಿರುವ ಅರ್ಜಿದಾರರು ಈ ಮೂಲಕ ತಿಳಿಯಪಡಿಸುವುದೇನೆಂದರೆ, ಅರ್ಜಿದಾರರ ತಂದೆಯವರಾದ ಶ್ರೀ ತಿಮ್ಮೇಗೌಡ ಉ॥ ಕರೀಗೌಡ ಬಿನ್ ಲೇಟ್ ವೆಂಕಟೇಗೌಡ ರವರು, ರಾಮನಗರ ಜಿಲ್ಲೆ, ಕನಕಪುರ ತಾಲ್ಲೂಕು, ಉಯ್ಯಂಬಳ್ಳಿ ಹೋಬಳಿ, ತಾವರಗಟ್ಟೆ ಗ್ರಾಮದಲ್ಲಿ ದಿನಾಂಕ 05.07.2010 ರಂದು ಮರಣ ಹೊಂದಿದ್ದು, ಇವರ ಮರಣ ಪ್ರಮಾಣ ಪತ್ರವನ್ನು ನೀಡುವಂತೆ ಎದುರುದಾರರಿಗೆ ನಿರ್ದೇಶನ ನೀಡುವಂತೆ ಹಾಗೂ ನ್ಯಾಯಾಲಯದ ಆದೇಶವನ್ನು ಕೋರಿ ಈ ಪ್ರಕರಣವನ್ನು ಸಲ್ಲಿಸಿದ್ದು, ಇವರ ಮರಣ ದಿನಾಂಕದ ಬಗ್ಗೆ ಯಾರದಾದರೂ ತಕರಾರು ಇದ್ದರೆ ಖುದ್ದಾಗಿ ಆಗಲಿ ಅಥವಾ ಅಧಿಕಾರ ಕೊಟ್ಟ ವಕೀಲರ ಮುಖಾಂತರವಾಗಲೀ ನ್ಯಾಯಾಲಯ ನಿಗಧಿಪಡಿಸಿದ ದಿನಾಂಕದಂದು ಅಂ-ದರೆ, 29.10.2024 ರ ಬೆಳಿಗ್ಗೆ ಸರಿಯಾಗಿ 11=00 ಘಂಟೆಗೆ ನ್ಯಾಯಾಲಯದ ಮುಂದೆ ಹಾಜರಾಗಿ ತಕರಾರು ಸಲ್ಲಿಸತಕ್ಕದ್ದು, ತಪ್ಪಿದಲ್ಲಿ ಯಾರದ್ದೂ ತಕರಾರೂ ಇಲ್ಲವೆಂದು ಪರಿಗಣಿಸಿ ಉಲ್ಲೇಖಿತ ಪ್ರಕರಣವನ್ನು ಏಕಪಕ್ಷೀಯವಾಗಿ ಇತ್ಯರ್ಥಗೊಳಿಸಲಾಗುವುದು.
2024ರ ಸೆಪ್ಟಂಬರ್ 10ನೇ ತಾರೀಖು ಈ ದಿವಸ ನನ್ನ ಸಹಿ ಮತ್ತು ನ್ಯಾಯಾಲಯದ ಮೊಹರಿನೊಂದಿಗೆ ಹೊರಡಿಸಲಾಗಿದೆ.

ಮಾನ್ಯ ನ್ಯಾಯಾಲಯದ ಆದೇಶದ ಮೇರೆಗೆ
ಶಿರಸ್ತೆದಾರರು,
ಮಾನ್ಯ 1ನೇ ಅಪರ ಸಿವಿಲ್ ನ್ಯಾಯಾಧೀಶರು ಜೆ.ಎಂ.ಎಫ್.ಸಿ. ನ್ಯಾಯಾಲಯ, ಕನಕಪುರ
ಅರ್ಜಿದಾರರ ಪರ ವಕೀಲರು
ಹೆಚ್.ಎಸ್.ಮುರಳಿ
ವಕೀಲರು
ಸ್ಥಳ : ಕನಕಪುರ
ದಿನಾಂಕ: 10.09.2024

ಶ್ರೀ ಸುಬುಧೇಂದ್ರತೀರ್ಥ ಕೋ-ಆಪರೇಟಿವ್ ಸೊಸೈಟಿ ಲಿಮಿಟೆಡ್, ಬೆಂಗಳೂರು

ಸದಸ್ಯರ ಗಮನಕ್ಕೆ
ನಮ್ಮ ಸಂಘದ 2023-24ನೇ ಸಾಲಿನ 8ನೇ ಸರ್ವ ಸದಸ್ಯರ ವಾರ್ಷಿಕ ಮಹಾಸಭೆಯನ್ನು ಸಂಸ್ಥೆಯ ಅಧ್ಯಕ್ಷರಾದ ಶ್ರೀಯುತ ಅನಿಲ್ ಕುಮಾರ್ ಎನ್. ಬಿ. ರವರ ಅಧ್ಯಕ್ಷತೆಯಲ್ಲಿ ದಿನಾಂಕ: 22.09.2024 ರಂದು ಭಾನುವಾರ ಮಧ್ಯಾಹ್ನ 4.00 ಗಂಟೆಗೆ ಕಲ್ಪವೃಕ್ಷ ಕ್ಷೇತ್ರ, ಶ್ರೀ ರಾಘವೇಂದ್ರಸ್ವಾಮಿಗಳ ಮೃತ್ತಿಕಾ ಬೃಂದಾವನ ಸನ್ನಿಧಾನ, ನಂ.1339, 25ನೇ ಅಡ್ಡರಸ್ತೆ, 29ನೇ ಮುಖ್ಯರಸ್ತೆ, ಪೂರ್ಣ ಪ್ರಜ್ಞಾ ಬಡಾವಣೆ, ಉತ್ತರಹಳ್ಳಿ, ಬೆಂಗಳೂರು ಇಲ್ಲಿ ಕರೆಯಲಾಗಿದೆ. ಸೊಸೈಟಿಯ ಎಲ್ಲಾ ಸದಸ್ಯರಿಗೆ ಮಹಾಸಭೆಯ ಆಹ್ವಾನ ಪತ್ರಿಕೆಯನ್ನು ಈಗಾಗಲೇ ಅಂಚೆ ಮೂಲಕ ಕಳುಹಿಸಲಾಗಿದ್ದು, ಒಂದು ವೇಳೆ ಆಹ್ವಾನ ಪತ್ರಿಕೆ ತಲುಪದೇ ಇದ್ದಲ್ಲಿ, ಈ ನೋಟೀಸನ್ನು ಆಹ್ವಾನವೆಂದು ತಿಳಿದು ಮಾನ್ಯ ಸದಸ್ಯರು ಸಕಾಲಕ್ಕೆ ಆಗಮಿಸಿ ಸಭೆಯಲ್ಲಿ ಭಾಗವಹಿಸಬೇಕಾಗಿ ವಿನಂತಿ.

ಆಡಳಿತ ಮಂಡಲಿಯ ಅಪ್ಪಣೆ ಮೇರೆಗೆ
ರಮ್ಯ ಶಶಿಕಿರಣ್
ಮುಖ್ಯ ಕಾರ್ಯನಿರ್ವಹಣಾಧಿಕಾರಿ

ಕರ್ನಾಟಕ ರಾಜ್ಯ ಸರ್ಕಾರಿ 'ಡಿ'-ಗ್ರೂಪ್ ನೌಕರರ ಕ್ಷೇಮಾಭಿವೃದ್ಧಿ ಮತ್ತು ಖಾಸಗಿ ನೌಕರರ ಗೃಹ ನಿರ್ಮಾಣ ಸಹಕಾರ ಸಂಘ(ನಿ.) ಮೈಸೂರು
(ಕ್ರ.ಸ.ಹೆಚ್ ಎಸ್‌ಜಿ-1/01/ಹೆಚ್ ಹೆಚ್ ಎಸ್/47976/2016-17 ದಿನಾಂಕ: 19.08.2016)
ನಂ.744, ನಾಲಾಬೀದಿ, ಕೆ.ಆರ್. ಮೊಹಲ್ಲಾ, ಮೈಸೂರು-570004

ವಾರ್ಷಿಕ ಮಹಾಸಭೆಯ ಆಹ್ವಾನ ಪತ್ರಿಕೆ

2023-24ನೇ ಸಾಲಿನ ಸರ್ವ ಸದಸ್ಯರ ವಾರ್ಷಿಕ ಮಹಾಸಭೆಯ ಆಹ್ವಾನ ಪತ್ರಿಕೆ ದಿನಾಂಕ 22-09-2024ನೇ ಭಾನುವಾರ ಬೆಳಿಗ್ಗೆ 11.00 ಗಂಟೆಗೆ ಸರಿಯಾಗಿ ಅಧ್ಯಕ್ಷರಾದ ಸಿ.ವೆಂಕಟೇಶ್ ರವರ ಅಧ್ಯಕ್ಷತೆಯಲ್ಲಿ ಕರೆಯಲಾಗಿದೆ. ಈಗಾಗಲೇ ಮಾನ್ಯ ಸದಸ್ಯರುಗಳಿಗೆ ಅಂಚೆ ಮೂಲಕ ವಾರ್ಷಿಕ ಮಹಾಸಭೆಯ ಆಹ್ವಾನ ಪತ್ರಿಕೆಯನ್ನು ಕಳುಹಿಸಲಾಗಿದ್ದು, ತಲುಪದೇ ಇದ್ದಲ್ಲಿ ಇದನ್ನೇ ಆಹ್ವಾನ ಪತ್ರಿಕೆಯೆಂದು ತಿಳಿದು ಸಭೆಗೆ ಸಕಾಲಕ್ಕೆ ಆಗಮಿಸಬೇಕಾಗಿ ಕೋರುತ್ತೇವೆ.

ಸ್ಥಳ: ಸಂಘದ ಬಡಾವಣೆ ಮೈಸೂರು ತಾಲ್ಲೂಕು, ಜಯಪುರ ಹೋಬಳಿ, ದೇವಗಳ್ಳಿ ಗ್ರಾಮದ ಸಂಘದ ಬಡಾವಣೆಯಲ್ಲಿ, ಮೈಸೂರು.

ತಮ್ಮ ವಿಶ್ವಾಸಿ,
ಕಾರ್ಯಕಾರಿ ಮಂಡಲಿ ಅಪ್ಪಣೆ ಮೇರೆಗೆ
ಶ್ರೀಮತಿ ಎನ್. ಲಾವಣ್ಯ

ಸಮಾಚಾರ ಸಣ್ಣದಲ್ಲ

ರಸ್ತೆ ಗುಂಡಿ ಮುಚ್ಚುವ ಕಾರ್ಯ ಅಪೂರ್ಣ

ಬೆಂಗಳೂರು: ನಗರದಲ್ಲಿರುವ ರಸ್ತೆ ಗುಂಡಿಯನ್ನು ಮುಚ್ಚುವಂತೆ ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ನೀಡಿದ ಗಡುವು ಪೂರ್ಣವಾಗಿದ್ದರೂ ನಗರದ ಹಲವೆಡೆ ರಸ್ತೆಗಳಿನ್ನೂ ಗುಂಡಿಗಳಿಂದ ತುಂಬಿ ಹೋಗಿವೆ ಎಂದು ನಾಗರಿಕರು ಬೇಸರ ವ್ಯಕ್ತಪಡಿಸಿದ್ದಾರೆ. ಬಿಬಿಎಂಪಿಯು ತಮ್ಮ ಪ್ರದೇಶಗಳಲ್ಲಿ ಹಾಗೂ ತಾವು ಸಂಚರಿಸುವ ರಸ್ತೆಗಳ್ಲಲಿ ಗುಂಡಿ ಮುಚ್ಚುವ ಕೆಲಸವನ್ನು ಮಾಡುತ್ತಿದ್ದು, ಕೆಲ ಪ್ರದೇಶಗಳಲ್ಲಿ ಡಾಂಬರು ಹಾಕಲಾಗಿದೆ. ಆದರೆ, ಇನ್ನೂ ಸಾಕಷ್ಟು ಗುಂಡಿಗಳು ಬಾಕಿ ಉಳಿದಿದ್ದು, ರಸ್ತೆ ಗುಂಡಿ ಮುಚ್ಚುವ ಕಾರ್ಯಗಳಿನ್ನೂ ಪೂರ್ಣವಾಗಿಲ್ಲ. ಡಿಕೆ.ಶಿವಕುಮಾರ್ ಅವರು ಗುಂಡಿ ಮುಚ್ಚಲು 15 ದಿನಗಳ ಕಾಲ ಅವಕಾಶ ನೀಡಿದ್ದರು. ಆ ಗಡುವು ಪೂರ್ಣಗೊಂಡಿದ್ದು, ಇದೀಗ ಡಿಸಿಎಂ ಸ್ವತಃ ನಗರ ಪ್ರದಕ್ಷಿಣೆ ನಡೆಸಿ, ವಿಫಲರಾದ ಅಧಿಕಾರಿಗಳ ವಿರುದ್ಧ ಕಠಿಣ ಕ್ರಮ ಕೈಗೊಳ್ಳಬೇಕು. ಕೆಲ ಅಧಿಕಾರಿಗಳಿಗೆ ಶಿಕ್ಷೆಯಾದರೆ, ಉಳಿದವರಿಗೆ ಬುದ್ಧಿ ಬರಲಿದೆ, ಬಳಿಕ ಶ್ರದ್ಧೆಯಿಂದ ಕೆಲಸ ಮಾಡುತ್ತಾರೆ ಎಂದು ಸಾರ್ವಜನಿಕರು ಆಕ್ರೋಶ ವ್ಯಕ್ತಪಡಿಸಿದ್ದಾರೆ. ವಿದೇಶಕ್ಕೆ ತೆರಳುವುದಕ್ಕೂ ಮುನ್ನ ಡಿಕೆ.ಶಿವಕುಮಾರ್ ರು ಬಿಬಿಎಂಪಿ ಅಧಿಕಾರಿಗಳೊಂದಿಗೆ ಸಭೆ ನಡೆಸಿದ್ದು, ಈ ಸಭೆಯಲ್ಲಿ 15 ದಿನಗಳ ಒಳಗಾಗಿ ರಸ್ತೆ ಗುಂಡಿಗಳನ್ನು ಮುಚ್ಚುವಂತೆ ತಾಕೀತು ಮಾಡಿದ್ದರು.

ವಿವಿಧ ಹುದ್ದೆಗಳ ನೇಮಕಾತಿಗೆ ಅರ್ಜಿ

ಬೆಂಗಳೂರು: ಕೇಂದ್ರ ಸರಕಾರದ ಸಿಬ್ಬಂದಿ ನೇಮಕಾತಿ ಆಯೋಗವು ಕೇಂದ್ರ ಸಶಸ್ತ್ರ ಪೊಲೀಸ್ ಮತ್ತು ಎಸ್ಎಸ್ಎಫ್ ಪಡೆಗಳಲ್ಲಿ ಕಾನ್‌ಸ್ಟೇಬಲ್ (ಜಿಡಿ) ಮತ್ತು ಅಸ್ಸಾಂ ರೈಫಲ್ಸ್‌ನಲ್ಲಿ ರೈಫಲ್‌ಮ್ಯಾನ್ (ಜಿಡಿ) ಹುದ್ದೆಗಳ ನೇಮಕಾತಿಗಾಗಿ ಮುಕ್ತ ಸ್ಪರ್ಧಾತ್ಮಕ ಕಂಪ್ಯೂಟರ್ ಆಧಾರಿತ ಪರೀಕ್ಷೆಯನ್ನು ನಡೆಸುತ್ತಿದ್ದು, ಜನವರಿ - ಫೆಬ್ರವರಿ 2025 ರಲ್ಲಿ ನಡೆಯಲಿದೆ. ಪರೀಕ್ಷೆಯ ನಿಖರ ದಿನಾಂಕವನ್ನು ನಂತರ ಎಸ್‌ಎಸ್‌ಸಿ ವೆಬ್‌ಸೈಟ್ https://ssc.nic.in ಮೂಲಕ ತಿಳಿಸಲಾಗುತ್ತಿದ್ದು, ಅ.14 ರ ರಾತ್ರಿ 11 ಗಂಟೆಯೊಳಗಾಗಿ ಸಲ್ಲಿಸುವುದು. ಅರ್ಜಿ ಸಲ್ಲಿಸುವವರ ವಿದ್ಯಾರ್ಹತೆ ಮಾನ್ಯತೆ ಪಡೆದ ಮಂಡಳಿಯಿಂದ ಎಸ್‌ಎಸ್‌ಎಲ್‌ಸಿ ಅಥವಾ ತತ್ಸಮಾನ ಪರೀಕ್ಷೆಯಲ್ಲಿ ಉತ್ತೀರ್ಣರಾಗಿರಬೇಕು. ಹೆಚ್ಚಿನ ಮಾಹಿತಿಗೆ ಎಸ್‌ಎಸ್‌ಸಿ ಮುಖ್ಯ ಕಚೇರಿ ನವದೆಹಲಿಯ ವೆಬ್‌ಸೈಟ್ https://ssc.nic.in ಮತ್ತು ಎಸ್‌ಎಸ್‌ಸಿ ಸ್ಥಳೀಯ ಕಚೇರಿ ಬೆಂಗಳೂರಿನ (ಕರ್ನಾಟಕ-ಕೇರಳ) ವೆಬ್‌ಸೈಟ್ www.ssckkr.kar.nic.in ನ್ನು ಸಂಪರ್ಕಿಸಿ.

ಸಿಟಿ ಸಿವಿಲ್ ಕೋರ್ಟ್: ಇ-ಟೆಂಡರ್ ಆಹ್ವಾನ

ಬೆಂಗಳೂರು: ಬೆಂಗಳೂರು ಸಿಟಿ ಸಿವಿಲ್ ಕೋರ್ಟ್ ಕಚೇರಿಯ ಪುಸ್ತಕ , ಸೂಟ್ ರಿಜಿಸ್ಟರ್‌ಗಳನ್ನು ಬೈಂಡ್ ಮಾಡಿಸಲು ಇ- ಟೆಂಡರ್‌ನ್ನು ಆಹ್ವಾನಿಸಿದೆ. ಟೆಂಡರ್‌ನ ಅಂದಾಜು ಮೊತ್ತ 1,73,000 ರು. ಇದ್ದು, ಟೆಂಡರ್ ದಾಖಲೆಗಳನ್ನು ಡೌನ್‌ಲೋಡ್ ಮಾಡಿಕೊಂಡು ಸೆ.25 ರ ಸಂಜೆ 4 ಗಂಟೆಗೆ ಪ್ರಿ ಬಿಡ್ ಸಭೆ ಹಾಗೂ ಟೆಂಡರ್‌ಗಳನ್ನು ಸಲ್ಲಿಸಲು ಸೆ.27 ಸಂಜೆ 4 ಗಂಟೆ ಅಂತಿಮ ದಿನವಾಗಿರುತ್ತದೆ. ಹೆಚ್ಚಿನ ವಿವರಗಳಿಗೆ https://kppp/karnataka.gov.in//portal/auction/live ಜಾಲತಾಣವನ್ನು ವೀಕ್ಷಿಸಿ ಎಂದು ಪ್ರಕಟಣೆ ತಿಳಿಸಿದೆ.

ನ.14ರಿಂದ 17ರವರೆಗೆ ಜಿಕೆವಿಕೆ ಕೃಷಿ ಮೇಳ

ಬೆಂಗಳೂರು: ಬೆಂಗಳೂರಿನ ಕೃಷಿ ವಿವಿ ಜಿಕೆವಿಕೆ ಆವರಣದಲ್ಲಿ ನ.14 ರಿಂದ 17 ರವರೆಗೆ ಹವಾಮಾನ ಚತುರ ಡಿಜಿಟಲ್ ಕೃಷಿ ಎಂಬ ಘೋಷವಾಕ್ಯದೊಂದಿಗೆ ಕೃಷಿ ಮೇಳ- 2024 ನ್ನು ಆಯೋಜಿಸಲಾಗಿದೆ. ಕೃಷಿ ಮೇಳದಲ್ಲಿ ನಾಲ್ಕು ನೂತನ ತಳಿಗಳು ಮತ್ತು ಹತ್ತೊಂಭತ್ತು ಹೊಸ ತಾಂತ್ರಿಕತೆಗಳನ್ನು ಬಿಡುಗಡೆ ಮಾಡಲಾಗುವುದು. ಮಳಿಗೆಗಳ ಕಾಯ್ದಿರಿಸುವಿಕೆಯು ಸೆ.23 ರಿಂದ ಪ್ರಾರಂಭವಾಗಲಿದೆ. ಹೆಚ್ಚಿನ ಮಾಹಿತಿಗೆ : 080-23638883 / 23330153 ಗೆ ಸಂಪರ್ಕಿಸಿ.

ಇಂದು- ನಾಳೆ ವಿದ್ಯುತ್ ವ್ಯತ್ಯಯ

ಬೆಂಗಳೂರು: 66/11 ಕೆವಿ ಸುಬ್ರಹ್ಮಣ್ಯಪುರದಲ್ಲಿ ನಿರ್ವಹಣಾ ಕಾರ್ಯವಿರುವುದರಿಂದ ಸೆ.18 ಹಾಗೂ ಸೆ.19 ರಂದು ಬೆಳಗ್ಗೆ 10.00 ಗಂಟೆಯಿಂದ ಸಂಜೆ 5.00 ಗಂಟೆಯವರೆಗೆ ವಿದ್ಯುತ್ ವ್ಯತ್ಯಯವಾಗಲಿದೆ. ಗುಬ್ಬಲಾಳ, ಉತ್ತರಹಳ್ಳಿ, ಇಸ್ರೋ ಲೇಔಟ್ ಕೈಗಾರಿಕಾ ಪ್ರದೇಶ, ಆದರ್ಶ ಅಪಾರ್ಟ್‌ಮೆಂಟ್ 1 ಮತ್ತು 2. ಮಂತ್ರಿ ಟ್ರಾನ್ಕ್ವಿಲ್ ಅಪಾರ್ಟ್ ಮೆಂಟ್, ಮಾರುತಿ ಲೇಔಟ್, ಭಾರತ್ ಲೇಔಟ್,ದೊಡ್ಡಕಲ್ಲಸಂದ್ರ ಕೈಗಾರಿಕಾ ಪ್ರದೇಶ, ವಿಟಲಾ ನಗರ, ಯಾವಳಾಂ ನಗರ, ಮಾರುತಿ ನಗರ ಹಾಗೂ ಸುತ್ತಮುತ್ತಲಿನ ಪ್ರದೇಶಗಳು. 220/66/11 ಕೆವಿಎನ್‌ಆರ್‌ಎಸ್ ಸ್ಟೇಷನ್‌ನ ಮಂಜುನಾಥನಗರ, ಶಿವನಗರ, ಗಾಯತ್ರಿನಗರ, ಪ್ರಕಾಶನಗರ, ಎಲ್.ಎನ್‌ಪುರ ಪ್ರದೇಶಗಳಲ್ಲಿ ವಿದ್ಯುತ್ ವ್ಯತ್ಯಯವಾಗಲಿದೆ.

{ಶೋಭಾಕರಂದ್ಲಾಜೆ } ಸಂಸದೆ

ಸರಕಾರ ಓಲೈಕೆ ರಾಜಕೀಯದಲ್ಲಿ ನಿರತವಾಗಿದ್ದು, ದೇಶದ್ರೋಹ ಮಾಡಿದರೂ ಅಡ್ಡಿ ಇಲ್ಲ; ನಮಗೆ ವೋಟ್ ಬ್ಯಾಂಕ್ ಬೇಕು ಎಂಬ ಮಾನಸಿಕವಾಗಿ ಸಿದ್ಧಗೊಂಡಂತೆ ಕಾಣುತ್ತಿದೆ ವಿಧಾನಸೌಧದಲ್ಲೇ ಪಾಕಿಸ್ತಾನ ಜಿಂದಾಬಾದ್ ಎಂದು ಘೋಷಣೆ ಕೂಗಿದರೂ ಶಿಕ್ಷೆ ವಿಧಿಸದೇ ಸರಕಾರ ದೇಶದ್ರೋಹಕ್ಕೆ ಕುಮ್ಮಕ್ಕು ನೀಡುತ್ತಿದೆ.

ಪಾಲಿಕೆ ವ್ಯಾಪ್ತಿಯಲ್ಲಿ ವಿವಿಧ ಕಾಮಗಾರಿ ವಿಚಾರಗಳಿಗೆ ಸಂಬಂಧಿಸಿದ ಸಭೆ

ಸೇತುವೆಗಳ ನಿರ್ವಹಣೆಗೆ ಸೂಕ್ತ ಗಮನ ನೀಡಿ:ತುಷಾರ್ ಗಿರಿನಾಥ್

ಬೆಂಗಳೂರು: ಬೆಂಗಳೂರಿನಲ್ಲಿ ವಿವಿಧ ಕಾಮಗಾರಿಗಳಿಗೆ ಸಂಬಂಧಿಸಿದಂತೆ ಕಾರ್ಯವೈಖರಿಯನ್ನು ಸುಧಾರಿಸಿಕೊಳ್ಳಬೇಕು ಎಂದು ಮುಖ್ಯ ಆಯುಕ್ತ ತುಷಾರ್ ಗಿರಿನಾಥ್ ಅಧಿಕಾರಿಗಳು ಹಾಗೂ ಸಿಬ್ಬಂದಿಗೆ ಸೂಚನೆ ನೀಡಿದರು.

ಪಾಲಿಕೆ ವ್ಯಾಪ್ತಿಯಲ್ಲಿ ವಿವಿಧ ಕಾಮಗಾರಿ ವಿಚಾರಗಳಿಗೆ ಸಂಬಂಧಿಸಿದಂತೆ ವಿಡಿಯೊ ಮೂಲಕ ಸಭೆ ನಡೆಸಿ ಮಾತನಾಡಿ, ಪಾಲಿಕೆ ವ್ಯಾಪ್ತಿಯಲ್ಲಿ ಬರುವ ಮೇಲ್ಸೇತುವೆ ಹಾಗೂ ಕೆಳ ಸೇತುವೆಗಳನ್ನು ಪರಿಶೀಲನೆ ನಡೆಸಿ ಸರಿಯಾಗಿ ನಿರ್ವಹಿಸಬೇಕು. ಹಾಗೂ ಸ್ಕೈವಾಕ್‌ಗಳಲ್ಲಿರುವ ಲಿಫ್ಟ್‌ಗಳನ್ನು ಸರಿಯಾಗಿ ಕಾರ್ಯನಿರ್ವಹಿಸುವಂತೆ ನೋಡಿಕೊಳ್ಳಬೇಕು. ಜತೆಗೆ ಎಲ್ಲಾ ಸ್ಕೈವಾಕ್‌ಗಳ ಬಳಿ ಸ್ವಚ್ಛತೆ ಕಾಪಾಡಿಕೊಂಡು ಪಾದಚಾರಿಗಳ ಸಂಚಾರಕ್ಕೆ ಯಾವುದೇ ರೀತಿಯಲ್ಲಿ ಸಮಸ್ಯೆಯಾಗದಂತೆ ನೋಡಿಕೊಳ್ಳಬೇಕು ಎಂದು ಸೂಚನೆ ನೀಡಿದರು.

ಪಾಲಿಕೆ ವ್ಯಾಪ್ತಿಯಲ್ಲಿ ಹೆಚ್ಚು ಆಸ್ತಿ ಬಾಕಿ ಉಳಿಸಿಕೊಂಡಿರುವ ಸುಸ್ತಿದಾರರಿಂದ ಆಸ್ತಿ ತೆರಿಗೆ ಸಂಗ್ರಹಿಸಬೇಕು. ನವೆಂಬರ್ ತಿಂಗಳಾಂತ್ಯದವರೆಗೆ ಒಂದು ಬಾರಿ ಪರಿಹಾರ ಯೋಜನೆಯನ್ನು ವಿಸ್ತರಿಸಿದ್ದು, ಬಾಕಿ ಆಸ್ತಿ ತೆರಿಗೆ ಪಾವತಿಸಬೇಕಿರುವವರಿಂದ ಕೂಡಲೆ ಬಾಕಿ ಆಸ್ತಿ ತೆರಿಗೆಯನ್ನು ಪಾವತಿಸಿಕೊಳ್ಳಲು ಸೂಕ್ತ ಕ್ರಮ ಕೈಗೊಳ್ಳಬೇಕು ಎಂದು ವಿಶೇಷ ಆಯುಕ್ತರಿಗೆ ಸೂಚನೆ ನೀಡಿದರು.

ವಿಶೇಷ ಆಯುಕ್ತ ಮುನೀಶ್ ಮೌದ್ಗಿಲ್, ಡಾ. ಕೆ. ಹರೀಶ್ ಕುಮಾರ್, ಎಲ್ಲಾ ವಲಯ ಆಯುಕ್ತರು, ವಲಯ ಜಂಟಿ ಆಯುಕ್ತರು, ಪ್ರಧಾನ ಅಭಿಯಂತರರು, ಮುಖ್ಯ ಅಭಿಯಂತರರು ಇದ್ದರು.

ಕಸದ ಸಮಸ್ಯೆ ಬಗೆಹರಿಸಿ

ನಗರದಲ್ಲಿ ರಸ್ತೆ ಬದಿ, ಪಾದಾಚರಿ ಮಾರ್ಗ, ಖಾಲಿ ಸ್ಥಳ/ಜಾಗಗಳಲ್ಲಿ ಕಸ ಸುರಿಯುವ ಸ್ಥಳ(ಬ್ಲಾಕ್ ಸ್ಪಾಟ್ಸ್)ಗಳನ್ನು ಪಟ್ಟಿ ಮಾಡಿ ಅವುಗಳನ್ನು ಕೂಡಲೆ ಸ್ವಚ್ಛ ಮಾಡಿ ಮತ್ತೆ ಬ್ಲಾಕ್ಸ್ ಸ್ಪಾಟ್‌ಗಳಾಗದಂತೆ ಸೂಕ್ತ ಕ್ರಮ ಕೈಗೊಳ್ಳಬೇಕು. ರಸ್ತೆ ಬದಿ ಕಸ ಸುರಿಯುವುದರಿಂದ ನಗರ ಸೌಂದರ್ಯ ಹಾಳಾಗಲಿದ್ದು, ಈ ಬಗ್ಗೆ ಆಯಾ ವಲಯ ವ್ಯಾಪ್ತಿಯಲ್ಲಿ ಸರಿಯಾದ ಕ್ರಮಗಳನ್ನು ಕೈಗೊಳ್ಳಬೇಕು. ಜತೆಗೆ ನಾಗರಿಕರಲ್ಲಿ ಅರಿವು ಮೂಡಿಸುವ ಕೆಲಸ ಮಾಡಬೇಕು ಎಂದು ಹೇಳಿದ್ದಾರೆ.

ಬೀದಿ ದೀಪಗಳ ದುರಸ್ತಿ ಮಾಡಿ

ಬೆಂಗಳೂರು: ಬಿಬಿಎಂಪಿ ವ್ಯಾಪ್ತಿಯಲ್ಲಿ ಬೀದಿ ದೀಪಗಳ ದುರಸ್ತಿ ಕಾರ್ಯವನ್ನು ಸರಿಯಾಗಿ ನಿರ್ವಹಿಸಬೇಕು ಎಂದು ಮುಖ್ಯ ಆಯುಕ್ತ ತುಷಾರ್ ಗಿರಿನಾಥ್ ಗುತ್ತಿಗೆದಾರಿಗೆ ಕಟ್ಟುನಿಟ್ಟಿನ ಸೂಚನೆ ನೀಡಿದರು.

ನಗರದಲ್ಲಿ ಬೀದಿ ದೀಪಗಳ ನಿರ್ವಹಣೆಗೆ ಸಂಬಂಧಿಸಿದಂತೆ ಮಲ್ಲೇಶ್ವರದ ಐಪಿಪಿ ತರಬೇತಿ ಕೇಂದ್ರದಲ್ಲಿ ಎಲೆಕ್ಟ್ರಿಕ್ ವಿಭಾಗದ ಅಭಿಯಂತರರು ಹಾಗೂ ಗುತ್ತಿಗೆದಾರರ ಜತೆ ಸಭೆ ನಡೆಸಿ ಮಾತನಾಡಿ, ನಗರದಲ್ಲಿ ಹಲವು ಕಡೆ ಬೀದಿ ದೀಪಗಳನ್ನು ಸರಿಯಾಗಿ ನಿರ್ವಹಣೆ ಮಾಡದಿರುವುದನ್ನು ಗಮನಿಸಲಾಗಿದೆ. ಈ ನಿಟ್ಟಿನಲ್ಲಿ ಎಲ್ಲಾ ವಲಯಗಳಲ್ಲಿ ಬೀದಿ ದೀಪಗಳ ನಿರ್ವಹಣೆ ಸರಿಯಾಗಿರುವಂತೆ ನೋಡಿಕೊಳ್ಳಬೇಕು. ಆಯಾ ವಲಯ ವ್ಯಾಪ್ತಿಯಲ್ಲಿ ಎಲ್ಲೆಲ್ಲಿ ಬೀದಿ ದೀಪಗಳು ಉರಿಯುತ್ತಿಲ್ಲ, ಎಲ್ಲೆಲ್ಲಿ ವಿದ್ಯುತ್ ಕಂಬಗಳು ಹಾಳಾಗಿವೆ ಎಂಬುದನ್ನು ಪರಿಶೀಲಿಸಿ ಜಿಯೋ ಲೊಕೇಶನ್ ಮೂಲಕ ಪಟ್ಟಿ ಸಿದ್ಧಪಡಿಸಬೇಕು. ಅನಂತರ ತ್ವರಿತಗತಿಯಲ್ಲಿ ದುರಸ್ತಿ ಕಾರ್ಯವನ್ನು ಕೈಗೊಳ್ಳಬೇಕು ಎಂದು ಅಧಿಕಾರಿಗಳಿಗೆ ಸೂಚನೆ ನೀಡಿದರು.

ನಗರದ ಹೊರ ವರ್ತುಲ ರಸ್ತೆ, ಪ್ರಮುಖ ರಸ್ತೆಗಳು ಹಾಗೂ ಮೇಲ್ಸೇತುವೆಗಳಲ್ಲಿ ಬೀದಿ ದೀಪಗಳ ನಿರ್ವಹಣೆಯನ್ನು ಸರಿಯಾಗಿ ಮಾಡಬೇಕು. ಅಧಿಕಾರಿಗಳು ಖುದ್ದು ಸ್ಥಳ ಪರಿಶೀಲನೆ ನಡೆಸಿ ಇರುವ ಸಮಸ್ಯೆಯನ್ನು ಬಗೆಹರಿಸಬೇಕು. ಬೀದಿ ದೀಪಗಳ ನಿರ್ವಹಣೆಗೆ ಸಂಬಂಧಿಸಿದಂತೆ ಏನಾದರು ಸಮಸ್ಯೆ ಇದ್ದಲ್ಲಿ ಅದನ್ನು ಬಗೆಹರಿಸಲಾಗುವುದು. ಬೀದಿ ದೀಪಗಳ ಅಳವಡಿಕೆ ಸಂಬಂಧ ಶೀಘ್ರ ಟೆಂಡರ್ ಕರೆಯಲಾಗುವುದು ಎಂದರು.

ಬೆಂಗಳೂರಿನ ಎಲ್ಲ ರಸ್ತೆ ಗುಂಡಿಗಳಿಗೆ ಶೀಘ್ರ ಮುಕ್ತಿ

ಬೆಂಗಳೂರು: ಶೀಘ್ರವೇ ರಸ್ತೆಗುಂಡಿಗಳನ್ನು ಸಂಪೂರ್ಣವಾಗಿ ಮುಚ್ಚಲಾಗುವುದು ಎಂದು ಬಿಬಿಎಂಪಿ ಮುಖ್ಯ ಆಯುಕ್ತ ತುಷಾರ್ ಗಿರಿನಾಥ್ ಹೇಳಿದರು.

ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಉಪಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್‌ರವರು ರಸ್ತೆ ಗುಂಡಿಗಳನ್ನು ಮುಚ್ಚಲು ಎರಡು ವಾರ ಗಡುವು ನೀಡಿದ್ದರು. ಮುಖ್ಯಮಂತ್ರಿ ಸಿದ್ದರಾಮಯ್ಯನವರು ನಗರಪ್ರದಕ್ಷಿಣೆ ಬಂದಾಗ ಸೆ.20 ರೊಳಗೆ ಎಲ್ಲಾ ಗುಂಡಿಗಳನ್ನೂ ಮುಚ್ಚುವಂತೆ ಸೂಚನೆ ನೀಡಿದ್ದರು. ನಾವು 17ರೊಳಗೆ ಗುಂಡಿಗಳನ್ನು ಮುಚ್ಚಬೇಕು ಎಂದುಕೊಂಡು ಹಗಲು-ರಾತ್ರಿ ಕಾಮಗಾರಿ ಮಾಡಿದ್ದೇವು. ಶೀಘ್ರದೊಳಗೆ ಎಲ್ಲಾ ಗುಂಡಿಗಳನ್ನೂ ಮುಚ್ಚಲಾಗುವುದು ಎಂದು ಹೇಳಿದರು.

ನಿತ್ಯ ಗುಂಡಿ ಗಮನ ಆ್ಯಪ್‌ನಲ್ಲಿ ಪ್ರತಿನಿತ್ಯ ಒಂದು ಸಾವಿರ ಕೇಸುಗಳು ಬರುತ್ತಿವೆ. ಪ್ರತಿನಿತ್ಯ 800 ಗುಂಡಿಗಳನ್ನು ಮುಚ್ಚುವ ಸಾಮರ್ಥ್ಯ ಹೊಂದಿದ್ದೇವೆ. ಗುಂಡಿ ಆ್ಯಪ್ ಹೊರತುಪಡಿಸಿ ನಾವೇ ಹಲವು ಗುಂಡಿಗಳನ್ನು ಪತ್ತೆ ಹಚ್ಚಿ ಮುಚ್ಚುತ್ತಿದ್ದೇವೆ. ಈಗಾಗಲೇ ಆರು ಸಾವಿರ ಗುಂಡಿಗಳನ್ನು ಮುಚ್ಚಿದ್ದೇವೆ ಎಂದರು. ರಸ್ತೆ ಗುಂಡಿ ಹೊರತಾಗಿ ರಸ್ತೆ ಬ್ಯಾಡ್ ರಿಚ್ವರ್ಸ್ ಸರಿಪಡಿಸಿದ್ದೇವೆ. 32 ಸಾವಿರ ಚ.ಕೀ. ರಸ್ತೆ ಬ್ಯಾಡ್ ರಿಚ್ವರ್ಸ್ ಸರಿಪಡಿಸಲಾಗಿದೆ. 25 ಕೆ.ಜಿ. ತೂಕದ 9 ಸಾವಿರ ಕೋಲ್ಡ್ ಮಿಕ್ಸ್ ಬ್ಯಾಗ್ ಬಳಕೆ ಮಾಡಿ ಗುಂಡಿಗಳನ್ನು ಮುಚ್ಚಲಾಗುತ್ತಿದೆ. ಮುನಿರತ್ನ ಅವರ ಅಣತಿಯಂತೆ ಟೆಂಡರ್ ಕ್ಯಾನ್ಸಲ್ ಮಾಡಿದ್ದಾರೆ ಎಂಬ ಬಿಬಿಎಂಪಿ ಗುತ್ತಿಗೆದಾರ ಚೆಲುವ ರಾಜ್ ಮಾಡಿದ್ದ ಗಂಭೀರ ಆರೋಪಕ್ಕೆ ಪ್ರತಿಕ್ರಿಯಿಸಿರುವ ಆಯುಕ್ತರು, ಟೆಂಡರ್ ಕ್ಯಾನ್ಸಲ್ ಮಾಡುವ ಅಧಿಕಾರ ಮುಖ್ಯ ಆಯುಕ್ತರಾದ ನನಗೆ ಇಲ್ಲ, ಟೆಂಡರ್ ಕ್ಯಾನ್ಸಲ್ ಮಾಡುವುದು, ಕೊಡುವುದು ವಲಯ ಆಯುಕ್ತರು ಮತ್ತು ಜಂಟಿ ಆಯುಕ್ತರ ಅಧಿಕಾರ ವ್ಯಾಪ್ತಿಗೆ ಬರುತ್ತದೆ. ಟೆಂಡರ್ ಕ್ಯಾನ್ಸಲ್ ಬಗ್ಗೆ ದೂರು ಮನವಿ ಬಂದರೆ ಅದನ್ನು ಆಯಾ ವಲಯಗಳಿಗೆ ಕಳುಹಿಸಿ ಕೊಡುತ್ತೇವೆ ಎಂದರು.

> ಒಬ್ಬ ಮುಖ್ಯ ಆಯುಕ್ತ ಝೋನ್‌ಗಳಲ್ಲಿನ ಎಲ್ಲಾ ವಿಷಯಗಳ ಬಗ್ಗೆಯೂ ಕ್ರಮ ತೆಗೆದುಕೊಳ್ಳುವುದು ಕಷ್ಟಸಾಧ್ಯ. ಹಾಗಾಗಿ ಎಂಟು ಝೋನ್‌ಗಳಲ್ಲಿಯೂ ಐಎಎಸ್ ಅಧಿಕಾರಿಗಳು ಇದ್ದಾರೆ. ಅವರು ಕ್ರಮ ಕೈಗೊಳ್ಳಲಿದ್ದಾರೆ.
> **ತುಷಾರ್ ಗಿರಿನಾಥ್,** ಬಿಬಿಎಂಪಿ ಮುಖ್ಯ ಆಯುಕ್ತ

ಮುನಿರತ್ನ ಹೇಳಿಕೆ ಬಗ್ಗೆ ಸ್ವಾಮೀಜಿಗಳು ಮಾತನಾಡಲಿ: ಡಿ.ಕೆ.ಶಿವಕುಮಾರ್

ರಾಹುಲ್ ಭೇಟಿಗೆ ಅನುಮತಿ ಬೇಕೇ?

ಬೆಂಗಳೂರು: ಅಮೆರಿಕ ಪ್ರವಾಸ ಮುಗಿಸಿ ಬೆಂಗಳೂರಿಗೆ ಆಗಮಿಸಿರುವ ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಅವರು, ರಾಹುಲ್ ಗಾಂಧಿ ಭೇಟಿಗೆ ನಾನಾರ್ಥ ಕಲ್ಪಿಸಿರುವುದಕ್ಕೆ ಅಸಮಾಧಾನವ್ಯಕ್ತಪಡಿಸಿದ್ದು, ನಮ್ಮ ನಾಯಕರನ್ನು ಭೇಟಿಯಾಗಲು ಯಾರ ಅನುಮತಿ ಪಡೆಯಬೇಕು ಎಂದು ಪ್ರಶ್ನಿಸಿದ್ದಾರೆ.

ಕಲಬುರಗಿಗೆ ತೆರಳುವ ಮೊದಲು ಸುದ್ದಿಗಾರರೊಂದಿಗೆ ಮಾತನಾಡಿದ ಡಿಕೆಶಿ, ಕುಟುಂಬದೊಂದಿಗೆ ಅಮೆರಿಕ ಪ್ರವಾಸ ಕೈಗೊಂಡಿದೆ. ಅಲ್ಲಿ ರಾಹುಲ್ ಗಾಂಧಿ ಅವರನ್ನು ಭೇಟಿ ಮಾಡಿದ್ದೇನೆ. ಅವರನ್ನು ಭೇಟಿ ಮಾಡಲು ನಾನು ಯಾರ ಅನುಮತಿ ಪಡೆಯಬೇಕು? ನಮ್ಮ ಪಕ್ಷದ ನಾಯಕರನ್ನು ಭೇಟಿಯಾಗಲು ಯಾವ ಅನುಮತಿ ಬೇಕಿದೆ ಎಂದರು.

ಇನ್ನು ರಾಹುಲ್ ಗಾಂಧಿ ಅವರೊಂದಿಗೆ ಯಾವ ವಿಷಯ ಚರ್ಚಿಸಲಾಯಿತು ಎನ್ನುವ ಪ್ರಶ್ನೆಗೆ, ರಾಹುಲ್ ಗಾಂಧಿ ಅವರ ಬಳಿ ಏನು ಮಾತನಾಡಿದೆ ಎಂದು ಮಾಧ್ಯಮದವರಿಗೆ ಹೇಳಲಾಗುತ್ತದೆಯೇ? ನನ್ನ ತಮ್ಮ, ಹೆಂಡತಿ ಮತ್ತು ಸ್ವಾಮೀಜಿಯವರ ಬಳಿ ಏನು ಮಾತನಾಡುತ್ತೇನೆ ಎಂಬುದನ್ನು ನಿಮ್ಮ ಬಳಿ ಹೇಳಲಾಗುತ್ತದೆಯೇ ಎಂದು ಪ್ರಶ್ನಿಸಿದರು.

ಮುನಿರತ್ನ ಹೇಳಿಕೆ ಬಗ್ಗೆ ಸ್ವಾಮೀಜಿಗಳು ಮಾತನಾಡಲಿ

ಇನ್ನು ಮುನಿರತ್ನ ಬಂಧನಕ್ಕೆ ಸಂಬಂಧಿಸಿದಂತೆ ಪ್ರತಿಕ್ರಿಯಿಸಿದ ಅವರು, ಒಕ್ಕಲಿಗ ಸಮುದಾಯದ ಕುರಿತು ಮುನಿರತ್ನ ಅವರು ಆಡಿರುವ ಮಾತಿನ ಬಗ್ಗೆ ಸಮುದಾಯದ ಮುಖ್ಯಸ್ಥರು, ಸ್ವಾಮೀಜಿಗಳು, ಹಿರಿಯರು, ನಾಗರೀಕರು ಮಾತನಾಡಬೇಕು. ಅದರ ಬಗ್ಗೆ ಅಶೋಕ್ ಹಾಗೂ ಬಿಜೆಪಿ ನಾಯಕರು ಮಾತನಾಡಬೇಕು ಎಂದು ಹೇಳಿದರು.

ಅವರು ಹೇಳಿರುವ ಬಗ್ಗೆ ದೊಡ್ಡ ದೊಡ್ಡ ನಾಯಕರಿದ್ದಾರೆ, ಅವರು ಮಾತಾಡಬೇಕು. ಇಂತಹ ವಿಚಾರದಲ್ಲಿ ಬಿಜೆಪಿಯವರೇ ಪ್ರತಿಕ್ರಿಯೆ ನೀಡಬೇಕು. ಮುನಿರತ್ನ ಮಾತನಾಡಿರುವುದು ಸರಿಯೋ ತಪ್ಪೋ? ಒಳ್ಳೆಯದೋ, ಕೆಟ್ಟದ್ದೋ ಎಂಬುದನ್ನು ತಿಳಿಸಬೇಕು. ಸರಿಯಿದ್ದರೆ ಸರಿ, ತಪ್ಪಿದ್ದರೆ ತಪ್ಪು ಎಂದು ಹೇಳಬೇಕು ಎಂದರು.

ಪೊಲೀಸರ ಬಂಧನಕ್ಕೆ ಮುಂಚಿತವಾಗಿ ನನ್ನ ವಿಚಾರದಲ್ಲಿ ಅಣ್ಣ- ತಮ್ಮರ ಆಟ ಶುರುವಾಗಿದೆ ಎನ್ನುವ ಮುನಿರತ್ನ ಹೇಳಿದ್ದಾರೆ. ಆದರೆ ಈ ವಿಚಾರ ಗೊತ್ತಿಲ್ಲ. ಈ ಬಗ್ಗೆ ಪೂರ್ಣ ಮಾಹಿತಿ ಮಾತನಾಡುತ್ತೇನೆ. ನನಗೆ ಇನ್ನು ಸರಿಯಾಗಿ ಮಾಹಿತಿ ಗೊತ್ತಿಲ್ಲ. ಸಾಂವಿಧಾನಿಕ ಹುದ್ದೆ ಹೊಂದಿರುವ ಆರ್ ಅಶೋಕ, ವಿಜಯೇಂದ್ರ, ಕೇಂದ್ರ ಸಚಿವರು ಇದ್ದಾರೆ. ಅವರು ದೊಡ್ಡ ನಾಯಕರಿದ್ದಾರೆ. ಅವರು ಈ ಬಗ್ಗೆ ಪ್ರತಿಕ್ರಿಯೆ ನೀಡಬೇಕು ಎಂದರು.

> ಕೆಲ ದಿನಗಳ ಹಿಂದೆ ನಾಗಮಂಗಲದಲ್ಲಿ ನಡೆದ ಗಣೇಶ ವಿಸರ್ಜನೆ ವೇಳೆ ನಡೆದಿರುವ ಗಲಾಟೆಗೆ ಸಂಬಂಧಿಸಿದಂತೆ ಈಗಾಗಲೇ ಸರಕಾರ, ಪೊಲೀಸರು ಕಾನೂನಾತ್ಮಕವಾಗಿ ಕಠಿಣ ಕ್ರಮ ಕೈಗೊಂಡಿದ್ದಾರೆ. ಈ ವಿಷಯದಲ್ಲಿ ರಾಜಕೀಯವಾಗುತ್ತಿರುವ ಬಗ್ಗೆ ಮಾಹಿತಿಯಿಲ್ಲ. ಮಾಹಿತಿ ಪಡೆದು ಪ್ರತಿಕ್ರಿಯಿಸುವೆ.
> **-ಡಿ.ಕೆ. ಶಿವಕುಮಾರ್** ಉಪಮುಖ್ಯಮಂತ್ರಿ

ಜಯನಗರ, ಜೆಪಿ ನಗರದಲ್ಲಿ ವಾಹನ ಸಂಚಾರ ಮಾರ್ಪಾಡು

ಫ್ಲೈಓವರ್‌ನಿಂದ ಜನರಿಗೆ ಕಿರಿಕಿರಿ

ಬೆಂಗಳೂರು: ರಾಗಿಗುಡ್ಡ ಹಾಗೂ ಸೆಂಟ್ರಲ್ ಸಿಲ್ಕ್ ಬೋರ್ಡ್ ನಡುವೆ ಸಂಚಾರ ದಟ್ಟಣೆ ನಿರ್ವಹಣೆಗಾಗಿ ನಿರ್ಮಿಸಲಾದ ಡಬಲ್ ಡೆಕ್ಕರ್ ಫ್ಲೈ ಓವರ್‌ನಿಂದ ಸುತ್ತಮುತ್ತಲಿನ ನಿವಾಸಿಗಳು ಪರದಾಡುವ ಸ್ಥಿತಿ ನಿರ್ಮಾಣವಾಗಿದೆ ಎನ್ನುವ ಮಾತುಗಳು ಕೇಳಿ ಬಂದಿದೆ.

ಸಂಚಾರ ದಟ್ಟಣೆಯನ್ನು ನಿಯಂತ್ರಿಸುವ ನಿಟ್ಟಿನಲ್ಲಿ ರಾಗಿಗುಡ್ಡ ಮತ್ತು ಸೆಂಟ್ರಲ್ ಸಿಲ್ಕ್ ಬೋರ್ಡ್ ನಡುವೆ ನಿರ್ಮಿಸಲಾದ 3.3 ಕಿಮೀ ಉದ್ದದ ಡಬ್ಬಲ್ ಡೆಕ್ಕರ್ ಫ್ಲೈಓವರ್‌ನ್ನು ಜುಲೈನಲ್ಲಿ ಉದ್ಘಾಟಿಸಲಾಗಿತ್ತು. ಈ ಫ್ಲೈ ಓವರ್‌ನ ನಿರ್ಮಾಣದಿಂದ ಸೆಂಟ್ರಲ್ ಸಿಲ್ಕ್ ಬೋರ್ಡ್‌ನಲ್ಲಿನ ಟ್ರಾಫಿಕ್ ಸಮಸ್ಯೆಗೆ ಪರಿಹಾರ ದೊರೆತಿದ್ದರೂ ಸುತ್ತಮುತ್ತಲಿನ ನಿವಾಸಿಗಳು ಪರದಾಡುವಂತಾಗಿದೆ. ಫ್ಲೈ ಓವರ್‌ನ ಸುತ್ತಮುತ್ತ ಸಂಚಾರ ದಟ್ಟಣೆ ಹೆಚ್ಚಿರುವುದರಿಂದ ಅಕ್ಕ-ಪಕ್ಕದ ನಿವಾಸಿಗಳಿಗೆ ಸಮಸ್ಯೆಯಾಗುತ್ತಿದ್ದು, ಮೇಲ್ಸೇತುವೆಯ ರ‍್ಯಾಂಪ್‌ನತ್ತ ಸಾಗಲು ಜಯನಗರ ಮತ್ತು ಜೆಪಿ ನಗರದಲ್ಲಿ ವಾಹನ ಸಂಚಾರ ಮಾರ್ಪಾಡು ಮಾಡಲಾಗಿದೆ.

ಜಯನಗರ ಮತ್ತು ಜೆಪಿ ನಗರದ ಜಂಕ್ಷನ್‌ಗಳಲ್ಲಿ ಬಲ ತಿರುವನ್ನು ನಿರ್ಬಂಧಿಸಲಾಗಿದೆ. ಇದರಿಂದ ಈ ನಗರದಲ್ಲಿ ವಾಸಿಸುವ ವಾಹನ ಸವಾರರು ಬಹಳ ದೂರದ ತನಕ ಹೋಗಿ ಬಲ ತಿರುವು ಪಡೆದು ಮರಳಿ ಬರಬೇಕಾದ ಪರಿಸ್ಥಿತಿ ನಿರ್ಮಾಣವಾಗಿದೆ. ಇದರಿಂದ ಸಾಕಷ್ಟು ತೊಂದರೆಯಾಗುತ್ತಿದೆ. ಈ ಸಂಬಂಧ ಜಯನಗರ ಮತ್ತು ಜೆಪಿ ನಗರದ ನಿವಾಸಿಗಳು ಸರಕಾರಕ್ಕೆ ಮನವಿ ಸಲ್ಲಿಸಿದರೂ ಯಾವುದೇ ಪ್ರತಿಕ್ರಿಯೆ ಬಂದಿಲ್ಲ. ಕೂಡಲೇ ಸರಕಾರ ನಮ್ಮ ಸಮಸ್ಯೆಗೆ ಸ್ಪಂದಿಸಬೇಕು, ಕೂಡಲೇ ಕ್ರಮ ಕೈಗೊಳ್ಳಬೇಕು ಎಂದು ಸ್ಥಳೀಯರು ಆಗ್ರಹಿಸಿದ್ದಾರೆ.

449 ಕೋಟಿ ರು.ವೆಚ್ಚದಲ್ಲಿ ನಿರ್ಮಾಣ

ದಕ್ಷಿಣ ಭಾರತದ ಅತಿ ಎತ್ತರದ ರೋಡ್-ಕಮ್-ರೈಲು ಮೇಲ್ಸೇತುವೆಯನ್ನು ಒಟ್ಟು 449 ಕೋಟಿ ರು. ವೆಚ್ಚದಲ್ಲಿ ನಿರ್ಮಾಣ ಮಾಡಲಾಗಿದ್ದು, ಈ ಫ್ಲೈಓವರ್ ರಾಗಿಗುಡ್ಡದಿಂದ ಸೆಂಟ್ರಲ್ ಸಿಲ್ಕ್ ಬೋರ್ಡ್ (ಸಿಎಸ್ಬಿ) ಜಂಕ್ಷನ್‌ವರೆಗೆ ಸಂಪರ್ಕ ಕಲ್ಪಿಸುತ್ತದೆ. ಇದು ಪ್ರಯಾಣದ ಸಮಯವನ್ನು ಶೇ.25 ರಿಂದ 30 ರಷ್ಟು ಕಡಿಮೆ ಮಾಡಿದೆ. ಡಬಲ್ ಡೆಕ್ಕರ್-ಫ್ಲೈ ಓವರ್ ಮೇಲಿನ ಡೆಕ್‌ನಲ್ಲಿ ಎಲಿವೇಟೆಡ್ ಮೆಟ್ರೋ ಕಾರಿಡಾರ್ ಇದ್ದರೆ. ಕೆಳಗಿನ ಡೆಕ್‌ನಲ್ಲಿ ವಾಹನ ಸಂಚಾರಕ್ಕಾಗಿ ಎಲಿವೇಟೆಡ್ ರಸ್ತೆಯನ್ನು ಒಳಗೊಂಡಿದೆ. ಎಲಿವೇಟೆಡ್ ರಸ್ತೆಯ ಮೇಲೆ ಮೆಟ್ರೋ ಮಾರ್ಗವನ್ನು ಹೊಂದಿರುವ ದಕ್ಷಿಣ ಭಾರತದಲ್ಲಿ ಇದು ಮೊದಲ ಫ್ಲೈ ಓವರ್ ಇದಾಗಿದೆ.

ಹಾಟ್ ಸ್ಪಾಟ್ ನಿರ್ಮಾಣಕ್ಕೆ ಕೇವಲ ಒಂದು ಕಂಪನಿಯಿಂದ ಟೆಂಡರ್

5000 ಉಚಿತ ವೈ-ಫೈ ಹಾಟ್ ಸ್ಪಾಟ್ ಯೋಜನೆಗೆ ತಾತ್ಕಾಲಿಕ ತಡೆ

ಬೆಂಗಳೂರು: ಬೆಂಗಳೂರಿನಲ್ಲಿ 5000 ಉಚಿತ ವೈಫೈ ಹಾಟ್ ಸ್ಪಾಟ್ ನಿರ್ಮಾಣ ಮಾಡುವ ಯೋಜನೆಯ ಕುರಿತಂತೆ ಸಲ್ಲಿಸಲಾಗಿದ್ದ ಕಡತವನ್ನು ನಗರಾಭಿವೃದ್ಧಿ ಇಲಾಖೆಯು ಬಿಬಿಎಂಪಿಗೆ ವಾಪಾಸು ಕಳಿಸಿರುವುದರಿಂದಾಗಿ ಈ ಯೋಜನೆಗೆ ತಾತ್ಕಾಲಿಕವಾಗಿ ತಡೆಯುಂಟಾಗಿದೆ.

ಹಲವಾರು ವರ್ಷಗಳಿಂದ ಈ ಕುರಿತು ಸರಣಿ ಸಭೆಗಳು ನಡೆದರೂ ಸಹ ಯೋಜನೆ ಅಂದುಕೊಂಡಷ್ಟು ವೇಗದಲ್ಲಿ ಸಾಗುತ್ತಿಲ್ಲ. ಹಲವು ಕಾರಣದಿಂದ ಯೋಜನೆಗೆ ತಾತ್ಕಾಲಿಕ ತಡೆ ಬಿದ್ದಿದ್ದು, ನಗರದಲ್ಲಿ ಉಚಿತ ವೈ-ಫೈ ಹಾಟ್ ಸ್ಪಾಟ್ ನಿರ್ಮಾಣದ ಬಗ್ಗೆ 2019ರಿಂದಲೂ ಚರ್ಚೆಗಳು ನಡೆದಿವೆ, ಆದರೆ ಇನ್ನೂ ಯೋಜನೆ ಜಾರಿಗೆ ಬಂದಿಲ್ಲ. ಈಗ ಹಾಟ್ ಸ್ಪಾಟ್ ನಿರ್ಮಾಣ ಮಾಡಲು ಕೇವಲ ಒಂದು ಕಂಪನಿ ಆಸಕ್ತಿ ವಹಿಸಿ ಟೆಂಡರ್ ಸಲ್ಲಿಕೆ ಮಾಡಿದ್ದು, ಈ ಹಿನ್ನೆಲೆ ಯೋಜನೆಯನ್ನು ತಾತ್ಕಾಲಿಕವಾಗಿ ಕೈಬಿಡಲಾಗಿದೆ ಎಂದು ಮೂಲಗಳು ತಿಳಿಸಿದೆ.

ಹಲವು ಕಂಪನಿಗಳು ಟೆಂಡರ್ ಸಲ್ಲಿಸದಿದ್ದುದರಿಂದ ನಗರಾಭಿವೃದ್ಧಿ ಇಲಾಖೆ ಯೋಜನೆಯನ್ನು ಕೈಬಿಟ್ಟಿದ್ದು, ಇಲಾಖೆಯ ಹೆಚ್ಚುವರಿ ಮುಖ್ಯ ಕಾರ್ಯದರ್ಶಿ ಎಸ್. ಆರ್. ಉಮಾಶಂಕರ್ ಈ ಕುರಿತ ಕಡತವನ್ನು ಬಿಬಿಎಂಪಿಗೆ ವಾಪಸ್ ಕಳಿಸಿದ್ದಾರೆ. ಇನ್ನಷ್ಟು ಕಂಪನಿಗಳು ಸೇವೆ ನೀಡಲು ಮುಂದೆ ಬಂದರೆ ಈ ಯೋಜನೆಯ ಪ್ರಕ್ರಿಯೆಗಳು ಮತ್ತೆ ಆರಂಭಗೊಳ್ಳಲಿವೆ.

ಒಂದು ಕಂಪನಿ ಟೆಂಡರ್: ಎಸಿಟಿ ಗ್ರೂಪ್ ಮಾತ್ರ ಬೆಂಗಳೂರು ನಗರದಲ್ಲಿ 5000 ಉಚಿತ ವೈ-ಫೈ ಹಾಟ್ ಸ್ಪಾಟ್ ನಿರ್ಮಾಣ ಮಾಡಲು ಆಸಕ್ತಿ ವಹಿಸಿದೆ. ನಾವು ಇದೇ ಮಾದರಿಯ ಇನ್ನೂ ಹಲವು ಅರ್ಜಿಗಳನ್ನು ಪರಿಶೀಲಿಸಬೇಕು. ಇನ್ನು ಯಾವ ಕಂಪನಿಗಳು ಅರ್ಜಿ ಸಲ್ಲಿಕೆ ಮಾಡುತ್ತೇವೆ ಎಂದು ಕಾದು ನೋಡಬೇಕಿದೆ ಎಂದು ಅಧಿಕಾರಿಗಳು ಹೇಳಿದ್ದಾರೆ. ಕಳೆದ ಹಲವು ವರ್ಷಗಳಲ್ಲಿ ಈ ಯೋಜನೆ ಕುರಿತು ನಗರಾಭಿವೃದ್ಧಿ ಇಲಾಖೆ, ಬಿಬಿಎಂಪಿ ನಡುವೆ ಹಲವು ಸಭೆಗಳು ನಡೆದರೂ ಸಹ ಅಂತಿಮವಾಗಿ ಯೋಜನೆಯನ್ನು ತಾತ್ಕಾಲಿ ಕವಾಗಿ ಕೈಬಿಡಲಾಗಿದೆ. ನಗರಾಭಿವೃದ್ಧಿ ಇಲಾಖೆಯಲ್ಲಿ ನಡೆದ ಉನ್ನತ ಮಟ್ಟದ ಅಧಿಕಾರಿಗಳ ವರ್ಗಾವಣೆ ಕಾರಣಕ್ಕೂ ಯೋಜನೆಗೆ ಹಿನ್ನಡೆಯಾಗಿದೆ ಎಂದೂ ಹೇಳಲಾಗುತ್ತಿದೆ.

ಆರು ವರ್ಷಗಳ ಹಿಂದೆ ಪ್ರಸ್ತಾವನೆ

ರಾಜ್ಯ ಸರಕಾರದ 'ಡಿಜಿಟಲ್ ಕರ್ನಾಟಕ' ಯೋಜನೆಯಡಿ 6 ವರ್ಷಗಳ ಹಿಂದೆ ಬೆಂಗಳೂರು ನಗರದ ಸಾರ್ವಜನಿಕ ಸ್ಥಳದಲ್ಲಿ 5 ಸಾವಿರ ಉಚಿತ ವೈ-ಫೈ ಹಾಟ್ ಸ್ಪಾಟ್ ನಿರ್ಮಾಣ ಮಾಡುವ ಪ್ರಸ್ತಾವನೆ ಸಿದ್ಧಗೊಳಿಸಲಾಗಿತ್ತು. 2023ರಲ್ಲಿ ಈ ಯೋಜನೆಯನ್ನು ಮರು ವಿನ್ಯಾಸಗೊಳಿಸಲಾಗಿತ್ತು. ಇಂಟರ್‌ನೆಟ್ ಸಂಪರ್ಕ ನೀಡುವ ಪ್ರಮುಖ ಕಂಪನಿಯಾದ ಎಸಿಟಿ ಗ್ರೂಪ್ ತನ್ನ ಟೆಂಡರ್‌ನಲ್ಲಿ 3 ಸಾವಿರ ಕಂಬಗಳನ್ನು ನೆಟ್ಟು ಹಾಟ್ ಸ್ಪಾಟ್ ನಿರ್ಮಾಣ ಮಾಡುವ ಪ್ರಸ್ತಾವನೆ ಮಾಡಿದೆ. ಮೊದಲ ಒಂದು ಗಂಟೆ ಉಚಿತವಾಗಿ ವೈ-ಫೈ ಸೌಲಭ್ಯವನ್ನು ಪಡೆಯಬಹುದು. 3 ಸಾವಿರ ಕಂಬದಲ್ಲಿಯೂ ಸಹ ಕಂಪನಿ ಲೋಗೋವನ್ನು ಹಾಕಲಾಗುತ್ತದೆ.

ರಾಜ್ಯ ಸರಕಾರದಿಂದ ದ್ವೇಷದ ರಾಜಕಾರಣ

ಬೆಂಗಳೂರು: ಮುನಿರತ್ನ ಪರ ಬಿಜೆಪಿ ನಾಯಕರ ಬ್ಯಾಟಿಂಗ್ ಮುಂದುವರಿದಿದ್ದು, ದೂರು ದಾಖಲಾಗಿದ್ದರೂ ಶಾಸಕ ಚನ್ನಾರೆಡ್ಡಿ ಬಂಧಿಸಿಲ್ಲ. ಭ್ರಷ್ಟಾಚಾರದ ಆರೋಪ ವಿದ್ದರೂ ಚಲುವರಾಯಸ್ವಾಮಿ ವಿರುದ್ಧ ಎಫ್‌ಐಆರ್ ಕೂಡ ದಾಖಲಾಗಿಲ್ಲ. ಆದರೆ ದೂರು ಬಂದ ಕೂಡಲೇ ಮುನಿರತ್ನರನ್ನು ಬಂಧಿಸಿರುವುದನ್ನು ನೋಡಿದರೆ ಸರಕಾರ ಪೂರ್ವಗ್ರಹಪೀಡಿತವಾಗಿ ವರ್ತಿಸುತ್ತಿದೆ ಎಂದು ವಿಧಾನಪರಿಷತ್ ಸದಸ್ಯ ಸಿ.ಟಿ.ರವಿ ಆರೋಪಿಸಿದ್ದಾರೆ. ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಕಾನೂನು ಎಲ್ಲರಿಗೂ ಒಂದೇ ಎಂಬುದನ್ನು ರಾಜ್ಯ ಸರಕಾರ ತೋರಿಸಬೇಕಿತ್ತು ಎಂದರು.

ಪ್ರಧಾನಿ ನರೇಂದ್ರ ಮೋದಿ ಜನ್ಮದಿನದ ಪ್ರಯುಕ್ತ ಬಿಜೆಪಿ ಕಚೇರಿಯಲ್ಲಿ ಆಯೋಜಿಸಲಾಗಿದ್ದ ಚಿತ್ರಕಲಾ ಶಿಬಿರ ಮತ್ತು ಪ್ರದರ್ಶನ ಕಾರ್ಯಕ್ರಮ ಕೇಂದ್ರ ಸಚಿವೆ ಶೋಭಾ ಕರಂದ್ಲಾಜೆ ಉದ್ಘಾಟಿಸಿದರು. ಪ್ರಧಾನಿ ನರೇಂದ್ರ ಮೋದಿ ನೇತೃತ್ವದ 3.0 ಸರಕಾರದ 100 ದಿನ ಸಾಧನೆ ಸೇರಿದಂತೆ ಹಲವು ಚಿತ್ರಗಳು ಗಮನ ಸೆಳೆದವು.

ಮಾಜಿ ಸಚಿವ ಅರವಿಂದ ಲಿಂಬಾವಳಿ ನೇತೃತ್ವದಲ್ಲಿ ವಿಶೇಷಪೂಜೆ, ಅನ್ನದಾನ, ನೋಟ್‌ಬುಕ್ ವಿತರಣೆ

ಮೋದಿ ಜನ್ಮದಿನ; ಮಹದೇವಪುರದಲ್ಲಿ 120ಕ್ಕೂ ಹೆಚ್ಚು ಸೇವಾಕಾರ್ಯ

ಬೆಂಗಳೂರು: ಪ್ರಧಾನಿ ನರೇಂದ್ರ ಮೋದಿ ಹುಟ್ಟುಹಬ್ಬವನ್ನು ಮಹದೇವಪುರ ಕ್ಷೇತ್ರದಲ್ಲಿ ಮಾಜಿ ಸಚಿವ ಅರವಿಂದ ಲಿಂಬಾವಳಿ ನೇತೃತ್ವದಲ್ಲಿ ಕ್ಷೇತ್ರದ 120ಕ್ಕೂ ಹೆಚ್ಚು ಭಾಗದಲ್ಲಿ ಸೇವಾ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗಿತ್ತು.

ಪ್ರತಿವರ್ಷದಂತೆ ಈ ವರ್ಷವೂ ಕ್ಷೇತ್ರಾದ್ಯಂತ ಕಾರ್ಯಕ್ರಮ ಆಚರಿಸಲಾಯಿತು. ಶಾಲಾ ಮಕ್ಕಳಿಗೆ ಸಿಹಿ ವಿತರಣೆ, ಪುಸ್ತಕ ವಿತರಣೆ, ದೇವಾಲಯಗಳಲ್ಲಿ ವಿಶೇಷ ಪೂಜೆ, ಅನ್ನದಾನ, ಸ್ವಚ್ಛತಾ ಕಾಯಕ್ರಮ, ಆಶ್ರಮಗಳಲ್ಲಿ ಅನ್ನದಾನ, ಗಿಡ ನೆಡುವ ಕಾರ್ಯಕ್ರಮ, ಗೋಶಾಲೆಗಳಿಗೆ ಮೇವು ವಿತರಣೆ, ಪೌರ ಕಾರ್ಮಿಕರಿಗೆ ಬಟ್ಟೆ ವಿತರಣೆ ಸೇರಿದಂತೆ ಹಲವು ಕಾರ್ಯಕ್ರಮಗಳನ್ನು ಸುಮಾರು 120ಕ್ಕೂ ಹೆಚ್ಚು ಸ್ಥಳಗಳಲ್ಲಿ ಸೇವಾ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿತ್ತು.

ಮಹದೇವಪುರ ಕ್ಷೇತ್ರದ ಕಣ್ಣೂರು ಪಂಚಾಯಿತಿ ವ್ಯಾಪ್ತಿಯ ಕಾಡು ಸೊಣ್ಣಪ್ಪನಹಳ್ಳಿಯಲ್ಲಿ ಗೋ ಆಶ್ರಮದಲ್ಲಿ ಮೇವು ವಿತರಣೆ, ಕಣ್ಣೂರಿನ ಅಂಗನವಾಡಿಗಳಿಗೆ ತಟ್ಟೆ ಮತ್ತು ಚಿಕ್ಕಗುಬ್ಬಿ ಆಶ್ರಮದಲ್ಲಿ ಹಣ್ಣು ಹಂಪಲು ವಿತರಿಸಲಾಯಿತು. ಮಿಟ್ಟಗಾನಹಳ್ಳಿ ಗ್ರಾಮದಲ್ಲಿ ಸ್ವಚ್ಛತಾ ಕಾರ್ಯಕ್ರಮ ಮತ್ತು 1400 ಸಸಿಗಳಿಗೆ ಗೊಬ್ಬರ ಮತ್ತು ನೀರುಣಿಸುವಿಕೆ, ದೊಡ್ಡಗುಬ್ಬಿ ಶಾಲೆಯಲ್ಲಿ ಸಿಹಿ ವಿತರಣೆ, ರಾಂಪುರದಲ್ಲಿ ಶಾಲಾ ಮಕ್ಕಳಿಗೆ ನೋಟ್ ಬುಕ್ ವಿತರಣೆ, ಬಿದರಹಳ್ಳಿ ವಾರ್ಡ್‌ನಲ್ಲಿ ಶಾಲಾ ಮಕ್ಕಳಿಗೆ ಸಿಹಿ ವಿತರಣೆ, ಜೀವಿತಾ ಆಶ್ರಮದಲ್ಲಿ ಹಣ್ಣು ಹಂಪಲು ವಿತರಣೆ, ಮಂಡೂರು ವಾರ್ಡ್‌ನಲ್ಲಿ ಕಾಲೋನಿ ಹಾಗೂ ಬೊಮ್ಮೇನಹಳ್ಳಿ ಮತ್ತು ಹುಸ್ಕೂರಿನಲ್ಲಿ ಸ್ವಚ್ಛತಾ ಕಾರ್ಯಕ್ರಮ, ಜ್ಯೋತಿಪುರ ಶಾಲೆಯಲ್ಲಿ ಆರೋಗ್ಯ ಶಿಬಿರ ಹಮ್ಮಿಕೊಳ್ಳಲಾಗಿತ್ತು.

ಎಇಸಿಎಸ್ ಬಡಾವಣೆಯ ಕುಂದಲಹಳ್ಳಿಯಲ್ಲಿ ಸರಕಾರಿ ಶಾಲಾ ಮಕ್ಕಳಿಗೆ ನೋಟ್‌ಬುಕ್, ಸಿಹಿ ವಿತರಣೆ, ವಿನಾಯಕ ದೇವಾಲಯದಲ್ಲಿ ವಿಶೇಷ ಪೂಜೆ ಸಿಹಿ ವಿತರಣೆ, ಚನ್ನಪ್ಪನಹಳ್ಳಿ ಗೋ ಶಾಲೆಗೆ ಮೇವು ವಿತರಣೆ, ತೂಬರಹಳ್ಳಿ, ಸಿದ್ದಾಪುರದಲ್ಲಿ ಮಕ್ಕಳಿಗೆ ನೋಟ್‌ಬುಕ್ ಸಿಹಿ ವಿತರಣೆ, ಬೆಮೆಲ್ ಬಡಾವಣೆಯಲ್ಲಿ ವೆಂಕಟೇಶ್ವರ ದೇವಸ್ಥಾನದಲ್ಲಿ ವಿಶೇಷ ಪೂಜೆ ಹಮ್ಮಿಕೊಳ್ಳಲಾಗಿತ್ತು.

ವೈಟ್ ಫೀಲ್ಡ್‌ನ ಗಾಂಧಿಪುರ, ವಿಜಯನಗರ, ನಲ್ಲೂರಹಳ್ಳಿ, ಹಾಗೂ ರಾಮಗೊಂಡನಹಳ್ಳಿಯಲ್ಲಿ ಸರಕಾರಿ ಶಾಲಾ ಮಕ್ಕಳಿಗೆ ಸಿಹಿ ವಿತರಣೆ, ಹಗದೂರಿನ ವಿನಾಯಕ ದೇವಸ್ಥಾನದಲ್ಲಿ ವಿಶೇಷ ಪೂಜೆ, ಅಂಬೇಡ್ಕರ್‌ಗುಟ್ಟದಲ್ಲಿ ಅಂಧ ಮಕ್ಕಳ ಶಾಲೆಯಲ್ಲಿ ಹಣ್ಣು ಹಂಪಲು ವಿತರಣೆ, ವೈಟ್‌ಫೀಲ್ಡ್‌ನ ಬ್ರೂಕ್ ಬಾಂಡ್‌ನಲ್ಲಿ ಕೊತ್ತಲಿಂಗೋ ವಿಶೇಷ ಚೇತನರಿಗೆ ಸಿಹಿ ವಿತರಣೆ, ನಲ್ಲೂರಹಳ್ಳಿಯಲ್ಲಿ ಸ್ಮಶಾನ ಸ್ವಚ್ಛತೆ ಕಾಯಕ್ರಮ ಹಮ್ಮಿಕೊಳ್ಳಲಾಗಿತ್ತು.



ಪ್ರಧಾನಿ ನರೇಂದ್ರ ಮೋದಿ ಹುಟ್ಟುಹಬ್ಬವನ್ನು ಮಹದೇವಪುರ ಕ್ಷೇತ್ರದಲ್ಲಿ ಮಾಜಿ ಸಚಿವ ಅರವಿಂದ ಲಿಂಬಾವಳಿ ನೇತೃತ್ವದಲ್ಲಿ ಕ್ಷೇತ್ರದ 120ಕ್ಕೂ ಹೆಚ್ಚು ಭಾಗದಲ್ಲಿ ಸೇವಾ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗಿತ್ತು.

> ಪ್ರಧಾನಿ ನರೇಂದ್ರ ಮೋದಿ ಅವರು ಜನ್ಮದಿನವನ್ನು ದೇಶಕ್ಕೆ ಮಾದರಿಯಾಗುವಂತಹ ಕೆಲಸಗಳನ್ನು ಅರವಿಂದ ಲಿಂಬಾವಳಿ ಅವರ ನೇತೃತ್ವದಲ್ಲಿ ಮಾಡಲಾಗುತ್ತಿದೆ. ಕ್ಷೇತ್ರದ ಮೂಲೆ ಮೂಲೆಯಲ್ಲೂ ಸ್ವಚ್ಛತಾ ಅಭಿಯಾನ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿದೆ. ಅಭಿಯಾನದಲ್ಲಿ ಸ್ಥಳೀಯ ಮುಖಂಡರು, ಅಪಾರ್ಟ್‌ಮೆಂಟ್ ನಿವಾಸಿಗಳು ಸೇರಿದಂತೆ ಪ್ರತಿಯೊಬ್ಬರು ಸಂತೋಷದಿಂದ ಪಾಲ್ಗೊಂಡು ಸ್ವಚ್ಛತೆಯಲ್ಲಿ ತೊಡಗಿದ್ದಾರೆ.
> **ಮನೋಹರ್‌ರೆಡ್ಡಿ** ನಗರ ಮಂಡಲ ಅಧ್ಯಕ್ಷ

ಪೌರಕಾರ್ಮಿಕರಿಗೆ ಸನ್ಮಾನ

ಹೂಡಿ ವಾರ್ಡ್‌ನ ದಿನ್ನೂರಿನಲ್ಲಿ ಪೌರಕಾರ್ಮಿಕರಿಗೆ ಸನ್ಮಾನಿಸಲಾಯಿತು. ಶಾಲಾ ಮಕ್ಕಳಿಗೆ ಸಿಹಿ ವಿತರಣೆ, ಅಂಗನವಾಡಿ ಮಕ್ಕಳಿಗೆ ನೋಟುಬುಕ್ ವಿತರಣೆ, ರಾಜಪಾಳ್ಯದ ಆಂಜನೇಯ ದೇವಾಲಯದಲ್ಲಿ ವಿಶೇಷ ಪೂಜೆ ಹಾಗೂ ಅನ್ನದಾನ, ತಿಗಳರ ಪಾಳ್ಯ, ಬಸವಣ್ಣನಗರ, ಸೀತಾರಾಮಪಾಳ್ಯದಲ್ಲಿ ಸ್ವಚ್ಛತಾ ಕಾರ್ಯಕ್ರಮ, ಪಟ್ಟಂದೂರು ಅಗ್ರಹಾರದಲ್ಲಿ ಏಳು ಮಂದ್ಯಮ್ಮದೇವಿ ದೇವಸ್ಥಾನದಲ್ಲಿ ವಿಶೇಷ ಪೂಜೆ ಮತ್ತು ಅನ್ನದಾನ ಹಮ್ಮಿಕೊಳ್ಳಲಾಗಿತ್ತು.

ಸಮಾಚಾರ ಸಣ್ಣದಲ್ಲ

ಅಗಲಿದ ಜೀವ

ವೆಂಕಟರಡ್ಡಿಗೌಡ ಮುದ್ನಾಳ

ಯಾದಗಿರಿ: ಕಲ್ಯಾಣ ಕರ್ನಾಟಕದ ಸ್ವಾಂತತ್ರ್ಯ ಹೋರಾಟಗಾರ ದಿ. ವಿಶ್ವನಾಥರಡ್ಡಿ ಮುದ್ನಾಳ ಅವರ ಪುತ್ರ, ಮಾಜಿ ಶಾಸಕ ಹಾಗೂ ಜಿಲ್ಲೆಯ ಹಿರಿಯ ಬಿಜೆಪಿ ಮುಖಂಡ ವೆಂಕಟರಡ್ಡಿಗೌಡ ಮುದ್ನಾಳ (70)

ಮಂಗಳವಾರ ಅನಾರೋಗ್ಯದಿಂದ ಇಹಲೋಕ ತ್ಯಜಿಸಿದ್ದಾರೆ. ಕಳೆದ ಹಲವು ತಿಂಗಳಿಂದ ಕ್ಯಾನ್ಸರ್ ರೋಗದಿಂದ ಬಳಲುತ್ತಿದ್ದ ಅವರು ಬೆಂಗಳೂರಿನ ಖಾಸಗಿ ಆಸ್ಪತ್ರೆಯಲ್ಲಿ ಕೊನೆಯುಸಿರೆಳೆದಿದ್ದಾರೆ. ಪತ್ನಿ, ಪುತ್ರ, ಪುತ್ರಿ ಸೇರಿದಂತೆ ಅಪಾರ ಅಭಿಮಾನಿ ಬಳಗವನ್ನು ಮುದ್ನಾಳ ಅಗಲಿದ್ದಾರೆ. 1995ರಲ್ಲಿ ಯಾದಗಿರಿ ಪುರಸಭೆ ಅಧ್ಯಕ್ಷರಾಗಿದ್ದ ವೆಂಕಟರಡ್ಡಿಗೌಡ ಮುದ್ನಾಳ ಅವರು, 2018ರಲ್ಲಿ ಯಾದಗಿರಿ ವಿಧಾನ ಸಭಾ ಕ್ಷೇತ್ರದಿಂದ ಬಿಜೆಪಿಯಿಂದ ಸ್ಪರ್ಧಿಸಿ ಮೊದಲ ಬಾರಿಗೆ ಶಾಸಕರಾಗಿ ಆಯ್ಕೆಯಾಗಿದ್ದರು. 2023ರ ಚುನಾವಣೆಯಲ್ಲಿಯೂ ಹಲವು ನಾಟಕೀಯ ಬೆಳವಣಿಗೆಗಳ ನಡುವೆಯೂ ಬಿಜೆಪಿ ಟಿಕೆಟ್ ಪಡೆದರೂ ಕೇವಲ ಮೂರೂವರೆ ಸಾವಿರ ಮತಗಳಿಂದ ಪರಭಾವಗೊಂಡಿದ್ದರು. ಇಂದು ಮಧ್ಯಾಹ್ನ 2 ಗಂಟೆಗೆ ಅಂತ್ಯಕ್ರಿಯೆ ಜರುಗಲಿದೆ ಎಂದು ಕುಟುಂಬದ ಮೂಲಗಳು ತಿಳಿಸಿವೆ.

ಪಾಕ್ ಧ್ವಜದ ಸ್ಟೇಟಸ್ ಇಟ್ಟವನ ಬಂಧನ

ಬಾಗಲಕೋಟೆ: ಪಾಕ್ ಧ್ವಜ ಇರುವ ರೀಲ್ಸ್ ವ್ಯಾಟ್ಸಪ್ ಸ್ಟೇಟಸ್ ಹಾಕಿಕೊಂಡ ಯುವಕ ಸ್ಟೇಟಸ್ ಹಾಕಿಕೊಂಡ

ಯುವಕನನ್ನು ಪೊಲೀಸರು ಬಂಧಿಸಿರುವ ಘಟನೆ ತಾಲೂಕನ ಕಲಾದಗಿ ಗ್ರಾಮದಲ್ಲಿ ನಡೆದಿದೆ. ಗ್ರಾಮದ ತೌಶೀಫ್ ಮೆಹತರ್ (21) ಎಂಬಾತ ಪಾಕ್ ಧ್ವಜ ಇರುವ ರೀಲ್ಸ್ ಸ್ಟೇಟಸ್ ಹಾಕಿಕೊಂಡಿದ್ದಾನೆ. ಇದನ್ನು ಗಮನಿಸಿದ ಪೊಲೀಸರು ತೌಶೀಫ್‌ನನ್ನು ವಿಚಾರಣೆ ನಡೆಸಿ, ಬಂದಿಸಿದ್ದಾರೆ.

ಹೆಣ್ಣಾನೆ ಸಾವು

ಚಾಮರಾಜನಗರ: ಬಿಳಿಗಿರಿ ಹುಲಿ ಸಂರಕ್ಷಿತ ಅರಣ್ಯ ಪ್ರದೇಶದಲ್ಲಿ ಹೆಣ್ಣಾನೆಯೊಂದು ಸಾವನ್ನಪ್ಪಿದ ಘಟನೆ ಜರುಗಿದೆ. ಹನೂರು ತಾಲೂಕಿನ ಹುಲಿ ಸಂರಕ್ಷಿತ ಬೈಲೂರು ಅರಣ್ಯ ಪ್ರದೇಶದ ಪಿ.ಜಿ ಪಾಳ್ಯ ಗಸ್ತಿನ ಮಾವತ್ತೂರು ಬಿದಿರುಕೆರೆ ಅರಣ್ಯ ಪ್ರದೇಶದಲ್ಲಿ 50 ರಿಂದ 60 ವರ್ಷ ವಯಸ್ಸಿನ ಹೆಣ್ಣಾನೆ ಸ್ವಾಭಾವಿಕವಾಗಿ ಮೃತಪಟ್ಟಿದೆ ಎಂದು ಅರಣ್ಯಾಧಿಕಾರಿ ಗಳು ದೃಢಪಡಿಸಿದ್ದಾರೆ.

ಉತ್ತರ ಕರ್ನಾಟಕದಲ್ಲಿ ಇನ್ನೂ ಶುರುವೇ ಆಗದ ನೋಂದಣಿ ಕಾರ್ಯ | ಒಂದೂವರೆ ಕೋಟಿ ಗುರಿ ದಾಟಲು ರಾಜ್ಯ ಬಿಜೆಪಿ ಘಟಕ ಪರದಾಟ | ವರಿಷ್ಠರ ಸೂಚನೆಯ ಹೊರತಾಗಿಯೂ ಆಸಕ್ತಿ ತೋರದ ನಾಯಕರು

13 ದಿನ ಕಳೆದರೂ ಎಂಟು ಲಕ್ಷ ದಾಟದ ಬಿಜೆಪಿ ಪಕ್ಷ ಸದಸ್ಯತ್ವ?

ವಾದಿರಾಜ್ ಬಿ. ಬೆಂಗಳೂರು

ರಾಜ್ಯ ಬಿಜೆಪಿಯ ಘಟಕದ ಆಂತರಿಕ ಕಿತ್ತಾಟದ ಹೊರತಾಗಿಯೂ, ಒಂದುವರೆ ಕೋಟಿ ಸದಸ್ಯತ್ವ ಗುರಿಯೊಂದಿಗೆ ಆರಂಭಗೊಂಡ ಸದಸ್ಯತ್ವ ನೋಂದಣಿ ಅಭಿಯಾನಕ್ಕೆ ಆರಂಭಗೊಂಡು 13 ದಿನ ಕಳೆದರೂ 'ಟೇಕ್ ಆಫ್' ಆಗಿಲ್ಲ ಎನ್ನುವುದು ಅಂಕಿ-ಅಂಶಗಳಿಂದ ಬಹಿರಂಗವಾಗಿದೆ.

ಸೆ.4ರಂದು ಶುರುವಾದ ನೋಂದಣಿ ಕಾರ್ಯಕ್ಕೆ 13 ದಿನ ಕಳೆದಿದ್ದರೂ ರಾಜ್ಯಾದ್ಯಂತ ಸುಮಾರು ಎಂಟು ಲಕ್ಷ ಸದಸ್ಯತ್ವ ನೋಂದಣಿ ಅಥವಾ ನವೀಕರಣವಾಗಿದೆ. ನಿಧಾನವಾಗಿರುವ ನೋಂದಣಿಯ ಬಗ್ಗೆ ಬಿಜೆಪಿ ವರಿಷ್ಠರು ಅಸಮಾಧಾನ ವ್ಯಕ್ತಪಡಿಸಿದ್ದರೂ, ರಾಜ್ಯ ನಾಯಕರು ಮಾತ್ರ ನೋಂದಣಿಗೆ ವೇಗ ನೀಡುವತ್ತ ಗಮನಹರಿಸಿಲ್ಲ ಎನ್ನುವ ಆರೋಪಗಳು ಪಕ್ಷದಲ್ಲಿ ಶುರುವಾಗಿದೆ.

ನೋಂದಣಿ ಕಾರ್ಯದಲ್ಲಿ 'ಹಿನ್ನಡೆ'ಯಾಗಲು ರಾಜ್ಯದಲ್ಲಿ ದಿನದಿಂದ ದಿನಕ್ಕೆ ಹೆಚ್ಚಾಗುತ್ತಿರುವ ಬಣ ಬಡಿದಾಟವೇ ಕಾರಣ ಎನ್ನುವ ಮಾತುಗಳು ಕೇಳಿಬಂದಿದೆ. ಗೊಂದಲ, ಗದ್ದಲದಿಂದ ಪಕ್ಷದ ಕೆಲಸಗಳಿಂದ ಹಲವು ನಿಷ್ಠ ಕಾರ್ಯಕರ್ತರು ಮೌನವಾಗಿದ್ದಾರೆ. ಆದ್ದರಿಂದ ಪಕ್ಷ ಸಂಘಟನೆ, ಸೇರಿದಂತೆ ಭಾರಿ ನಿರೀಕ್ಷೆಯಿಂದ ಪ್ರಾರಂಭವಾದ ಸದಸ್ಯತ್ವ ನೋಂದಣಿ ಅಭಿಯಾನ ಗುರಿ ತಲುಪದೇ ಕುಂಟುತ್ತಿದೆ ಎಂದು ಮೂಲಗಳು ತಿಳಿಸಿವೆ.

ಅಭಿಯಾನದಲ್ಲಿ ಪ್ರತಿ ಮತಗಟ್ಟೆಯಿಂದ ಕನಿಷ್ಠ 3,000 ಸದಸ್ಯರನ್ನು ಸೇರ್ಪಡೆಗೊಳಿಸಲು ಯೋಜನೆ ರೂಪಿಸಲಾಗಿತ್ತು. ಅಲ್ಲದೇ ಕಳೆದ ವರ್ಷ ಪಕ್ಷವು 1.04 ಕೋಟಿ ಸದಸ್ಯರನ್ನು ಸೇರ್ಪಡೆಗೊಳಿಸಿತ್ತು. ಆದರೆ ನೋಂದಣಿ ಕಾರ್ಯ ಆರಂಭಗೊಂಡು ಹದಿಮೂರು ದಿನ ಕಳೆದರೂ ಎಂಟು ಲಕ್ಷ ಕೂಡ ದಾಟಿಲ್ಲ ಎನ್ನುವ ಮಾತುಗಳು ಕೇಳಿಬಂದಿದೆ.

ವಿಜಯೇಂದ್ರ ನಾಯಕತ್ವಕ್ಕೆ ಸಂಬಂಧಿಸಿದಂತೆ ಈಗಾಗಲೇ ಹಲವು ನಾಯಕರು ಬಹಿರಂಗವಾಗಿ ವಿರೋಧ ವ್ಯಕ್ತಪಡಿಸಿದ್ದಾರೆ. ಸಂಘ ಪರಿವಾರದ ಮುಂದೆಯೂ ವಿರೋಧ ವ್ಯಕ್ತಪಡಿಸಿರುವ ಮುಖಂಡರು ಪಕ್ಷದ ಕಾರ್ಯ ಚಟುವಟಿಕೆಯಿಂದ ದೂರ ಉಳಿದಿದ್ದಾರೆ. ಸುಮಾರು ಹದಿಮೂರು ದಿನಗಳು ಕಳೆದಿದ್ದರೂ ಉತ್ತರ ಕರ್ನಾಟಕದಲ್ಲಿ ಸದಸ್ಯತ್ವ ಅಭಿಯಾನಕ್ಕೆ ಮುಖಂಡರು ಇನ್ನೂ ಚಾಲನೆ ನೀಡಿಲ್ಲ ಎನ್ನುವ ಮಾತುಗಳು ಕೇಳಿಬಂದಿದೆ.

ವರಿಷ್ಠರ ಸೂಚನೆಗೂ ಕೇರ್ ಇಲ್ಲ: ಕಳೆದ ವಾರ ದೆಹಲಿಯಲ್ಲಿ ನಡೆದ ಸಭೆಯಲ್ಲಿ ರಾಜ್ಯದಲ್ಲಿ ನೋಂದಣಿ ಕಾರ್ಯಕ್ಕೆ ಸಂಬಂಧಿಸಿದಂತೆ ಪಕ್ಷದ ವರಿಷ್ಠರು ಅಸಮಾಧಾನ ವ್ಯಕ್ತಪಡಿಸಿದ್ದರು. ಈ ವೇಳೆ ನಾಯಕರಿಗೆ ಕೆಲವೊಂದು ಸಲಹೆ ನೀಡಿದ್ದರು. ಸದಸ್ಯತ್ವ ಅಭಿಯಾನಕ್ಕೆ ಚುರುಕು ಮುಟ್ಟಿಸುವಂತೆ ಮೋರ್ಚಾಗಳಿಗೆ ಸ್ಪಷ್ಟ ಸಂದೇಶ ರವಾನಿಸಿದ್ದ ವರಿಷ್ಠರು, ಪ್ರಮುಖ ನಾಯಕರು ಪ್ರತಿ ಜಿಲ್ಲೆಗೆ ತೆರಳಿ ಎರಡು ದಿನಗಳ ಕಾಲ ಅಲ್ಲೇ ತಂಗಬೇಕು ಮತ್ತು ಸದಸ್ಯತ್ವದ ನೇತೃತ್ವ ವಹಿಸಿಕೊಳ್ಳಬೇಕು. ಯಾರು ಸರಿಯಾಗಿ ಜವಾಬ್ದಾರಿ ನೀಡುವುದಿಲ್ಲವೋ ಅವರ ವಿರುದ್ಧ ಕ್ರಮಕ್ಕೆಗೊಳ್ಳಬೇಕು ಎಂದು ಸೂಚಿಸಿದ್ದರು. ಆದರೂ, ಬಹುತೇಕ ನಾಯಕರು ಜಿಲ್ಲಾ ಕೇಂದ್ರಗಳಿಗೆ ತಲೆಹಾಕಿಲ್ಲ ಎನ್ನುವ ಮಾತುಗಳು ಕೇಳಿಬಂದಿದೆ.

ಕೆಲವು ತಾಂತ್ರಿಕ ಸಮಸ್ಯೆಯಿಂದ ಸದಸ್ಯತ್ವ ನೋಂದಣಿಯಲ್ಲಿ ಅಡಚಣೆ ಉಂಟಾಗಿತ್ತು. ಆದ್ದರಿಂದ ಹಲವು ಕಡೆ ಪತ್ರದ ಮೂಲಕ ಸದಸ್ಯತ್ವ ಮಾಡಿಸಲಾಗುತ್ತಿದೆ. ಗೌರಿ ಗಣೇಶ ಹಬ್ಬದಿಂದ ಕೂಡ ನೋಂದಣಿಗೆ ವಿಳಂಬವಾಗಿತ್ತು. ಎಷ್ಟು ನೋಂದಣಿಯಾಗಿದೆ ಎನ್ನುವ ಬಗ್ಗೆ ನಿಖರವಾಗಿ ಈಗಲೇ ಹೇಳಲು ಬರುವುದಿಲ್ಲ.

– **ಸುನೀಲ್ ಕುಮಾರ್** ಬಿಜೆಪಿ ರಾಜ್ಯ ಪ್ರಧಾನ ಕಾರ್ಯದರ್ಶಿ

ನೊಂದಣಿಯೇ ಆರಂಭವಾಗಿಲ್ಲ

ಇನ್ನು ಉತ್ತರ ಕರ್ನಾಟಕ ಭಾಗದಲ್ಲಿ ಈವರೆಗೆ ನೋಂದಣಿ ಕಾರ್ಯವೇ ಆಗಿಲ್ಲ ಎನ್ನುವ ಮಾತುಗಳು ಕೇಳಿಬರುತ್ತಿದೆ. ಇದರೊಂದಿಗೆ ಪ್ರತಿಬೂತ್‌ಗೆ ಮೂರು ಸಾವಿರ ನೋಂದಣಿ ಮಾಡುವಂತೆ ಪಕ್ಷದ ವರಿಷ್ಠರು ಹೇಳಿದ್ದರೆ, ರಾಜ್ಯದ ಬಹುತೇಕ ವಿಧಾನಸಭಾ ಕ್ಷೇತ್ರದಲ್ಲಿ ಪ್ರತಿದಿನ ಮೂರು ಸಾವಿರ ನೋಂದಣಿಯಾಗುತ್ತಿವೆ ಎನ್ನುವ ಮಾತುಗಳು ಕೇಳಿಬಂದಿದೆ. ಈ ಬಗ್ಗೆ ಪಕ್ಷದ ಹಿರಿಯ ನಾಯಕರೊಬ್ಬರು ಮಾತನಾಡಿದ್ದು, ಗಣೇಶ ಹಬ್ಬದ ಕಾರ್ಯಕ್ರಮದಿಂದಾಗಿ ಸದಸ್ಯತ್ವ ಅಭಿಯಾನ ಕುಂಟಿತವಾಗಿದೆ. ಈ ಬಾರಿ ಮಿಸ್ಡ್ ಕಾಲ್ ನಂತರ ಓಟಿಪಿ ನೀಡಬೇಕಾಗುತ್ತದೆ. ಆದ್ದರಿಂದ ಗ್ರಾಮೀಣ ಭಾಗದ ಜನರಲ್ಲಿ ಸದಸ್ಯತ್ವ ಮಾಡುವುದರಲ್ಲಿ ವಿಳಂಬವಾಗುತ್ತಿದೆ. ಒಬ್ಬ ಕಾರ್ಯಕರ್ತ ಒಂದು ದಿನಕ್ಕೆ 25 ಮಾತ್ರ ಮಾಡುತ್ತಿರುವುದು ಈ ಸಮಸ್ಯೆಗೆ ಕಾರಣ ಎನ್ನುವ ಮಾತುಗಳನ್ನು ಆಡಿದ್ದಾರೆ.

ರಾಜ್ಯಾದ್ಯಂತ ಕ್ರಿಟಿಕಲ್ ಕೇರ್ ವಿಸ್ತರಣೆ: ಸಚಿವ ದಿನೇಶ್ ಗುಂಡೂರಾವ್

ಕ್ರಿಟಿಕಲ್ ಕೇರ್ ತರಬೇತಿ ಶಿಬಿರಕ್ಕೆ ಚಾಲನೆ

ಕಲಬುರಗಿ: ಗ್ರಾಮೀಣ ಪ್ರದೇಶಗಳಲ್ಲಿ ಆರೈಕೆಯ ಗುಣಮಟ್ಟ ಹೆಚ್ಚಿಸಿ ಅತ್ಯಾಧುನಿಕ ತಾಂತ್ರಿಕ ಕೌಶಲದೊಂದಿಗೆ ರಾಜ್ಯದಲ್ಲಿ 43 ಕ್ರಿಟಿಕಲ್ ಕೇರ್ ಸೆಂಟರ್‌ಗಳು ಆರಂಭಿಸಲಾಗಿದ್ದು, ಮುಂದಿನ ದಿನಗಳಲ್ಲಿ ರಾಜ್ಯಾದ್ಯಂತ ವಿಸ್ತರಣೆ ಮಾಡಲಾಗುವುದು ಎಂದು ಆರೋಗ್ಯ ಸಚಿವ ದಿನೇಶ್ ಆರ್.ಗುಂಡುರಾವ್ ಹೇಳಿದರು.

ಬೆಂಗಳೂರಿನ ವಿಕ್ಟೋರಿಯಾ ಆಸ್ಪತ್ರೆಯಲ್ಲಿ ಸಮಗ್ರ ಕ್ರಿಟಿಕಲ್ ಕೇರ್ ತರಬೇತಿ ಶಿಬಿರಕ್ಕೆ ಮಂಗಳವಾರ ಆನ್ ಲೈನ್ ವಿಡಿಯೊ ಮೂಲಕ ನಗರದಲ್ಲಿ ಚಾಲನೆ ನೀಡಿ ಮಾತನಾಡಿದ ಅವರು, ಇಂಡಿಯನ್ ಸೊಸೈಟಿ ಆಫ್ ಕ್ರಿಟಿಕಲ್ ಕೇರ್ ಮೆಡಿಸಿನ್ ಮತ್ತು ಇಂಡಿಯನ್ ರೆಸಸಿಟೇಶನ್ ಕೌನ್ಸಿಲ್ ಫೆಡರೇಶನ್, ಪಾಲಿಯಮ್ ಇಂಡಿಯಾದಂತಹ ಅತ್ಯುತ್ತಮ ಪಾಲುದಾರ ಸಂಸ್ಥೆಗಳ ಸಹಯೋಗದಲ್ಲಿ ಸಮಗ್ರ ತರಬೇತಿ ಶಿಬಿರ ಐದು ದಿನಗಳ ಕಾಲ ನಡೆಯುತ್ತಿದೆ ಎಂದರು.

ವೈದ್ಯರು, ದಾದಿಯರು ತರಬೇತಿ ಪಡೆದು ವೆಂಟಿಲೇಟರ್ ನಿರ್ವಹಣೆ, ಸೆಪ್ಸಿಸ್ ಗುರುತಿಸುವಿಕೆ ಮತ್ತು ನಿರ್ವಹಣೆ, ಆಘಾತದಂತಹ ಸಂದರ್ಭದಲ್ಲಿ ಜೀವ ಉಳಿಸುವ ನಿಟ್ಟಿನಲ್ಲಿ ಕೈಗೊಳ್ಳಬೇಕಾದ ಕ್ರಮಗಳನ್ನು ತಿಳಿದುಕೊಂಡು ತಾಂತ್ರಿಕ ಕೌಶಲ್ಯ ವೃದ್ಧಿಸಿಕೊಂಡು ರೋಗಿಗಳಿಗೆ ಉತ್ತಮ ಆರೋಗ್ಯ ಸೇವೆ ನೀಡಲು ಸನ್ನದ್ಧರಾಗಬೇಕು ಎಂದು ಸಲಹೆ ನೀಡಿದರು.

ವಿಶೇಷವಾಗಿ ಗ್ರಾಮೀಣ ಪ್ರದೇಶಗಳಲ್ಲಿ ಸಮಗ್ರ ಕ್ರಿಟಿಕಲ್ ಕೇರ್ ತರಬೇತಿ ಅಗತ್ಯವಾಗಿದೆ. ಸೀಮಿತ ಮೂಲಸೌಕರ್ಯ, ಗಂಭೀರ ಕಾಯಿಲೆಗಳ ಹೆಚ್ಚಿನ ಹೊರೆ ಮತ್ತು ವಿಶೇಷ ವೃತ್ತಿಪರರ ಕೊರತೆ, ಗ್ರಾಮೀಣ ಪ್ರದೇಶಗಳಲ್ಲಿ ಈ ಸವಾಲುಗಳನ್ನು ಎದುರಿಸಲಾಗುತ್ತಿದೆ. ಇದನ್ನೆಲ್ಲ ಮನಗಂಡು ಖಾಸಗಿ ಸಂಸ್ಥೆಗಳ ಸಹಭಾಗಿತ್ವದಲ್ಲಿ ಕ್ರಿಟಿಕಲ್ ಕೇರ್ ಸೆಂಟರ್ ಆರಂಭಿಸಲಾಗಿದ್ದು,ಆ ಸಂಸ್ಥೆಗಳು ಆನ್‌ಲೈನ್ ಮೂಲಕವೇ ಎಲ್ಲವನ್ನು ನಿಯಂತ್ರಣ ಮಾಡಿ ನಿರ್ವಹಣೆ ಮಾಡಲಿವೆ ಎಂದರು.

ರಾಜ್ಯದಲ್ಲಿ ಖಾಲಿ ಇರುವ ವೈದ್ಯರು, ಆರೋಗ್ಯ ನಿರೀಕ್ಷಕರ ಹುದ್ದೆಗಳ ನೇಮಕಾತಿಗೆ ಕ್ರಮಕೈಗೊಳ್ಳಲಾಗುವುದು. ಆರೋಗ್ಯ ನಿರೀಕ್ಷಕರು, ಇತರ ಸಿಬ್ಬಂದಿ ಗುತ್ತಿಗೆ ಆದಾರದ ಮೇಲೆ ಕೆಲಸ ಮಾಡುತ್ತಿದ್ದಾರೆ.

–**ದಿನೇಶ ಆರ್.ಗುಂಡೂರಾವ್,** ಆರೋಗ್ಯ ಸಚಿವ,

- ರಾಜ್ಯದಲ್ಲಿ 43 ಕ್ರಿಟಿಕಲ್ ಕೇರ್ ಸೆಂಟರ್‌ಗಳು ಆರಂಭ
- ಗ್ರಾಮೀಣ ಪ್ರದೇಶಗಳಲ್ಲಿ ಸಮಗ್ರ ಕ್ರಿಟಿಕಲ್ ಕೇರ್ ತರಬೇತಿ ಅಗತ್ಯ
- ನಾನಾ ಸಂಸ್ಥೆಗಳ ಸಹಯೋಗದಲ್ಲಿ ಐದು ದಿನಗಳ ಕಾಲ ಸಮಗ್ರ ತರಬೇತಿ ಶಿಬಿರ

ಕಲ್ಯಾಣ ಕರ್ನಾಟಕಕ್ಕೆ ಪ್ರತ್ಯೇಕ ಸಚಿವಾಲಯ

← ಮೊದಲಪುಟದಿಂದ

11770 ಕೋಟಿ ಯೋಜನೆಗೆ ಅನುಮೋದನೆ: ಇನ್ನು ಸಚಿವ ಸಂಪುಟ ಸಭೆಯ ಬಳಿಕ ಸುದ್ದಿಗೋಷ್ಠಿಯಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಮಾತನಾಡಿದ್ದು, ಕಲಬುರಗಿಯಲ್ಲಿ ನಡೆದ ರಾಜ್ಯ ಸಚಿವ ಸಂಪುಟ ಸಭೆಯಲ್ಲಿ ಕಲ್ಯಾಣ ಕರ್ನಾಟಕ ಭಾಗದ 46 ವಿಷಯಗಳಿಗೆ ಒಟ್ಟು 11770 ಕೋಟಿ ರು. ಯೋಜನೆಗಳಿಗೆ ಅನುಮೋದನೆ ನೀಡಲಾಗಿದೆ. ಬೀದರ್ ಮತ್ತು ಕಲಬುರಗಿಯಲ್ಲಿ ಬರುವ ಹಳ್ಳಿಗಳಿಗೆ ಕುಡಿಯುವ ನೀರು ಯೋಜನೆಯನ್ನು 7200 ಕೋಟಿ ರು. ಯೋಜನೆಗೆ ಅನುಮತಿ ನೀಡಲಾಗಿದೆ ಎಂದು ಪ್ರಕಟಿಸಿದರು.

ಬಸ್‌ನಲ್ಲಿ ಒಟ್ಟಿಗೆ ತೆರಳಿದ ಸಚಿವರು: ಸಚಿವ ಸಂಪುಟ ಸಭೆಯಲ್ಲಿ ಭಾಗವಹಿಸಲು ಬಹುತೇಕ ಸಚಿವರು ಸೋಮವಾರ ರಾತ್ರಿಯೇ ಕಲಬುರಗಿಯಲ್ಲಿ ವಾಸ್ತವ್ಯ ಹೂಡಿದ್ದರೆ ಇನ್ನು ಕೆಲವರು ಮಂಗಳವಾರ ಬೆಳಗ್ಗೆ ಕಲಬುರಗಿಗೆ ತಲುಪಿದರು. ಆದರೆ ಸಚಿವ ಸಂಪುಟ ಸಭೆ ನಡೆದ ಪ್ರಾದೇಶಿಕ ಆಯುಕ್ತರ ಕಚೇರಿಗೆ ಮುಖ್ಯಮಂತ್ರಿ ಸಿದ್ದರಾಮಯ್ಯ ಸೇರಿದಂತೆ ಎಲ್ಲ ಸಚಿವರು ಒಂದೇ ಬಸ್‌ನಲ್ಲಿ ತೆರಳಿದರು. ಇಡೀ ಸಂಪುಟ ಕಲಬುರಗಿಗೆ ಆಗಮಿಸಿದ್ದರಿಂದ ಅನೇಕರು, ವಿವಿಧ ಕುಂದುಕೊರತೆಯನ್ನು ಮುಂದಿಟ್ಟುಕೊಂಡು ಮುಖ್ಯಮಂತ್ರಿ, ಉಪಮುಖ್ಯಮಂತ್ರಿ ಹಾಗೂ ಸಚಿವರನ್ನು ಭೇಟಿಯಾಗಲು ಆಗಮಿಸಿದ್ದರು.

ದಶಮಾನೋತ್ಸವ ಕಾರ್ಯಕ್ರಮದಲ್ಲಿ ಭಾಗಿ: ಇದಕ್ಕೂ ಮೊದಲು ಕಲ್ಯಾಣ ಕರ್ನಾಟಕ ಅಮೃತ ಮಹೋತ್ಸವ ಹಾಗೂ ಕಲ್ಯಾಣ ಕರ್ನಾಟಕಕ್ಕೆ ಸಂವಿಧಾನದಲ್ಲಿ ವಿಶೇಷ ಸ್ಥಾನಮಾನ ಕಲ್ಪಿಸುವ 371 (ಜೆ) ವಿಧಿ ಜಾರಿಯ ದಶಮಾನೋತ್ಸವ ಕಾರ್ಯಕ್ರಮದಲ್ಲಿ ಭಾಗವಹಿಸಿದ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು, ಈ ಭಾಗಕ್ಕೆ ವಿಶೇಷ ಸ್ಥಾನಮಾನ ಕಲ್ಪಿಸುವಲ್ಲಿ ಬಿಜೆಪಿಗೆ ನಿರಾಸಕ್ತಿ ತೋರಿತ್ತು. ಆದರೆ ಹಲವು ದಶಕಗಳ ತೀವ್ರ ಹೋರಾಟ ಹಾಗೂ ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಹಾಗೂ ಮಾಜಿ ಮುಖ್ಯಮಂತ್ರಿ ಧರಂಸಿಂಗ್ ಅವರ ಅವಿರತ ಪ್ರಯತ್ನದ ಫಲವಾಗಿ ವಿಶೇಷ ಸ್ಥಾನಮಾನವನ್ನು ಕಾಂಗ್ರೆಸ್ ಅವಧಿಯಲ್ಲಿ ನೀಡಲಾಯಿತು ಎಂದು ಸ್ಮರಿಸಿದರು.

ಸೆ.22 ರಂದು ತುಂಗಭದ್ರೆಗೆ ಬಾಗಿನ: ಬರುವ ಸೆ.22 ರಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಹಾಗೂ ಸಚಿವ ಸಂಪುಟದ ಸಹೋದ್ಯೋಗಿಗಳೊಂದಿಗೆ ತುಂಗಭದ್ರಾ ಜಲಾಶಯಕ್ಕೆ ಬಾಗಿನ ಅರ್ಪಿಸಲಾಗುವುದು ಎಂದು ಉಪ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಹೇಳಿದರು. ಕೊಪ್ಪಳ, ರಾಯಚೂರು,ಬಳ್ಳಾರಿ ಹಾಗೂ ನೆರೆಯ ಆಂಧ್ರಪ್ರದೇಶ ಕಡಪಾ, ಕರ್ನೂಲು ಜಿಲ್ಲೆಗಳ ರೈತರ ಜೀವನಾಡಿಯಾಗಿರುವ ತುಂಗಭದ್ರಾ ನದಿಗೆ ಹೊಸಪೇಟೆ-ಕೊಪ್ಪಳ ಮಧ್ಯೆ ಇರುವ ಜಲಾಶಯದ 19 ನೇ ಕ್ರಸ್ಟ್‌ಗೇಟು ಸುಮಾರು ಒಂದು ತಿಂಗಳ ಹಿಂದೆ ಕಿತ್ತು ಹೋಗಿ ಅಪಾರ ಪ್ರಮಾಣದ ನೀರು ವ್ಯರ್ಥವಾಗಿ ಹರಿದುಹೋಗುತ್ತಿತ್ತು,ರೈತರು ಆತಂಕಗೊಂಡಿದ್ದರು. ಕ್ರಸ್ಟ್ ಗೇಟ್ ದುರಸ್ತಿಗೆ ಶ್ರಮಿಸಿದ ಎಲ್ಲ ಅಧಿಕಾರಿಗಳು, ಎಂಜನಿಯರು ಹಾಗೂ ಕಾರ್ಮಿಕರು ಸೇರಿ ಸುಮಾರು 108 ಜನರಿಗೆ ಅಂದು ಸತ್ಕರಿಸಿ, ಗೌರವಿಸಲಾಗುವುದು ಎಂದರು.

19ನೇ ಸಚಿವ ಸಂಪುಟದ ನಿರ್ಣಯಗಳು

- ಗದಗ ಕೊಪ್ಪಳ ಚಾಮರಾಜನಗರದಲ್ಲಿ 450 ಹಾಸಿಗೆಯ ಸಾಮರ್ಥ್ಯದ ವೈದ್ಯಕೀಯ ಉಪಕರಣ ಹಾಗೂ ಪೀಠೋಪಕರಣಗಳನ್ನು 149.03 ಕೋಟಿ ರು ಅಂದಾಜು ಮೊತ್ತದಲ್ಲಿ ಖರೀದಿಸಲು ಅನುಮೋದನೆ.
- ಚಿತ್ತಾಪುರ ತಾಲೂಕಿನ ಕೆರೆ ತುಂಬಿಸುವ ಕಾಮಗಾರಿಗೆ 135 ಕೋಟಿ ಅಂದಾಜು ಮೊತ್ತಕ್ಕೆ ಅನುಮೋದನೆ.
- ಜೇವರ್ಗಿ ತಾಲೂಕಿನ ಹರವಾಳ ಗ್ರಾಮದ ಹತ್ತಿರ ಭೀಮಾ ನದಿಗೆ ಅಡ್ಡಲಾಗಿ ಬಾಂದಾರು ಸಹಿತ ಸೇತುವೆ ನಿರ್ಮಾಣ ಕಾಮಗಾರಿಗೆ 130 ಕೋಟಿ ರು. ಅಂದಾಜು ಮೊತ್ತದಲ್ಲಿ ಕೈಗೊಳ್ಳಲು ಆಡಳಿತಾತ್ಮಕವಾಗಿ ಅನುಮೋದನೆ.
- ರಾಯಚೂರು ಜಿಲ್ಲೆಯ ಮಾನ್ವಿ ತಾಲೂಕಿನ ಕುರಡಿ ಕೆರೆ ತುಂಬಿಸುವ ಯೋಜನೆಗೆ ಕಾಮಗಾರಿಯನ್ನು 132 ಕೋಟಿ ರು. ಅಂದಾಜು ಮೊತ್ತದಲ್ಲಿ ಕೈಗೊಳ್ಳಲು ಆಡಳಿತಾತ್ಮಕವಾಗಿ ಅನುಮೋದನೆ.
- 15 ಮಹಿಳಾ ಪದವಿಪೂರ್ವ ಕಾಲೇಜು ಕಟ್ಟಡ ನಿರ್ಮಾಣ ಕಾಮಗಾರಿಯನ್ನು 447.76 ಕೋಟಿ ವೆಚ್ಚದಲ್ಲಿ ಕೈಗೊಳ್ಳಲು ಆಡಳಿತಾತ್ಮಕವಾಗಿ ಅನುಮೋದನೆ.
- ಕರ್ನಾಟಕ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ವಿಶ್ವವಿದ್ಯಾಲಯದ ವಿಧೇಯಕ 2024ಕ್ಕೆ ಅನುಮೋದನೆ.
- ಜಿಟಿಟಿಸಿ ಬಹು ಕೌಶಲ್ಯ ಅಭಿವೃದ್ಧಿ ಕೇಂದ್ರವನ್ನು ಕಲ್ಯಾಣ ಕರ್ನಾಟಕ ಪ್ರದೇಶಾಭಿವೃದ್ಧಿ ಮಂಡಳಿ ಅನುದಾನದಿಂದ ಮೊದಲ ಹಂತದಲ್ಲಿ 53.25 ಕೋಟಿ ರು. ವೆಚ್ಚದಲ್ಲಿ ಸ್ಥಾಪಿಸಲು ಸಚಿವ ಸಂಪುಟ ನಿರ್ಣಯ ಮಾಡಿದೆ.
- ಗದಗ ಜಿಲ್ಲೆಯ ರೋಣಾದಲ್ಲಿ ಒಟ್ಟು 50 ಕೋಟಿ ರು. ಅಂದಾಜು ವೆಚ್ಚದಲ್ಲಿ ನಬಾರ್ಡ್ ಅನುದಾನದಲ್ಲಿ ಸರಕಾರಿ ಉಪಕರಣಗಾರ ಮತ್ತ ತರಬೇತಿ ಕೇಂದ್ರ ಸ್ಥಾಪಿಸಲು ನಿರ್ಧಾರ ಮಾಡಲಾಗಿದೆ.
- ಕೊಪ್ಪಳ ಜಿಲ್ಲೆಯ ತಳಕಲ್‌ನಲ್ಲಿ ಬಹು ಕೌಶಲ ಅಭಿವೃದ್ಧಿ ಕೇಂದ್ರವನ್ನು ಕಲ್ಯಾಣ ಕರ್ನಾಟಕ ಪ್ರದೇಶಾಭಿವೃದ್ಧಿ ಮಂಡಳಿ ಅನುದಾನದಿಂದ 53.25 ಕೋಟಿ ರು. ವೆಚ್ಚದಲ್ಲಿ ಸ್ಥಾಪಿಸಲು ಆಡಳಿತಾತ್ಮಕವಾಗಿ ಅನುಮೋದನೆ.
- ಬೀದರ್ ನಗರ ಸಭೆ ಹಾಗೂ ರಾಯಚೂರು ನಗರ ಸಭೆಯನ್ನು ಮಹಾನಗರ ಪಾಲಿಕೆಯನ್ನಾಗಿ ಮೇಲ್ದರ್ಜೆಗೆ ಏರಿಸಲು ನಿರ್ಣಯ ಮಾಡಲಾಗಿದೆ.
- ಕರ್ನಾಟಕ ರಾಜ್ಯಾದ್ಯಂತ 43 ಕಾರ್ಮಿಕ ಅಧಿಕಾರಿಗಳ ವ್ಯಾಪ್ತಿಯಲ್ಲಿ ತಲಾ ಒಂದರಂತೆ ಸ್ಥಿರ ಮತ್ತು ಡಾ.ಬಾಬಾ ಸಾಹೇಬ್ ಅಂಬೇಡ್ಕರ್ ಕಾರ್ಮಿಕ ಸೇವಾ ಕೇಂದ್ರಗಳನ್ನು 48.08 ಕೋಟಿ ರು. ವೆಚ್ಚದಲ್ಲಿ ಸ್ಥಾಪಿಸಲು ಸಚಿವ ಸಂಪುಟ ಅನುಮೋದನೆ ನೀಡಿದೆ.

ಕಾರ್ಯಪಾಲಕ ಅಭಿಯಂತರವರ ಕಛೇರಿ

ಲೋಕೋಪಯೋಗಿ ವಿದ್ಯುತ್ ವಿಭಾಗ, ಕೆ.ಆರ್. ವೃತ್ತ, ಬೆಂಗಳೂರು
Ph: 080 22112809, Email: pwdelediv1@gmail.com

ಸಂ. ಕಾ.ಇಂ(ಎ)/ಲೋ.ಇ/ವಿದ್ಯುತ್/1497/2024–25 ದಿನಾಂಕ: 13.09.2024

ಟೆಂಡರ್ ನೋಟಿಫಿಕೇಶನ್

ಕಾರ್ಯಪಾಲಕ ಅಭಿಯಂತರರು (ವಿದ್ಯುತ್), ಲೋಕೋಪಯೋಗಿ ವಿದ್ಯುತ್ ವಿಭಾಗ, ಬೆಂಗಳೂರು ಇವರ ವತಿಯಿಂದ ಈ ಕೆಳಕಂಡ ಕಾಮಗಾರಿಗಳನ್ನು KW-2 STD ಷರತ್ತುಗೊಳಪಟ್ಟಂತೆ ಅಲ್ಪಾವಧಿ ಟೆಂಡರ್‌ನ ಮೊದಲನೆ ಕರೆಯನ್ನು ಕೆ.ಪಿ.ಪಿ.ಪಿ ಮೂಲಕ ಟೆಂಡರ್‌ಗಳನ್ನು ಆಹ್ವಾನಿಸಲಾಗಿದೆ. ಕಾಮಗಾರಿಗಳ ವಿವರ ಕೆಳಕಂಡಂತಿವೆ.

Sl.No.	WORK INDENTS	Work Value (Rs. in Lakhs)
1.	PWD/2024-25/EL/WORK_INDENT15643	38.84
2.	PWD/2024-25/EL/WORK_INDENT15644	38.01

ಮೇಲಿನ ಟೆಂಡರ್‌ಗಳಲ್ಲಿ ಭಾಗವಹಿಸಲು ಇಚ್ಚಿಸುವವರು ವೆಬ್‌ಸೈಟ್: https://kppp.karnataka.gov.in ನಲ್ಲಿ ಟೆಂಡರ್ ಡಾಕ್ಯೂಮೆಂಟ್‌ಗಳನ್ನು ಡೌನ್‌ಲೋಡ್ ಮಾಡಿಕೊಳ್ಳಲು ದಿನಾಂಕ: 13.09.2024 ರಿಂದ 23.09.2024 ರ 16.00 ಗಂಟೆಯವರೆಗೆ ಹಾಗೂ ಭರ್ತಿ ಮಾಡಿದ ಟೆಂಡರ್ ಹಿಂತಿರುಗಿಸುವ ದಿನಾಂಕ 23.09.2024 ರಂದೆ 16.00 ಗಂಟೆಯವರೆಗೆ ನಿಗದಿಪಡಿಸಲಾಗಿದೆ. ಟೆಂಡರ್ ವಿವರಗಳನ್ನು Karnataka Public Procurement Portal ನಲ್ಲಿ ಪಡೆಯಬಹುದಾಗಿದೆ. ಹೆಚ್ಚಿನ ವಿವರಗಳಿಗೆ ಈ ಕೆಳಗೆ ಸಹಿ ಮಾಡಿರುವ ಅಧಿಕಾರಿಗಳ ಕಛೇರಿಯಲ್ಲಿ ಕೆಲಸದ ವೇಳೆಯಲ್ಲಿ ಸಂಪರ್ಕಿಸಬಹುದು.

ಸಹಿ/–
ಕಾರ್ಯಪಾಲಕ ಅಭಿಯಂತರರು(ವಿ)
ಲೋಕೋಪಯೋಗಿ ವಿದ್ಯುತ್ ವಿಭಾಗ, ಬೆಂಗಳೂರು

ವಾಸಸಂಇ/ಸಿಪಿ/ಎಎಎ/2028/2024–25

ಕರ್ನಾಟಕ ನೀರಾವರಿ ನಿಗಮ ನಿಯಮಿತ

(ಕರ್ನಾಟಕ ಸರ್ಕಾರದ ಉದ್ಯಮ)
ಕಾರ್ಯಪಾಲಕ ಇಂಜಿನಿಯರ್‌ರವರ ಕಛೇರಿ, ಕನೀನಿನಿ, ನಂ.5, ಭದ್ರಾ ನಾಲಾ ವಿಭಾಗ, ದಾವಣಗೆರೆ. ಫೋ: 08192–264669
ಇ–ಮೇಲ್: eebcddvg@yahoo.co.in

ಅಲ್ಪಾವಧಿ ಇ–ಪ್ರೋಕ್ಯೂರ್‌ಮೆಂಟ್ ಟೆಂಡರ್ ಪ್ರಕಟಣೆ

(ಕೆಪಿಪಿಪಿ ಪೋರ್ಟ್‌ಲ್ ಮುಖಾಂತರ ಮಾತ್ರ)

ಉಲ್ಲೇಖ:– No:EE/KNNL/BCD-5/DVG/PB-6/4701–Holalkere works/1040/2024-25 Dated: 10.09.2024.

ವ್ಯವಸ್ಥಾಪಕ ನಿರ್ದೇಶಕರು, ಕರ್ನಾಟಕ ನೀರಾವರಿ ನಿಗಮ ನಿಯಮಿತ, ಬೆಂಗಳೂರು ಇವರ ಪರವಾಗಿ ಕಾರ್ಯಪಾಲಕ ಇಂಜಿನಿಯರ್, ಕ.ನೀ.ನಿ.ನಿ, ನಂ.5 ಭದ್ರಾ ನಾಲಾ ವಿಭಾಗ, ದಾವಣಗೆರೆ ರವರು, ಲೆಕ್ಕ ಶೀರ್ಷಿಕೆ 4701–Holalkere work ಅಡಿಯಲ್ಲಿ ಕಾಮಗಾರಿಗೆ ದ್ವಿ–ಲಕೋಟೆ ಪದ್ಧತಿಯಡಿ KW-4 (Standard tender Bid Document) ನಲ್ಲಿ ಕೆಪಿಪಿಪಿ–ಪೋರ್ಟ್‌ಲ್ ಮುಖಾಂತರ ಟೆಂಡರ್‌ನ್ನು ಆಹ್ವಾನಿಸಲಾಗಿರುತ್ತದೆ. ಅರ್ಹ ಗುತ್ತಿಗೆದಾರರು, ಶೇಕಡಾವಾರು ಟೆಂಡರ್‌ನ್ನು ಕೆಪಿಪಿಪಿ ಪೋರ್ಟ್‌ಲ್‌ನ ವೆಬ್‌ಸೈಟ್ (https://kppp.karnataka.gov.in/#/portal/portal-home) ಮುಖಾಂತರವೇ ಡೌನಲೋಡ್ ಮಾಡಿಕೊಳ್ಳಲು ದಿನಾಂಕ: 13.09.2024 ರಿಂದ 23.09.2024 ರ ಸಂಜೆ 5.00 ಘಂಟೆವರೆಗೆ ಟೆಂಡರ್‌ಗಳನ್ನು ಸಲ್ಲಿಸಬಹುದಾಗಿರುತ್ತದೆ. ಟೆಂಡರ್ ಕುರಿತು ಸ್ಪಷ್ಟೀಕರಣಕ್ಕೆ (Pre-Bid Meeting) ದಿನಾಂಕ: 19.09.2024 ರಂದು ಪೂರ್ವಾಹ್ನ 11.00 ಘಂಟೆಯವರೆಗೆ. ತಾಂತ್ರಿಕ ಬಿಡ್‌ನ್ನು ತೆರೆಯುವ ದಿನಾಂಕ: 24.09.2024 ರಂದು ಸಂಜೆ 5.15 ಘಂಟೆ. ಒಟ್ಟು ಕಾಮಗಾರಿ ಸಂಖ್ಯೆ 01.
ಆರ್ಥಿಕ ಬಿಡ್‌ನ್ನು ಸಕ್ಷಮ ಪ್ರಾಧಿಕಾರದಿಂದ ತಾಂತ್ರಿಕ ಬಿಡ್ ಅನುಮೋದನೆಗೊಂಡ ನಂತರ ತೆರೆಯಲಾಗುವುದು. KNNL/2024-25/IW/WORK_INDENT1549 – Aomunt put to tender-Rs.422.29 Lakhs is excluding GST.
ಯಾವುದೇ ಕಾರಣ ನೀಡದೆ ಟೆಂಡರ್‌ಗಳನ್ನು ಮುಂದೂಡುವ, ಅಂಗಿಕರೀಸುವ ಅಥವಾ ತಿರಸ್ಕರಿಸುವ ಹಕ್ಕನ್ನು ಕೆಳಗೆ ಸಹಿ ಮಾಡಿರುವ ಅಧಿಕಾರಿಗಳು ಕಾಯ್ದಿರಿಸಿಕೊಂಡಿರುತ್ತಾರೆ. ಹೆಚ್ಚಿನ ಮಾಹಿತಿಗಾಗಿ ಕೆಪಿಪಿಪಿ–ಪೋರ್ಟಲ್ ಅಥವಾ ಕಛೇರಿ ವೇಳೆಯಲ್ಲಿ ಕೆಳಗೆ ಸಹಿ ಮಾಡಿದವರ ಕಛೇರಿಯನ್ನು ಸಂಪರ್ಕಿಸಬಹುದಾಗಿರುತ್ತದೆ.

ವಾಸಾಇ/ಡಿವಿಜಿ/340/ಕೆಎಸ್‌ಎಂಸಿಎ/2024–25

ಸಹಿ/– ಕಾರ್ಯಪಾಲಕ ಇಂಜಿನಿಯರ್,
ಕನೀನಿನಿ ನಂ.5 ಭದ್ರಾ ನಾಲಾ ವಿಭಾಗ, ದಾವಣಗೆರೆ.

ಕರ್ನಾಟಕ ನೀರಾವರಿ ನಿಗಮ ನಿಯಮಿತ

(ಕರ್ನಾಟಕ ಸರಕಾರದ ಉದ್ಯಮ)
ಕಾರ್ಯನಿರ್ವಾಹಕ ಅಭಿಯಂತರರು, ಎಚ್.ಬಿ.ಸಿ ವಿಭಾಗ ಅಥಣಿ–591304, ಕಾರ್ಯಾಲಯ,ತಾ:ಅಥಣಿ ಜಿ:ಬೆಳಗಾವಿ(ಕರ್ನಾಟಕ)

ಸಂ.ಕನೀನಿನಿ/ಎಚ್.ಬಿ.ಸಿ/ಪಿಬಿ/ಟೆಂಡರ್/2024–25/ 1881 ದಿನಾಂಕ:12.09.2024

ಅಲ್ಪಾವಧಿ ಟೆಂಡರ ಅಧಿಸೂವನೆ ಕರೆ–4

(ಕೆ.ಪಿ.ಪಿ. ಪ್ರೋಟಲ್–ಸಂಗ್ರಹಣಾ ಕೋಶದ ಮೂಲಕ ಮಾತ್ರ)

ವ್ಯವಸ್ಥಾಪಕ ನಿರ್ದೇಶಕರು ಕರ್ನಾಟಕ ನೀರಾವರಿ ನಿಗಮ ನಿಯಮಿತ ಬೆಂಗಳೂರು ಇವರ ಪರವಾಗಿ ಕಾರ್ಯನಿರ್ವಾಹಕ ಅಭಿಯಂತರರು ಕನೀನಿನಿ ಎಚ್.ಬಿ.ಸಿ ವಿಭಾಗ ತಾ:ಅಥಣಿ ಜಿ:ಬೆಳಗಾವಿ ಇವರು ಕಾಮಗಾರಿಯನ್ನು ಸ್ಟ್ಯಾಂಡರ್ಡ ಬಿಡ್ ಡಾಕ್ಯೂಮೆಂಟ್ ಕೆ.ಡಬ್ಲ್ಯೂ–4 ನಿಯಮದನ್ವಯ ಮೊದಲನೇ ಹಾಗೂ ಎರಡನೇ ಲಕೋಟೆಯನ್ನು ಈ ಸಂಗ್ರಹಣಾ ಕೋಶದ ಮುಖಾಂತರ ಶೇಕಡಾವಾರು ಟೆಂಡರನ್ನು, ಪಿ.ಡಬ್ಲೂಡಿ ಕ್ಲಾಸ್–2 ಹಾಗೂ ಮೇಲ್ಪಟ್ಟ ಗುತ್ತಿಗೆದಾರರಿಂದ ಟೆಂಡರನ್ನು ಅಹ್ವಾನಿಸಿರುತ್ತಾರೆ.
ಸದರಿ ಕಾಮಗಾರಿಗಳಿಗೆ ಮೊದಲನೇ ಹಾಗೂ ಎರಡನೇ ಕವರಿನ ವಿಧಾನದಲ್ಲಿ (as per KTPP act 2000) ಅನುಸರಿಸಬೇಕು. ಖಾಲಿ ಟೆಂಡರ್ ದಾಖಲೆಗಳನ್ನು ವೆಬ್‌ಸೈಟ್ www.kpp-portal.karnataka.gov.in ಮೂಲಕ ಪಡೆದುಕೊಳ್ಳಬಹುದು ಮತ್ತು ಎಲೆಕ್ಟ್ರಾನಿಕ್ ಟೆಂಡರ್ ಮೂಲಕ ಮಾತ್ರ ಸಲ್ಲಿಸಬಹುದು.
ಟೆಂಡರಗಿಟ್ಟ ಅಂದಾಜು ಮೊತ್ತ 1) ರೂ. 490.62 ಲಕ್ಷ
1:ಇ ಸಂಗ್ರಹಣಾ ಕೋಶದಲ್ಲಿ ಟೆಂಡರ್ ದಾಖಲೆಗಳನ್ನು ಪಡೆಯಬಹುದಾದ ದಿನಾಂಕ:18.09.2024 ರ 10.30 ಬೆಳಿಗ್ಗೆ ರಿಂದ 25.09.2024 ರ ಸಾಯಂಕಾಲ 4.00 ಗಂಟೆ ವರಗೆ, 2:ಟೆಂಡರ್ ಪ್ರಶ್ನೆಗಳಿಗೆ ಕೊನೆಯ ದಿನಾಂಕ ಮತ್ತು ಸಮಯ:24.09.2024 ರ ಸಾಯಂಕಾಲ 4.00 ವರೆಗೆ, 3:ಫ್ರಿ ಬಿಡ್ ಮಿಟಿಂಗ್ ದಿನಾಂಕ: (ಕಾ.ನಿ.ಇಂ. ಕನಿನಿನಿ ಎಚ್.ಬಿ.ಸಿ. ವಿಭಾಗ ಅಥಣಿ):ದಿನಾಂಕ 23.09.2024ರ 11.00 ಬೆಳಿಗ್ಗೆ, 4:ಪೂರ್ಣವಾಗಿ ತುಂಬಿದ ಇ ಟೆಂಡರ್ ದಾಖಲೆಗಳನ್ನು ಸಲ್ಲಿಸುವ ಕೊನೆಯ ದಿನಾಂಕ:18.09.2024ರ 10.30 ಬೆಳಿಗ್ಗೆ ರಿಂದ 25.09.2024 ರ ಸಾಯಂಕಾಲ 4.00 ಗಂಟೆ ವರಗೆ, 5:ತಾಂತ್ರಿಕ ಬಿಡ್‌ನ್ನು ತೆರೆಯುವ ದಿನಾಂಕ (ಎಚ್.ಬಿ.ಸಿ ವಿಭಾಗ ಕಛೇರಿ ಅಥಣಿಯಲ್ಲಿ):27.09.2024 ರ ಬೆಳಿಗ್ಗೆ 11.00 ಗಂಟೆಗೆ, 6:ಆರ್ಥಿಕ ಬಿಡ್‌ನ್ನು ತೆರೆಯುವ ದಿನಾಂಕ: 01.10.2024 ರ ಬೆಳ್ಳಿಗ್ಗೆ 11.00 ಗಂಟೆಗೆ (ತಾಂತ್ರಿಕ ಬಿಡ್ ಅನುಮೊದನೆ ನಂತರ), 7:ಗುತ್ತಿಗೆದಾರರು ಮೂಲ ದಾಖಲೆಗಳನ್ನು ಇ.ಇ. ಕನೀನಿನಿ ಎಚ್.ಬಿ.ಸಿ. ವಿಭಾಗ ಅಥಣಿ ಕಚೇರಿಯಲ್ಲಿ ಹಾಜರಪಡಿಸುವ ದಿನಾಂಕ:03.10.2024 ಬೆಳ್ಳಿಗ್ಗೆ 11.00 ಗಂಟೆಗೆ.
ಇನ್ನೂಳಿದಂತೆ ಯಾವುದಾದರೂ ಹೆಚ್ಚಿನ ಮಾಹಿತಿ ಬೇಕಾದಲ್ಲಿ ಇ ಸಂಗ್ರಹಣಾ ಕೋಶ ವೆಬ್ ಸೈಟ್ http//:www.kppp.karnataka.gov.in/kpp-protal/index.seam link ಮುಖಾಂತರ ಹಾಗೂ ಈ ಕೆಳಗೆ ಸಹಿ ಮಾಡಿದ ಅಧಿಕಾರಿಗಳ ಕಛೇರಿಯಿಂದ ಕೆಲಸದ ವೇಳೆಯಲ್ಲಿ ಪಡೆಯಬಹುದು.

ಸಹಿ/–ಪ್ರವೀಣ .ಬ. ಹುಣಶೀಕಟ್ಟಿ,
ಕಾರ್ಯನಿರ್ವಾಹಕ ಇಂಜನೀಯರರು, ಎಚ್.ಬಿ.ಸಿ ವಿಭಾಗ, ಅಥಣಿ.
DIPR/BGM/RO-NO-810/KSMCA/2024-25

ಮುನಿರತ್ನ ವಿರುದ್ಧ ಒಕ್ಕಲಿಗರ ಮುನಿಸು

← ಮೊದಲಪುಟದಿಂದ

ಈ ವಿಷಯ ಮುನಿರತ್ನ ಮಹಾಪರಾಧ ಮಾಡಿಲ್ಲ ಎನ್ನುವ ವಾದ ಮಂಡನೆಯಾಗಿದ್ದರೂ, ಸಮುದಾಯವನ್ನು ನಿಂದಿಸಿದ್ದಾರೆಂದು ಹೇಳಲಾದ ಧ್ವನಿಮುದ್ರಿಕೆ ವಿಚಾರವೀಗ ರಾಜ್ಯಾದ್ಯಂತ ಹೋರಾಟದ ಕಾವು ಹೆಚ್ಚಾಗಿದೆ. ಬೆಂಗಳೂರು ಸೇರಿದಂತೆ ರಾಜ್ಯದ ವಿವಿಧೆಡೆ ಮುನಿರತ್ನ ವಿರುದ್ಧ ಭಾರಿ ಪ್ರತಿಭಟನೆ ನಡೆದಿದೆ.

ಹಳೇ ಮೈಸೂರೇ ಬಹುದೊಡ್ಡ ಸಮಸ್ಯೆ

ಹಳೆ ಮೈಸೂರು ಪ್ರಾಂತ್ಯದಲ್ಲಿ ಈ ಹಿಂದಿನಿಂದಲೂ ಕಾಂಗ್ರೆಸ್ ಹಾಗೂ ಬಿಜೆಪಿಗಿಂತ ಜೆಡಿಎಸ್ ಪಕ್ಷ ವೈಯಕ್ತಿಕ ನೆಲೆಗಟ್ಟಿನಲ್ಲಿ ಸಂಘಟನೆ ಭದ್ರವಾಗಿತ್ತು. ನಂತರದ ದಿನಗಳಲ್ಲಿ ಜೆಡಿಎಸ್‌ನ ಕೆಲ ನಾಯಕರು ಕಾಂಗ್ರೆಸ್ ಸೇರಿದ್ದರಿಂದ ಕಳೆದ ದಶಕದಲ್ಲಿ ಜೆಡಿಎಸ್ ಅಲೆ ಕುಗ್ಗಿತ್ತಾದರೂ ಪ್ರಭಾವ ಉಳಿಸಿಕೊಂಡಿತ್ತು. ಈ ಬಾರಿಯ ವಿಧಾನಸಭಾ ಚುನಾವಣೆಯಲ್ಲಿ ಜೆಡಿಎಸ್ ಗೆ ನಾಯಕರ ಕೊರತೆಯಿಂದಾಗಿ ಮೈಸೂರು ಪ್ರಾಂತ್ಯದಲ್ಲಿ ಹೆಚ್ಚಿನ ಶಾಸಕರನ್ನು ಗೆಲ್ಲಿಸಿಕೊಳ್ಳಲು ಕಷ್ಟವಾಗಿ ಕಾಂಗ್ರೆಸ್‌ಗೆ ವರದಾನವಾಗಿತ್ತು. ಆದರೆ ಲೋಕಸಭಾ ಚುನಾವಣೆ ವೇಳೆ ಜೆಡಿಎಸ್ ಹಾಗೂ ಬಿಜೆಪಿ ಮೈತ್ರಿಯಿಂದಾಗಿ ಮೈಸೂರು ಪ್ರಾಂತ್ಯದಲ್ಲಿ ಗೆಲ್ಲಲು ಅವಕಾಶವಾಗಿತ್ತು.

ಉಪಚುನಾವಣೆಗೂ ಸಮಸ್ಯೆ?

ಲೋಕಸಭೆಯಲ್ಲಿ ಮೈತ್ರಿ ಅತಿಹೆಚ್ಚು ಸ್ಥಾನ ಪಡೆದಿರುವ ಮಧ್ಯೆಯೇ ಚನ್ನಪಟ್ಟಣ ವಿಧಾನಸಭೆಗೆ ಉಪಚುನಾವಣೆಗೆ ಇಷ್ಟರಲ್ಲೇ ದಿನಾಂಕ ಪ್ರಕಟವಾಗಲಿದೆ. ಈ ಕ್ಷೇತ್ರದಲ್ಲಿ ನಿಲ್ಲುವ ಇಂಗಿತ ವ್ಯಕ್ತಪಡಿಸಿರುವ ಡಿಸಿಎಂ ಡಿ.ಕೆ.ಶಿವಕುಮಾರ್‌ಗೆ ಇದು ಅಸ್ತಿತ್ವದ ಪ್ರಶ್ನೆಯಾದರೆ, ಮೈತ್ರಿಯಲ್ಲಿ ಅಪಸ್ವರದ ನಡುವೆಯೂ ಪ್ರತಿಷ್ಠೆಯ ಕಣವಾಗಿದೆ.ಉಪಚುನಾವಣೆಯಲ್ಲಿ ಎನ್‌ಡಿಎ ಟಿಕೆಟ್ ತಮಗೆ ಲಭಿಸಲಿದೆ ಎಂದು ವಿಶ್ವಾಸ ವ್ಯಕ್ತಪಡಿಸಿ ಹಳ್ಳಿಹಳ್ಳಿಗೆ ಮಾಜಿ ಶಾಸಕ ಸಿ.ಪಿ. ಯೋಗೇಶ್ವರ್ ಸುತ್ತಾಡುತ್ತಿದ್ದರೂ, ಟಿಕೆಟ್ ಅಂತಿಮವಾಗಲು ಮತ್ತದೇ ಮೈತ್ರಿ ತೊಡಕಾಗಲಿದೆ . ಇಲ್ಲಿಯವರೆಗೂ ಈ ಕ್ಷೇತ್ರದಲ್ಲಿ ಸಿ.ಪಿ.ಯೋಗೇಶ್ವರ್, ಡಿ.ಕೆ.ಶಿವಕುಮಾರ್ ಹಾಗೂ ಎಚ್.ಡಿ.ಕುಮಾರಸ್ವಾಮಿ ಆಯಾ ಕಾಲಕ್ಕೆ ಪ್ರತಿಸ್ಪರ್ಧಿಗಳಾಗಿದ್ದಾರೆ. ಈಗ ಡಿಸಿಎಂ ಅವರೇ ಸ್ಪರ್ಧಿಸುವುದಾಗಿ ತಿಳಿಸಿರುವುದು ಚುನಾವಣಾ ಕಾವು ಜೋರಾಗಿದೆ. ಇತ್ತ ಮೈತ್ರಿಯಲ್ಲಿ ಇನ್ನೂ ಒಮ್ಮತ ಮೂಡಿಲ್ಲ. ಚನ್ನಪಟ್ಟಣ ಕ್ಷೇತ್ರದಿಂದ ಗೆದ್ದ ಕುಮಾರಸ್ವಾಮಿಗೂ ಈ ಕ್ಷೇತ್ರ ಬಿಡುವ ಮನಸ್ಸಿಲ್ಲ. ಈಗ ಕೇಂದ್ರ ಮಂತ್ರಿಯಾಗಿದ್ದರೂ ತಮ್ಮ ಮಗನನ್ನು ಅಲ್ಲಿ ಪ್ರತಿಷ್ಠಾಪಿಸಲು ಪ್ರಯತ್ನ ಮುಂದುವರಿಸಿದ್ದಾರೆ. ಹೀಗಿದ್ದರೂ ಸ್ಥಳೀಯರಾಗಿರುವ ಸಿ.ಪಿ.ಯೋಗೇಶ್ವರ್ ಪ್ರಯತ್ನ ಮುಂದುವರಿಸಿದ್ದರೂ, ಈಗಿನ ಜಾತಿ ನಿಂದನಾ ಪ್ರಕರಣ ಈ ಕ್ಷೇತ್ರದ ಚುನಾವಣೆಯ ಮೇಲೆ ಭಾರಿ ಪರಿಣಾಮ ಬೀರಲಿದೆ ಎನ್ನುವ ಮಾತುಗಳು ಕೇಳಿಬರುತ್ತಿದೆ.

14 ದಿನಗಳ ಅವಧಿಗೆ ನ್ಯಾಯಾಂಗ ಬಂಧನ

ಜಾತಿ ನಿಂದನೆ ಹಾಗೂ ಜೀವ ಬೆದರಿಕೆ ಪ್ರಕರಣ ಸಂಬಂಧ ಶಾಸಕ ಮುನಿರತ್ನ ಅವರಿಗೆ 14 ದಿನ ನ್ಯಾಯಾಂಗ ಬಂಧನ ವಿಧಿಸಿ ಜನಪ್ರತಿನಿಧಿಗಳ ವಿಶೇಷ ನ್ಯಾಯಾಲಯ ಆದೇಶಿಸಿದ್ದು, ಪರಪ್ಪನ ಅಗ್ರಹಾರ ಜೈಲಿಗೆ ಸ್ಥಳಾಂತರಿಸಲಾಗಿದೆ. ನ್ಯಾಯಾಂಗ ಬಂಧನ ಅವಧಿ ಹಿನ್ನಲೆಯಲ್ಲಿ ಮುನಿರತ್ನ ಅವರನ್ನು ಮಂಗಳವಾರ ನ್ಯಾಯಾಲಯಕ್ಕೆ ಹಾಜರುಪಡಿಸಲಾಗಿತ್ತು. ಮಧ್ಯಂತರ ಜಾಮೀನು ಕೋರಿ ಸಲ್ಲಿಸಿದ್ದ ಅರ್ಜಿ ವಿಚಾರಣೆ ಸಂಬಂಧ ವಾದ ಮಂಡಿಸಿದ ಮುನಿರತ್ನ ಪರ ವಕೀಲ ಅಶೋಕ್ ಹಾರನಹಳ್ಳಿ, ರಿಮ್ಯಾಂಡ್ ಅರ್ಜಿಯನ್ನು ಆರೋಪಿ ಪರ ವಕೀಲರಿಗೆ ನೀಡಬೇಕೆಂದು ಸುಪ್ರೀಂಕೋರ್ಟ್ ಆದೇಶವಿದ್ದರೂ ತನಿಖಾಧಿಕಾರಿಗಳು ರಿಮ್ಯಾಂಡ್ ಅರ್ಜಿ ಸಲ್ಲಿಸಿಲ್ಲ. ಪ್ರಕರಣ ಸಂಬಂಧ ಸೆ.13 ರ ರಾತ್ರಿ ಪ್ರತ್ಯೇಕ ಎಫ್‌ಐಆರ್ ದಾಖಲಿಸಿಕೊಳ್ಳುತ್ತಿದ್ದಂತೆ ವಿಚಾರಣೆ ನಡೆಸದೆ ತಿರುಪತಿಗೆ ಹೋಗುತ್ತಿದ್ದಾಗ ಪೊಲೀಸರು ಏಕಾಏಕಿ ಬಂಧಿಸಿದ್ದಾರೆ ಎಂದು ವಾದಿಸಿದರು. ಇದಕ್ಕೂ ಮುನ್ನ ಜಾಮೀನು ಅರ್ಜಿಗೆ ಸರಕಾರಿ ವಕೀಲ ಆಕ್ಷೇಪಣೆ ಸಲ್ಲಿಸಲು ಕಾಲಾವಕಾಶ ಕೋರಿದರು. ದೂರುದಾರರ ಪರ ವಕೀಲರು ಕೂಡ ಆಕ್ಷೇಪಣೆ ಸಲ್ಲಿಸಲು ಕಾಲಾವಕಾಶ ಕೋರಿದರು. ವಾದ ಆಲಿಸಿದ ಪೀಠ, 14 ದಿನಗಳ ಕಾಲ ನ್ಯಾಯಾಂಗ ಬಂಧನಕ್ಕೆ ಒಳಪಡಿಸಿ ಜಾಮೀನು ಅರ್ಜಿ ವಿಚಾರಣೆಯನ್ನು ಬುಧವಾರಕ್ಕೆ ಮುಂದೂಡಿದೆ.

ಆತಿಶಿ ಮರ್ಲೆನಾ ದೆಹಲಿ ಹೊಸ ಸಿಎಂ

← ಮೊದಲಪುಟದಿಂದ

ಅವರ ಮಾರ್ಗದರ್ಶನದಲ್ಲಿ ಕಾರ್ಯನಿರ್ವಹಿಸುತ್ತೇನೆ. ನಮಗೆ ಕೇಜ್ರಿವಾಲರೇ ಸಿಎಂ ಎಂದು ಸ್ಪಷ್ಟಪಡಿಸಿದರು.

ಕೇಜ್ರಿವಾಲ್ ರಾಜೀನಾಮೆ: ಆತಿಶಿ ಅವರನ್ನು ದೆಹಲಿ ನೂತನ ಸಿಎಂ ಆಗಿ ಆಯ್ಕೆಮಾಡಿದ ಬೆನ್ನಲ್ಲೇ ಮಂಗಳವಾರ ಸಂಜೆ ಲೆಫ್ಟಿನೆಂಟ್ ಗವರ್ನರ್ ವಿ.ಕೆ. ಸಕ್ಸೇನಾ ಅವರಿಗೆ ಅರವಿಂದ ಕೇಜ್ರಿವಾಲ್ ರಾಜೀನಾಮೆ ಸಲ್ಲಿಸಿದರು. ಇದೇ ವೇಳೆ, ನೂತನ ಸರಕಾರ ರಚನೆ ಸಂಬಂಧ ಹಕ್ಕು ಮಂಡಿಸಲಾಗಿದೆ. ಆತಿಶಿ ಆಯ್ಕೆ ಸಂಬಂಧ ಆಪ್ ಶಾಸಕಾಂಗ ಪಕ್ಷದ ಸಭೆ ಕೈಗೊಂಡ ನಿರ್ಣಯದ ಪ್ರಸ್ತಾವನೆಯನ್ನು ಉಪರಾಜ್ಯಪಾಲರು ರಾಷ್ಟ್ರಪತಿ ದ್ರೌಪದಿ ಮುರ್ಮು ಅವರಿಗೆ ರವಾನಿಸಲಿದ್ದಾರೆ. ರಾಷ್ಟ್ರಪತಿ ಭವನದಿಂದ ಅಧಿಸೂಚನೆ ಹೊರಬಿದ್ದ ನಂತರ ಇನ್ನು 3-4 ದಿನದಲ್ಲಿ ನೂತನ ಸಿಎಂ ಪ್ರಮಾಣವಚನ ಸ್ವೀಕಾರ ನಡೆಯಲಿದೆ ಎಂದು ಮೂಲಗಳು ತಿಳಿಸಿವೆ.

ಎರಡು ಚೀಲದಲ್ಲಿ ಬಟ್ಟೆ, ತಿನಿಸು ತಂದಿದ್ದ ವಿಜಯಲಕ್ಷ್ಮೀ

ದರ್ಶನ್ ಭೇಟಿಯಾದ ಪತ್ನಿ, ಧನ್ವೀರ್

ಬಳ್ಳಾರಿ: ಕೊಲೆ ಪ್ರಕರಣದ ಆರೋಪಿ ದರ್ಶನ್ ಅವರನ್ನು ಪತ್ನಿ ವಿಜಯಲಕ್ಷ್ಮಿ, ನಟ ಧನ್ವೀರ್, ಸಂಬಂಧಿಕರಾದ ಹೇಮಂತ್ ಮತ್ತು ಸುಶಾಂತ್ ನಾಯ್ಡು ಮಂಗಳವಾರ ಸಂಜೆ 4.30 ರಿಂದ 5ರವರೆಗೆ ಬಳ್ಳಾರಿ ಕಾರಾಗೃಹದಲ್ಲಿ ಭೇಟಿಯಾದರು.

ವಿಜಯಲಕ್ಷ್ಮೀ ಅವರು ಬಟ್ಟೆ ಮತ್ತು ತಿಂಡಿ ತಿನಿಸುಗಳು ಇದ್ದ ಎರಡು ಚೀಲಗಳನ್ನು ತಂದಿದ್ದರು. ಸಂದರ್ಶಕರ ಕೊಠಡಿಗೆ ಬರುವಾಗ ಮತ್ತು ಮರಳುವಾಗ, ದರ್ಶನ್ ಕೈಯಲ್ಲಿ ಎರಡು ಚೀಲಗಳಿದ್ದವು. ಬಳ್ಳಾರಿ ಕಾರಾಗೃಹದಲ್ಲಿ ರಕ್ತಸಂಬಂಧಿಗಳು ಹೊರತುಪಡಿಸಿ ಬೇರೆಯವರನ್ನು ಭೇಟಿಯಾ ಗಲು ದರ್ಶನ್‌ಗೆ ಅವಕಾಶವಿಲ್ಲ ಎಂದು ಕಾರಾಗೃಹ ಉತ್ತರ ವಲಯದ ಡಿಐಜಿ ಟಿ.ಪಿ.ಶೇಷ ಹೇಳಿದ್ದರು. ಆದರೆ, ಜೈಲು ಮಾರ್ಗಸೂಚಿಯಂತೆ ಸ್ನೇಹಿತರು, ಹಿತೈಷಿಗಳ ಭೇಟಿಗೆ ಅವಕಾಶ ನೀಡಲು ನ್ಯಾಯಾಲಯ ಮಂಗಳವಾರ ತಿಳಿಸಿದ ಹಿನ್ನೆಲೆಯಲ್ಲಿ ಧನ್ವೀರ್ ಮತ್ತು ಹೇಮಂತ್ ಅವರಿಗೆ ಭೇಟಿಯಾಗಲು ಸಾಧ್ಯವಾಯಿತು.

ಕಾನೂನು ಹೋರಾಟದ ಬಗ್ಗೆ ಚರ್ಚೆ: ಜಾಮೀನು ಅರ್ಜಿ ಸಲ್ಲಿಕೆ ಸೇರಿ ಕಾನೂನು ಹೋರಾಟದ ಬಗ್ಗೆ ಪತ್ನಿ ಜತೆಗೆ ದರ್ಶನ್ ಚರ್ಚಿಸಿದರು. ಭೇಟಿಗೆ ತಾಯಿ ಬಾರದಿರುವ ಬಗ್ಗೆ ದರ್ಶನ್ ಬೇಸರ ವ್ಯಕ್ತಪಡಿಸಿದರು ಎಂಬುದು ಗೊತ್ತಾಗಿದೆ.

ಟ್ವೀಟೂ-ಖಾರಾ

ಬಿಜೆಪಿ, ಕರ್ನಾಟಕ

ಕಲ್ಯಾಣ ಕರ್ನಾಟಕವನ್ನು ಸಂಪೂರ್ಣ ಕಡೆಗಣಿಸಿ ಆ ಭಾಗದ ಜನರಿಗೆ ಮಣ್ಣೆರಚಿದ್ದೇ ಕಾಂಗ್ರೆಸ್ ಸರಕಾರದ ಸಾಧನೆ. ಸ್ವಜನಪಕ್ಷಪಾತ ಹಾಗೂ ಭ್ರಷ್ಟಾಚಾರದಲ್ಲಿ ಮುಳುಗಿ ಕಲ್ಯಾಣ ಕರ್ನಾಟಕದ ಜನರ ಆರೋಗ್ಯ, ಶಿಕ್ಷಣ,ಸಾಕ್ಷರತೆ, ಆರ್ಥಿಕತೆ ಸುಧಾರಿಸುವಲ್ಲಿ ಸಂಪೂರ್ಣ ವಿಫಲವಾಗಿದೆ. ಚುನಾವಣೆಗೂ ಮುನ್ನ ಕೊಟ್ಟಮಾತು ತಪ್ಪಿರುವ ಮುಖ್ಯಮಂತ್ರಿ ಸಿದ್ದರಾಮಯ್ಯನವರು ಕಾಟಾಚಾರಕ್ಕೆ ಈ ಭಾಗದಲ್ಲಿ ಸಚಿವ ಸಂಪುಟ ಸಭೆ ನಡೆಸಿದ್ದಾರೆ. ಸಿದ್ದರಾಮಯ್ಯನವರೇ ಮೊಸಳೆ ಕಣ್ಣೀರು ಸುರಿಸುವ ಮುನ್ನ ಕಲ್ಯಾಣ ಕರ್ನಾಟಕ ಜನರ ಪ್ರಶ್ನೆಗಳಿಗೆ ಉತ್ತರಿಸಿ.

ಮನು ಒಡೆಯರ್, ಬೆಂಗಳೂರು

ರಾಷ್ಟ್ರೀಯ ನಿರುದ್ಯೋಗ ದಿನಾಚರಣೆಯ ಶುಭಾಶಯಗಳು. ವಾರ್ಷಿಕ 2 ಕೋಟಿ ಉದ್ಯೋಗ ಸೃಷ್ಟಿ...!!! ಕೇಂದ್ರದ ಮೋದಿ ಸರಕಾರದಲ್ಲಿ ಗ್ಯಾರಂಟಿ ನಿರುದ್ಯೋಗ..!!!

ಕಲ್ಯಾಣ ಕರ್ನಾಟಕ ಉತ್ಸವ ದಿನಾಚರಣೆ | ಹಿಂದುಳಿದ ಪ್ರದೇಶ ಜನರ ತಲಾದಾಯ ವೃದ್ಧಿಗೆ ಶ್ರಮ

ಕಲಬುರಗಿಯನ್ನು ಸ್ಮಾರ್ಟ್ ಸಿಟಿಯಾಗಿಸುವುದಾಗಿ ಮುಖ್ಯಮಂತ್ರಿ ಸಿದ್ದರಾಮಯ್ಯ ಹೇಳಿಕೆ

ಕಲ್ಯಾಣ ಕರ್ನಾಟಕ ಅಭಿವೃದ್ಧಿಗೆ ಬದ್ಧ

ಕಲಬುರಗಿ: ಕಲ್ಯಾಣ ಕರ್ನಾಟಕ ಭಾಗ ಅಭಿವೃದ್ಧಿಯಾಗದ ಹೊರತು ರಾಜ್ಯದ ಅಭಿವೃದ್ಧಿ ಅಸಾಧ್ಯ. ಇಲ್ಲಿನ ಜನರ ತಲಾದಾಯ ವೃದ್ಧಿ ಜತೆಗೆ ಶಿಕ್ಷಣ, ಆರೋಗ್ಯ, ಮೂಲಸೌಕರ್ಯ ಸುಧಾರಣೆ ಸೇರಿದಂತೆ ಸರ್ವಾಂಗೀಣ ಅಭಿವೃದ್ಧಿ ನಮ್ಮ ಗುರಿಯಾಗಿದೆ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಹೇಳಿದರು.

ಕಲ್ಯಾಣ ಕರ್ನಾಟಕ ಉತ್ಸವ ದಿನಾಚರಣೆ ಹಿನ್ನೆಲೆಯಲ್ಲಿ ಮಂಗಳವಾರ ನಗರದ ಪರೇಡ್ ಮೈದಾನದಲ್ಲಿ ಪೊಲೀಸ್ ಪಡೆಗಳಿಂದ ಗೌರವ ವಂದನೆ ಸ್ವೀಕರಿಸಿ ಮಾತನಾಡಿದ ಅವರು, ಕಲ್ಯಾಣ ಕರ್ನಾಟಕದ ಸಮಗ್ರ ಅಭಿವೃದ್ಧಿಗೆ ಸರಕಾರ ಬದ್ಧವಾಗಿದ್ದು, 1,685 ಕೋಟಿ ರು.ವೆಚ್ಚದಲ್ಲಿ ಕಲಬುರಗಿಯನ್ನು 'ಸ್ಮಾರ್ಟ್ ಸಿಟಿ' ಯನ್ನಾಗಿ ಅಭಿವೃದ್ಧಿಪಡಿಸಲಾಗುವುದು. ಇದಕ್ಕೆ ಸರಕಾರವೇ ಸಂಪೂರ್ಣ ವೆಚ್ಚ ಭರಿಸುವ ಮೂಲಕ ಸ್ಮಾರ್ಟ್‌ಸಿಟಿಯನ್ನಾಗಿ ಮಾಡಲಿದೆ ಎಂದು ಘೋಷಿಸಿದರು.

ಮೆಗಾ ಟೆಕ್ಸ್ ಟೈಲ್ಸ್: ಕಲಬುರಗಿ ಹೊರವಲಯದ ನದಿಸಿನ್ನೂರು ಬಳಿ ಕೇಂದ್ರ ಹಾಗೂ ರಾಜ್ಯ ಸರಕಾರಗಳ ಸಹಭಾಗಿತ್ವದಲ್ಲಿ ಮೆಗಾ ಟೆಕ್ಸ್ ಟೈಲ್ ಪಾರ್ಕ್ ನಿರ್ಮಿಸಲಾಗುತ್ತಿದೆ. ಇದಕ್ಕಾಗಿ ಬಜೆಟ್ ನಲ್ಲಿ 50 ಕೋಟಿ ರು. ಒದಗಿಸಲಾಗಿದೆ. ರಾಯಚೂರಿನಲ್ಲಿ ಸಾರ್ವಜನಿಕ- ಖಾಸಗಿ ಸಹಭಾಗಿತ್ವದಲ್ಲಿ ಟೆಕ್ಸ್ ಟೈಲ್ ಪಾರ್ಕ್ ನಿರ್ಮಿಸಲಾಗುವುದು. ಬಸವ ಕಲ್ಯಾಣದಲ್ಲಿ ಅನುಭವ ಮಂಟಪ ನಿರ್ಮಾಣಕ್ಕೆ ಅನುದಾನ ಒದಗಿಸಿದ್ದೇವೆ. ರಾಯಚೂರಿನಲ್ಲಿ ಅಖಿಲ ಭಾರತ ವೈದ್ಯಕೀಯ ವಿಜ್ಞಾನ ಸಂಸ್ಥೆಯನ್ನು ಸ್ಥಾಪಿಸಲು ರಾಜ್ಯ ಸರಕಾರ ಎಲ್ಲ ನೆರವನ್ನು ಒದಗಿಸಲು ಸಿದ್ಧವಿದೆ ಎಂದು ಸಿದ್ದರಾಮಯ್ಯ ತಿಳಿಸಿದರು.

ವಾರ್ಷಿಕ 5 ಸಾವಿರ ಕೋಟಿ ಅನುದಾನ: ಹೈದರಾಬಾದ್ ನಿಜಾಮರ ಆಡಳಿತದಿಂದ ಈ ಭಾಗದ ಜನತೆಗೆ ಒಂದು ವರ್ಷ ತಡವಾಗಿ ವಿಮೋಚನೆ ದೊರಕಿತು. ಆಗಿನಿಂದಲೂ ಆರ್ಥಿಕವಾಗಿ ಹಿಂದುಳಿದ ಈ ಭಾಗಕ್ಕೆ ಮಲ್ಲಿಕಾರ್ಜುನ ಖರ್ಗೆ, ಎನ್. ಧರಂಸಿಂಗ್ ಅವರ ಪ್ರಯತ್ನದ ಫಲವಾಗಿ 371 (ಜೆ) ಸಂವಿಧಾನ ತಿದ್ದುಪಡಿ ಮೂಲಕ ಕೇಂದ್ರ ಸರಕಾರ ಮೀಸಲು ಒದಗಿಸಿದೆ. ಅದರ ಭಾಗವಾಗಿ ರಚನೆಯಾದ ಕಲ್ಯಾಣ ಕರ್ನಾಟಕ ಪ್ರದೇಶ ಅಭಿವೃದ್ಧಿ ಮಂಡಳಿಗೆ ನಮ್ಮ ಸರಕಾರ ಪ್ರತಿವರ್ಷ 5000 ಕೋಟಿ ಅನುದಾನ ನೀಡುತ್ತಿದೆ ಎಂದರು. ಮಂಡಳಿಯ 262 ಕೋಟಿ ರು. ನೆರವಿನೊಂದಿಗೆ ಕಲಬುರಗಿಯಲ್ಲಿ ಸುಸಜ್ಜಿತ ಜಯದೇವ ಹೃದ್ರೋಗ ವಿಜ್ಞಾನ ಸಂಸ್ಥೆಯ ಕಟ್ಟಡದ ನಿರ್ಮಾಣ ಪೂರ್ಣಗೊಳ್ಳುವ ಹಂತದಲ್ಲಿದೆ. ಕೆಕೆಆರ್ ಡಿಬಿಗೆ ಹತ್ತು ವರ್ಷಗಳಲ್ಲಿ 19,778 ಕೋಟಿ ರು. ಹಂಚಿಕೆ ಮಾಡಿ, 13.229 ಕೋಟಿ ರು.ಬಿಡುಗಡೆ ಮಾಡಲಾಗಿದೆ. ಈ ಪೈಕಿ ಈವರೆಗೆ 11.174 ಕೋಟಿ ರು. ಖರ್ಚು ಮಾಡಲಾಗಿದೆ. ಶೇ. 85ರಷ್ಟು ಆರ್ಥಿಕ ಪ್ರಗತಿ ಸಾಧಿಸಲಾಗಿದೆ ಎಂದು ಸಿಎಂ ವಿವರಿಸಿದರು.

ಗ್ಯಾರಂಟಿ ಯೋಜನೆಗಳ ಮೂಲಕ ನೆರವು: ರಾಜ್ಯ ಸರಕಾರದ ಶಕ್ತಿ ಯೋಜನೆಯಡಿ ಕಲ್ಯಾಣ ಕರ್ನಾಟಕದ 7 ಜಿಲ್ಲೆಗಳಲ್ಲಿ ಆಗಸ್ಟ್ ತಿಂಗಳ ಅಂತ್ಯಕ್ಕೆ ದಿನನಿತ್ಯ 17.11 ಲಕ್ಷದಂತೆ 41.45 ಕೋಟಿ ಟ್ರಿಪ್‌ಗಳಲ್ಲಿ ಮಹಿಳೆಯರು ಉಚಿತ ಪ್ರಯಾಣದ ಸೌಲಭ್ಯ ಪಡೆದಿದ್ದಾರೆ. ಇದರ ವೆಚ್ಚ 1,387 ಕೋಟಿ ರು.ಗಳನ್ನು ನಮ್ಮ ಸರಕಾರ ಭರಿಸುತ್ತಿದೆ. ಅನ್ನಭಾಗ್ಯ ಯೋಜನೆಯಡಿ 10 ಕೆ.ಜಿ. ಆಹಾರ ಧಾನ್ಯಗಳನ್ನು 22.59 ಲಕ್ಷ ಪಡಿತರ ಚೀಟಿಗಳ ಕುಟುಂಬದ ಸದಸ್ಯರಿಗೆ 1,551 ಕೋಟಿ ರು. ಹಣ ಪಾವತಿಸಿದರೆ, ಗೃಹಜ್ಯೋತಿ ಯೋಜನೆಯಡಿ ಕಲ್ಯಾಣ ಕರ್ನಾಟಕ ಭಾಗದ ಜೆಸ್ಕಾಂ ವ್ಯಾಪ್ತಿಯಲ್ಲಿ 21.88 ಲಕ್ಷ ಗ್ರಾಹಕರು ಅನುಕೂಲ ಪಡೆದಿದ್ದಾರೆ. ಇದಕ್ಕಾಗಿ ಸರ್ಕಾರ 1,104 ಕೋಟಿ ರು. ಜೆಸ್ಕಾಂಗೆ ಸಬ್ಸಿಡಿ ಪಾವತಿಸಿದೆ ಎಂದರು.

ಈ ಸಂದರ್ಭದಲ್ಲಿ ಸಚಿವರಾದ ಜಿ.ಪರಮೇಶ್ವರ್, ಮಹದೇವಪ್ಪ, ಎಚ್.ಕೆ ಪಾಟೀಲ್, ಕೆ.ಎಚ್. ಮುನಿಯಪ್ಪ, ಕೆ.ಜೆ.ಜಾರ್ಜ್, ಪ್ರಿಯಾಂಕ್ ಖರ್ಗೆ, ಡಾ. ಎಂ.ಸಿ. ಸುಧಾಕರ್, ಭೈರತಿ ಸುರೇಶ, ಸಂಸದ ರಾಧಾಕೃಷ್ಣ ದೊಡ್ಡಮನಿ, ಶಾಸಕರಾದ ಡಾ.ಅಜಯ್ ಸಿಂಗ್, ಅಲ್ಲಮಪ್ರಭು ಪಾಟೀಲ್, ತಿಪ್ಪಣ್ಣಪ್ಪ ಕಮಕನೂರು ಸೇರಿದಂತೆ ಅನೇಕರು ಇದ್ದರು.

ಕಲ್ಯಾಣ ಕರ್ನಾಟಕ ಉತ್ಸವ ದಿನಾಚರಣೆ ಹಿನ್ನೆಲೆಯಲ್ಲಿ ಕಲಬುರಗಿಯ ಪರೇಡ್ ಮೈದಾನದಲ್ಲಿ ಪೊಲೀಸ್ ಪಡೆಗಳಿಂದ ಸಿಎಂ ಸಿದ್ದರಾಮಯ್ಯ ಗೌರವ ವಂದನೆ ಸ್ವೀಕರಿಸಿದರು.

18 ಮಿನಿ ವಿಧಾನಸೌಧ ನಿರ್ಮಾಣ

ಕಲ್ಯಾಣ ಕರ್ನಾಟಕ ಭಾಗದ 7 ಜಿಲ್ಲೆಗಳ ವ್ಯಾಪ್ತಿಯ 18 ಹೊಸ ತಾಲೂಕುಗಳಲ್ಲಿ ಕಂದಾಯ ಇಲಾಖೆ ಮತ್ತು ಮಂಡಳಿಯ ಸಹಭಾಗಿತ್ವದಲ್ಲಿ ತಾಲೂಕು ಆಡಳಿತ ಭವನಗಳನ್ನು ನಿರ್ಮಿಸಲು ಮಂಡಳಿಯಿಂದ 130 ಕೋಟಿ ರು.ವೆಚ್ಚ ಮಾಡಲಾಗುತ್ತಿದೆ. ರಾಯಚೂರು ಜಿಲ್ಲೆಯ ಚಿಕ್ಕಲಪರ್ವಿ ಹತ್ತಿರ ತುಂಗಭದ್ರಾ ನದಿಗೆ ಅಡಲಾಗಿ ಬ್ರಿಜ್ ಕಂ ಬ್ಯಾರೇಜ್ 397 ಕೋಟಿ ರು. ವೆಚ್ಚದಲ್ಲಿ ನಿರ್ಮಾಣ ಮಾಡಲು ಇತ್ತೀಚೆಗೆ ನಡೆದ ಸಂಪುಟ ಸಭೆಯಲ್ಲಿ ಅನುಮೋದನೆ ನೀಡಲಾಗಿದೆ. ಜತೆಗೆ 7 ಜಿಲ್ಲೆಗಳಲ್ಲಿ 1100 ಅರಿವು ಕೇಂದ್ರಗಳಿದ್ದು, ಇವುಗಳ ಪೈಕಿ 1021 ಗ್ರಂಥಾಲಯಗಳನ್ನು ಡಿಜಿಟಲ್ ಗ್ರಂಥಾಲಯಗಳನ್ನಾಗಿ ಮೇಲ್ದರ್ಜೆಗೇರಿಸಲಾಗಿದೆ. ಉತ್ತಮ ಶಿಕ್ಷಣ ನೀಡುವ ಜತೆಗೆ ಉದ್ಯೋಗಾವಕಾಶ ಸೃಜಿಸುವ ಉದ್ದೇಶದಿಂದ ಉದ್ಯೋಗ ಆವಿಷ್ಕಾರ ಯೋಜನೆಯನ್ನು ರೂಪಿಸಿದ್ದೇವೆ ಎಂದು ಸಿಎಂ ಸಿದ್ದರಾಮಯ್ಯ ತಿಳಿಸಿದರು.

ಕಲ್ಯಾಣ ಕರ್ನಾಟಕದ ಭಾಗದ ಉನ್ನತ ಶಿಕ್ಷಣ, ತಾಂತ್ರಿಕ, ವೈದ್ಯಕೀಯ ಶಿಕ್ಷಣ ಹಾಗೂ ಇತರ ವೃತ್ತಿಪರ ಶಿಕ್ಷಣ ಸಂಸ್ಥೆಗಳಲ್ಲಿ ಶೇ.70 ರಷ್ಟು ಸ್ಥಾನಗಳನ್ನು ಮತ್ತು ರಾಜ್ಯದ ಉಳಿದ ಇತರ ಭಾಗದಲ್ಲಿ ಶೇ.8ರಷ್ಟು ಸ್ಥಾನಗಳನ್ನು ಸ್ಥಳೀಯ ಅಭ್ಯರ್ಥಿಗಳಿಗೆ ಮೀಸಲಿಡಲಾಗಿದೆ.

- ಸಿದ್ದರಾಮಯ್ಯ, ಮುಖ್ಯಮಂತ್ರಿ

ಏಮ್ಸ್‌ಗೆ ಅಗತ್ಯ ನೆರವು

ರಾಯಚೂರಿನಲ್ಲಿ ಏಮ್ಸ್ ಸಂಸ್ಥೆಯನ್ನು ಸ್ಥಾಪಿಸಲು ನಮ್ಮ ಸರಕಾರ ಎಲ್ಲ ನೆರವು ಒದಗಿಸಲು ಸಿದ್ಧವಿದೆ. ಕೇಂದ್ರ ಸರಕಾರ ಕೂಡಲೇ ಏಮ್ಸ್ ಸಂಸ್ಥೆ ಆರಂಭಿಸಲು ಅನುಮೋದನೆ ನೀಡಬೇಕು ಎಂದು ಸಿದ್ದರಾಮಯ್ಯ ಅವರು ಇದೇ ಸಂದರ್ಭದಲ್ಲಿ ಒತ್ತಾಯಿಸಿದರು. ರಾಜ್ಯದಲ್ಲಿ ಈಗಾಗಲೇ ನಾಲ್ಕು ಜಿಲ್ಲೆಗಳಲ್ಲಿ ಹ್ಯೂಮನ್ ಮಿಲ್ಕ್ ಬ್ಯಾಂಕ್ ಘಟಕಗಳನ್ನು ಸ್ಥಾಪಿಸಲಾಗಿದ್ದು, ಪ್ರಸಕ್ತ ಸಾಲಿನಲ್ಲಿ ರಾಯಚೂರು ಮತ್ತು ಬಳ್ಳಾರಿ ಜಿಲ್ಲೆಗಳಲ್ಲಿ ಹೊಸ ಘಟಕ ಸ್ಥಾಪಿಸಲಾಗುವುದು ಎಂದರು.

ಸಮಾಚಾರ ಸಣ್ಣದಲ್ಲ

ಸಂಬಂಧಿಗೆ ಲಿವರ್ ದಾನ: ಉಪನ್ಯಾಸಕಿ ಸಾವು

ಮಂಗಳೂರು: ಇನ್ನೊಬ್ಬರಿಗೆ ಪಿತ್ತಜನಕಾಂಗ ದಾನ ಮಾಡಿದ ಉಪನ್ಯಾಸಕಿಯೊಬ್ಬರು ಕೆಲ ದಿನಗಳ ಬಳಿಕ ಮೃತಪಟ್ಟಿದ್ದಾರೆ. ನಗರದ ಕರಂಗಲ್ಪಾಡಿ ನಿವಾಸಿಯಾಗಿರುವ ಲೆಕ್ಕ ಪರಿಶೋಧಕ ಚೇತನ್ ಕಾಮತ್‌ರ ಪತ್ನಿ ಅರ್ಚನಾ (33) ಮೃತರು. ಅವರು ಬಂಧುವೊಬ್ಬರಿಗೆ ತಮ್ಮ ಪಿತ್ತಜನಕಾಂಗ ದಾನಮಾಡಿದ್ದರು. ಬೆಂಗಳೂರಿನ ಆಸ್ಪತ್ರೆಯೊಂದರಲ್ಲಿ ಅವರ ಪಿತ್ತಜನಕಾಂಗವನ್ನು ತೆಗೆದು, ಇನ್ನೊಬ್ಬರಿಗೆ ಕಸಿ ಮಾಡಲಾಗಿತ್ತು. ಆಸ್ಪತ್ರೆ ಯಲ್ಲಿ ಮೂರು ದಿನಗಳ ವಿಶ್ರಾಂತಿ ಬಳಿಕ ಕರಂಗಲ್ಪಾಡಿಯ ಮನೆಗೆ ಹಿಂತಿರುಗಿದ್ದರು. ಆ ಬಳಿಕ ಅರ್ಚನಾ ಕಾಮತ್ ಆರೋಗ್ಯ ಏರುಪೇರಾಗಿತ್ತು. ಅವರನ್ನು ಬೆಂಗಳೂರಿನ ಆಸ್ಪತ್ರೆಗೆ ಕರೆದೊಯ್ಯುವಾಗ ಬಹು ಅಂಗಾಂಗ ವೈಫಲ್ಯದಿಂದ ಅಸುನೀಗಿದ್ದಾರೆ ಎಂದು ಗೊತ್ತಾಗಿದೆ. ಅರ್ಚನಾ ತವರೂರಾದ ಕುಂದಾಪುರದ ಕೋಟೇಶ್ವರದಲ್ಲಿ ಅಂತ್ಯಕ್ರಿಯೆ ನೆರವೇರಿಸಲಾಗಿದೆ.

ತೊಗರಿ ಬೇಳೆ ವಿತರಣೆಗೆ ಚಿಂತನೆ: ಮುನಿಯಪ್ಪ

ಕಲಬುರಗಿ: ಪಡಿತರದಲ್ಲಿ ತೊಗರಿ ಬೇಳೆ ವಿತರಣೆ ಮಾಡಬೇಕು ಎಂಬುದರ ಬಗ್ಗೆ ಚಿಂತನೆ ನಡೆಸಲಾಗುತ್ತಿದೆ ಎಂದು ಗ್ರಾಹಕರ ಹಾಗೂ ವ್ಯವಹಾರಗಳ ಮತ್ತು ಸಾರ್ವಜನಿಕ ಪಡಿತರ ವಿತರಣಾ ಸಚಿವ ಕೆ.ಎಚ್ ಮುನಿಯಪ್ಪ ಹೇಳಿದರು. ಸುದ್ದಿಗಾರರೊಂದಿಗೆ ಮಾತನಾಡಿ, ಪಡಿತರದಲ್ಲಿ ತೊಗರಿ ಬೇಳೆ ಸೇರಿಸಬೇಕೆಂಬುದು ಬಹಳ ದಿನಗಳ ಬೇಡಿಕೆಯಾಗಿದೆ. ಪಡಿತರದಲ್ಲಿ ಸೇರ್ಪಡೆಯಾದರೆ ರೈತರಿಗೆ ಅನುಕೂಲ ಜತೆಗೆ ಗ್ರಾಹಕರಿಗೂ ಅನುಕೂಲವಾಗಲಿದೆ. ಪ್ರಮುಖವಾಗಿ ವಸತಿ ನಿಲಯಗಳಿಗೆ ಬೇಳೆ ಪೂರೈಕೆಗೂ ಅನುಕೂಲವಾಗುತ್ತದೆ. ಯಾವುದೇ ಅರ್ಹ ಬಿಪಿಎಲ್ ಕಾರ್ಡ್‌ಗಳನ್ನು ರದ್ದು ಮಾಡುತ್ತಿಲ್ಲ. ನಿಯಮಾವಳಿ ಪ್ರಕಾರ ಹೊಸದಾಗಿ ಬಿಪಿಎಲ್ ಕಾರ್ಡ ಪಡೆಯಲು ಸಹ ಯಾವುದೇ ನಿರ್ಬಂಧವಿಲ್ಲ ಎಂದು ಸಚಿವರು ಇದೇ ಸಂದರ್ಭದಲ್ಲಿ ಸ್ಪಷ್ಟಪಡಿಸಿದರು.

ಬೈಕ್‌ಗೆ ಟಿಪ್ಪರ್ ಡಿಕ್ಕಿ: ಮೂವರ ದುರ್ಮರಣ

ಚಾಮರಾಜನಗರ: ಟಿಪ್ಪರ್ ಲಾರಿ ಹರಿದು ಕೇರಳ ಮೂಲದ ಮೂವರು ದುರ್ಮರಣಕ್ಕೀಡಾದ ಘಟನೆ ಪಟ್ಟಣದ ಹೊರ ವಲಯದ ಕೇರಳ ರಸ್ತೆಯಲ್ಲಿ ಮಂಗಳವಾರ ಮಧ್ಯಾಹ್ನ(ಸೆ.17) ನಡೆದಿದೆ. ಕೇರಳ ಮೂಲದ ಪತಿ, ಪತ್ನಿ ಮತ್ತು ಮಗ ಸೇರಿ ಒಂದೇ ಬೈಕ್ ನಲ್ಲಿ ಕೇರಳದಿಂದ ಗುಂಡ್ಲುಪೇಟೆ ಕಡೆಗೆ ಬೈಕ್ ನಲ್ಲಿ ಬರುತ್ತಿದ್ದರು ಎನ್ನಲಾಗುತ್ತಿದ್ದು, ಮೃತರ ಗುರುತು ಇನ್ನೂ ಪತ್ತೆಯಾಗಿಲ್ಲ. ಕೂತನೂರು ಗುಡ್ಡದಿಂದ ಕಲ್ಲು ತುಂಬಿಕೊಂಡು ಬರುತ್ತಿದ್ದ ಟಿಪ್ಪರ್ ಲಾರಿಯನ್ನು ಚಾಲಕ ಕುಡಿದ ಮತ್ತಿನಲ್ಲಿ ಚಾಲನೆ ಮಾಡಿಕೊಂಡು ಬರುತ್ತಿದ್ದ. ಆತನ ಅಜಾಗರೂಕತೆಯಿಂದಲೇ ಮುಂದೆ ಹೋಗುತ್ತಿದ್ದ ಬೈಕ್ ಗೆ ಟಿಪ್ಪರ್ ಡಿಕ್ಕಿ ಹೊಡೆದಿದೆ. ಬೈಕ್ ಸವಾರನ ಮೇಲೆ ಹರಿದು ದೇಹ ರಸ್ತೆಯಲ್ಲೇ ಬಿದ್ದಿದ್ದು, ಇನ್ನಿಬ್ಬರು ಲಾರಿ ಅಡಿಯಲ್ಲಿ ಬೈಕ್ ಸಮೇತ ಸಿಲುಕಿಕೊಂಡಿದ್ದರೂ ಸಹ 300 ಮೀಟರ್ ನಷ್ಟು ಎಳೆದುಕೊಂಡು ಬಂದಿದೆ. ಘಟನಾ ಸ್ಥಳಕ್ಕೆ ಗುಂಡ್ಲುಪೇಟೆ ಪೊಲೀಸರು ಭೇಟಿ ನೀಡಿ ಪರಿಶೀಲನೆ ನಡೆಸಿದರು.

{ಸಿ.ಟಿ.ರವಿ} ಮಾಜಿ ಸಚಿವ

ರಾಜ್ಯದಲ್ಲಿ ಮುನಿರತ್ನಗೆ ಒಂದು ಕಾನೂನು, ಒಂದು ನ್ಯಾಯ. ಚನ್ನಾರೆಡ್ಡಿ ಪಾಟೀಲ್, ಚಲುವರಾಯಸ್ವಾಮಿಗೆ ಬೇರೆ ನ್ಯಾಯಾನಾ?. ಚನ್ನಾರೆಡ್ಡಿ ಪಾಟೀಲ್ ಅಕ್ರಮ ಮಾಡಿದರೆ ಎಫ್ಐಆರ್ ಆಗಲ್ಲ. ಆದರೆ, ಮುನಿರತ್ನ ಮೇಲೆ ಬಂದರೆ ಎಫ್ಐಆರ್ ಆಗಿ, ಬಂಧನ ಕೂಡ ಮಾಡ್ತಾರೆ. ಎಲ್ಲರಿಗೂ ಒಂದೇ ಕಾನೂನು, ಒಂದೇ ನ್ಯಾಯ ಇರಬೇಕು. ಸತ್ಯಾಸತ್ಯತೆ ಹೊರಗೆ ಬರಲಿ.

ಕೆಕೆಆರ್‌ಡಿಬಿ ಅನುದಾನಕ್ಕಾಗಿ ಕೇಂದ್ರದ ಬಳಿ ನಿಯೋಗ

ಕಲಬುರಗಿ: ಕಲ್ಯಾಣ ಕರ್ನಾಟಕ ಪ್ರದೇಶಾಭಿವೃದ್ಧಿ ಮಂಡಳಿಗೆ ಕೇಂದ್ರದಿಂದಲೂ ಅನುದಾನ ನೀಡುವಂತೆ ಕೋರಿ ಕೇಂದ್ರ ಸರಕಾರದ ಬಳಿಗೆ ನಿಯೋಗ ಕರೆದುಕೊಂಡು ಹೋಗಲಾಗುವುದು ಎಂದು ಮಂಡಳಿ ಅಧ್ಯಕ್ಷ ಡಾ. ಅಜಯಸಿಂಗ್ ಹೇಳಿದರು.

ಸುದ್ದಿಗಾರರೊಂದಿಗೆ ಮಾತನಾಡಿ, ಸಂಪುಟ ಸಭೆ ಮುಂಚೆ ಮುಖ್ಯ ಮಂತ್ರಿ ಸಿದ್ದರಾಮಯ್ಯ ಅವರ ಜತೆ ಚರ್ಚಿಸಿ ಕೆಕೆಆರ್‌ಡಿಬಿ ಗೆ ಕೇಂದ್ರದಿಂದಲೂ ಅನುದಾನ ದೊರಕುವ ನಿಟ್ಟಿನಲ್ಲಿ ನಿಯೋಗ ಹೋಗಬೇಕೆಂದು ಪ್ರಸ್ತಾಪಿಸಲಾಗಿದ್ದಕ್ಕೆ ಸಿಎಂ ಸಮ್ಮತಿಸಿದ್ದು, ಆದಷ್ಟು ಕೇಂದ್ರದ ಬಳಿ ನಿಯೋಗ ಹೋಗೋಣ ಎಂದಿದ್ದಾರೆ ಎಂದು ಡಾ. ಅಜಯಸಿಂಗ್ ತಿಳಿಸಿದರು. ರಾಜ್ಯ ಸರಕಾರದಿಂದ 5000 ಕೋಟಿ ರು. ಅನುದಾನ ನೀಡುವಂತೆ ಕೇಂದ್ರದಿಂದಲೂ ಅನುದಾನ ನೀಡಿದಲ್ಲಿ ಕಕ ಭಾಗದ ಸಮಗ್ರ ಅಭಿವೃದ್ಧಿ ಗೆ ಪೂರಕವಾಗುತ್ತದೆ. 371 (ಜೆ) ವಿಧಿ ತಿದ್ದುಪಡಿಯ ಮೂಲಕ ಜಾರಿಯಾಗಿದ್ದೇ ಕೇಂದ್ರ ಸರಕಾರದಿಂದ. ಹೀಗಾಗಿ ಕೇಂದ್ರ ಸರಕಾರ ದಿಂದಲೂ ಅನುದಾನ ದೊರಕುವುದು ಸಮಂಜಸವಾಗಿದೆ. ಕೇಂದ್ರದ ಬಳಿ ನಿಯೋಗ ಹೋಗಬೇಕೆಂಬುದು ಬಹಳ ದಿನಗಳ ಪ್ರಸ್ತಾಪವಿತ್ತು. ಸಚಿವ ಸಂಪುಟದಲ್ಲಿ ಕೇಂದ್ರ ದಿಂದಲೂ ಅನುದಾನ ನೀಡುವಂತೆ ವಿಷಯ ಪ್ರಸ್ತಾಪ ಜತೆಗೆ ನಿಯೋಗ ಹೋಗುವ ಕುರಿತಾಗಿ ಸಿಎಂ ಸ್ಪಷ್ಟ ಭರವಸೆ ನೀಡಿದ್ದಾರೆ ಎಂದು ಡಾ.ಅಜಯಸಿಂಗ್ ವಿವರಣೆ ನೀಡಿದರು.

ಕಲಬುರಗಿ ನಗರದ ಪೊಲೀಸ್ ಪರೇಡ್ ಮೈದಾನದಲ್ಲಿ ಮಂಗಳವಾರ ನಡೆದ ಕಲ್ಯಾಣ ಕರ್ನಾಟಕ ಉತ್ಸವ ದಿನಾಚರಣೆ ಸಮಾರಂಭದಲ್ಲಿ ಕಲಬುರಗಿ ಜಿಲ್ಲೆಯ 1,541.33 ಕೋಟಿ ರು. ಗಳ ಸೇರಿದಂತೆ ಕಲ್ಯಾಣ ಕರ್ನಾಟಕ ವಿಭಾಗದ 1,819.20 ಕೋಟಿ ರು.ಬೃಹತ್ ಮೊತ್ತದ ಅಭಿವೃದ್ಧಿ ಕಾಮಗಾರಿಗಳಿಗೆ ಮುಖ್ಯಮಂತ್ರಿ ಸಿದ್ದರಾಮಯ್ಯ ಚಾಲನೆ ನೀಡಿದರು.

ಮಹಿಳಾ ಪದವಿ ಕಾಲೇಜು ಸ್ಥಾಪನೆಗೆ ಅಸ್ತು

ಕಲಬುರಗಿ: ಐತಿಹಾಸಿಕ ವಿಶೇಷ ಸಂಪುಟ ಸಭೆಯಲ್ಲಿ ಕರ್ನಾಟಕ ವಕ್ಫ್ ಬೋರ್ಡ್ ವತಿಯಿಂದ ರಾಜ್ಯದ ಹದಿನೈದು ಜಿಲ್ಲೆಗಳಲ್ಲಿ ಮಹಿಳಾ ಪದವಿ ಪೂರ್ವ ಕಾಲೇಜು ಸ್ಥಾಪನೆ ಗೆ ಅನುಮೋದನೆ ದೊರೆತಿದೆ ಎಂದು ಅಲ್ಪಸಂಖ್ಯಾತರ ಕಲ್ಯಾಣ ಹಾಗೂ ವಕ್ಫ್ ಸಚಿವ ಜಮೀರ್ ಅಹಮದ್ ಖಾನ್ ತಿಳಿಸಿದ್ದಾರೆ. ಸಂಪುಟ ಸಭೆ ನಂತರ ಪತ್ರಿಕಾ ಹೇಳಿಕೆ ನೀಡಿರುವ ಅವರು, ಮುಖ್ಯಮಂತ್ರಿ ಸಿದ್ದರಾಮಯ್ಯ ಹಾಗೂ ಉಪ ಮುಖ್ಯಮಂತ್ರಿ ಡಿ.ಕೆ ಶಿವಕುಮಾರ್ ಅಧ್ಯಕ್ಷತೆಯಲ್ಲಿ ನಡೆದ ಸಂಪುಟ ಸಭೆಯಲ್ಲಿ 47.76 ಕೋಟಿ ರು. ವೆಚ್ಚದಲ್ಲಿ 15 ಮಹಿಳಾ ಪದವಿ ಪೂರ್ವ ಕಾಲೇಜು ಸ್ಥಾಪನೆಗೆ ಅನುಮೋದನೆ ದೊರೆತಿದೆ.

ನಾಗಮಂಗಲ: ಯಾರನ್ನೂ ರಕ್ಷಿಸುವ ಪ್ರಶ್ನೆಯೇ ಇಲ್ಲ, ತಪ್ಪಿತಸ್ಥರ ವಿರುದ್ಧ ಕಠಿಣ ಕ್ರಮ | ಗಲಭೆ ಪ್ರಕರಣದ ಬಗ್ಗೆ ವಿವಿಧ ಸಚಿವರ ಖಡಕ್ ಎಚ್ಚರಿಕೆ, ಬಿಜೆಪಿ ವಿರುದ್ಧ ಕಿಡಿಕಾರಿದ ಕೈ ನಾಯಕರು

ಷಡ್ಯಂತ್ರ ಅವಶ್ಯಕತೆ ಇಲ್ಲ

ಕಲಬುರಗಿ: ಕಾಂಗ್ರೆಸ್ ಪಕ್ಷಕ್ಕೆ ಷಡ್ಯಂತ್ರ ಮಾಡುವ ಅವಶ್ಯಕತೆ ಇಲ್ಲ. ಬಿಜೆಪಿ ರೀತಿ ಕಾಂಗ್ರೆಸ್ ಷಡ್ಯಂತ್ರ ಮಾಡಿದರೆ, ಕರ್ನಾಟಕದ ಜೈಲುಗಳು ಸಾಕಾಗುವುದಿಲ್ಲ ಎಂದು ಸಚಿವೆ ಲಕ್ಷ್ಮೀ ಹೆಬ್ಬಾಳ್ಕರ್ ಬಿಜೆಪಿ ಆರೋಪಕ್ಕೆ ತಿರುಗೇಟು ನೀಡಿದರು. ಬಿಜೆಪಿ ಶಾಸಕ ಮುನಿರತ್ನ ಬಂಧನ ಕಾಂಗ್ರೆಸ್ ಷಡ್ಯಂತ್ರ ಎಂಬ ಬಿಜೆಪಿ ಆರೋಪದ ಕುರಿತು ಮಾತನಾಡಿ, ಷಡ್ಯಂತ್ರ, ಸೇಡಿನ ರಾಜಕಾರಣ ಮಾಡುವುದು ಬಿಜೆಪಿಯವರ ಚಾಳಿಯಾಗಿದೆ. ಮಾಜಿ ಮಂತ್ರಿಯಾದವರು ಮಹಿಳೆಯ ಬಗ್ಗೆ ಕೆಟ್ಟದಾಗಿ ಮಾತನಾಡಿದ್ದಾರೆ. ರಾಜಕಾರಣಿಗಳು ಅಂದ ಮೇಲೆ ನಮ್ಮನ್ನು ಸಾವಿರ ಜನ ಅನುಕರಣೆ ಮಾಡುತ್ತಾರೆ. ಹೆಣ್ಣು ಮಕ್ಕಳ ಬಗ್ಗೆ ಮಾತಾಡುವಾಗ ನಾಲಿಗೆ ಬಿಗಿ ಹಿಡಿದು ಮಾತಾಡಬೇಕು ಎಂದರು.

ಘಟನೆ ನಡೆಯಬಾರದಿತ್ತು

ನಾಗಮಂಗಲ ಗಲಭೆಗೆ ಕೇರಳ ಲಿಂಕ್ ಇದೆ ಎಂಬ ವಿಚಾರಕ್ಕೆ ಪ್ರತಿಕ್ರಿಯಿಸಿದ ಸಚಿವೆ ಹೆಬ್ಬಾಳ್ಕರ್, ರಾಜ್ಯದಲ್ಲಿ 60 ಸಾವಿರ ಗಣೇಶ ಮಂಡಳಿಗಳಿವೆ. ಇಂತಹ ಘಟನೆಗಳು ಆಗಬಾರದು. ಯಾರು ಕೂಡ ಇಂತಹುದಕ್ಕೆ ಬೆಂಬಲ ನೀಡುವುದಿಲ್ಲ ಎಂದ ಅವರು, ಇಂಥಹ ಘಟನೆಗಳನ್ನು ನಾವು ಖಂಡಿಸುತ್ತೇವೆ. ಪಕ್ಷಾತೀತವಾಗಿ ಯಾವುದೇ ಕೋಮಿನವರಾಗಲಿ ನಮ್ಮ ಸರಕಾರ ಕಠಿಣ ಕ್ರಮಕೈಗೊಳ್ಳುತ್ತೆ. ನಾಗಮಂಗಲ ಘಟನೆಯಲ್ಲಿ ಯಾವುದೇ ಲಿಂಕ್ ಇಲ್ಲ. ಪೂರ್ವ ಯೋಜಿತವೂ ಅಲ್ಲ ಎಂದರು.

ಯಾರನ್ನು ರಕ್ಷಿಸುವುದಿಲ್ಲ

ಕಲಬುರಗಿ: ನಾಗಮಂಗಲದಲ್ಲಿನ ಅಹಿತಕರ ಘಟನೆ ಸಂಬಂಧ ಸರಕಾರ ಎಲ್ಲ ಕ್ರಮ ಕೈಗೊಂಡಿದೆ. ಯಾರನ್ನೂ ರಕ್ಷಿಸುವ ಪ್ರಶ್ನೆ ಇಲ್ಲ. ಶಾಸಕ ಮುನಿರತ್ನ ಪ್ರಕರಣ ಕುರಿತು ಹೆಚ್ಚಿನ ಮಾಹಿತಿ ಪಡೆದು ಪ್ರತಿಕ್ರಿಯಿಸುವುದಾಗಿ ಡಿಕೆಶಿ ತಿಳಿಸಿದರು. ಸಚಿವ ಸಂಪುಟದ ಸಭೆಯಲ್ಲಿ ಪಾಲ್ಗೊಳ್ಳಲು ಆಗಮಿಸಿದ ಅವರು ಸುದ್ದಿಗಾರರೊಂದಿಗೆ ಮಾತನಾಡಿ, ಅಮೆರಿಕ ಪ್ರವಾಸದ ವೇಳೆ ನಾನು ಯಾರನ್ನೂ ಭೇಟಿಯಾಗಿಲ್ಲ ಎಂದು ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ ಹೇಳಿದರು. ಖಾಸಗಿಯಾಗಿ ಪ್ರವಾಸಕ್ಕೆ ಹೋಗಿ ಬಂದಿದ್ದೇನೆ. ಪ್ರಮುಖವಾಗಿ ಅಲ್ಲಿನ ಚುನಾವಣೆ ರೀತಿ, ನಿಯಮಗಳ ಮಾಹಿತಿ ಪಡೆದಿದ್ದೇನೆ ಎಂದು ವಿವರಣೆ ನೀಡಿದರು.

ದ್ವೇಷ ಸೃಷ್ಟಿಸಲು ಯತ್ನ

ಕಲಬುರಗಿ: ಗಲಭೆ ಆಗಬೇಕು ಜನರ ಮಧ್ಯೆ ದ್ವೇಷ ಹೆಚ್ಚಿಸಬೇಕು ಎನ್ನುವುದೇ ಬಿಜೆಪಿಯವರ ಉದ್ದೇಶ ವಾಗಿದೆ ಎಂದು ಸಚಿವ ದಿನೇಶ್ ಗುಂಡೂರಾವ್ ಹೇಳಿದರು. ಸುದ್ದಿಗಾರ ರೊಂದಿಗೆ ನಾಗಮಂಗಲ ಪ್ರಕರಣ ಎನ್‌ಐಎಗೆ ನೀಡಬೇಕು ಎಂಬ ಸಿಟಿ ರವಿ ಹೇಳಿಕೆಯನ್ನು ತಳ್ಳಿಹಾಕಿ, ನಮ್ಮ ಪೊಲೀಸರಿಗೆ ಯಾವ ರೀತಿ ನಿಯಂತ್ರಣ ಮಾಡಬೇಕು ಎನ್ನುವುದು ತಿಳಿದಿದೆ ಎಂದು ತಿರುಗೇಟು ನೀಡಿದರು.

ಲಘುವಾಗಿ ಪರಿಗಣಿಸಿಲ್ಲ

ಕಲಬುರಗಿ: ನಾಗಮಂಗಲ ಪ್ರಕರಣದಲ್ಲಿ ಎಲ್ಲವನ್ನೂ ಪರಿಶೀಲಿಸಲಾಗುತ್ತಿದ್ದು, ಯಾರನ್ನೂ ರಕ್ಷಿಸುವುದಾಗಲೀ, ಅನಗತ್ಯವಾಗಿ ಶಿಕ್ಷಿಸುವುದಾಗಲೀ ಮಾಡುವುದಿಲ್ಲ ಎಂದು ಗೃಹ ಸಚಿವ ಜಿ. ಪರಮೇಶ್ವರ್ ಸ್ಪಷ್ಟವಾಗಿ ಹೇಳಿದ್ದಾರೆ. ಕಲಬುರಗಿಯ ರಾಜ್ಯ ಸಚಿವ ಸಂಪುಟದ ಸಭೆಯಲ್ಲಿ ಭಾಗಿಯಾಗಲು ಕಲಬುರಗಿಗೆ ಆಗಮಿಸಿದ ವೇಳೆ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ನಾಗಮಂಗಲ ಪ್ರಕರಣಕ್ಕೆ ಸಂಬಂಧಿಸಿದಂತೆ ಈಗಾಗಲೇ ಇನ್ಸ್‌ಪೆಕ್ಟರ್ ಹಾಗೂ ಡಿವೈಎಸ್ಪಿ ಯನ್ನು ಅಮಾನತು ಮಾಡಲಾಗಿದೆ ಎಂದರು. ಬಿಜೆಪಿಯವರು ಆರೋಪ ಮಾಡುತ್ತಿದ್ದಾರೆ, ಮಾಡಲಿ. ಆದರೂ, ನಾವು ಈ ಪ್ರಕರಣವನ್ನು ಲಘುವಾಗಿ ಪರಿಗಣಿಸುವುದಿಲ್ಲ. ನಾನು ಆಕಸ್ಮಿಕವಾಗಿ ಹೇಳಿರುವ ಮಾತನ್ನು ಹೇಗೆ ಬೇಕಾದರೂ ತಿರುಚುತ್ತಿದ್ದಾರೆ ಎಂದು ಹೇಳಿದರು.

ಫಾಸ್ಟ್‌ಟ್ರ್ಯಾಕ್ ಕೋರ್ಟ್ ಬಗ್ಗೆ ಚರ್ಚೆ

ಶಾಸಕ ಮುನಿರತ್ನ ಬಂಧನ ವಿಚಾರವಾಗಿ ಮಾತನಾಡಿದ ಅವರು, ದೂರು ಕೊಟ್ಟ ಕೂಡಲೇ ಪೊಲೀಸರು ಕ್ರಮ ಕೈಗೊಂಡಿದ್ದಾರೆ. ನಟ ದರ್ಶನ್ ಬಂಧನದ ಸಂದರ್ಭದಲ್ಲಿ ಆದ ಪ್ರಕರಣದ ಬಗ್ಗೆ ವರದಿ ತರಿಸಿಕೊಂಡು ಬೇರೆ ಬೇರೆ ಕಾರಾಗೃಹಗಳಿಗೆ ವರ್ಗಾವಣೆ ಮಾಡಲಾಗಿದೆ. ದರ್ಶನ್ ಫಾಸ್ಟ್ ಟ್ರ್ಯಾಕ್ ಕೋರ್ಟ್ ಬಗ್ಗೆ ಸಚಿವ ಸಂಪುಟ ಸಭೆಯಲ್ಲಿ ವಿಚಾರ ಮಾಡುತ್ತೇವೆ ಎಂದು ಸಚಿವ ಕೃಷ್ಣ ಬೈರೇಗೌಡ ನುಡಿದರು.

ಮುಲಾಜಿಲ್ಲದೆ ಕ್ರಮ

ಕಲಬುರಗಿ: ನಾಗಮಂಗಲ ಗಲಭೆಯಲ್ಲಿ ಕೇರಳ ಮತ್ತು ಬಾಂಗ್ಲಾ ನಂಟು ಎಂಬ ಮಾಜಿ ಶಾಸಕ ಸುರೇಶ್ ಗೌಡ ಹೇಳಿಕೆಗೆ ಕಂದಾಯ ಸಚಿವ ಕೃಷ್ಣ ಬೈರೇಗೌಡ ತೀಕ್ಷ್ಣ ಪ್ರತಿಕ್ರಿಯೆ ನೀಡಿದ್ದಾರೆ. ಪೊಲೀಸ್ ಮತ್ತು ತನಿಖಾ ಸಂಸ್ಥೆ ಸಂಪೂರ್ಣ ಸ್ವಾತಂತ್ರ್ಯದಿಂದ ತನಿಖೆ ನಡೆಸಲಿದೆ ಎಂದು ಹೇಳಿದರು. ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಯಾರೇ ತಪ್ಪು ಮಾಡಿರಲಿ, ಯಾವುದೇ ಮುಲಾಜಿಲ್ಲದೆ ಕ್ರಮಕೈಗೊಳ್ಳಲಾಗುವುದು. ಯಾವುದೇ ಜಾತಿ, ಧರ್ಮ, ಬದಿಗಿಟ್ಟು ಕ್ರಮ ಕೈಗೊಳ್ಳುತ್ತೇವೆ. ಇದರಲ್ಲಿ ಯಾವುದೇ ರೀತಿಯ ಹಸ್ತಕ್ಷೇಪವಿಲ್ಲ ಎಂದು ಹೇಳಿದರು. ಯಾರೇ ತಪ್ಪು ಮಾಡಿದರೂ ಶಿಕ್ಷೆ ಆಗುವುದಂತೂ ಗ್ಯಾರಂಟಿ. ನನಗೆ ಇಷ್ಟ ಬಂದಂತೆ ಹೇಳಿದರೇ ಅದು ಸತ್ಯವೂ ಅಲ್ಲ.ಹೀಗಾಗಿ ತನಿಖಾ ಸಂಸ್ಥೆಗಳು ತನಿಖೆ ನಡೆಸುವುದರ ಮೂಲಕ ಯಾವುದು ಸತ್ಯ, ಯಾವುದು ಸುಳ್ಳು ಎಂದು ಹೇಳುವುದು ತನಿಖಾ ಸಂಸ್ಥೆಯ ಜವಾಬ್ದಾರಿಯಾಗಿದೆ ಎಂದರು. ಪ್ರತಿಯೊಬ್ಬರು ಪ್ರಚಾರಕ್ಕಾಗಿ ಹೇಳಿಕೆ ಕೊಡುತ್ತಾ ಹೋದಲ್ಲಿ ನಾವು ಹೇಳಿದ್ದೆಲ್ಲಾ ಸಾಧ್ಯವಾಗು ವುದಿಲ್ಲ. ಕೋರ್ಟ್ ವಿಚಾರಣೆ ಆಗಬೇಕು.ನಾವು ನೀವು ಯಾವುದು ಸತ್ಯ ಎಂದು ಮಾತನಾಡಿದರೆ,ಅದು ಸಾಧ್ಯವಾಗುವು ದಿಲ್ಲ ಎಂದು ತಿಳಿಸಿದರು.

ತನಿಖಾ ಸಂಸ್ಥೆಗಳಿವೆ.ಇದರ ಮೇಲಾಗಿ ನ್ಯಾಯಾಲಯಗಳು ಇವೆ. ಸುಮ್ಮನೆ ಊಹಾಪೋಹಗಳಿಂದ ಸಮಾಜದ ಸ್ವಾಸ್ಥ್ಯವನ್ನು ಹಾಳು ಮಾಡಬೇಡಿ.ಇದರಿಂದ ಸಮಾಜಕ್ಕೆ ಹಾನಿಯಾಗಲಿದೆ. ಸತ್ಯ, ನಿಷ್ಠೆಯಿಂದ ತನಿಖೆ ನಡೆಯಬೇಕು.

-ಕೃಷ್ಣಬೈರೇಗೌಡ , ಕಂದಾಯ ಸಚಿವ

ಬಿಜೆಪಿ ನೇತೃತ್ವದಲ್ಲಿ ಸಾವಿರಾರು ರೈತರ ಬೃಹತ್ ಪ್ರತಿಭಟನಾ ಮೆರವಣಿಗೆ | ಸಿಎಂ ವಿರುದ್ಧ ಆಕ್ರೋಶ

ಸಕ್ಕರೆ ಕಾರ್ಖಾನೆ ಪ್ರಾರಂಭಕ್ಕೆ ರೈತರ ಒತ್ತಾಯ

ಕಲಬುರಗಿ: ಜಿಲ್ಲೆಯ ಚಿಂಚೋಳಿ ತಾಲೂಕಿನಲ್ಲಿ ಶಾಸಕ ಬಸನಗೌಡ ಪಾಟೀಲ್ ಯತ್ನಾಳ್ ಒಡೆತನದ ಸಿದ್ದಸಿರಿ ಇಥೆನಾಲ್ ಸಕ್ಕರೆ ಕಾರ್ಖಾನೆ ಪ್ರಾರಂಭಿಸುವಂತೆ ಆಗ್ರಹಿಸಿ ಮಂಗಳವಾರ ಜಿಲ್ಲಾ ಬಿಜೆಪಿ ಘಟಕದ ನೇತೃತ್ವದಲ್ಲಿ ಸಾವಿರಾರು ರೈತರು ಬೃಹತ್ ಪ್ರತಿಭಟನೆ ನಡೆಸಿದರು.

ಮಂಗಳವಾರ ನಗರದ ಪಬ್ಲಿಕ್ ಗಾರ್ಡನ್ ಬಳಿ ಸಾವಿರಾರು ಸಂಖ್ಯೆಯಲ್ಲಿ ಜಮಾವಣೆಗೊಂಡ ರೈತರು, ಕೂಡಲೇ ಸಕ್ಕರೆ ಕಾರ್ಖಾನೆ ಪ್ರಾರಂಭಿಸಬೇಕು ಎಂದು ಒತ್ತಾಯಿಸಿದರು. ಮುಖ್ಯಮಂತ್ರಿ ಸಿದ್ದರಾಮಯ್ಯ ಅಥವಾ ಸರಕಾರದ ಪ್ರತಿನಿಧಿಗಳು ಸ್ಥಳಕ್ಕೆ ಆಗಮಿಸಿ ರೈತರ ಸಮಸ್ಯೆ ಪರಿಹರಿಸಬೇಕು ಎಂದು ಬಿಗಿ ಪಟ್ಟು ಹಿಡಿದು ಸರಕಾರದ ವಿರುದ್ಧ ಘೋಷಣೆ ಕೂಗಿದರು.

ಬೆಳಗ್ಗೆ ಚಿಂಚೋಳಿ, ಕಮಲಾಪುರ, ಕಾಳಗಿ, ಸೇಡಂ ಸೇರಿ ನಾನಾ ತಾಲೂಕಿನ ಹಳ್ಳಿಗಳಿಂದ ಕಬ್ಬು ಬೆಳೆದ ರೈತರ ಪೂರ್ವ ನಿಯೋಜಿತದಂತೆ ಸಿಎಂಗೆ ಮನವಿ ನೀಡಲು ಕಲಬುರಗಿಯತ್ತ ಧಾವಿಸುತ್ತಿದ್ದರು. ಆದರೆ, ಅವರನ್ನು ತಡೆಯುವ ಕೆಲಸ ಪೊಲೀಸ್ ಇಲಾಖೆ ವ್ಯವಸ್ಥಿತವಾಗಿ ಮಾಡಿದೆ ಎಂದು ರೈತ ಮುಖಂಡರು ಆರೋಪಿಸಿದರು. ಈ ವೇಳೆ ಬಿಜೆಪಿ ಮುಖಂಡರು ಹಾಗೂ ರೈತ ಮುಖಂಡರ ನಿಯೋಗ ತೆರಳಿ ಮುಖ್ಯಮಂತ್ರಿಗಳ ಭೇಟಿ ಮಾಡಿ, ಸಮಸ್ಯೆ ಪರಿಹರಿಸುವಂತೆ ಒತ್ತಾಯಿಸಿದರು.

ಸ್ಥಳಕ್ಕೆ ಸಚಿವರ ಆಗಮನ: ರೈತರ ಮನವಿ ಸ್ವೀಕರಿಸಲು ನಗರಾಭಿವೃದ್ಧಿ ಸಚಿವ ಬೈರತಿ ಸುರೇಶ ಯಾತ್ರಿ ನಿವಾಸದ ಮುಂದೆ ಬೀಡು ಬಿಟ್ಟಿದ್ದ ರೈತರ ಬಳಿಗೆ ಆಗಮಿಸಿದರು. ರೈತರ ಬೇಡಿಕೆ ಆಲಿಸಿದ ಅವರು ಇದನ್ನು ಮುಖ್ಯ ಮಂತ್ರಿಗಳ ಗಮನಕ್ಕೆ ತರುವುದಾಗಿ ಭರವಸೆ ನೀಡಿದರು. ನಂತರ ಪ್ರತಿಭಟನೆ ವಾಪಾಸ್ ಪಡೆಯಲಾಯಿತು.

ಮನವಿ ಸಲ್ಲಿಸಲು ಬಂದ ರೈತರಿಗೆ ತಡೆಯೊಡ್ಡಿದ ಪೊಲೀಸ್: ಕಲ್ಯಾಣ ಕರ್ನಾಟಕ ಉತ್ಸವ ಹಿನ್ನಲೆ, ಕಲಬುರಗಿ ನಗರಕ್ಕೆ ಸಿಎಂ ಸಿದ್ದರಾಮಯ್ಯ ಅವರು ಆಗಮಿಸಿದ ಹಿನ್ನೆಲೆ ಜಿಲ್ಲೆಯ ಕಬ್ಬು ಬೆಳೆಗಾರರು ಚಿಂಚೋಳಿಯ ಸಿದ್ದಸಿರಿ ಇಥೆನಾಲ್ ಕಾರ್ಖಾನೆ ಮರು ಪ್ರಾರಂಭಿಸುವಂತೆ ಸಿಎಂ ಸಿದ್ದರಾಮಯ್ಯ ಅವರಿಗೆ ಮನವಿ ನೀಡಲು ಆಗಮಿಸುತ್ತಿದ್ದ ವೇಳೆ ಕಲಬುರಗಿಯಿಂದ 20 ಕಿ.ಮೀ ದೂರ ಹೆಬ್ಬಾಳ ಕ್ರಾಸ್ ಬಳಿಯೇ ನೂರಾರು ರೈತರನ್ನು ಪೊಲೀಸರು ತಡೆದು ನಿಲ್ಲಿಸಿದರು.

ಚಿಂಚೋಳಿ ತಾಲೂಕಿನಲ್ಲಿ ಶಾಸಕ ಬಸನಗೌಡ ಪಾಟೀಲ್ ಯತ್ನಾಳ್ ಒಡೆತನದ ಸಿದ್ದಸಿರಿ ಇಥೆನಾಲ್ ಸಕ್ಕರೆ ಕಾರ್ಖಾನೆ ಪ್ರಾರಂಭಿಸುವಂತೆ ಆಗ್ರಹಿಸಿ ಮಂಗಳವಾರ ಜಿಲ್ಲಾ ಬಿಜೆಪಿ ಘಟಕದ ನೇತೃತ್ವದಲ್ಲಿ ಸಾವಿರಾರು ರೈತರು ಬೃಹತ್ ಪ್ರತಿಭಟನೆ ನಡೆಸಿದರು.

ಬಿಜೆಪಿಯಿಂದ ಕೋಮು ಭಾವನೆಗೆ ಪ್ರಚೋದನೆ

ರಾಯಚೂರು: ರಾಜ್ಯದಲ್ಲಿ ಬಿಜೆಪಿಯಿಂದ ಕೋಮು ಭಾವನೆಗೆ ಪ್ರಚೋದನೆ ನೀಡಲಾಗುತ್ತಿದೆ ಎಂದು ವೈದ್ಯಕೀಯ ಶಿಕ್ಷಣ ಹಾಗೂ ಜಿಲ್ಲಾ ಉಸ್ತುವಾರಿ ಸಚಿವ ಡಾ.ಶರಣ ಪ್ರಕಾಶ್ ಪಾಟೀಲ್ ಆರೋಪಿಸಿದರು.

ಸುದ್ದಿಗಾರರೊಂದಿಗೆ ಮಾತನಾಡಿ, ಕಾಂಗ್ರೆಸ್ ಪಕ್ಷದ ಜನಪರ ಮತ್ತು ದಕ್ಷ ಆಡಳಿತ, ಸಹಿಸದ ಬಿಜೆಪಿ ರಾಜ್ಯದಲ್ಲಿ ಕೋಮು ಗಲಭೆಗೆ ಪ್ರಚೋದನೆ ನೀಡುತ್ತಿದೆ. ಕಾನೂನು ಸುವ್ಯವಸ್ಥೆ ಹದಗೆಡಿಸುವ ಶಕ್ತಿಗಳನ್ನು ಹಿಮ್ಮೆಟ್ಟಿಸುವುದಕ್ಕೆ ಸರಕಾರ ಬಲಿಷ್ಟವಾಗಿದೆ ಶಾಸಕ ಮುನಿರತ್ನ ವಿರುದ್ಧ ದಾಖಲಾಗಿರುವ ಜಾತಿ ನಿಂದನೆ ಪ್ರಕರಣದಲ್ಲಿ ಕಾನೂನು ತನ್ನ ಕ್ರಮ ಕೈಗೊಳ್ಳುತ್ತದೆ ಎಂದ ಅವರು ಇದರಲ್ಲಿ ರಾಜಕೀಯ ದುರುದ್ದೇಶವಿಲ್ಲವೆಂದರು. ಏಮ್ಸ್ ಸ್ಥಾಪನೆಗೆ ಸರಕಾರ ಬದ್ಧವಾಗಿದೆ ಎಂದ ಅವರು ಕೇಂದ್ರ ಸರಕಾರ ಏಮ್ಸ್ ನೀಡಲು ಮೀನಾ ಮೇಷ ಮಾಡುವುದು ಸರಿಯಲ್ಲವೆಂದರು. ವೈದ್ಯಕೀಯ ವಿದ್ಯಾರ್ಥಿಗಳು ಮತ್ತು ವೈದ್ಯರ ಮೇಲೆ ನಡೆಯುವ ದೌರ್ಜನ್ಯ ತಡೆಯಲು ಸರಕಾರ ಬದ್ಧವಾಗಿದೆ ಎಂದರು. ನಗರದ ಹದಗೆಟ್ಟ ರಸ್ತೆಗಳ ಸಮೀಕ್ಷೆ ಮಾಡಲು ತಿಳಿಸಲಾಗಿದ್ದು ಸರಕಾರಿ ಜಾಗ, ಕೋಟೆ, ಕೆರೆಗಳನ್ನು ಒತ್ತುವರಿ ಮಾಡಿದರೆ ಕಠಿಣ ಕ್ರಮವೆಂದರು. ಕಲ್ಯಾಣ ಕರ್ನಾಟಕದ ಸಮಗ್ರ ಅಭಿವೃದ್ಧಿಗೆ ಸಂಕಲ್ಪಿಸಲಾಗಿದೆ ಎಂದರು.

ವಿಶ್ವವಾಣಿ

ಸಂಪಾದಕೀಯ

ಮಾತೇ ಮುತ್ತು, ಮಾತೇ ಮೃತ್ಯು!

ದುಃಖ, ಆಕ್ರೋಶ, ಅಸಹನೆ, ಅಸಹಾಯಕತೆ ಮೊದಲಾದವು ಮನುಷ್ಯ ಸಹಜ ಭಾವಗಳು. ವ್ಯಕ್ತಿಯೊಬ್ಬ ತಾನು ಹಾದು ಹೋಗುತ್ತಿರುವ ಪರಿಸ್ಥಿತಿಗೆ ತಕ್ಕಂತೆ ಇಂಥ ಭಾವಗಳಲ್ಲಿ ಬಂದಿಯಾಗುವುದಿದೆ. ಅಂಥ ಪರಿಸ್ಥಿತಿಗೆ ಕಾರಣರಾದವರಿಗೆ ಅಥವಾ ಆ ಕ್ಷಣದಲ್ಲಿ ಎದುರಲ್ಲಿ ಇದ್ದವರಿಗೆ ಆಯಾ ಭಾವದ ಫಲಶ್ರುತಿಯನ್ನು ಆತ ಉಣಿಸುವುದಿದೆ. ಆದರೆ ಇದು ಹಿತಮಿತವಾಗಿದ್ದರೆ ಸಾಮಾನ್ಯವಾಗಿ ಪ್ರಮಾದವಾಗದು, ಆದರೆ ಅದು ಅತಿರೇಕದ ಮಟ್ಟದಲ್ಲಿದ್ದರೆ ಸರ್ವಥಾ ಸ್ವೀಕಾರಾರ್ಹವಲ್ಲ. ಅದರಲ್ಲೂ ನಿರ್ದಿಷ್ಟವಾಗಿ, ಸಾರ್ವಜನಿಕ ಜೀವನದಲ್ಲಿರುವವರು ಇಂಥ ಭಾವಾವೇಶದ ಕೈಗೆ ಬುದ್ಧಿಯನ್ನು ಕೊಟ್ಟರೆ, ಅದರ ಫಲಶ್ರುತಿ ಅಸಹನೀಯವಾಗೇ ಇರುತ್ತದೆ. ಮಹಾರಾಷ್ಟ್ರದ ಶಿವಸೇನೆಯ ಶಾಸಕ ಸಂಜಯ್ ಗಾಯಕ್ವಾಡ್ ಆಡಿರುವ ಒಂದು ಮಾತಿನ ವಿಷಯದಲ್ಲಿ ಇಷ್ಟೆಲ್ಲಾ ಪೀಠಿಕೆ ನೀಡಬೇಕಾಯಿತು. ‘ಮೀಸಲಾತಿ ವಿಚಾರದಲ್ಲಿ ನಕಾರಾತ್ಮಕ ಪ್ರತಿಕ್ರಿಯೆ ನೀಡಿರುವ ಲೋಕಸಭೆಯ ಪ್ರತಿಪಕ್ಷ ನಾಯಕ ರಾಹುಲ್ ಗಾಂಧಿ ಅವರ ನಾಲಗೆ ಕತ್ತರಿಸಿದವರಿಗೆ 11 ಲಕ್ಷ ರುಪಾಯಿ ನೀಡಲಾಗುವುದು’ ಎಂಬ ಆಣಿಮುತ್ತುಗಳನ್ನು ಉದುರಿಸಿದ್ದಾರೆ ಸಂಜಯ್ ಗಾಯಕ್ವಾಡ್. ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ಅಭಿಪ್ರಾಯಭೇದ ಸಹಜ; ವ್ಯಕ್ತಿಯೊಬ್ಬನ ಗ್ರಹಿಕೆ ಅಥವಾ ಧೋರಣೆ ವ್ಯವಸ್ಥೆಗೆ ಸರಿಹೊಂದುವುದಿಲ್ಲ, ಅದು ಸ್ವೀಕಾರಾರ್ಹವಲ್ಲ ಎನಿಸಿದರೆ, ಆ ಕುರಿತಾಗಿ ಆಕ್ಷೇಪ ವ್ಯಕ್ತಪಡಿಸಲು ಸೂಕ್ತ ವೇದಿಕೆಗಳಿವೆ ಮತ್ತು ರೀತಿನೀತಿಗಳಿವೆ. ಆದರೆ ‘ಅಂಥವರ ನಾಲಿಗೆ ಕತ್ತರಿಸಿ’ ಎಂದು ಫರ್ಮಾನು ಹೊರಡಿಸುವುದು ಸಭ್ಯತೆಯ ಲಕ್ಷಣವೂ ಅಲ್ಲ, ಸಂಸ್ಕೃತಿಯ ಕುರುಹೂ ಅಲ್ಲ. ಸಮಾಜದ ಯಾವುದೋ ವರ್ಗವನ್ನೋ ಅಥವಾ ಪಕ್ಷದ ವರಿಷ್ಠರನ್ನೋ ಮೆಚ್ಚಿಸಲು ಅಥವಾ ಮಾಧ್ಯಮಗಳಲ್ಲಿ ‘ಮೈಲೇಜ್’ ಗಿಟ್ಟಿಸಿಕೊಳ್ಳಲು ನಮ್ಮ ತಥಾಕಥಿತ ಜನನಾಯಕರು ಆಗಾಗ ಹೀಗೆ ತುಟಿಮೀರಿದ ಮಾತಾಡುವುದಿದೆ; ಆದರೆ ಇದು ‘ಅಂಗೈ ತೋರಿಸಿ ಅವಲಕ್ಷಣ ಎನಿಸಿಕೊಳ್ಳುವ’ ಪರಿಪಾಠಕ್ಕೆ ಮೇಲ್ಪಂಕ್ತಿಯಾಗುತ್ತದೆ ಎಂಬುದು ಇಂಥ ನಾಯಕರಿಗೆ ಅರಿವಾಗುವುದೇ ಇಲ್ಲ. ಇದು ವಿಷಾದನೀಯ. ‘ನುಡಿದರೆ ಮುತ್ತಿನ ಹಾರದಂತಿರಬೇಕು, ನುಡಿದರೆ ಮಾಣಿಕ್ಯದ ದೀಪ್ತಿಯಂತಿರಬೇಕು’ ಎಂಬ ಬಸವಣ್ಣನವರ ವಚನದ ಸಾಲಿನ ಸಾರವನ್ನು ಇಂಥವರು ಗ್ರಹಿಸಿ ದಕ್ಕಿಸಿಕೊಳ್ಳುವುದು ಯಾವಾಗ?

ಸೊಂಪಾದಕೀಯ

ವಿಘ್ನ ವಿನಾಶಕನ ಭಗ್ನಾವಶೇಷ

ಗಣೇಶನ ಹಬ್ಬದ ಸಮಯದಲ್ಲಿ ಪಿಒಪಿ ಮೂರ್ತಿಗಳಿಗೆ ನಿಷೇಧ ಹೇರಿ, ಬಳಕೆ ಮಾಡದಂತೆ ಜಾಗೃತಿ ಮೂಡಿಸಿದರೂ ಅದರಿಂದ ಪ್ರಯೋಜನವಾಗಿಲ್ಲ. ಈ ಬಾರಿಯ ಹಬ್ಬದ ಸೀಸನ್‌ನಲ್ಲೂ ಹಲಸೂರು ಕಲ್ಯಾಣಿಯಲ್ಲಿ ಕಂಡುಬಂದ ವಿಘ್ನ ವಿನಾಶಕನ ಭಗ್ನಾವಶೇಷಗಳ ದೃಶ್ಯ ಗಾಬರಿ ಮೂಡಿಸುವಂತಿದೆ. ಇದನ್ನೆಲ್ಲ ನೋಡಿದ ಮೇಲೆ ವಿಘ್ನ ವಿನಾಶಕನ ಮನವೊಲಿಸಲು ಹಬ್ಬ ಮಾಡಿದ ನಂತರ ಈಗ ವಿಗ್ರಹ ವಿನಾಶಕ ಬೇಕಿದ್ದಾನೆ ಎನ್ನುವಂಥ ಪರಿಸ್ಥಿತಿ ಸೃಷ್ಟಿಯಾಗಿದೆ ಅನಿಸಿದರೆ ತಪ್ಪೇನಿಲ್ಲ. ಈ ಬಾರಿ ಹಲಸೂರು

ಕಲ್ಯಾಣಿಯಲ್ಲಿ ಇದುವರೆಗೂ ಒಂದೂವರೆ ಲಕ್ಷ ಮೂರ್ತಿಗಳನ್ನು ವಿಸರ್ಜಿಸಲಾಗಿದ್ದು ಇದರ ಪೈಕಿ ಸುಮಾರು 75,000ದಷ್ಟು ಬರೀ ಪಿಒಪಿ ಮೂರ್ತಿಗಳೇ ಆಗಿವೆ. ನಗರದ 41 ಕೆರೆಗಳಲ್ಲಿ 5 ಅಡಿ ಎತ್ತರಕಿಂತ ಮೇಲ್ಪಟ್ಟ ಮೂರ್ತಿಗಳ ವಿಸರ್ಜನೆಗೆ ಅವಕಾಶವಿಲ್ಲ; ಅಂಥ ಮೂರ್ತಿಗಳನ್ನು ಹಲಸೂರು ಕಲ್ಯಾಣಿಗೆ ತರಬೇಕಾಗುತ್ತದೆ. ಹಾಗಾಗಿ ವಿಸರ್ಜನೆಯ ಕೆಲಸ ಶುರುವಾದಾಗಿಂದ ಹಲಸೂರು ಕೆರೆ ಅಡಿಯಿಂದ ಮುಡಿಯವರೆಗೆ ಗಣೇಶ ಮೂರ್ತಿಗಳಿಂದ ತುಂಬಿಹೋಗಿದೆ. ನಮ್ಮ ಕಷ್ಟಗಳನ್ನು ಹೋಗಲಾಡಿಸಲು ಗಣೇಶನ ಮೂರ್ತಿಯನ್ನು ಪ್ರತಿಷ್ಠಾಪಿಸಿ ಪೂಜೆ ಮಾಡಿದರೆ ಈಗ ಗಣೇಶನ ಮೂರ್ತಿಗಳಿಂದ ಆಗುತ್ತಿರುವ ಕಷ್ಟಗಳನ್ನು ಯಾರು ಪರಿಹರಿಸುತ್ತಾರೆ ಎಂದು ಜನ ಆಕಾಶ ನೋಡುತ್ತಿದ್ದಾರೆ. ಮೂರ್ತಿ ಮಾಡಲು ಬಳಸಿರುವ ಮರ ಮತ್ತು ಕಬ್ಬಿಣ ದೊಡ್ಡ ತಲೆನೋವಾಗಿ ಪರಿಣಮಿಸಿದೆ. ಲೋಡ್‌ಗಟ್ಟಲೆ ಮರ, ಟನ್‌ಗಟ್ಟಲೆ ಕಬ್ಬಿಣವನ್ನು ಪ್ರತ್ಯೇಕಿಸಿ ವಿಲೇವಾರಿ ಮಾಡುವ ಸಂಕಷ್ಟಕರ ಕೆಲಸಕ್ಕೆ ಸಂಕಷ್ಟಹರ ಗಣಪತಿ ದಾರಿ ತೋರಬೇಕಿದೆ. ಅಂದ ಹಾಗೆ, ನಮ್ಮ ವ್ಯವಸ್ಥೆಯು ಗಣೇಶನ ಮೂರ್ತಿಯನ್ನು ಮುಳುಗಿಸುವ ವಿಷಯದಲ್ಲೂ ಭ್ರಷ್ಟಾಚಾರದಲ್ಲಿ ಮುಳುಗಿದೆ ಅಂತಾರೆ ಪೊಲೀಸ್ ಸಿಬ್ಬಂದಿ. ನಮ್ಮಲ್ಲಿ ಪಿಒಪಿ ಮೂರ್ತಿಗಳ ಪ್ರತಿಷ್ಠಾಪನೆ ಮತ್ತು ವಿಸರ್ಜನೆಗೆ ಅವಕಾಶ ಇಲ್ಲ ಎಂದರೂ ಆಂಧ್ರಪ್ರದೇಶ, ತಮಿಳುನಾಡಿನಿಂದ ಇವುಗಳನ್ನು ತರಲಾಗುತ್ತಿದೆ. ಇದಕ್ಕೆ ಪ್ರಭಾವಿಗಳ ಬೆಂಬಲ ಇದೆ, ನಾವು ಏನೂ ಮಾಡೋಕ್ಕೆ ಆಗ್ತಾ ಇಲ್ಲ ಎಂಬುದು ಅವರ ಅಳಲು.

ಸಂಪಾದಕರ ಸದ್ಯಶೋಧನೆ

ಅತ್ಯಂತ ಮಹತ್ವದ ದಿನ

ಭಾರತದ ರಾಜಕಾರಣದಲ್ಲಿ 1975ರ ಜೂನ್ 12 ಅತ್ಯಂತ ಮಹತ್ವದ ದಿನ. ಎರಡು ಕಾರಣಕ್ಕೆ ಆ ದಿನ ಮಹತ್ವದ್ದಾಗಿದೆ. ಮೊದಲನೆಯದು, ಆ ದಿನ ಗುಜರಾತ್ ವಿಧಾನಸಭೆಗೆ ನಡೆದ ಚುನಾವಣೆಯ ಫಲಿತಾಂಶ ಬಂದಿತು. ಕಾಂಗ್ರೆಸ್ ಪಕ್ಷ ಆ ಚುನಾವಣೆಯಲ್ಲಿ ದಯನೀಯ ಪರಾಭವವನ್ನು ಅನುಭವಿಸಿತು. ಕಾಂಗ್ರೆಸ್ (ಒ), ಜನಸಂಘ, ಪ್ರಜಾ ಸೋಷಿಯಲಿಸ್ಟ್ ಪಾರ್ಟಿ ಮತ್ತು ಲೋಕದಳ ಸೇರಿ ರಚಿಸಿಕೊಂಡ ಜನತಾ ಮೋರ್ಚಾ ವಿರುದ್ಧ ಕಾಂಗ್ರೆಸ್ ಸೋತುಹೋಯಿತು. ನವನಿರ್ಮಾಣ ಆಂದೋಲನದ ಪರಿಣಾಮ ಚಿಮನ್ ಭಾಯಿ ಪಟೇಲ್ ನೇತೃತ್ವದ ಸರಕಾರ ಅದಕ್ಕೂ ಒಂದು ವರ್ಷದ ಮೊದಲೇ ವಜಾಗೊಂಡಿತ್ತು. ಎರಡನೆಯದು, ಅದೇ ದಿನ ಅಲಹಾಬಾದ್ ಹೈಕೋರ್ಟ್ ತೀರ್ಪು ನೀಡಿ, 1971ರಲ್ಲಿ ರಾಯ್ ಬರೇಲಿ ಲೋಕಸಭಾ ಚುನಾವಣೆಯಲ್ಲಿ ಗೆದ್ದ ಇಂದಿರಾ ಗಾಂಧಿ ಆಯ್ಕೆಯನ್ನು ಅಮಾನ್ಯ ಮಾಡಿತ್ತು. ಇಂದಿರಾ ಅವರು ಚುನಾವಣೆಯಲ್ಲಿ ಅಕ್ರಮ ವೆಸಗಿರುವುದು ಸಾಬೀತಾಗಿದ್ದರಿಂದ ಅವರನ್ನು ಅನರ್ಹಗೊಳಿಸಿ ಮುಂದಿನ ಆರು ವರ್ಷಗಳ ಕಾಲ ಯಾವುದೇ ಹುದ್ದೆಯನ್ನು ಅಲಂಕರಿಸುವಂತಿಲ್ಲ ಎಂದು ಜಸ್ಟಿಸ್ ಜಗಮೋಹನ್‌ಲಾಲ್ ಸಿನ್ಹಾ ಐತಿಹಾಸಿಕ ತೀರ್ಪು ನೀಡಿದ್ದರು. ಇಂದಿರಾ ವಿರುದ್ಧ ಸ್ಪರ್ಧಿಸಿದ್ದ ಸಂಯುಕ್ತ ಸೋಷಿಯಲಿಸ್ಟ್ ಪಕ್ಷದ ಅಭ್ಯರ್ಥಿ ರಾಜ್ ನಾರಾಯಣ್ ಅವರು, ಇಂದಿರಾ ಚುನಾವಣೆಯಲ್ಲಿ ಅಕ್ರಮ ವೆಸಗಿದ್ದಾರೆ ಎಂದು ಕೋರ್ಟಿಗೆ ಹೋಗಿದ್ದರು. ಅವರು ಆ ಚುನಾವಣೆಯಲ್ಲಿ ಇಂದಿರಾ ವಿರುದ್ಧ 1.10 ಲಕ್ಷ ಮತಗಳ ಅಂತರದಿಂದ ಸೋತಿದ್ದರು. ಇಂದಿರಾ ಕೋರ್ಟಿಗೆ ಹಾಜರಾಗಬೇಕು ಎಂದು ರಾಜ್ ನಾರಾಯಣ್ ಪರ ವಕೀಲರು ಆಗ್ರಹಿಸಿದರು. ದೇಶದಲ್ಲಿಯೇ ಮೊದಲ ಬಾರಿಗೆ ಪ್ರಧಾನಿ ವಿಚಾರಣೆ ಎದುರಿಸಲು ಕೋರ್ಟ್ ಮುಂದೆ ನಿಂತಿದ್ದರು. ಇಂದಿರಾ ಅವರ ಚುನಾವಣಾ ಏಜೆಂಟ್ ಯಶಪಾಲ್ ಕಪೂರ್, ರಾಯ್‌ಬರೇಲಿ ಜಿಲ್ಲಾ ಮ್ಯಾಜಿಸ್ಟ್ರೇಟ್, ರಾಯ್‌ಬರೇಲಿ ಪೊಲೀಸ್ ವರಿಷ್ಠಾಧಿಕಾರಿ, ಉತ್ತರ ಪ್ರದೇಶ ಗೃಹ ಕಾರ್ಯದರ್ಶಿ ಇಂದಿರಾ ಗಾಂಧಿ ಅವರಿಗೆ ಚುನಾವಣೆಯಲ್ಲಿ ನೆರವಾಗಿರುವುದು ಮೇಲ್ನೋಟಕ್ಕೆ ಸಾಬೀತಾಗಿದೆ ಮತ್ತು ಇದು ಪ್ರಜಾ ಪ್ರತಿನಿಧಿ ಕಾಯ್ದೆ ಸೆಕ್ಷನ್ 123(7) ರ ಪ್ರಕಾರ ಅಪರಾಧ ಎಂದು ಕೋರ್ಟ್ ಹೇಳಿತು. ಯಶಪಾಲ್ ಕಪೂರ್ ಕೇಂದ್ರ ಸರಕಾರದ ಗೆಜೆಟೆಡ್ ಅಧಿಕಾರಿಯಾಗಿದ್ದರು. ಅವರು ಪ್ರಧಾನಿ ಕಾರ್ಯಾಲಯದಲ್ಲಿ ವಿಶೇಷ ಕರ್ತವ್ಯ ಅಧಿಕಾರಿ(ಒಎಸ್‌ಡಿ) ಯಾಗಿ ಕಾರ್ಯ ನಿರ್ವಹಿಸುತ್ತಿದ್ದರು. ಅವರು ತಮ್ಮ ಹುದ್ದೆಗೆ ರಾಜೀನಾಮೆ ನೀಡಿ, ಚುನಾವಣೆಯಲ್ಲಿ ಇಂದಿರಾ ಏಜೆಂಟ್ ಆಗಿದ್ದರು. ಅವರ ರಾಜೀನಾಮೆ ಯಾವಾಗಿನಿಂದ ಜಾರಿಗೆ ಬಂದಿದೆ ಎಂಬುದು ವಿವಾದಕ್ಕೆ ಕಾರಣವಾಗಿತ್ತು. ಕಾರಣ ಅವರು ರಾಜೀನಾಮೆ ನೀಡಿದ ದಿನಾಂಕದ ಮುನ್ನವೇ ಇಂದಿರಾ ಪರವಾಗಿ ಎರಡು ಕಡೆಗಳಲ್ಲಿ ಚುನಾವಣಾ ಪ್ರಚಾರ ಸಭೆಗಳಲ್ಲಿ ಭಾಗವಹಿಸಿ ಭಾಷಣ ಮಾಡಿದ್ದರು. ಸರಕಾರದ ಗೆಜೆಟೆಡ್ ಅಧಿಕಾರಿಯಿರುವಾಗಲೇ ಅವರು ರಾಜಕೀಯ ಚಟುವಟಿಕೆಗಳಲ್ಲಿ ಭಾಗವಹಿಸಿದ್ದನ್ನು ಕೋರ್ಟ್ ಗಂಭೀರವಾಗಿ ಪರಿಗಣಿಸಿತು. ಇಂದಿರಾ ಅನುಮತಿ ಮೇರೆಗೆ ಕಪೂರ್ ಇಂಥ ಚಟುವಟಿಕೆಗಳಲ್ಲಿ ಪಾಲ್ಗೊಂಡಿರುವುದು ಕೋರ್ಟ್‌ಗೆ ಮನವರಿಕೆಯಾಗಿತ್ತು. ಅಲಹಾಬಾದ್ ಹೈಕೋರ್ಟಿನ ತೀರ್ಪು ಬಂದರೂ, ಇಂದಿರಾ ರಾಜೀನಾಮೆ ನೀಡಲಿಲ್ಲ. ಇಂದಿರಾ ಅವರ ಮಗ ಸಂಜಯ, ಪಶ್ಚಿಮ ಬಂಗಾಳ ಮುಖ್ಯಮಂತ್ರಿ ಸಿದ್ಧಾರ್ಥ ಶಂಕರ ರೇ, ಕಾಂಗ್ರೆಸ್ ಅಧ್ಯಕ್ಷ ದೇವಕಾಂತ ಬರುವಾ, ಕೃಷ್ಣ ಚಂದ್ರ ಪಂತ್ ಮುಂತಾದ ನಾಯಕರು ಇಂದಿರಾಗೆ ಪ್ರಧಾನಿಯಾಗಿ ಮುಂದುವರಿಯುವಂತೆ ಸಲಹೆ ನೀಡಿದರು. ಕೋರ್ಟ್ ತೀರ್ಪು ಬರುತ್ತಿದ್ದಂತೆ ರಾಜೀನಾಮೆ ನೀಡಲು ಇಂದಿರಾ ನಿರ್ಧರಿಸಿದ್ದರು ಮತ್ತು ರಕ್ಷಣಾ ಸಚಿವ ಬಾಬು ಜಗಜೀವನ ರಾಮ್ ಅವರನ್ನು ಕೆಲಕಾಲದ ಅವಧಿಗೆ ತಮ್ಮ ಹುದ್ದೆಯಲ್ಲಿ ಕುಳ್ಳಿರಿಸಲು ಯೋಚಿಸಿದ್ದರು. ಆದರೆ ಇಂದಿರಾ ನಿಷ್ಠರು, ‘ಇಂಥ ಯಾವ ಕ್ರಮಕ್ಕೂ ಮುಂದಾಗಬೇಡಿ. ಈ ಸಂದರ್ಭದಲ್ಲಿ ರಾಜೀನಾಮೆ ನೀಡಿದರೆ, ನಿಮ್ಮನ್ನು ಮುಗಿಸಿಬಿಡುತ್ತಾರೆ. ಒಮ್ಮೆ ಅಧಿಕಾರವನ್ನು ಬಿಟ್ಟರೆ, ಮರಳಿ ಪಡೆಯುವುದು ಕಷ್ಟ’ ಎಂದು ಅವರಿಗೆ ಸಲಹೆ ನೀಡಿದರು.

ಸಯನೇಡ್ ಜೀವವನ್ನು ಸೃಜಿಸಬಲ್ಲದೆ?

ಹಿಂದಿರುಗಿ ನೋಡಿದಾಗ
ಡಾ. ನಾ.ಸೋಮೇಶ್ವರ
vveditoped@gmail.com

ನಮ್ಮ ದೇಶದಲ್ಲಿ ‘ಮಾನವ ಬಾಂಬ್’ ಮೊದಲ ಬಾರಿಗೆ ಯಶಸ್ವಿಯಾಗಿ ಸಿಡಿದು ಮಾಜಿ ಪ್ರಧಾನಿ ರಾಜೀವ್ ಗಾಂಧಿಯವರನ್ನು ಆಹುತಿ ತೆಗೆದುಕೊಂಡಿತು. ರಾಜೀವ್ ಗಾಂಧಿ ಹತ್ಯಾ ಪ್ರಕರಣದ ಪ್ರಧಾನ ಸೂತ್ರಧಾರ ಶಿವರಾಸನ್. ಆತನನ್ನು ಬೆಂಗಳೂರಿನಲ್ಲಿ ಪತ್ತೆಹಚ್ಚಿ, ಸೆರೆಹಿಡಿಯಲು ಪ್ರಯತ್ನಿಸಿದಾಗ, ಆತ ಸಯನೇಡ್ ಸೇವಿಸಿ ತನ್ನ ಸಹಚರರೊಡನೆ ಆತ್ಮಹತ್ಯೆಯನ್ನು ಮಾಡಿಕೊಂಡ. ಶಿವರಾಸನ್ ಬಳಿ ಸಯನೇಡ್ ಗುಳಿಗೆ ಇರುತ್ತದೆ ಎನ್ನುವುದನ್ನು ಮುಂಚಿತವಾಗಿ ತಿಳಿದಿದ್ದ ಪೊಲೀಸರು, ಸಯನೇಡ್ ವಿಷವನ್ನು ನಿಗ್ರಹಿಸಬಲ್ಲ ಪ್ರತಿವಿಷವನ್ನು ಜರ್ಮನಿಯಿಂದ ತರಿಸಿ ಸಿದ್ಧವಾಗಿಟ್ಟುಕೊಂಡಿದ್ದರು. ಆದರೆ, ಅದನ್ನು ಉಪಯೋಗಿಸುವ ಅವಕಾಶವನ್ನೇ ಕೊಡದೇ, ಶಿವರಾಸನ್ ಸಯನೇಡ್ ಗುಳಿಗೆಯನ್ನು ಸೇವಿಸಿ ಜೀವವನ್ನು ಬಿಟ್ಟಿದ್ದ.

‘ಸಯನೇಡ್’ ಎನ್ನುವುದು ಕೆಲವು ರಾಸಾಯನಿಕ ವಸ್ತುಗಳಿಗೆ ನೀಡಿರುವ ಸಮಷ್ಟಿ ಹೆಸರು. ಇದನ್ನು ‘ಸಯನೋ ಗ್ರೂಪ್’ ಎಂದು ಕರೆಯುವರು. ಈ ಸಯನೋ ಗುಂಪಿನಲ್ಲಿರುವ ಸರ್ವಸಾಮಾನ್ಯ ಸಯನೇಡುಗಳೆಂದರೆ ಹೈಡ್ರೋಜನ್ ಸಯನೇಡ್ ಸೋಡಿಯಂ ಸಯನೇಡ್ ಮತ್ತು ಪೊಟಾಸಿಯಮ್ ಸಯನೇಡ್. ಸಯನೇಡುಗಳು ಉಗ್ರಸ್ವರೂಪದ ವಿಷಗಳು. ಯಾವುದೇ ಸಯನೇಡು ನಮ್ಮ ದೇಹವನ್ನು ಪ್ರವೇಶಿಸಿತೆಂದರೆ, ಅದು ದೇಹದ ಜೀವಕೋಶಗಳಿಗೆ, ವಿಶೇಷವಾಗಿ ಮಿದುಳಿನ ನರಕೋಶಗಳಿಗೆ, ಆಕ್ಸಿಜನ್ ದೊರೆಯದಂತೆ ಮಾಡುತ್ತದೆ. ಅತ್ಯಂತ ತ್ವರಿತವಾಗಿ ತುರ್ತು ಚಿಕಿತ್ಸೆಯನ್ನು ನೀಡದಿದ್ದರೆ, ಸಾವು ತ್ವರಿತವಾಗಿ ನಿಮಿಷಗಳಲ್ಲಿ ಸಂಭವಿಸುತ್ತದೆ.

ಸಾವಿನ ಹರಿಕಾರನಾದ ಸಯನೇಡ್, ನಮ್ಮ ಭೂಮಂಡಲ ರೂಪುಗೊಳ್ಳುವ ಆದಿಕಾಲದಲ್ಲಿಯೇ ಹುಟ್ಟಿತೆಂದರೆ ಆಶ್ಚರ್ಯವಾಗುತ್ತದೆ. ಭೂಮಂಡಲದ ಆದಿ ವಾತಾವರಣದಲ್ಲಿ ಆಕ್ಸಿಜನ್, ಹೈಡ್ರೋಜನ್, ಕಾರ್ಬನ್, ನೈಟ್ರೋಜನ್ ಮುಂತಾದ ಪರಮಾಣುಗಳಿದ್ದವು. ಆ ವಾತಾವರಣದಲ್ಲಿ ನಿರಂತರವಾಗಿ ಹೊಡೆಯುತ್ತಿದ್ದ ಸಿಡಿಲುಗಳ ಉಗ್ರ ಉಷ್ಣತೆ ಮತ್ತು ಸೂರ್ಯನ ಅತಿನೇರಳೆ ಕಿರಣಗಳ ಪ್ರಭಾವದಲ್ಲಿ ಕಾರ್ಬನ್ ಮತ್ತು ಹೈಡ್ರೋಜನ್ ಸೇರಿ ಮೀಥೇನನ್ನು (CH_4), ನೈಟ್ರೋಜನ್ ಮತ್ತು ಹೈಡ್ರೋಜನ್ ಸೇರಿ ಅಮೋನಿಯವನ್ನು (NH_3), ಕಾರ್ಬನ್ ಮತ್ತು ಆಕ್ಸಿಜನ್ ಸೇರಿಕೊಂಡು ಕಾರ್ಬನ್ ಡೈಯಾಕ್ಸೈಡನ್ನು, ಹೈಡ್ರೋಜನ್ ಮತ್ತು ಆಕ್ಸಿಜನ್ ಸೇರಿಕೊಂಡು ನೀರನ್ನು (H_2O) ಸೃಜಿಸಿದವು. ಹೀಗೆಯೇ ಮೀಥೇನ್ ಮತ್ತು ಅಮೋನಿಯಗಳು ಪರಸ್ಪರ ರಾಸಾಯನಿಕವಾಗಿ ವರ್ತಿಸಿ ಹೈಡ್ರೋಜನ್ ಸಯನೇಡನ್ನು ಉತ್ಪಾದಿಸಿದವು. ಅಗ್ನಿಪರ್ವತಗಳು ಸಿಡಿದಾಗ ಉತ್ಪಾದನೆಯಾಗುವ ಅಧಿಕ ಉಷ್ಣತೆಯೂ ಹೈಡ್ರೋಜನ್ ಸಯನೇಡಿನ ಉತ್ಪಾದನೆಗೆ ಕಾರಣವಾಗಿರಬಹುದು. ಮಳೆಯು, ವಾತಾವರಣದಲ್ಲಿ ತೇಲುತ್ತಿದ್ದ ಹೈಡ್ರೋಜನ್ ಸಯನೇಡ್ ಅಣುಗಳನ್ನು ತೊಳೆದು ಭೂಮಿಗೆ ರವಾನಿಸಿತು. ಆದಿ ಸಮುದ್ರದಲ್ಲಿ ಹೈಡ್ರೋಜನ್ ಸಯನೇಡ್ ಸಹ ಸೇರಿಕೊಂಡಿತು.

ಹೈಡ್ರೋಜನ್ ಸಯನೇಡ್ ಬಾಹ್ಯಾಕಾಶದಿಂದ ಭೂಮಿಗೆ ಬಂದಿರುವ ಸಾಧ್ಯತೆಯನ್ನು ತಳ್ಳಿಹಾಕಲಾಗುವುದಿಲ್ಲ. ಧೂಮಕೇತು ಮತ್ತು ಉಲ್ಕೆಗಳಲ್ಲಿ ಹೈಡ್ರೋಜನ್ ಸಯನೇಡ್ ಇರುವುದನ್ನು ಪತ್ತೆಹಚ್ಚಲಾಗಿದೆ. ಉದಾಹರಣೆಗೆ, ‘ಹೇಲ್-ಬಾಪ್’ ಧೂಮಕೇತುವಿನಲ್ಲಿ ಹೈಡ್ರೋಜನ್ ಸಯನೇಡ್ ಇರುವುದು ನಮಗೆ ತಿಳಿದಿದೆ. ಇಂದಿಗೆ ಸುಮಾರು 4.1-3.8 ಬಿಲಿಯನ್ ವರ್ಷಗಳ ಹಿಂದೆ, ಬಾಹ್ಯಾಕಾಶದಿಂದ ‘ಉಲ್ಕೆಗಳ ಮಹಾವರ್ಷ’ (ಲೇಟ್ ಹೆವಿ ಬೊಂಬಾರ್ಡ್‌ಮೆಂಟ್) ಉಂಟಾಯಿತು. ಆಗ ಅವುಗಳಲ್ಲಿದ್ದ ಹೈಡ್ರೋಜನ್ ಸಯನೇಡ್ ನಮ್ಮ ಭೂವಾತಾವರಣದಲ್ಲಿ ಹಾಗೂ ಸಾಗರದಲ್ಲಿ ಸಂಗ್ರಹವಾಯಿತು.

1953ರಲ್ಲಿ ‘ಮಿಲ್ಲರ್-ಯೂರೇ ಪ್ರಯೋಗ’ವು ನಡೆಯಿತು. ಈ ಪ್ರಯೋಗದಲ್ಲಿ ನಮ್ಮ ಭೂಮಂಡಲದ ಆದಿ ವಾತಾವರಣವನ್ನು ಕೃತಕವಾಗಿ ಸೃಜಿಸಿದರು. ಕೃತಕವಾಗಿ ಸಿಡಿಲನ್ನು ಹೊಡೆಯಿಸಿದರು. ಆಗ ರೂಪುಗೊಂಡ ಆದಿ ಅಣುಗಳಲ್ಲಿ (ಪ್ರೋಟೋ ಮಾಲೆಕ್ಯೂಲ್ಸ್) ಹೈಡ್ರೋಜನ್ ಸಯನೇಡ್ ಸಹ ಒಂದಾಗಿತ್ತು. ಹಾಗಾಗಿ ನಮ್ಮ ಆದಿಸಮುದ್ರದಲ್ಲಿ ಮೊತ್ತ ಮೊದಲ ಬಾರಿಗೆ ಆದಿಜೀವಿಯು ರೂಪುಗೊಳ್ಳಲು ಕಾರಣವಾದ ಅಮೈನೋ ಆಮ್ಲ, ನ್ಯೂಕ್ಲಿಕ್ ಆಮ್ಲಗಳ ಉತ್ಪಾದನೆಯಲ್ಲಿ ಹೈಡ್ರೋಜನ್ ಸಯನೇಡಿನ ಪಾತ್ರವಿದೆ. ಉದಾಹರಣೆಗೆ ಹೈಡ್ರೋಜನ್ ಸಯನೇಡ್ ಘನೀಕರಣದಿಂದ ‘ಅಡೆನಿನ್’ ಎನ್ನುವ ಅಮೈನೋ ಆಮ್ಲದ ಉತ್ಪಾದನೆ. ಡಿಸೆಂಬರ್ 14, 2023ರಂದು ಖಗೋಳ ವಿಜ್ಞಾನಿಗಳು ಶನಿಗ್ರಹದ ಉಪಗ್ರಹವಾದ ಎನ್ಸಿಲೇಡಸ್‌ನ ವಾತಾವರಣವನ್ನು ವೀಕ್ಷಿಸಿದರು. ಅಲ್ಲಿನ ವಾತಾವರಣದಲ್ಲಿ ಹೈಡ್ರೋಜನ್ ಸಲ್ಫೈಡ್ ಇರುವುದು ಪತ್ತೆಯಾಗಿದೆ. ಬಹುಶಃ ಎನ್ಸಿಲೇಡಸ್‌ನಲ್ಲಿರುವ ಜಲರಾಶಿಯಲ್ಲಿ ಆದಿಜೀವಿಯ ಉಗಮವಾಗುವ ದಿನಗಳು ಬರಬಹುದು ಎಂದು ನಿರೀಕ್ಷಿಸಲಾಗಿದೆ. ಅಂತರ ತಾರಾ ಧೂಳಿನಲ್ಲಿ (ಇಂಟರ್ ಸ್ಟೆಲಾರ್ ಡಸ್ಟ್) ಹೈಡ್ರೋಜನ್ ಸಯನೇಡ್ ಇರುವುದನ್ನು ಪತ್ತೆ ಹಚ್ಚಲಾಗಿದೆ. ಹಾಗಾಗಿ ನಮ್ಮ ಬ್ರಹ್ಮಾಂಡ ರೂಪುಗೊಂಡ ಆದಿಯಲ್ಲಿಯೇ ಹೈಡ್ರೋಜನ್ ಸಯನೇಡ್ ರೂಪುಗೊಂಡಿತು ಎನ್ನಬಹುದು. ಇಂಥ ಜೀವದಾಯಕ ಹೈಡ್ರೋಜನ್ ಸಯನೇಡ್, ಜೀವವನ್ನು ತೆಗೆಯುತ್ತದೆ ಎಂದರೆ, ಅದು ಎಂಥ ವಿಪರ್ಯಾಸವಾಗಿದೆ!

ನಮ್ಮ ಭೂಮಿಯ ಮೇಲೆ ಇರುವ ಅನೇಕ ಗಿಡ, ಮರ, ಹಣ್ಣು, ಕಾಯಿ, ಬೀಜಗಳಲ್ಲಿ ಸಯನೋ ಗುಂಪಿನ ವಿಷವಸ್ತುಗಳಿರುತ್ತವೆ. ಇವುಗಳ ಪ್ರಾಥಮಿಕ ಪರಿಚಯವಿರುವುದು ಒಳ್ಳೆಯದು. ಮರಗೆಣಸು (ಕಸಾವ) ನಮಗೆಲ್ಲರಿಗೂ ಪರಿಚಿತವಾಗಿರುವಂಥದ್ದು. ಇದರ ವೈಜ್ಞಾನಿಕ ನಾಮಧೇಯ ಮ್ಯಾನಿಹಾಟ್ ಎಸ್ಕ್ಯುಲೆಂಟ. ಇದರಲ್ಲಿ ‘ಲಿನಾಮರಿನ್’ ಮತ್ತು ‘ಲೋಟಸ್ಟ್ರಾಲಿನ್’ ಎಂಬ ಸಯನೋಜೆನಿಕ್ ಗ್ಲೈಕೋಸೈಡುಗಳಿವೆ. ಅಂದರೆ ಸಯನೇಡನ್ನು ಉತ್ಪಾದಿಸಬಲ್ಲ ರಾಸಾಯನಿಕಗಳು. ಮರಗೆಣಸನ್ನು ಆಫ್ರಿಕಾ ಮತ್ತು ದಕ್ಷಿಣ ಅಮೆರಿಕದ ಜನರು ತಮ್ಮ ದೈನಂದಿನ ಆಹಾರವನ್ನಾಗಿ ಉಪಯೋಗಿಸುತ್ತಾರೆ. ಮರಗೆಣಸು, ನಮ್ಮ ಭಾರತದ ಮಲಬಾರ್ ತೀರಪ್ರದೇಶದ ಜನರ ಮುಖ್ಯ ಆಹಾರ. ಇದನ್ನು ಬೇಯಿಸಿ ಇಲ್ಲವೆ ಸುಟ್ಟು ಉಪಯೋಗಿಸುವುದಿದೆ. ಅಲ್ಲದೆ ಹುಳಿ ಮತ್ತು ಪಲ್ಯದ ರೀತಿಯಲ್ಲಿ ಸಹ ಉಪಯೋಗಿಸುವುದುಂಟು. ಇದರಿಂದ ಹಿಟ್ಟು ಮತ್ತು ಕೃತಕ ಅಕ್ಕಿ ತಯಾರು ಮಾಡುವುದಿದೆ. ಫಿಲಿಪೀನ್ಸ್‌ನಲ್ಲಿ ಇದರಿಂದ ಮದ್ಯ ತಯಾರಿಸುತ್ತಾರೆ. ಇದರ ಹಿಟ್ಟು ಬಿಸ್ಕತ್ತು ತಯಾರಿಕೆಗೂ, ಗಂಜಿಯು ಬಟ್ಟೆಗಳಿಗೆ ಹಾಕಲೂ ಒದಗುತ್ತದೆ. ಮರಗೆಣಸಿನ ಹಿಟ್ಟನ್ನು ಚಪಾತಿ, ಪೂರಿ ಇತ್ಯಾದಿಗಳನ್ನು ತಯಾರಿಸಲು ಉಪಯೋಗಿಸುತ್ತಾರೆ. ಇದರಿಂದ ರವೆ ತಯಾ ರಿಸಿ ಉಪ್ಪಿಟ್ಟು, ಸಜ್ಜಿಗೆ, ಇಡ್ಲಿ ಮುಂತಾದವನ್ನು ಮಾಡಬಹುದು. ಆದರೆ ಇವೆಲ್ಲವನ್ನು ಸಿದ್ಧಪಡಿಸಲು ಮರಗೆಣಸನ್ನು ವಿಷರಹಿತವನ್ನಾಗಿ ಮಾಡಬೇಕಾಗುತ್ತದೆ. ಇಲ್ಲದಿದ್ದರೆ ಇದು ಅನಾಹುತಕ್ಕೆ ಎಡೆ ಮಾಡಿಕೊಡುತ್ತದೆ. ಕಹಿ ಬಾದಾಮಿ, ಸೇಬು, ಚೆರ‍್ರಿ, ಪೀಚ್, ಏಪ್ರಿಕಾಟ್ ಮುಂತಾದವುಗಳ ಬೀಜಗಳಲ್ಲಿ ‘ಅಮಿಗ್ಡಲಿನ್’ ಎಂಬ ಸಯನೇಡ್ ಉತ್ಪಾದಕವಿರುತ್ತದೆ. ಲೀಮಾ ಅವರೆಯಲ್ಲಿ (ಫೇಸಿಯೋಲಸ್ ಲುನಾಟಸ್) ಲಿನಾಮರಿನ್ ಸಯನೇಡ್ ಉತ್ಪಾದಕವಿರುತ್ತದೆ. ಜೋಳದಲ್ಲಿಯೂ (ಸೋರ್ಘಮ್ ಬೈಕಲರ್) ‘ದುರ‍್ರಿನ್’ ಎಂಬ ಸಯನೇಡ್ ಉತ್ಪಾದಕವಿರುತ್ತದೆ. ಹಾಗೆಯೇ ಕೆಲವು ಸಿಹಿಗೆಣಸು, ಯಾಮ್, ಅಗಸೆ ಬೀಜ, ಎಳೇ ಬಿದಿರಿನಲ್ಲಿ (ಕಳಲೆಯಲ್ಲಿ) ಸಯನೇಡ್ ಘಟಕಗಳಿರುತ್ತವೆ. ಕಳಲೆಯ ತುದಿಯಲ್ಲಿ ಹೈಡ್ರೋಜನ್ ಸಯನೇಡ್ ಪ್ರಮಾಣ ಗರಿಷ್ಠವಿದ್ದು, ಬುಡದ ಕಡೆಗೆ ಕ್ರಮೇಣ ಕಡಿಮೆಯಾಗುತ್ತಾ ಹೋಗುತ್ತದೆ.

ಸಯನೋಜನಕಗಳ ವಿಷ ಪ್ರಭಾವವನ್ನು ಕಡಿಮೆ ಮಾಡಲು ನಾನಾ ವಿಧಾನಗಳನ್ನು ಬಳಸುವುದುಂಟು. ಮೊದಲನೆಯದು ನೀರಿನಲ್ಲಿ ನೆನೆಸುವುದು ಹಾಗೂ ಹುಳಿಯಿಸುವುದು. ಮರಗೆಣಸನ್ನು ನೆನೆಯಿಸಿ, ಹುಳಿಯಿಸಿದಾಗ ಬ್ಯಾಕ್ಟೀರಿಯಗಳು ಹೈಡ್ರೋಜನ್ ಸಯನೇಡನ್ನು ಲಯಗೊಳಿಸಿ ಅಪಾಯವನ್ನು ನಿವಾರಿಸುತ್ತವೆ. ಎರಡನೆಯ ವಿಧಾನ ಕುದಿಸುವುದು. ಮರಗೆಣಸನ್ನು ಹಾಗೂ ಲೀಮಾ ಅವರೆಯನ್ನು 10-15 ನಿಮಿಷಗಳ ಕಾಲ ಕುದಿಸಿದರೆ ಸಯನೇಡ್ ನಾಶವಾಗುತ್ತದೆ. ಚೆರ‍್ರಿ, ಪೀಚ್, ಏಪ್ರಿಕಾಟ್ ಅನ್ನು ಬಿಸಿಲಲ್ಲಿ ಚೆನ್ನಾಗಿ ಒಣಗಿಸಿದರೆ ಅಥವಾ ಹುರಿದರೆ, ಅದರಲ್ಲಿರುವ ಸಯನೇಡ್ ನಾಶವಾಗುತ್ತದೆ. ಸಯನೇಡ್ ಇರುವ ಹಣ್ಣು-ತರಕಾರಿಗಳ ಬೀಜಗಳನ್ನು ಯಾವುದೇ ಕಾರಣಕ್ಕೂ ಹಸಿಯಾಗಿ ತಿನ್ನಬಾರದು. ನೀರಿನಲ್ಲಿ ನೆನೆಯಿಸಿ/ಹುಳಿಯಿಸಿ/ಕುದಿಸಿ/ಹುರಿದು ಬಳಸಬೇಕು.

ಇಲ್ಲಿ ಒಂದು ವಿಶೇಷ ಮಾಹಿತಿಯನ್ನು ಗಮನಿಸಬೇಕು. ಸಿಗರೇಟಿನ ಹೊಗೆಯಲ್ಲಿ ಹೈಡ್ರೋಜನ್ ಸಯನೇಡ್ ಇರುತ್ತದೆ. ಹಾಗಾಗಿ ಅತ್ಯಲ್ಪ ಪ್ರಮಾಣದ ಈ ಸಯನೇಡ್ ಮಿದುಳಿಗೆ ಆಕ್ಸಿಜನ್ ಪೂರೈಕೆಯಾಗದಂತೆ ತಡೆಯುತ್ತಾ ಧೂಮಪಾನಿಗಳನ್ನು ನಿಧಾನವಾಗಿ ಕೊಲ್ಲುವ ವಿಷಯವಾಗಿದೆ. ವಾಹನಗಳು ಉಗುವ ಹೊಗೆಯಲ್ಲಿ ಹೈಡ್ರೋಜನ್ ಸಯನೇಡ್ ಇರುತ್ತದೆ. ಹಾಗೆಯೇ ಕೆಲವು ಪ್ಲಾಸ್ಟಿಕ್ಕನ್ನು ಸುಡುವಾಗಲೂ ಹೈಡ್ರೋಜನ್ ಸಯನೇಡ್ ಉತ್ಪಾದನೆಯಾಗಿ ಪ್ರಕೃತಿಯನ್ನು ಸೇರುತ್ತದೆ.

ಜೀವಜಗತ್ತಿನಲ್ಲಿ ಕೆಲವು ಕೀಟಗಳು ಹಾಗೂ ಪ್ರಾಣಿಗಳು ಆತ್ಮರಕ್ಷಣೆಗಾಗಿ ಸಯನೇಡನ್ನು ಪ್ರಯೋಗಿಸುತ್ತವೆ. ಸಹಸ್ರಪಾದಿ/ಸಾವಿರಕಾಲಿನ ಹುಳು/ಒನಕೆ ಬಂಡಿ/ಚರಟದ ಹುಳು ಅಥವ ಕಪ್ಪರಚೆಟ್ಟಿ (ಮಿಲಿಪೀಡ್)ಗಳು ನಮಗೆ ಪರಿಚಿತವಾಗಿರುವಂಥವು. ಅವುಗಳಲ್ಲಿ ‘ಅಫೆಲೋರಿಯ’ ಮತ್ತು ‘ಹರಪಾಫೆ’ ಕುಲಕ್ಕೆ ಸೇರಿದಂಥವು ಹೈಡ್ರೋಜನ್ ಸಯನೇಡನ್ನು ಉತ್ಪಾದಿಸಬಲ್ಲವು. ‘ಬರ್ನೆಟ್ ಮಾತ್’ (ಜೈಗೀನ ಫಿಲಿಪೆಂಡ್ಯುಲೆ) ಲಿನಾಮರಿನ್, ಲೋಟಸ್ಟ್ರಾಲಿನ್ ಅನ್ನು ಉತ್ಪಾದಿಸುತ್ತದೆ. ‘ಲೇಡಿ ಬರ್ಡ್ ಬೀಟಲ್’ ಮತ್ತು ‘ಹೆಲಿಕೋನಿಯಸ್ ಚಿಟ್ಟೆ’ಗಳೂ ಸಯನೇಡನ್ನು ಉತ್ಪಾದಿಸಬಲ್ಲವು. ‘ಆರ್ಮಡಿಲ್ಲಿಡಿಯಮ್ ವಲ್ಗೇರ್’ ಎಂಬ ಮರದ ಹೇನು (ವುಡ್ ಲೈಸ್) ಸಯನೇಡ್ ಅನಿಲವನ್ನು ಉತ್ಪಾದಿಸಿ ತನ್ನ ಶತ್ರುಗಳನ್ನು ಕೊಲ್ಲುತ್ತದೆ. ಕೆಲವು ಕಡಲ ಬಸವನಹುಳುಗಳು (ಸೀ ಸ್ಲಗ್ಸ್) ಸಯನೇಡನ್ನು ಉತ್ಪಾದಿಸಿ ಆತ್ಮರಕ್ಷಣೆಯನ್ನು ಮಾಡಿಕೊಳ್ಳಬಲ್ಲವು.

ಹೈಡ್ರೋಸಯನಿಕ್ ಆಸಿಡ್/ಫಾರ್ಮಾನೈಟ್ರೈಲ್/ಫಾರ್ಮಿಕ್ ಆಸಿಡ್ ನೈಟ್ರೈಲ್/ಅಸಿಡಮ್ ಬೊರಾಸ್ಸಿಕಮ್ ಮುಂತಾದ ಹೆಸರುಗಳಿರುವ ಹೈಡ್ರೋಜನ್ ಸಯನೇಡನ್ನು ಪಿಯರಿ ಮ್ಯಾಕ್ವರ್ (1718-1784) ಎಂಬ ವಿಜ್ಞಾನಿಯು 1752ರಲ್ಲಿ ಕಂಡುಹಿಡಿದ. ಹೈಡ್ರೋಜನ್ ಸಯನೇಡಿನಿಂದ ಸೋಡಿಯಂ ಸಯನೇಡ್ ಮತ್ತು ಪೊಟಾಷಿಯಂ ಸಯನೇಡನ್ನು ತಯಾರಿಸಬಹುದು. ಇವನ್ನು ಚಿನ್ನ ಮತ್ತು ಬೆಳ್ಳಿಯನ್ನು ಹೊರತೆಗೆಯಲು ಬಳಸುವುದುಂಟು. ಹಾಗೆಯೇ ಎಲೆಕ್ಟ್ರೋಪ್ಲೇಟಿಂಗ್ ಪ್ರಕ್ರಿಯೆಯಲ್ಲಿ ಸಯನೇಡ್ ಅಗತ್ಯ. ಸಯನೇಡ್ ಧೂಮದಿಂದ ಕೀಟಗಳನ್ನು ಹಾಗೂ ದಂಶಕಗಳನ್ನು (ರೋಡೆಂಟ್ಸ್) ನಿವಾರಿಸಬಹುದು. ಆದರೆ ಈ ಧೂಮವನ್ನು ಎಚ್ಚರಿಕೆಯಿಂದ ಬಳಸಬೇಕಾಗುತ್ತದೆ.

ಹೈಡ್ರೋಜನ್ ಸಯನೇಡನ್ನು ಔಷಧವನ್ನಾಗಿ ಬಳಸುವ ಪ್ರಯತ್ನಗಳು ನಡೆದವು. 1970ರ ದಶಕದಲ್ಲಿ ‘ಲೀಟ್ರೈಲ್’ ಎಂಬ ಸಯನೇಡ್ ಘಟಕವನ್ನು ಕ್ಯಾನ್ಸರ್ ಚಿಕಿತ್ಸೆಯಲ್ಲಿ ಬಳಸಲೆತ್ನಿಸಿ ಸಂಪೂರ್ಣವಾಗಿ ವಿಫಲರಾದರು. ಅತ್ಯಂತ ಉಗ್ರ ರಕ್ತದ ಏರೊತ್ತಡದಲ್ಲಿ, ರಕ್ತದ ಒತ್ತಡವನ್ನು ತಗ್ಗಿಸಲು ‘ಸೋಡಿಯಂ ನೈಟ್ರೊ ಪ್ರುಸೈಡ್’ ಅನ್ನು ಬಳಸುವ ಪ್ರಯತ್ನಗಳು ನಡೆದವು. ಆದರೆ ಈಗ ಉತ್ತಮ ಔಷಧಗಳು ದೊರೆತಿರುವುದರಿಂದ ಈ ಸಯನೇಡ್ ಘಟಕವನ್ನು ಬಳಸುವುದಿಲ್ಲ.

ಹೈಡ್ರೋಜನ್ ಸಯನೇಡ್, ಮಾನವನ ಹತ್ಯೆಗೆ ಹಾಗೂ ಆತ್ಮಹತ್ಯೆಗೆ ಕುಖ್ಯಾತವಾಗಿದೆ. ವಿಶ್ವದ ಮೊದಲನೆಯ ಮಹಾಯುದ್ಧದಲ್ಲಿ ಫ್ರೆಂಚರು (1916) ಮತ್ತು ಅಮೆರಿಕನ್ನರು (1918) ಸಯನೇಡ್ ಬಾಂಬ್ ಪ್ರಯೋಗಿಸಿದರು. ಹೈಡ್ರೋಜನ್ ಸಯನೇಡ್ ಅನಿಲವು ಗಾಳಿಗಿಂತ ಹಗುರ. ಹಾಗಾಗಿ ವಿಷಾನಿಲವು ಗಾಳಿಯಲ್ಲಿ ಮೇಲೆ ಮೇಲೇರಿ ತೇಲಿಹೋಯಿತು. ನೆಲದ ಮೇಲಿದ್ದ ಸೈನಿಕರನ್ನು ಅಷ್ಟಾಗಿ ಕೊಲ್ಲಲಿಲ್ಲ. ವಿಶ್ವದ ಎರಡನೆಯ ಮಹಾಯುದ್ಧದಲ್ಲಿ ಅಮೆರಿಕದ ಅಧ್ಯಕ್ಷ ಹ್ಯಾರಿ ಟ್ರೂಮನ್, ಜಪಾನನ್ನು ಆಕ್ರಮಿಸಲು ರೂಪಿಸಿದ್ದ ‘ಆಪರೇಷನ್ ಡೌನ್‌ಫಾಲ್’ನಲ್ಲಿ ಜಪಾನಿಯರ ಮೇಲೆ ‘ಸಯನೋಜೆನ್ ಕ್ಲೋರೈಡ್’ ಅನ್ನು ಪ್ರಯೋಗಿಸಲು ನಿರ್ಧರಿಸಿದ್ದ. ಆದರೆ ಅಷ್ಟರಲ್ಲಿಯೇ ‘ಮ್ಯಾನ್‌ಹಟ್ಟನ್ ಯೋಜನೆ’ ಫಲಪ್ರದವಾಗಿದ್ದ ಕಾರಣ, ಪರಮಾಣು ಬಾಂಬನ್ನೇ ಜಪಾನಿನ ಹಿರೋಷಿಮ ಮತ್ತು ನಾಗಾಸಾಕಿ ನಗರಗಳ ಮೇಲೆ ಹಾಕಿದ.

ಹಿಟ್ಲರ್ ಹಾಗೂ ಅವನ ಬಳಗದವರು ನಡೆಸಿದ ಸಾಮೂಹಿಕ ಹತ್ಯಾಕಾಂಡಗಳಲ್ಲಿ (ಹಾಲೋಕಾಸ್ಟ್) ಯೆಹೂದಿಗಳನ್ನು ಕೊಲ್ಲಲು ಹೈಡ್ರೋಜನ್ ಸಯನೇಡನ್ನು ಪರಿಣಾಮಕಾರಿಯಾಗಿ ಬಳಸಿದರು. ಥರ್ಡ್ ರೀಚ್ ಸದಸ್ಯರಾದ ಗೋಬೆಲ್ಸ್, ಹಿಮ್ಲರ್, ಗೋರಿಂಗ್ ಮುಂತಾದವರು ಆತ್ಮಹತ್ಯೆಯನ್ನು ಮಾಡಿಕೊಳ್ಳಲು ದ್ರವರೂಪದ ಹೈಡ್ರೋಜನ್ ಸಯನೇಡನ್ನು ಉಪಯೋಗಿಸಿದ್ದು ಒಂದು ದೊಡ್ಡ ವಿಪರ್ಯಾಸವಾಗಿದೆ. ಯಾವ ಸಯನೇಡಿನಿಂದ ಸಾವಿರಾರು ಜನರನ್ನು ಕೊಂದರೋ, ಅದೇ ಸಯನೇಡಿಗೆ ಅವರೂ ಬಲಿಯಾದರು. ಗಯಾನ ದೇಶದ ಜೋನ್ಸ್ ಟೌನಿನ ‘ಪೀಪಲ್ಸ್ ಟೆಂಪಲ್ ಕಲ್ಟ್’ ಸಮುದಾಯಕ್ಕೆ ಸೇರಿದ 900 ಜನರು ಸಯನೇಡ್ ಬೆರೆತ ಪಾನೀಯವನ್ನು ಸೇವಿಸಿ ಮರಣಿಸಿದರು. ಕೆಲವು ಪ್ಲಾಸ್ಟಿಕ್ಕನ್ನು ಸುಟ್ಟಾಗ ಹೈಡ್ರೋಜನ್ ಸಯನೇಡ್ ಉತ್ಪಾದನೆಯಾಗುತ್ತದೆ. ಇಂಥ ಪ್ರಕರಣಗಳಲ್ಲಿ 119 ಜನರು ಪ್ಯಾರಿಸ್ಸಿನಲ್ಲಿ (1973) ಹಾಗೂ 303 ಯಾತ್ರಿಗಳು ಸೌದಿ ಅರೇಬಿಯಾದ ರಿಯಾದ್‌ನಲ್ಲಿ (1990) ಸತ್ತರು.

ಸಯನೇಡ್ ಒಂದು ಎರಡಲುಗಿನ ಖಡ್ಗ!

ವಿಮೋಚನೆಯನ್ನು ಏಕೀಕರಣವೆನ್ನುವ ಹುನ್ನಾರ

ಅವಲೋಕನ
ಜನಮೇಜಯ ಉಮರ್ಜಿ
vveditoped@gmail.com

ಭಾರತದಲ್ಲಿ ಎಲ್ಲವೂ ರಾಜಕೀಯವೇ’ ಎಂಬ ಲಘುಧಾಟಿಯ ಅಭಿಪ್ರಾಯವಿದೆ. ‘ಮತಗಳಿಗಾಗಿ ರಾಜಕಾರಣಿಗಳು ಏನು ಬೇಕಾದರೂ ಮಾಡುತ್ತಾರೆ, ರಾಜಕಾರಣ ಹೊಲಸು’ ಎಂದು ಜನರು ಗೊಣಗಿಕೊಳ್ಳುವುದಿದೆ. ಆದರೆ ಎಲ್ಲ ವಿಷಯಗಳು ಕೇವಲ ರಾಜಕಾರಣವಲ್ಲ ಎಂಬುದು ಕಹಿಸತ್ಯ. ಇಬ್ಬರಲ್ಲಿ ಒಬ್ಬರು ಅಧಿಕಾರಕ್ಕೆ ಬರುತ್ತಾರೆ ಎಂದು ಸುಮ್ಮನೆ ಕೂರುವ ಪರಿಸ್ಥಿತಿ ಇಲ್ಲ. ಶ್ರೀಲಂಕಾ ಮತ್ತು ಬಾಂಗ್ಲಾದೇಶಗಳ ಪರಿಸ್ಥಿತಿ ನೋಡಿದರೆ ಒಬ್ಬ ‘ಮೂರನೆಯ ಆಟಗಾರ’ನೂ ಇದ್ದಾನೆ ಎಂದು ಯಾರಿಗಾದರೂ ಅನ್ನಿಸುತ್ತದೆ; ಅದು ತಿಳಿಯುವುದರೊಳಗಾಗಿ ಕಾಲ ಮಿಂಚಿರುತ್ತದೆ.

ರಾಜಕಾರಣ ಎಂಬುದು ಕೇವಲ ಮುಖವಷ್ಟೇ, ಅದರ ಹಿಂದಿರುವ ಹಿತಾಸಕ್ತಿಗಳು ಬೇರೆಯೇ ಇರುತ್ತವೆ. ತಥಾಕಥಿತ ಇತಿಹಾಸಕಾರರು ನೈಜ ಇತಿಹಾಸ ಮುಚ್ಚಿಡುತ್ತಾ, ತಿರುಚುತ್ತಾ, ಅಪಪ್ರಚಾರ ಮಾಡುತ್ತಾ ಬಂದಿರುವುದರಲ್ಲಿ ಕೇವಲ ಸ್ಥಳೀಯ ರಾಜಕಾರಣವಿದೆ ಎನ್ನಲು ಸಾಧ್ಯವಿಲ್ಲ; ಇದರ ಹಿಂದೆ ವ್ಯವಸ್ಥಿತವಾದ ‘ದೇಶ ಮಾರಕ’ ಜಾಲವಿದೆ. ಜಾಗತಿಕ ವ್ಯಾಪಾರಿ ಶಕ್ತಿಗಳು, ಸಾಂಸ್ಕೃತಿಕ ಸಾಮ್ಯವಾದವೆಂಬ ಸೋಗುಹಾಕಿ ನಮ್ಮಲ್ಲಿನ ಸಾಂಸ್ಕೃತಿಕ ವಿಷಯಗಳನ್ನು ಆಯ್ದುಕೊಂಡು ಗೊಂದಲ ಎಬ್ಬಿಸುವುದು, ಹೆಮ್ಮೆಯ ಮತ್ತು ಮಹತ್ವದ ವಿಷಯಗಳನ್ನು ಲಘುವಾಗಿಸುವುದು, ಸುಳ್ಳು ಕಥನ ಹಬ್ಬಿಸುವುದು ಇದರ ಭಾಗಗಳು. ಮಾತ್ರವಲ್ಲ, ಪ್ರಥಮ ಸ್ವಾತಂತ್ರ್ಯ ಸಂಗ್ರಾಮವನ್ನು ‘ಸಿಪಾಯಿ ದಂಗೆ’ ಎನ್ನುವುದು, ಕೇವಲ ಅಹಿಂಸೆಯಿಂದ ಸ್ವಾತಂತ್ರ್ಯ ಬಂತು ಎನ್ನುವುದು, ಕಾಶ್ಮೀರದ ಭಯೋತ್ಪಾದನೆಯನ್ನು ‘ಆಜಾದಿ ಆಂದೋಲನ’ ಎನ್ನುವುದು ಕೂಡ ಇಂಥ ಕಥನಗಳ ಭಾಗವೇ.

‘ಹೈದರಾಬಾದ್ ವಿಮೋಚನೆ’ಯನ್ನು ‘ಏಕೀಕರಣ’ವೆಂದು ಕಥೆಕಟ್ಟುವ ವಾಮಮಾರ್ಗ ಇತ್ತೀಚಿನ ಕೆಲ ವರ್ಷಗಳಿಂದ ತೆರೆದುಕೊಳ್ಳುತ್ತಿದೆ. ಹೋದ ವರ್ಷವಾದರೆ ತೆಲಂಗಾಣ ಚುನಾವಣೆ ಇತ್ತು, ತುಷ್ಟೀಕರಣಕ್ಕಾಗಿ ಬಳಸಿಕೊಳ್ಳಲಾಗುತ್ತಿದೆ ಎಂದು ಸುಮ್ಮನಾಗಬಹುದು. ಆದರೆ ತಥ್ಯ ಹಾಗಿಲ್ಲ. ರಜಾಕಾರರ ಹಾವಳಿ ಒಂದು ಕರಾಳ ಅಧ್ಯಾಯ. ಇದನ್ನು ಕ್ರಮೇಣ ಮರೆಸುವ ಹುನ್ನಾರ ನಡೆದಿದೆ. 1947ರಲ್ಲಿ ಭಾರತಕ್ಕೆ ಸ್ವಾತಂತ್ರ್ಯ ಬಂತು, ಬರುವಾಗಲೇ ಹೋಳಾಗಿ ಬಂತು. 600ಕ್ಕೂ ಹೆಚ್ಚು ಸಂಸ್ಥಾನಗಳನ್ನು ಭಾರತ ಒಕ್ಕೂಟದೊಳಕ್ಕೆ ಸೇರಿಸುವ ಸವಾಲು ಎದುರಾಯಿತು. ಹೈದರಾಬಾದ್ ನಿಜಾಮ ಮೀರ್ ಉಸ್ಮಾನ್ ಅಲಿ ಖಾನನಿಗೆ ಸ್ವತಂತ್ರವಾಗಿರುವ ಆಸೆಯಿತ್ತು. ಅವನ ಸಂಸ್ಥಾನವು ಕನ್ನಡ, ಮರಾಠಿ, ತೆಲುಗು ಭಾಷಿಕರ ಪ್ರದೇಶವಾಗಿತ್ತು. ಅಲ್ಲಿದ್ದ ಪ್ರಜೆಗಳಲ್ಲಿ ಹಿಂದೂಗಳದ್ದೇ ಸಿಂಹಪಾಲು, ಹೀಗಾಗಿ ಸಂಸ್ಥಾನವು ಭಾರತ ಒಕ್ಕೂಟದಲ್ಲಿ ವಿಲೀನವಾಗಬೇಕು ಎಂಬುದು ಜನಾಭಿಪ್ರಾಯವಾಗಿತ್ತು. ಇದನ್ನು ಒಡೆಯುವ ಕುತಂತ್ರಕ್ಕೆ ನಿಜಾಮ ಮುಂದಾದಾಗ ಮಾರ್ಗೋಪಾಯವಾಗಿ ಹೊಳೆದ ಹೆಸರೇ ‘ರಜಾಕಾರರ ಪಡೆ’. ಇದೊಂದು ಸಂಘಟಿತ ಸಶಸ್ತ್ರ ಗುಂಪು. ಪ್ರಜೆಗಳ ಕೂಗನ್ನು ಹತ್ತಿಕ್ಕಲು, ಅವರ ಹೋರಾಟವನ್ನು ಬಗ್ಗುಬಡಿ ಯಲು ನಿಜಾಮ ಕಟ್ಟಿದ್ದ ಖಾಸಗಿ ಸೈನ್ಯವಾಗಿತ್ತು ಈ ಪಡೆ. ಮಜ್ಲಿಸ್-ಇ-ಇತ್ತಿಹಾದ್-ಉಲ್ ಮುಸ್ಲಿಮೀನ್ (ಎಂಐಎಂ) ಪಕ್ಷದ ನೇತಾರ ಕಾಸಿಂ ರಜ್ವಿ ಈ ಪಡೆಯ ಮುಂದಾಳು. ವಿಮೋಚನಾ ಹೋರಾಟವನ್ನು ಹತ್ತಿಕ್ಕುವುದು, ನಿಜಾಮನ ಸಾರ್ವಭೌಮತೆಯನ್ನು ಮತ್ತು ಮುಸ್ಲಿಂ ಪ್ರಭುತ್ವವನ್ನು ಉಳಿಸುವುದು ಈ ಪಡೆಯ ಉದ್ದೇಶವಾಗಿತ್ತು.

ಮೂಲತಃ ಮಹಾರಾಷ್ಟ್ರದ ಲಾತೂರಿನವನಾದ ಕಾಸಿಂ ರಜ್ವಿ ವೃತ್ತಿಯಲ್ಲಿ ವಕೀಲ, ಮೇಲಾಗಿ ಮತಾಂಧ. ಇವನ ಇಶಾರೆಯಂತೆ ರಜಾಕಾರರು ದಾಳಿ ಪ್ರಾರಂಭಿಸಿದರು, ಹಳ್ಳಿಗಳನ್ನು ನಾಶಪಡಿಸಿದರು, ಕಂಡಕಂಡಲ್ಲಿ ಬೆಂಕಿಯಿಟ್ಟರು. ಕೊಲೆ, ಸುಲಿಗೆ, ಮಾನಹಾನಿಗೆ ಕೈಹಾಕಿದರು, ದೇವಾಲಯಗಳ ನಾಶವನ್ನು ಎಗ್ಗಿಲ್ಲದೆ ನಡೆಸಿದರು. ಅವರ ಗೂಢಚಾರ ಜಾಲವು ಬಲವಾಗೇ ಇತ್ತು.

ಭಯಾನಕ ಗೋರ್ಟಾ ಹತ್ಯಾಕಾಂಡ

ಬೀದರ್ ಜಿಲ್ಲೆಯ ಗೋರ್ಟಾ ಗ್ರಾಮದಲ್ಲಿ ನಡೆದ ಹತ್ಯಾಕಾಂಡವು ರಜಾಕಾರರ ಬರ್ಬರತೆಗೆ ಒಂದು ನಿದರ್ಶನ ಎನ್ನಬಹುದು. 1948ರ ಮೇ 9ರಂದು ಈ ಗ್ರಾಮಕ್ಕೆ ನುಗ್ಗಿದ ಸಾವಿರಾರು ರಜಾಕಾರರು, ಕಂಡಕಂಡವರನ್ನೆಲ್ಲಾ ಕೊಚ್ಚುತ್ತಾ ಸಾಗಿದರು; ಮಹಿಳೆಯರು, ವೃದ್ಧರು, ಮಕ್ಕಳು ಹೀಗೆ ಯಾರನ್ನೂ ಅವರು ಲೆಕ್ಕಿಸಲಿಲ್ಲ. ಸಿಕ್ಕಿದ್ದನ್ನೆಲ್ಲಾ ದೋಚುತ್ತಾ ಹೋದ ಇವರ ಅತ್ಯಾಚಾರ-ಅನಾಚಾರಗಳನ್ನು ಹೇಳತೀರದು. ಇವರ ದಾಳಿಯ ಪರಿಣಾಮವಾಗಿ ಊರಿಗೆ ಊರೇ ರಕ್ತಸಿಕ್ತವಾಗಿರುತ್ತಿತ್ತು. ರಜಾಕಾರರ ಬರ್ಬರತೆಗೆ ಬೆಚ್ಚಿ ಬೆದರಿದ ಸುಮಾರು 800 ಜನ ಒಂದೇ ಮನೆಯಲ್ಲಿ ಆಶ್ರಯ ಪಡೆದಿದ್ದರಂತೆ. ಇಂಥ ಕಥೆಗಳನ್ನು ಕೇಳಿದಾಗ ಈಗಲೂ ಭಯವಾಗುತ್ತದೆ, ಮನ ಕಲಕುತ್ತದೆ. ಅಷ್ಟಕ್ಕೂ ಇಂಥ ದುರಂತಕ್ಕೆ ಕಾರಣವಾಗಿದ್ದು, ದೇಶಕ್ಕೆ ಸ್ವಾತಂತ್ರ್ಯ ಬಂದಾಗ ಹಾರಿಸಿದ ತ್ರಿವರ್ಣ ಧ್ವಜವನ್ನು ಒತ್ತಾಯಪೂರ್ವಕವಾಗಿ ಇಳಿಸಿದ್ದ ರಜಾಕಾರರ ಸಹಚರನ ಹತ್ಯೆ.

ಉಕ್ಕಿನ ಮನುಷ್ಯ ಮಾಡಿದ ಕಮಾಲ್

ಈ ಸಮಸ್ಯೆ ಬಗೆಹರಿದಿದ್ದು ‘ಆಪರೇಷನ್ ಪೋಲೋ’ ಎಂಬ ಸೈನಿಕ ಕಾರ್ಯಾಚರಣೆಯ ಮೂಲಕ. 1948ರ ಸೆಪ್ಟೆಂಬರ್ 13ರಂದು ಭಾರತೀಯ ಸೇನೆಯು ಹೈದರಾಬಾದಿನ ಮೇಲೆ ಮುಗಿಬಿತ್ತು. ರಜಾಕಾರರು ದಿಕ್ಕಾಪಾಲಾಗಿ ಓಡಿದರು. ನಾಲ್ಕೇ ದಿನಗಳಲ್ಲಿ ಹೈದರಾಬಾದಿನ ಸೈನ್ಯ ಸೋತಿತು, ನಿಜಾಮ ಶರಣಾದ. ಸೆ.17ರಂದು ಕರಾಳ ಅಧ್ಯಾಯ ಕೊನೆಗೊಂಡಿತು, ಹೈದರಾಬಾದ್ ಸಂಸ್ಥಾನವು ಭಾರತ ಒಕ್ಕೂಟದಲ್ಲಿ ವಿಲೀನವಾಯಿತು. ‘ಉಕ್ಕಿನ ಮನುಷ್ಯ’ ಎಂದೇ ಹೆಸರಾಗಿದ್ದ ಸರ್ದಾರ್ ವಲ್ಲಭಭಾಯಿ ಪಟೇಲರ ದಿಟ್ಟ ನಿರ್ಧಾರದಿಂದ ಇದು ಸಾಧ್ಯವಾಯಿತು. ಹೈದರಾಬಾದ್ ಮಾತ್ರವಲ್ಲದೆ 600ಕ್ಕೂ ಹೆಚ್ಚು ಸಂಸ್ಥಾನಗಳು ಹೀಗೆ ಭಾರತ ಒಕ್ಕೂಟದಲ್ಲಿ ವಿಲೀನವಾದವು. ಕಾಶ್ಮೀರದ ಸಮಸ್ಯೆಯೊಂದನ್ನು ಬಗೆಹರಿಸಲು ಸಾಧ್ಯವಾಗದವರು ಯಾರು ಎಂಬುದನ್ನು ನಂತರ ಸವಿಸ್ತಾರವಾಗಿ ನೋಡಬಹುದು.

ಇತಿಹಾಸವನ್ನು ಮರೆಯಬಾರದು

ಇತಿಹಾಸವನ್ನು ಮರೆತವರಿಗೆ ಭವಿಷ್ಯವಿಲ್ಲ. ಈಗ ಇದು ಯಾಕೆ ನೆನಪಾಗಬೇಕು ಅಂದರೆ ಅದಕ್ಕೊಂದು ಕಾರಣವಿದೆ. ಸೆಪ್ಟೆಂಬರ್ 17ರ ದಿನವು ಹೈದರಾಬಾದ್ ವಿಮೋಚನಾ ದಿನವಾಗಿದೆ. ಆದರೆ ಕೆಲವು ಸ್ವಯಂಘೋಷಿತ ವಿಚಾರವಾದಿಗಳು ಇತ್ತೀಚೆಗೆ ‘ಇದು ಹೈದರಾಬಾದ್ ವಿಮೋಚನಾ ದಿನವಲ್ಲ; ಹೈದರಾಬಾದ್ ಸಂಸ್ಥಾನವು ಭಾರತದೊಂದಿಗೆ ವಿಲೀನವಾದ/ಏಕೀಕರಣವಾದ ದಿನ’ ಎಂದು ವ್ಯಾಖ್ಯಾನಿಸಲು ಶುರುಮಾಡಿದ್ದಾರೆ. ಇದು ತುಂಬಾ ಅಪಾಯಕಾರಿ. ಏಕೆಂದರೆ, ಕ್ರಮೇಣವಾಗಿ ವಿಮೋಚನೆಯ ಇತಿಹಾಸವನ್ನು ಮರೆಸಲು, ಸ್ವರಾಜ್ಯ-ಸುರಾಜ್ಯಕ್ಕಾಗಿ ನಡೆದ ಹೋರಾಟದ ಕಿಚ್ಚಿಗೆ ನೀರು ಎರಚಲು ವ್ಯವಸ್ಥಿತವಾಗಿ ತಂತ್ರಗಳನ್ನು ಹೆಣೆಯಲಾಗುತ್ತದೆ. ರಜಾಕಾರರು ನಡೆಸಿದ ಹಿಂಸೆಯ ಕರಿನೆರಳು ಆರದ ಗಾಯಗಳನ್ನು ಮಾಡಿದೆ ಎಂಬುದನ್ನು ಮರೆಯಲೇಬಾರದು. ಹೈದರಾಬಾದ್ ವಿಮೋಚನೆಯು ಒಂದು ನಿರ್ಣಾಯಕ ಹೋರಾಟ; ಈ ಹೋರಾಟದಲ್ಲಿ ಮಡಿದ ಚೇತನಗಳ ನೆನಪು ಸದಾ ಇರಬೇಕು.

(ಲೇಖಕರು ಸಾಹಿತಿ)

ಓದುಗರ ಒಣಿ

ಓದುಗರನ್ನು ಬಿಟ್ಟು ಇಲ್ಲಿ ಯಾರಿಗೂ ಪ್ರವೇಶವಿಲ್ಲ

ನನ್ನದೂ ಅದೇ ಕಥೆ

ಅತಿಥಿ ಉಪನ್ಯಾಸಕರ ದುಸ್ಥಿತಿಯ ಕುರಿತಾಗಿ ‘ಒಡಲಾಳ’ ಅಂಕಣದಲ್ಲಿ (ವಿಶ್ವವಾಣಿ ಸೆ.17) ಮೂಡಿಬಂದ ಡಾ.ಸುಧಾಕರ ಹೊಸಳ್ಳಿ ಅವರ ‘ಇವರು ಕೂಡ ಗುರುಗಳೇ, ಗುಲಾಮರಂತೆ ಇದ್ದಾರಷ್ಟೇ!’ ಎಂಬ ಲೇಖನ ವಸ್ತುನಿಷ್ಠವಾಗಿ ಮೂಡಿಬಂದಿದೆ. ಒಳ್ಳೆಯ ಭಾಷೆ, ನಿಖರ ಮತ್ತು ಹರಿತವಾದ ನಿರೂಪಣೆ ಇದರಲ್ಲಿತ್ತು. ದುರಂತವೆಂದರೆ, ಇಂಥ ಲೇಖನಗಳನ್ನು ನಮ್ಮಂಥ ಅತಿಥಿ ಉಪನ್ಯಾಸಕರು ಮಾತ್ರ ಓದುವುದು, ಒಂದು ನಿಟ್ಟುಸಿರು ಬಿಡುವುದು, ಇಷ್ಟು ಬಿಟ್ಟರೆ ಇನ್ನೇನೂ ಆಗುವುದಿಲ್ಲ. ಅಂದಹಾಗೆ, ನಾನು ಕೂಡ ‘ತಿಥಿ’ಯ ನಿರೀಕ್ಷೆಯಲ್ಲಿರುವ ಅತಿಥಿಯೇ....

- ಗುರುಪ್ರಸಾದ್, ಬೆಂಗಳೂರು

ಇದಕ್ಕೆ ಬ್ರೇಕ್ ಹಾಕಿ

ವಿಶ್ವ ಪ್ರಜಾಪ್ರಭುತ್ವ ದಿನ’ದ ಹೆಸರಿನಲ್ಲಿ ಮಾನವ ಸರಪಳಿ ರಚನೆಗಾಗಿ, ರಜೆಯ ದಿನದಂದು ಕೂಡ ಶಾಲಾ-ಕಾಲೇಜಿನ ವಿದ್ಯಾರ್ಥಿಗಳನ್ನು ರಾಷ್ಟ್ರೀಯ ಹೆದ್ದಾರಿಗಳಲ್ಲಿ ನಿಲ್ಲಿಸಿದ ಪರಿಪಾಠ ಸರಿಯಲ್ಲ. ಮಕ್ಕಳನ್ನು ಹೀಗೆ ಅನವಶ್ಯಕವಾಗಿ ಜಾಥಾಕ್ಕೆ ಕರೆದುಕೊಂಡು ಹೋಗುವ, ಅವರಿಂದ ಒತ್ತಾಯಪೂರ್ವಕವಾಗಿ ಜೈಕಾರ ಹಾಕಿಸಿ, ‘ಆಚರಣೆಯಲ್ಲಿ ನಾವೂ ಪಾಲ್ಗೊಂಡಿದ್ದೆವು’ ಎಂದು ಸಾಮಾಜಿಕ ಜಾಲತಾಣಗಳಲ್ಲಿ ಬಿಂಬಿಸಿಕೊಳ್ಳುವ ಶೈಕ್ಷಣಿಕ ಸಂಸ್ಥೆಗಳ/ಇಲಾಖೆಯ ಮನಸ್ಥಿತಿ ಬದಲಾಗಬೇಕು. ಇಂಥ ಕ್ರಮದ ಬದಲು, ಪ್ರಜಾಪ್ರಭುತ್ವದ ಮೌಲ್ಯ ಹಾಗೂ ಪ್ರಜೆಗಳ ಕರ್ತವ್ಯವನ್ನು ತಿಳಿಸಿಕೊಡುವ ಇನ್ನಷ್ಟು ಸರಳ ಮಾರ್ಗಗಳನ್ನು ಅಳವಡಿಸಿಕೊಳ್ಳುವುದು ಸೂಕ್ತ. ಸರಕಾರವು ಇಂಥ ಆಚರಣೆಗಳನ್ನು ಪೈಪೋಟಿಯ ಸಾಧನವಾಗಿಸುವ ಬದಲು, ಪ್ರಜಾಪ್ರಭುತ್ವದ ಆಶಯಗಳನ್ನು ಅರ್ಥಪೂರ್ಣ ರೀತಿಯಲ್ಲಿ ಅನುಸರಿಸುವಂತಾಗುವ ನಿಟ್ಟಿನಲ್ಲಿ ಹೆಜ್ಜೆ ಇರಿಸಿದರೆ ಒಳಿತು.

- ಸುರೇಂದ್ರ ಪೈ, ಭಟ್ಕಳ

ಕನ್ನಡವ ಕಾಪಾಡೋಣ

ನಮ್ಮ ರಾಷ್ಟ್ರವು ಅನೇಕ ಭಾಷೆಗಳ ಆಡುಂಬೊಲವಾಗಿಬಿಟ್ಟಿದೆ. ದೇಶವನ್ನು ಆಕ್ರಮಿಸಿದ ಆಂಗ್ಲರನ್ನು ಇಂಗ್ಲಿಷ್ ಹಿಂಬಾಲಿಸಿತು, ಎಲ್ಲ ಕಡೆಗೂ ವ್ಯಾಪಿಸಿ ಜನರ ಮೇಲೆ ಮೋಡಿ ಮಾಡಿತು. ಇಂಗ್ಲಿಷ್ ಕಲಿತವರಿಗೆ ಉದ್ಯೋಗಾವಕಾಶಗಳು ಸಿಗುತ್ತಿದ್ದುದನ್ನು ನೋಡಿ ಎಲ್ಲರೂ ಇಂಗ್ಲಿಷ್‌ಗೆ ಮುಗಿಬಿದ್ದರು. ಕಾಲಕ್ರಮೇಣ ಜನಾಂದೋಲನವಾಗಿ ಇಂಗ್ಲಿಷರು ಭಾರತದಿಂದ ಕಾಲ್ಕಿತ್ತರೂ, ಇಂಗ್ಲಿಷ್ ಮಾತ್ರ ಇಲ್ಲೇ ಅಂಟಿಕೊಂಡಿದೆ. ಆ ಭಾಷೆಯಲ್ಲಿ ಮಾತಾಡುವುದೇ ಒಂದು ಹೆಮ್ಮೆ ಎನ್ನುವಂತಾಗಿದೆ. ಇಂಗ್ಲಿಷ್ ಪುಸ್ತಕ ಭಂಡಾರ ಎಲ್ಲ ವಿಷಯಗಳಿಂದ ತುಂಬಿದ್ದು, ಅದಿಲ್ಲದೆಯೇ ವಿಜ್ಞಾನ, ಖಗೋಳ, ವೈದ್ಯಕೀಯ, ಭೌತಶಾಸ್ತ್ರ ಹೀಗೆ ಯಾವುದನ್ನೂ ಅಭ್ಯಾಸ ಮಾಡಲು ಸಾಧ್ಯವಿಲ್ಲ ಎಂಬಂಥ ಪರಿಸ್ಥಿತಿ ನಿರ್ಮಾಣವಾಗಿದೆ. ‘ನಮ್ಮನ್ನು ಕಾಪಾಡು ಇಂಗ್ಲಿಷಿನಿಂದ, ಪೂತನಿಯ ಕೊಂದ ಕೃಷ್ಣ ಮುಕುಂದ’ ಎಂಬ ರಾಷ್ಟ್ರಕವಿಯ ಹಾಡಿಗೆ ಮುಕುಂದನೂ ಕಿವಿಗೊಡಲಿಲ್ಲ. ಹೀಗೆ ಇಂಗ್ಲಿಷ್‌ನೊಡನೆ ಸ್ಪರ್ಧಿಸಲು ಸಾಧ್ಯವಾಗದೆ ಕನ್ನಡವು ದಿನದಿನಕ್ಕೂ ಮಾಯವಾಗುತ್ತಿದೆ. ಹಳ್ಳಿಗರೂ ಕನ್ನಡವನ್ನು ಮರೆಯುತ್ತಿದ್ದಾರೆ. ಇದೇ ರೀತಿಯಲ್ಲಿ, ಹಿಂದಿ ನಮ್ಮದೇ ಭಾಷೆಯಾದರೂ ಎಲ್ಲಿ ಇಂಗ್ಲಿಷ್‌ನಂತೆ ಅದೂ ಆಕ್ರಮಿಸಿಬಿಡುತ್ತದೋ ಎಂಬ ಭಯವಿದೆ. ಆದ್ದರಿಂದ ಎಲ್ಲರೂ ಕೈಜೋಡಿಸಿ ಕನ್ನಡವನ್ನು ಕಾಪಾಡೋಣ.

- ಸತ್ಯಬೋಧ, ಬೆಂಗಳೂರು

ಇದೇನ ಸಭ್ಯತೆ-ಸಂಸ್ಕೃತಿ?

ಶಾಲೆಯಲ್ಲಿ ಓದುತ್ತಿರುವ ಮಕ್ಕಳಿಗೆ ಶಿಕ್ಷಕರು ನಮ್ಮ ನೆಲದ ಸಂಸ್ಕೃತಿ, ಸಂಸ್ಕಾರ ಮತ್ತು ವಿನಯಶೀಲತೆಯನ್ನು ಹೇಳಿಕೊಡಬೇಕಾದ್ದು ಅಪೇಕ್ಷಿತ. ಆದರೆ ಇತ್ತೀಚಿನ ದಿನಗಳಲ್ಲಿ ಅವರಲ್ಲಿ ಕೆಲವರು ಅಶ್ಲೀಲತೆಯನ್ನು ಪ್ರೋತ್ಸಾಹಿಸುತ್ತಿದ್ದಾರೆ. ಡಾ. ಸರ್ವಪಲ್ಲಿ ರಾಧಾಕೃಷ್ಣನ್ ಅವರ ಜನ್ಮದಿ

ನವನ್ನು ಶಿಕ್ಷಕರ ದಿನವಾಗಿ ಆಚರಿಸುವ ಸೆಪ್ಟೆಂಬರ್ 5ರಂದು ಅಂಥದೊಂದು ಅಪಸವ್ಯ ಘಟಿಸಿದೆ. ಅಂದು ಅಸ್ಸಾಂ ರಾಜ್ಯದ ಶಾಲೆಯೊಂ ದರಲ್ಲಿ ಅಲ್ಲಿನ ಶಿಕ್ಷಕರು, ದಿನಾಚರಣೆಯ ನೆಪದಲ್ಲಿ ಹಮ್ಮಿಕೊಳ್ಳಲಾಗಿದ್ದ ಕಾರ್ಯಕ್ರಮದಲ್ಲಿ ‘ಸ್ತ್ರೀ-2’ ಹಿಂದಿ ಚಲನಚಿತ್ರದಲ್ಲಿ ನಟಿ ತಮನ್ನಾ ಭಾಟಿಯಾ ಅವರು ಹೆಜ್ಜೆಹಾಕಿರುವ ‘ಆಜ್ ಕಿ ರಾತ್’ ಎಂಬ ಹಾಡಿಗೆ ವಿದ್ಯಾರ್ಥಿನಿಯರಿಂದ ನೃತ್ಯವನ್ನು ಮಾಡಿಸಿದ್ದಾರೆ. ಇದು ಎಲ್ಲರ ಕೆಂಗಣ್ಣಿಗೆ ಗುರಿಯಾಗಿದೆ. ಮಕ್ಕಳು ಖಾಲಿ ಪುಟವಿದ್ದಂತೆ, ಅದರಲ್ಲಿ ದೊಡ್ಡವರು ಏನನ್ನು ಬರೆಯುತ್ತಾರೋ ಅದೇ ಗಟ್ಟಿಯಾಗಿ ಮೂಡುತ್ತದೆ. ಮಕ್ಕಳಿಗೆ ಒಳ್ಳೆಯ ಶಿಕ್ಷಣ ನೀಡಿ, ಸಂಸ್ಕಾರವನ್ನು ಕಲಿಸಿ ಉತ್ತಮ ನಾಗರಿಕರನ್ನಾಗಿ ರೂಪಿಸುವುದು ತಮ್ಮ ಜವಾಬ್ದಾರಿ ಎಂಬುದನ್ನು ಶಿಕ್ಷಕರು ಮತ್ತು ಪೋಷಕರು ಯಾವತ್ತೂ ಮರೆಯಬಾರದು.

- ಪುಂಡಲೀಕ ಲಮಾಣಿ, ಮೈಸೂರು

ಅಚಾತುರ್ಯ ಆದೀತು

ಸರಕಾರಿ ವೈದ್ಯರು ಇನ್ನು ಮುಂದೆ ಔಷಧಿ ಚೀಟಿಗಳನ್ನು ಕನ್ನಡದಲ್ಲಿಯೇ ಬರೆಯಲು ಕಡ್ಡಾಯ ಮಾಡಿ ಆದೇಶಿಸುವಂತೆ ಕೋರಿ ಕನ್ನಡ ಅಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷರು, ಆರೋಗ್ಯ ಸಚಿವ ದಿನೇಶ್ ಗುಂಡೂರಾವ್ ಅವರಿಗೆ ಪತ್ರ ಬರೆದಿದ್ದು ವರದಿಯಾಗಿದೆ. ಭಾಷೆಯ ಅಭಿವೃದ್ಧಿ ದೃಷ್ಟಿಯಿಂದ ಇದು ಸಮ್ಮತವೆನಿಸಿದರೂ, ವೈದ್ಯರು ಹಾಗೂ ಔಷಧಿ ಅಂಗಡಿಯ ಮಾಲೀಕರ ದೃಷ್ಟಿಯಿಂದ ನೋಡಿದಾಗ ಅಚಾತುರ್ಯವಾಗುವ ಸಂಭವವಿದೆ. ಇಂದಿನ ಬಹುತೇಕ ವೈದ್ಯರು ಆಂಗ್ಲ ಮಾಧ್ಯಮದಲ್ಲಿ ಕಲಿತು ಪದವಿ ಮುಗಿಸಿರುತ್ತಾರೆ, ಹೀಗಾಗಿ ಅವರಿಗೆ ಕನ್ನಡ ಕಾಗುಣಿತದ ಪರಿಪೂರ್ಣ ಜ್ಞಾನವಿರುತ್ತದೆ ಎನ್ನಲಾಗದು. ರೋಗಿಗಳಿಗೆ ಇಂಗ್ಲಿಷ್ ಮಾತ್ರೆ ಮತ್ತು ಇಂಜೆಕ್ಷನ್‌ಗಳ ಹೆಸರು ಬರೆದು ಕೊಡುವಾಗ ಒಂದಕ್ಷರ ವ್ಯತ್ಯಾಸವಾದರೂ ಅದು ಜೀವರಕ್ಷಕವಾಗುವ ಬದಲು ಜೀವಭಕ್ಷಕವಾಗುವ ಅಪಾಯವಿದೆ. ಆದ್ದರಿಂದ, ಪ್ರಾಧಿಕಾರದ ಅಧ್ಯಕ್ಷರು ಈ ಅನುಚಿತ ಆದೇಶದ ಬದಲು ಇತರೆ ಅವಶ್ಯಕ ಕ್ರಮಗಳ ಬಗ್ಗೆ ಗಮನ ಹರಿಸಬೇಕಾಗಿದೆ.

ಇನ್ನು, ಕನ್ನಡದ ವಾಹಿನಿಗಳು ಕಾರ್ಯಕ್ರಮ ಪ್ರಸಾರ ಮಾಡುವಾಗ ತಪ್ಪಾದ ಕನ್ನಡದಲ್ಲಿ ಅಡಿಬರಹ ತೋರಿಸುವುದನ್ನು ನಿಲ್ಲಿಸಬೇಕಿದೆ. ‘ಹ’ಕಾರಕ್ಕೂ ‘ಅ’ಕಾರಕ್ಕೂ ಇರುವ ವ್ಯತ್ಯಾಸವನ್ನು ನಿರೂಪಕರಿಗೆ ಮನದಟ್ಟು ಮಾಡಿಸಬೇಕಿದೆ. ಹಿರಿತೆರೆ-ಕಿರುತೆರೆಗಳ ತಾರೆಯರು ಸಂದರ್ಶನಗಳಲ್ಲಿ ಕಾಲು ಮೇಲೆ ಕಾಲು ಹಾಕಿ ಕುಳಿತು, ಪ್ರತಿ ವಾಕ್ಯಕ್ಕೊಮ್ಮೆ ‘ಆ್ಯಂಡ್’, ‘ಯು ನೋ’ ಎಂದು ಮುತ್ತು ಉದುರಿಸುವ ಬಗೆಯನ್ನು ತಡೆಯಬೇಕಿದೆ. ತಮ್ಮ ಚಿತ್ರಮಂದಿರಗಳಲ್ಲಿ ಕನ್ನಡ ಚಿತ್ರಗಳಿಗೆ ತಾರತಮ್ಯ ಆಡಿಸಿ ಪರಭಾಷಾ ಚಿತ್ರಗಳಿಗೆ ಮಾತ್ರ ಮಣೆ ಹಾಕುವ ನಾಡದ್ರೋಹಿ ಮಾಲೀಕರಿಗೆ, ಹೊರರಾಜ್ಯಗಳಿಂದ ಬಂದು ಕರ್ನಾಟಕದಲ್ಲಿ ನೆಲೆಸಿ ದಶಕವೇ ಆಗಿದ್ದರೂ ಕನ್ನಡ ಕಲಿಯದ ಪ್ರಭೃತಿಗಳಿಗೆ, ಎಷ್ಟೇ ಎಚ್ಚರಿಸಿದರೂ ತಮ್ಮ ಅಂಗಡಿಗಳ ನಾಮಫಲಕದಲ್ಲಿ ಕನ್ನಡವನ್ನು ಬಳಸದೆ ಧಾರ್ಷ್ಟ್ಯ ಮೆರೆಯುವ ಪರರಾಜ್ಯದ ವರ್ತಕರಿಗೆ ಪಾಠ ಕಲಿಸಬೇಕಿದೆ. ಎಲ್ಲಕ್ಕಿಂತ ಮುಖ್ಯವಾಗಿ, ಕನ್ನಡ ಗೊತ್ತಿದ್ದರೂ ಮನೆಯ ಒಳಗೂ-ಹೊರಗೂ ಪರಸ್ಪರ ವ್ಯವಹರಿಸುವಾಗ ‘ಠಸ್ ಪುಸ್’ ಇಂಗ್ಲಿಷನ್ನೇ ಮಾತಾಡುವ ಕನ್ನಡಮ್ಮನ ಮಕ್ಕಳಲ್ಲಿ ಮಾತೃಭಾಷೆಯ ಬಗ್ಗೆ ಮಮತೆ ಮೂಡಿಸಬೇಕಿದೆ. ಕನ್ನಡಿಗರೆಲ್ಲರೂ ಕೈಜೋಡಿಸಿದರೆ ಇದು ಸಾಧ್ಯ; ಆದರೆ ಬೆಕ್ಕಿನ ಕೊರಳಿಗೆ ಗಂಟೆ ಕಟ್ಟುವವರಾರು?

- ಕೆ.ಶ್ರೀನಿವಾಸರಾವ್, ಹರಪನಹಳ್ಳಿ

ಭಟ್ಟರ್ ಸ್ಕಾಚ್

● ಎಲ್.ವಿ.ಸತೀಶ, ಮೈಸೂರು
ಭಟ್ರೇ, ನಮ್ಮ ಮನಸ್ಸು ನಮಗೆ ಒಳ್ಳೇದು ಮಾಡಿದ್ರೆ ದೇವರು.. ಕೆಟ್ಟದ್ದು ಮಾಡಿದ್ರೆ?
– ಖುದ್ದಾಗಿ ನಮ್ಮ ಮೊಬೈಲಿನಲ್ಲಿ ರೆಕಾರ್ಡ್ ಮಾಡಿಕೊಂಡರೂ ಇಡೀ ಜಗತ್ತಿಗೆ ವೈರಲ್!

● ಜಯಂತಿ ನಾಗರಾಜ, ಕಲ್ಯಾಣನಗರ
ಭಟ್ರೇ, ಕಂಬಾರರ ಮುಂದಿನ ಕೃತಿ ಯಾವುದಂತೆ?
– ಓದುಗರು ಪ್ರತಿಭಟಿಸಬಹುದೆಂದು ಅವರು ಕೊನೆ ಕ್ಷಣದ ತನಕ ಗೌಪ್ಯ ಕಾಪಾಡುತ್ತಾರೆ!

● ಭಾರತಿ ವಿಜಯರಾಜು, ಕೋರಮಂಗಲ
ಭಟ್ರೇ, ನನ್ನ ಹತ್ರ ಕಣ್ಣಿದೆ, ಆದರೆ ಕನ್ನಡಕವಿಲ್ಲ ಏನ್ಮಾಡ್ಲಿ?
– ವೈಫೈ ಒಂದೇ ಇದ್ರೆ ಪ್ರಯೋಜನವಿಲ್ಲ, ಮೊಬೈಲೂ ಇರಬೇಕು!

● ಪ್ರಭಾಕರ ರೆಡ್ಡಿ, ತುಮಕೂರು
ಭಟ್ರೇ, ಹೆಣ್ಣಿಗೆ ಹೆಣ್ಣೇ ವೈರಿ ಅಂತಾರಲ್ಲ, ನಿಜವಾ?
– ಎಲೆ ಅಡಕೆ ಪತ್ರಕರ್ತ ಮತ್ತು ಆರ್.ಜಿ.ಹಳ್ಳಿ ನಾಗರಾಜನನ್ನು ನೋಡಿಯೂ ಈ ಪ್ರಶ್ನೆನಾ?!

● ರವೀಂದ್ರ, ನಾಯಕ, ಅಂಕೋಲಾ
ಭಟ್ರೇ, ಪ್ರೀತಿಸಿ ಮದುವೆಯಾದರೆ ಹೆಂಡತಿ ಸವಾರಿ ಮಾಡುತ್ತಾಳಂತೆ, ಹೌದಾ?
– ಪ್ರೀತಿಗೂ, ಮದುವೆಗೂ ಸಂಬಂಧವಿಲ್ಲ. ಹೆಂಡತಿ ಅಂತ ಕರೆಯಿಸಿಕೊಂಡ ನಂತರ ಸವಾರಿ ಸಾಮಾನ್ಯ!

● ದೇವಿಕಾ, ಬೆಳಗಾವಿ
ಭಟ್ರೇ, ಮಹಿಳೆಯರಿಗೆ ರಾಜಕಾರಣದಲ್ಲಿ ಭವಿಷ್ಯ ಇದೆಯಾ?
– ಮೋಟಮ್ಮ, ನೇಸರ್ಗಿಯವರ ಸಾಧನೆ ನೋಡಿಯೂ ಈ ಪ್ರಶ್ನೆಯಾ?!

● ಎಸ್.ರಮೇಶ್ ಬರ್ಕಲಿ ಕಿರಗಂದೂರು, ಮಂಡ್ಯ
ಭಟ್ರೇ, ಒಳ್ಳೆಯ ಪ್ರಶ್ನೆಗಳಿಗೆ ಬಹುಮಾನಗಳನ್ನು ಯಾವಾಗ ಕೊಡ್ತೀರಿ..?
– ಒಳ್ಳೆಯ ಉತ್ತರಗಳಿಗೆ ಬಹುಮಾನ ಪಡೆಯಲು ಆರಂಭಿಸಿದಂದಿನಿಂದ!

● ಗೋಪಿ, (ಇಮೇಲ್ ಮೂಲಕ)
ಭಟ್ರೇ, ನಮ್ಮ ದೇಶವನ್ನು ರಾಮರಾಜ್ಯ ಮಾಡಲು ಸಾಧ್ಯವಾ?
– ಎಲ್ಲರೂ ಅದನ್ನೇ ಧರಿಸಿದ್ರೆ 'ರಾಮರಾಜ್' ಮಾಡಬಹುದು!

● ಬಿ.ಸಂಜೀವ, ದಾವಣಗೆರೆ
ಭಟ್ರೇ, ದಿನವೂ ಬೇರೆ ಬೇರೆ ಹುಡುಗಿಯರ ಜತೆ ಮಾತಾಡುವ ಆಸೆ, ಯಾವ ಪ್ರೊಫೆಷನ್ ಆಯ್ದುಕೊಳ್ಳಲಿ?
– ಲೇಡಿಸ್ ಹಾಸ್ಟೆಲ್ಲಿನದೋ ಕ್ಯಾಂಟೀನ್‌ನ ವೇಟರ್ ಆಗಬಹುದು!

ವ್ಯವಸ್ಥೆ ಆಫ್‌ಲೈನ್, ವಂಚನೆ ಆನ್‌ಲೈನ್

ಸಾವಿರಾರು ಕೋಟಿ ರು. ಹಣ, ನೂರಾರು ಜೀವಹರಣಗಳಿಗೆ ಕಾರಣವಾದ ಸೈಬರ್ ವಂಚನೆಯನ್ನು ದೇಶದ ವಿರುದ್ಧ ಸಾರಿದ ಸಮರವೆಂದೇ ಪರಿಗಣಿಸಬೇಕು.

ಲೋಕಮತ
ಲೋಕೇಶ್ ಕಾಯರ್ಗ
vveditoped@gmail.com

ನಮ್ಮ ರಾಜ್ಯದ ಈ ವರ್ಷದ ಅತಿ ದೊಡ್ಡ ಹಗರಣ ಯಾವುದೆಂದು ಕೇಳಿದರೆ ಹಿಂದಿನ ಸರಕಾರದ್ದೋ, ಈಗಿನ ಸರಕಾರದ್ದೋ ಎಂದು ನೀವು ಮರು ಪ್ರಶ್ನಿಸಬಹುದು ! ನಾನು ಹೇಳುತ್ತಿರುವ ಈ ಹಗರಣದಲ್ಲಿ ಲೂಟಿಯಾಗಿರುವುದು/ಆಗುತ್ತಿರುವುದು ಸರಕಾರದ ದುಡ್ಡಲ್ಲ. ನಮ್ಮ ,ನಿಮ್ಮ ಖಾತೆಯಲ್ಲಿ ಕಷ್ಟ ಪಟ್ಟು ದುಡಿದು ಸಂಪಾದಿಸಿದ ಹಣ. 2024ರ ಜನವರಿಯಿಂದ ಏಪ್ರಿಲ್ ವರೆಗೆ ದೇಶದಲ್ಲಾಗಿರುವ ಆನ್‌ಲೈನ್ ವಂಚನೆಗಳ ಬಗ್ಗೆ ಇಂಡಿಯನ್ ಸೈಬರ್ ಕ್ರೈಮ್ ಕೋಆರ್ಡಿನೇಷನ್ ಸೆಂಟರ್ (ಐಸಿಸಿಸಿಸಿ) ವರದಿಯೊಂದನ್ನು ಬಿಡುಗಡೆ ಮಾಡಿದೆ. ಕಳೆದ ಹಣಕಾಸು ವರ್ಷ ದೇಶದಲ್ಲಿ 36,075 ಸೈಬರ್ ವಂಚನೆ ಪ್ರಕರಣಗಳು ದಾಖಲಾಗಿವೆ. ಈ ವರ್ಷ ಏಪ್ರಿಲ್‌ವರೆಗಿನ ನಾಲ್ಕು ತಿಂಗಳಲ್ಲಿ ಭಾರತೀಯರು ಬರೋಬ್ಬರಿ 1,776 ಕೋಟಿ ರುಪಾಯಿ ಹಣ ಕಳೆದುಕೊಂಡಿದ್ದಾರೆ. ಇದರಲ್ಲಿ ಅರ್ಧಕ್ಕಿಂತ ಹೆಚ್ಚು ಮೊತ್ತವನ್ನು ಕಳೆದುಕೊಂಡಿರುವುದು ಕನ್ನಡಿಗರು. ಜನವರಿಯಿಂದ ಜೂನ್ ವರೆಗಿನ ಆರು ತಿಂಗಳ ತಿಂಗಳ ಅವಧಿಯಲ್ಲಿ ರಾಜ್ಯದಲ್ಲಿ 903 ಕೋಟಿ ರು. ಪ್ರಮಾಣದ 3,079 ಆನ್‌ಲೈನ್ ವಂಚನೆ ಪ್ರಕರಣಗಳು ನಡೆದಿವೆ. ವರ್ಷಾಂತ್ಯಕ್ಕೆ ವಂಚನೆಯ ಮೊತ್ತ 1,500 ಕೋಟಿ ರು. ದಾಟಬಹುದು. ಈಗ ಹೇಳಿ ಇದನ್ನು ಮೀರಿಸುವ ಹಗರಣ ಇನ್ನಾವುದುಂಟು ? ಆದರೆ ಮುಡಾ, ವಾಲ್ಮೀಕಿ, ಕೋವಿಡ್ ಹಗರಣಗಳ ಹಿಂದೆ ಬಿದ್ದ ನಮ್ಮ ಜನಪ್ರತಿನಿಧಿಗಳು ಮತ್ತು ತನಿಖಾಧಿಕಾರಿಗಳಿಗೆ ಈ ನೇರಾನೇರ ವಂಚನೆಯ ಬಗ್ಗೆ ಯೋಚಿಸಲೂ ಸಮಯವಿಲ್ಲ.

ತುರ್ತು ಸಾಲ, ಕ್ರೆಡಿಟ್ ಕಾರ್ಡ್, ಇನ್ಶುರೆನ್ಸ್, ಆನ್‌ಲೈನ್ ಉದ್ಯೋಗ, ವರ್ಕ್ ಫ್ರಮ್ ಹೋಮ್ ಸೌಲಭ್ಯ ಒದಗಿಸುವ ನೆಪದಲ್ಲಿ ಕಳುಹಿಸುವ ಎಸ್ಸೆಮ್ಮೆಸ್, ಆರ್‌ಬಿಐ, ಎಲ್ಲೈಸಿ, ಬ್ಯಾಂಕ್, ಆದಾಯಕರ ಇಲಾಖೆ ಹೆಸರಿನಲ್ಲಿ ಕಳುಹಿಸುವ ಅಡ್ರೆಸ್ ಅಪ್‌ಡೇಟ್ ಮತ್ತು ಆಧಾರ್ ಲಿಂಕ್ ಸಂದೇಶಗಳ ಹಿಂದೆ ಈ ವಂಚಕರೂ ಸೇರಿಕೊಂಡಿರಬಹುದು. ಕೆಲವೊಮ್ಮೆ ಲಲನೆಯರು ನಿಮ್ಮ ವಾಟ್ಸ್ ಆ್ಯಪ್ ಖಾತೆಗೆ ನೇರವಾಗಿ ಲಗ್ಗೆ ಇಟ್ಟು ಸ್ನೇಹ ಮತ್ತು ಆತ್ಮೀಯ ಸಂವಾದದ ಕೋರಿಕೆ ಮಂಡಿಸಿರಬಹುದು. ದೇವರು ನಾನಾ ರೂಪದಲ್ಲಿ ಅವತರಿಸುವಂತೆ ಸೈಬರ್ ಕಳ್ಳರು ಯಾವುದೇ ರೂಪದಲ್ಲಿ ನಿಮ್ಮ ಮುಂದೆ ಕಾಣಿಸಿಕೊಂಡು ವರ ನೀಡುವ ನೆಪದಲ್ಲಿ ದೋಚಬಹುದು.

ಒಟಿಪಿ ಕೇಳಿ ವಂಚಿಸುವವರು ಈಗ ಎಲ್‌ಕೆಜಿ ಸಾಲಿನ ವಂಚಕರು. ಇವರ ವಂಚನೆ ಮೊತ್ತ ಅಬ್ಬಬ್ಬಾ ಎಂದರೆ ಐದಂಕಿ ಒಳಗಿನ ಮೊತ್ತ. ಆದರೆ ಪಿಎಚ್‌ಡಿ ಸಾಲಿನಲ್ಲಿರುವ ವಂಚಕರು ಲಪಟಾಯಿಸುತ್ತಿರುವುದು ಲಕ್ಷ, ಕೋಟಿ ರು.ಗಳಲ್ಲಿ. ಇವರಿಗೆ ಬಲಿ ಬಿದ್ದವರು ಕೂಡ ಅಂತಿಂಥವರಲ್ಲ. ಬೆಂಗಳೂರಿನ ಪ್ರಕರಣವನ್ನೇ ತೆಗೆದುಕೊಳ್ಳುವುದಾದರೆ ಐಟಿ ಕಂಪನಿಗಳು ಹೆಚ್ಚಿನ ಸಂಖ್ಯೆಯಲ್ಲಿರುವ ವೈಟ್‌ಫೀಲ್ಡ್‌ನ ಸೈಬರ್ ಎಕನಾಮಿಕ್ ಮತ್ತು ನಾರ್ಕೋಟಿಕ್ಸ್ (ಸೆನ್) ಪೊಲೀಸ್ ಠಾಣೆಯೊಂದರಲ್ಲೇ ಕಳೆದ ಆರು ತಿಂಗಳಲ್ಲಿ 530 ಆನ್‌ಲೈನ್ ಟ್ರೇಡಿಂಗ್ ವಂಚನೆ ಪ್ರಕರಣಗಳು ದಾಖಲಾಗಿವೆ. ಇವರು ಸರಾಸರಿ 30ಲಕ್ಷ ರು.ಗಳಂತೆ 178 ಕೋಟಿ ರು. ಕಳೆದುಕೊಂಡಿದ್ದಾರೆ. ವಂಚಿತರಲ್ಲಿ ಮುಕ್ಕಾಲು ಪಾಲು ನಮ್ಮ ಬುದ್ಧಿವಂತ ಟೆಕ್ಕಿಗಳು. ಹಾಗೆಯೇ ವಿಜ್ಞಾನಿಗಳು, ಸೇನಾಧಿಕಾರಿಗಳು, ಬ್ಯಾಂಕ್ ಅಧಿಕಾರಿಗಳು, ಉದ್ಯಮಿಗಳು, ಶಿಕ್ಷಕರು.. ಹೀಗೆ ತಮ್ಮ ವೃತ್ತಿಯಲ್ಲಿ ನೈಪುಣ್ಯತೆ ಹೊಂದಿರುವ ನಾನಾ ಕ್ಷೇತ್ರದ ಜನರಿದ್ದಾರೆ. ಹೂಡಿಕೆ ವೇಳೆ ಇವರು ಕನಿಷ್ಠ ಕಾಮನ್‌ಸೆನ್ಸ್ ಬಳಸಿದ್ದರೂ ಈ ವಂಚನೆಯಿಂದ ಪಾರಾಗಬಹುದಿತ್ತು. ಚಲನಚಿತ್ರ ನಿರ್ದೇಶಕಿ ರೂಪಾ ಅಯ್ಯರ್ ಕೂಡ ಕೆಲ ತಿಂಗಳ ಹಿಂದೆ 'ಮನಿಲ್ಯಾಂಡರಿಂಗ್' ವಿಚಾರಣೆ ನೆಪದಲ್ಲಿ ಒಂದೂವರೆ ದಿನಗಳ ಕಾಲ 'ಡಿಜಿಟಲ್ ಅರೆಸ್ಟ್' ಆಗಿದ್ದರು ಎಂದರೆ ಈ ವಂಚಕರು ಎಷ್ಟು ಚಾಲಾಕಿಗಳು ಊಹಿಸಿ.

ನೀವು ಇನ್‌ಸ್ಟಾಗ್ರಾಮ್, ಫೇಸ್‌ಬುಕ್, ಎಕ್ಸ್ ನಂತಹ ಯಾವುದೇ ಖಾತೆ ತೆರೆದು ನೋಡಿ. ಅಲ್ಲಿ ಹೂಡಿಕೆ ಕುರಿತ ಹತ್ತಾರು ಜಾಹೀರಾತುಗಳು ಕಾಣಿಸಿಕೊಳ್ಳುತ್ತವೆ. ನೀವು ಈ ಬಗ್ಗೆ ಲಕ್ಷ್ಯ ವಹಿಸುವುದಿಲ್ಲ. ಆದರೆ ನಮ್ಮವರೇ ಆದ ಇನ್ಫೋಸಿಸ್‌ನ ಸುಧಾಮೂರ್ತಿ ಮತ್ತು ನಾರಾಯಣ ಮೂರ್ತಿ ಒಟ್ಟಿಗೇ ಕುಳಿತು,''ದೇಶದ ಬಡಜನತೆಗಾಗಿ ನಾವು ಹೂಡಿಕೆಯ ಅವಕಾಶ ಕಲ್ಪಿಸುತ್ತಿದ್ದೇವೆ. ನೀವು ಕೇವಲ 15 ಸಾವಿರ ಹೂಡಿಕೆ ಮಾಡಿದರೆ ಸಾಕು'' ಎಂದು ಕರೆ ಕೊಟ್ಟಾಗ ನಂಬದೇ ಇರಲು ಸಾಧ್ಯವೇ? ಕೆಲ ತಿಂಗಳ ಹಿಂದೆ ಬಿಬಿಸಿ ವೆಬ್‌ಸೈಟ್ ಹೆಸರಿನಲ್ಲಿ ಫೇಸ್‌ಬುಕ್‌ನಲ್ಲಿ ಕರಣ್ ಜೋಹರ್‌ನ 'ಕಾಫಿ ವಿದ್ ಕರಣ್ ಶೋ'ದ ಆಕರ್ಷಕ ಶೀರ್ಷಿಕೆ ಇತ್ತು. ತೆರೆದು ನೋಡಿದಾಗ ಸಂದರ್ಶನಕ್ಕೆ ಬಂದ ನಾಯಕಿ, ''ನಾನು ಬೆರಳೆಣಿಕೆಯಷ್ಟು ಸಿನಿಮಾಗಳಲ್ಲಿ ಮಾತ್ರ ನಟಿಸಿದ್ದರೂ ಕೋಟಿಗಟ್ಟಲೆ ಸಂಪಾದನೆ ಮಾಡಿದ್ದೇನೆ'' ಎಂದು ವಿವರಿಸಿದ್ದಳು. ಈಕೆಯನ್ನು ಉದ್ಧರಿಸಿದ ಹೂಡಿಕೆಯ ಲಿಂಕನ್ನು ಈ ಸಂದರ್ಶನದಲ್ಲಿ ನೀಡಲಾಗಿತ್ತು. ಕೃತಕ ಬುದ್ಧಿಮತ್ತೆ ಬಳಸಿ ಹರಿಬಿಡಲಾದ ಈ ವರದಿಗಳನ್ನು ನೋಡಿದರೆ ನಮ್ಮ ಬುದ್ಧಿಗೆ ಲಕ್ವ ಹೊಡೆಯದಿರಲು ಸಾಧ್ಯವೇ ಇಲ್ಲ!.

ಇದು ಸ್ಯಾಂಪಲ್ ಅಷ್ಟೇ. ವಂಚಕರು ಮುಖೇಶ್ ಅಂಬಾನಿ, ಸುಂದರ್ ಪಿಚ್ಚೈ, ರಾಜ್‌ದೀಪ್ ಸರ್ದೇಸಾಯಿ ಸೇರಿದಂತೆ ಯಾವ ಸೆಲೆಬ್ರಿಟಿಗಳನ್ನೂ ಬಿಡದೇ ಇಂತಹ ವರದಿಗಳನ್ನು ಹರಿಬಿಡುತ್ತಿದ್ದಾರೆ. ''ಇವರೇ ಹೇಳಿದ ಮೇಲೆ ಇನ್ನೇನು, ಹೋದರೆ 15 ಸಾವಿರ ರುಪಾಯಿ'' ಎನ್ನುವ ಲೆಕ್ಕದಲ್ಲಿಯೇ ಹೂಡಿಕೆ ಮಾಡಲು ಲಿಂಕ್ ಒತ್ತಿದರೆ ಮುಗಿಯಿತು. ನಿಮಗೊಂದು ನಕಲಿ ಟ್ರೇಡಿಂಗ್ ಅಕೌಂಟ್ ಕ್ರಿಯೇಟ್ ಮಾಡುತ್ತಾರೆ. ಒಂದೇ ವಾರದಲ್ಲಿ ನಿಮ್ಮ ಹೂಡಿಕೆ ವರ್ಚುವಲ್ ರೂಪದಲ್ಲಿ ಲಕ್ಷ ರು. ದಾಟಿರುವುದನ್ನು ತೋರಿಸುತ್ತಾರೆ. ಸ್ವರ್ಗಕ್ಕೆ ಏಣಿ ಹಾಕುವ ಅವಸರದಲ್ಲಿ ಹೆಚ್ಚಿನವರು ತಮ್ಮಲ್ಲಿರುವ ಪೂರ್ತಿ ಹಣವನ್ನು ಇಲ್ಲಿ ತೊಡಗಿಸುತ್ತಾರೆ. ಯಾವುದೋ ಸಂದರ್ಭದಲ್ಲಿ ಹಣ ಬೇಕೆಂದು ವಿದ್‌ಡ್ರಾ ಮಾಡಲು ಹೊರಟರೆ ಅಕೌಂಟ್ ತಕ್ಷಣ ಸೀಜ್ ಆಗುತ್ತದೆ. ನಿಮ್ಮ ನಂಬರ್ ಬ್ಲಾಕ್ ಮಾಡುತ್ತಾರೆ. ಒಂದು ವೇಳೆ ಇನ್ನೂ ಮುಂದುವರಿದು ಸಂಪರ್ಕಿಸಿದರೆ, '' ಆದಾಯ ತೆರಿಗೆ ಇಲಾಖೆ ನೋಟಿಸ್ ಕಾರಣಕ್ಕೆ ಖಾತೆ ಸ್ಥಗಿತಗೊಂಡಿದೆ. ಮುಂಗಡ ತೆರಿಗೆಯಾಗಿ ಇಷ್ಟು ಹಣ ಕಟ್ಟಿ'' ಎಂದು ಹೊಸ ವರಸೆ ಶುರು ಮಾಡುತ್ತಾರೆ. ಅನೇಕರು ನಕಲಿಗಳಿಗೆ ಐಟಿ ಕರವನ್ನೂ ಪಾವತಿಸಿದ್ದಾರೆ. ವಿಶೇಷ ಎಂದರೆ ತಮ್ಮ ಹೆಸರು ಬಳಸಿಕೊಂಡು ಜನರ ಹಣ ಲೂಟಿ ಹೊಡೆಯುವ ಪ್ರಯತ್ನ ಆಗಿದೆ ಎಂದು ಇದುವರೆಗೆ ಸಿನಿಮಾ ನಟಿಯೊಬ್ಬರು ಬಿಟ್ಟರೆ ಯಾವ ಉದ್ಯಮಿಯೂ ದೂರು ನೀಡಿಲ್ಲ!

ವಂಚಕರಿಗೆ ಭಾರತವೇ ಸ್ವರ್ಗ

ಆಗ್ನೇಯ ಏಷ್ಯಾದ ಮ್ಯಾನ್ಮಾರ್, ಥಾಯ್ಲೆಂಡ್, ಲಾವೋಸ್, ಕಾಂಬೋಡಿಯಾ ಮತ್ತು ಆಫ್ರಿಕಾ ದೇಶಗಳ ಡಿಜಿಟಲ್ ವಂಚಕರಿಗೆ 150 ಕೋಟಿ ಜನಸಂಖ್ಯೆಯ ಭಾರತವೇ ಪ್ರಧಾನ ಲಕ್ಷ್ಯ. ವಿಶ್ವಮಟ್ಟದಲ್ಲೂ ಆನ್‌ಲೈನ್ ವಂಚನೆಗೆ ಒಳಗಾದ ದೇಶಗಳ ಪೈಕಿ 60 ಕೋಟಿಗೂ ಹೆಚ್ಚು ಸ್ಮಾರ್ಟ್‌ಫೋನ್ ಬಳಕೆದಾರರಿರುವ ಭಾರತಕ್ಕೆ ಅಗ್ರಸ್ಥಾನ. ದೇಶದೊಳಗೂ ವೃತ್ತಿಪರ ಆನ್‌ಲೈನ್ ವಂಚಕರ ಸಂಖ್ಯೆ ಕಡಿಮೆ ಏನಿಲ್ಲ. ಬಿಹಾರ, ಉತ್ತರ ಪ್ರದೇಶ, ದೆಹಲಿ, ಜಾರ್ಖಂಡ್, ಪಂಜಾಬ್ ಸೇರಿದಂತೆ ಉತ್ತರ ಭಾರತದ ಯಾವುದೇ ಹಳ್ಳಿಯಲ್ಲಿ ಕುಳಿತು ಗಾಳ ಹಾಕುವವರಿಗೆ ಕನ್ನಡಿಗರೇ ಸುಲಭದ ಮಿಕಗಳು. ಇವರು ಯಾರದ್ದೋ ಅಮಾಯಕರ ಹೆಸರಲ್ಲಿ ನಕಲಿ ದಾಖಲೆ ಕೊಟ್ಟು, ಬ್ಯಾಂಕ್ ಖಾತೆ ಸೃಷ್ಟಿಸಿ, ಸಿಮ್ ಕಾರ್ಡ್ ಪಡೆದುಕೊಳ್ಳುತ್ತಾರೆ. ತಮ್ಮ ಖಾತೆಗೆ ಹಣ ಬೀಳುತ್ತಿದ್ದಂತೆಯೇ ಕ್ಷಣ ಮಾತ್ರದಲ್ಲಿ ಬೇರೆ ಖಾತೆಗಳಿಗೆ ಹಣ ವರ್ಗಾಯಿಸಿಕೊಳ್ಳುತ್ತಾರೆ. ಮೈಸೂರಿನಂತಹ ಜಿಲ್ಲೆಯೊಂದರಲ್ಲಿಯೇ ಕಳೆದ ಆರು ತಿಂಗಳಲ್ಲಿ 32 ಕೋಟಿ ರೂ. ಆನ್‌ಲೈನ್ ವಂಚನೆ ಆಗಿದೆ. ಇಲ್ಲಿನ ಯುವ ಉದ್ಯಮಿ ಯೊಬ್ಬರು ಜೂನ್ ಎರಡನೇ ವಾರ ಆನ್‌ಲೈನ್ ಟ್ರೇಡಿಂಗ್‌ನಲ್ಲಿ 2.96 ಕೋಟಿ ಕಳೆದುಕೊಂಡಿದ್ದರು. ಇದು ಕೇವಲ ಹಣಕಾಸು ವಂಚನೆಗಳಷ್ಟೇ ಅಲ್ಲ. ಜೀವನ ಪೂರ್ತಿ ದುಡಿದ ಹಣವನ್ನು ಕಳೆದುಕೊಂಡು ಆತ್ಮಹತ್ಯೆಗೆ ಶರಣಾದ ಕುಟುಂಬಗಳಿಗೆ ಲೆಕ್ಕವಿಲ್ಲ. ಆರ್ಥಿಕವಾಗಿ ಸುಸ್ಥಿತಿಯಲ್ಲಿದ್ದ ಕುಟುಂಬವೊಂದು ಇದ್ದಕ್ಕಿದ್ದಂತೆ ಆತ್ಮಹತ್ಯೆಗೆ ಶರಣಾಗಿದೆ ಎಂದರೆ ಇಂತಹ ವಂಚನೆಯೊಂದಕ್ಕೆ ಬಲಿಯಾಗಿದೆ ಎಂದು ಸುಲಭವಾಗಿ ಊಹಿಸಬಹುದು.

ಜಾಗೃತಿಯೊಂದೇ ಮಾರ್ಗ

ನಮ್ಮನ್ನಾಳುವ ಸರಕಾರಕ್ಕೆ ಇದೆಲ್ಲ ಗೊತ್ತಿಲ್ಲ ಎಂದಲ್ಲ. ಸುಳ್ಳು ಸುದ್ದಿಗಳನ್ನು ಪತ್ತೆ ಮಾಡಲು ವಿಶೇಷ ತಂಡ ರಚಿಸುವ ಸರಕಾರಕ್ಕೆ ಅಮಾಯಕ ಜನರನ್ನು ವಂಚಿಸಿ ನೂರಾರು ಕೋಟಿ ರು. ಲೂಟಿ ಮಾಡುವ ಸೈಬರ್ ವಂಚಕರ ಜಾಡು ಪತ್ತೆಗೆ ತಜ್ಞರ ತಂಡ ರಚಿಸುವುದು ಕಷ್ಟವೇನಲ್ಲ. ಆದರೆ ಸೈಬರ್ ಖದೀಮರನ್ನು ಪತ್ತೆ ಮಾಡಬೇಕಾದರೆ, ರಾಜ್ಯ ಮತ್ತು ಕೇಂದ್ರದ ತನಿಖಾ ಸಂಸ್ಥೆಗಳು, ಆರ್‌ಬಿಐ, ಸೆಬಿಯಂತಹ ನಿಯಂತ್ರಕ ಸಂಸ್ಥೆಗಳು, ಬ್ಯಾಂಕಿಂಗ್ ವಲಯ ಎಲ್ಲರೂ ಒಂದಾಗಿ ಸಮನ್ವಯದಿಂದ ಕಾರ್ಯಾಚರಣೆ ಮಾಡಲೇಬೇಕು. ಅಂತಾರಾಷ್ಟ್ರೀಯ ಮಟ್ಟದ ಮಾದಕ ದ್ರವ್ಯ ಮಾಫಿಯಾ, ಹೈಟೆಕ್ ಜೂಜುಕೋರರೂ ಸೈಬರ್ ವಂಚನೆಯ ಪಾಲುದಾರರು. ದೇಶವಿದ್ರೋಹಿ ಶಕ್ತಿಗಳಿಗೂ ಸೈಬರ್ ವಂಚನೆ ರಾಜಮಾರ್ಗ. ಇತ್ತೀಚೆಗೆ ಗೃಹ ಸಚಿವಾಲಯದ ಅಡಿಯಲ್ಲಿ ರಚಿಸಲಾದ ಇಂಡಿಯನ್ ಸೈಬರ್ ಕ್ರೈಮ್ ಕೋಆರ್ಡಿನೇಷನ್ ಸೆಂಟರ್ ಈ ನಿಟ್ಟಿನಲ್ಲಿ ಕಾರ್ಯಪ್ರವೃತ್ತವಾಗಿದೆ. ಸೈಬರ್ ಅಪರಾಧ ಗಳನ್ನು ತಡೆಗಟ್ಟಲು 5000 ಸೈಬರ್ ಯೋಧರ ಪಡೆ ರಚಿಸುವ ಕೇಂದ್ರ ಸಚಿವರ ಹೇಳಿಕೆಯೂ ಉಲ್ಲೇಖಾರ್ಹ. ರಾಜ್ಯದಲ್ಲೂ ಇದರ ತನಿಖೆಗೆ ವಿಶೇಷ ಠಾಣೆಗಳಿವೆ. ಆದರೆ ಸೈಬರ್ ವಂಚನೆ ಹೃದಯಾ ಘಾತ ಇದ್ದಂತೆ. ತಕ್ಷಣ ದೂರು ದಾಖಲಿಸದಿದ್ದರೆ ಹಣ ವಾಪಸ್ ಬರುವುದು ಕಷ್ಟ. ಈ ಸಂಬಂಧ ದೂರು ನೀಡಲೆಂದೇ ಸರಕಾರ ಟೋಲ್ ಫ್ರೀ (1930) ನಂಬರ್ ನೀಡಿದೆ. ಆದರೆ ವಂಚಿತರು ಎಚ್ಚೆತ್ತು ಕೊಳ್ಳುವಷ್ಟರಲ್ಲಿ ನಾಲ್ಕೈದು ಖಾತೆಗಳಿಗೆ ಹಣ ವರ್ಗಾವಣೆಯಾಗಿರುತ್ತದೆ. ಅದರಲ್ಲೂ ಕ್ರಿಪ್ಟೋ ಕರೆನ್ಸಿಯಲ್ಲಿ ವ್ಯವಹಾರ ನಡೆದಿದ್ದರೆ ನಮ್ಮ ಅಧಿಕಾರಿಗಳು ಅಸಹಾಯಕರು. ರಾಜ್ಯದ ಕ್ರಿಪ್ಟೋ ಕರೆನ್ಸಿ ಹಗರಣದಲ್ಲಿ ಶ್ರೀಕಿಯನ್ನು ಎರಡೆರಡು ಸಲ ಬಂಧಿಸಿದ ಬಳಿಕವೂ ಪೊಲೀಸರಿಗೆ ಸಾಕ್ಷ್ಯ ಸಂಗ್ರಹಿಸಲು ಸಾಧ್ಯವಾಗಲಿಲ್ಲ. ಇಂತಹ ಪ್ರಕರಣ ತಡೆಯಬೇಕಾದರೆ ಒಂದಷ್ಟು ಸಾಮಾನ್ಯ ಕಾರ್ಯಾ ಚರಣೆ ವಿಧಾನಗಳು (ಎಸ್‌ಒಪಿ) ಅಗತ್ಯ.

ಎಲ್ಲಕ್ಕಿಂತ ಮುಖ್ಯವಾಗಿ ಸೈಬರ್ ವಂಚನೆಯನ್ನು ದೇಶದ್ರೋಹಕ್ಕೆ ಸಮಾನ ಅಪರಾಧ ಎಂದು ಪರಿಗಣಿಸಬೇಕು. ಸದ್ಯ ನೂರಾರು ಕೋಟಿ ವಂಚಿಸಿದ ಸೈಬರ್ ಖದೀಮನೊಬ್ಬ ಸಿಕ್ಕಿ ಬಿದ್ದರೂ ಕಾನೂನು ಪ್ರಕಾರ 3 ವರ್ಷ ಕಾಲ ಶಿಕ್ಷೆ ವಿಧಿಸಬಹುದು. ಇಷ್ಟೂ ದುಡ್ಡನ್ನು ಇನ್ನೊಂದು ಬೇನಾಮಿ ಖಾತೆಗೆ ಹಾಕಿ, ಜೈಲಿಗೆ ಹೋಗಿ ಬರುವುದು ಏನು ಮಹಾ ಎಂದು ಯೋಚಿಸುವವರೇ ಹೆಚ್ಚು.

ನಾರದ ಸಂಚಾರ

ಕಲಹಪ್ರಿಯ
naadigru@gmail.com

ನೀ ನನಗಾದರೆ, ನಾ ನಿನಗೆ!

ಆಪತ್ತಿಗೆ ಆದವನೇ ಸ್ನೇಹಿತ' ಎಂಬುದೊಂದು ಮಾತಿದೆ. ಈ ಮಾತು ಈಗ ನೆನಪಾಗಲು ಕಾರಣ, ಕೇಂದ್ರ ಶಿಕ್ಷಣ ಸಚಿವ ಧರ್ಮೇಂದ್ರ ಪ್ರಧಾನ್ ಅವರು. ಒಡಿಶಾ ರಾಜ್ಯದ ಕಟಕ್‌ನಲ್ಲಿರುವ 156 ವರ್ಷ ಹಳೆಯ ರಾವೆನ್‌ಶಾ ಕಾಲೇಜಿಗೆ (ಈಗ ಇದು ರಾವೆನ್‌ಶಾ ವಿಶ್ವವಿದ್ಯಾಲಯ) 'ಮರುನಾಮಕರಣ ಭಾಗ್ಯ'ವನ್ನು ನೀಡಬೇಕು ಎಂದು ಧರ್ಮೇಂದ್ರ ಪ್ರಧಾನ್ ಅವರು ಆಗ್ರಹಿಸಿದ್ದಕ್ಕೆ ಅವರನ್ನು ಕೆಲವರು ಮೂಲೆಗುಂಪು ಮಾಡಿದ್ದಾರೆ ಎಂಬ ಮಾತು ಕೇಳಿಬರುತ್ತಿದೆ. ಅದು ಶುರುವಾಗಿದ್ದು ಹೀಗೆ. ಪ್ರಧಾನ್ ಅವರು ಹೀಗೇ ಒಮ್ಮೆ ಮಾತಾಡುತ್ತಿರುವಾಗ, 'ಸದರಿ ಶಿಕ್ಷಣ ಸಂಸ್ಥೆಗೆ ಈ ಹೆಸರು ಬರುವುದಕ್ಕೆ ಕಾರಣರಾಗಿದ್ದ ರಾವೆನ್‌ಶಾ ಅವರು, ಒಡಿಶಾದಲ್ಲಿ 1866ರಲ್ಲಿ ಸಂಭವಿಸಿದ ಭೀಕರ ಬರಗಾಲದಲ್ಲಿ ಲಕ್ಷಾಂತರ ಜನರು ಸಾಯುವುದಕ್ಕೆ ಹೊಣೆಗಾರರಾ ಗಿದ್ದರು. ಆ ಕಾಲಘಟ್ಟದಲ್ಲಿ ಕಟಕ್ ವಿಭಾಗದ ಕಮಿಷನರ್ ಆಗಿದ್ದ ರಾವೆನ್‌ಶಾ ಅವರು ತಮ್ಮ ಕಾರ್ಯನಿರ್ವಹಣೆಯಲ್ಲಿ ವಿಫಲರಾಗಿದ್ದರು' ಎಂದು ಸಮರ್ಥಿಸಿಕೊಂಡಿದ್ದರು. ಆದರೆ, ಒಡಿಶಾ ಸರಕಾರವು ಧರ್ಮೇಂದ್ರ ಪ್ರಧಾನ್ ಅವರ ವಾದಕ್ಕೆ ಸೊಪ್ಪುಹಾಕಲಿಲ್ಲ; ಪ್ರಧಾನ್‌ರ ಪ್ರಸ್ತಾವನೆಯನ್ನು ವಿರೋಧಿಸಿ ಜನರಿಂದ ಭಾರಿ ಹುಯಿಲು ಎದ್ದಿದ್ದೂ ಇದಕ್ಕೆ ಪುಷ್ಟಿ ನೀಡಿತ್ತು ಎನ್ನಿ! ಇಂಥದೊಂದು ಸಂಭಾವ್ಯ ನಡೆಯನ್ನು ಬಲವಾಗಿ ವಿರೋಧಿಸಿದ ಬರಹಗಾರರು, ಬುದ್ಧಿಜೀವಿಗಳು ಮತ್ತು ಕಾಲೇಜಿನ ಹಳೆಯ ವಿದ್ಯಾರ್ಥಿಗಳು, 'ಒಡಿಶಾದಲ್ಲಿ ಸಂಭವಿಸಿದ ಬರಗಾಲಕ್ಕೆ ರಾವೆನ್‌ಶಾರನ್ನು ದೂಷಿಸಲಾಗುತ್ತದೆಯೇ?' ಎಂದು ಆಕ್ಷೇಪಿಸಿದ್ದರು. ರಾವೆನ್‌ಶಾ ಅವರು ಒಡಿಶಾವನ್ನು ತೊರೆದ ನಂತರ, ಕಟಕ್‌ನ ಜಿಲ್ಲಾ ಶಾಲೆಗೂ ಅವರ ಹೆಸರನ್ನೇ ಮರುನಾಮಕರಣ ಮಾಡಲಾಗಿತ್ತು ಎನ್ನಿ.

ಈ ವಿವಾದ ಹೊಗೆಯಾಡುತ್ತಿರುವಾಗಲೇ ಕಟಕ್ ಕ್ಷೇತ್ರದ ಬಿಜೆಪಿ ಸಂಸದ ಭರ್ತೃಹರಿ ಮಹತಾಬ್ ಅವರು ಅಖಾಡಕ್ಕಿಳಿದಿದ್ದು ಧರ್ಮೇಂದ್ರ ಪ್ರಧಾನ್‌ರ ದನಿಗೆ ಒಂದಷ್ಟು ಬಲತುಂಬಿತು ಎನ್ನಬೇಕು. ''ರಾವೆನ್‌ಶಾ ವಿಶ್ವವಿದ್ಯಾಲಯದ ಮರುನಾಮಕರಣಕ್ಕೆ ಸಂಬಂಧಿಸಿದ ಆಗ್ರಹವು ಸಮರ್ಥನೀಯವಾಗಿದೆ ಮತ್ತು ವಸಾಹತುಶಾಹಿ 'ಹ್ಯಾಂಗೋವರ್'ನಿಂದ ನಾವು ಹೊರಬರಬೇಕಾದ ಅಗತ್ಯವಿದೆ'' ಎಂಬರ್ಥವನ್ನು ಧ್ವನಿಸುವ ಎರಡು ಲೇಖನಗಳನ್ನು ಅವರು ಬರೆದು ಧರ್ಮೇಂದ್ರರಿಗೆ ಒತ್ತಾಸೆಯಾಗಿ ನಿಂತಿದ್ದೇ ಇದಕ್ಕೆ ಸಾಕ್ಷಿ. ಸಾಲದೆಂಬಂತೆ, ಸದರಿ ಶಿಕ್ಷಣ ಸಂಸ್ಥೆಯ ಮರುನಾಮಕರಣದ ಚರ್ಚಾವಿಷಯದ ಕುರಿತಾಗಿ ಮಹತಾಬ್ ಅವರು ಒಂದು ಸಭೆಯನ್ನು ಆಯೋಜಿಸಿದ್ದೂ ಉಂಟು. ಆದರೆ ರಾಜಕೀಯ ವಿಶ್ಲೇಷಕರು ಈ ಬೆಳವಣಿಗೆಯನ್ನು ತಮ್ಮದೇ ಆದ ರೀತಿಯಲ್ಲಿ ವ್ಯಾಖ್ಯಾನಿಸುತ್ತಿದ್ದಾರೆ. ''ಹಿಂದೆ ಬಿಜು ಜನತಾದಳದ ಒಬ್ಬ ಸಂಸದರಾಗಿದ್ದ ಭರ್ತೃಹರಿ ಮಹತಾಬ್‌ರಿಗೆ ಒತ್ತಾಸೆಯಾಗಿ ನಿಂತು ಅವರಿಗೆ ಕಟಕ್ ಲೋಕಸಭಾ ಕ್ಷೇತ್ರಕ್ಕೆ ಬಿಜೆಪಿಯಿಂದ ಟಿಕೆಟ್ ದಕ್ಕಿಸಿಕೊಡುವುದಕ್ಕೆ ನೆರವಾಗಿದ್ದ ಧರ್ಮೇಂದ್ರ ಪ್ರಧಾನ್ ಅವರ ಋಣವನ್ನು ಮಹತಾಬ್ ಅವರು ಈ ರೀತಿಯಾಗಿ ತೀರಿಸುತ್ತಿದ್ದಾರಷ್ಟೇ'' ಎಂದು ಈ ರಾಜಕೀಯ ಪಂಡಿತರು ಷರಾ ಬರೆದುಬಿಟ್ಟಿದ್ದಾರೆ!

ಒಟ್ನಲ್ಲಿ, ಈ ರಾಜಕೀಯ ಅನ್ನೋದು ಹಗ್ಗದ ಮೇಲಿನ ನಡಿಗೆ ಕಣ್ರೀ. ಒಂಚೂರು ಆಚೀಚೆ ವಾಲಿದರೂ ಧರಾಶಾಯಿ ಆಗೋದು ನಿಕ್ಕಿ!!

ನಾರಾಯಣ ನಾರಾಯಣ!

ಎಣ್ಣೆ'ಗೂ 'ದರ ಹೆಚ್ಚಳ'ಕ್ಕೂ ಅವಿನಾಭಾವ ಸಂಬಂಧವಿದೆ ಎನಿಸುತ್ತೆ. ಸರಕಾರಕ್ಕೆ ಆದಾಯ ಖೋತಾ ಆದಾಗಲೆಲ್ಲಾ, 'ತೀರ್ಥರೂಪಿ'ಗಳು ಸೇವಿಸಿ ತೇಲಾಡುವ 'ಎಣ್ಣೆ'ಯ ಮೇಲೆ ಅದು ದೃಷ್ಟಿಬೀರಿ ತೆರಿಗೆ ಹೆಚ್ಚಿಸುವುದು ವಾಡಿಕೆ. ಈಗ ಅಡುಗೆ'ಎಣ್ಣೆ'ಯ ಸರದಿ. ಇದರಿಂದಾಗಿ, ಇನ್ನೂ ಬಾಣಲೆ ಸೇರಿಕೊಳ್ಳದ ಎಣ್ಣೆಯೂ ಗ್ರಾಹಕರಿಗೆ 'ಬಿಸಿ' ಮುಟ್ಟಿಸುತ್ತಿದೆ. ಹಾಗಂತ ನಮ್ ಜನ 'ಎಣ್ಣೆ'ಯನ್ನು ಬಿಟ್ಟಿರೋಕ್ಕೆ ಸಾಧ್ಯವಿಲ್ಲ ಬಿಡಿ, ಅದು 'ಆ' ಎಣ್ಣೆಯೇ ಆಗಿರಲಿ, 'ಅಡುಗೆ ಎಣ್ಣೆ'ಯೇ ಆಗಿರಲಿ. ಇದು ನಾರದರು ಕಣ್ಣಿಗೆ 'ಎಣ್ಣೆ' ಬಿಟ್ಟುಕೊಂಡು ಮಾಡಿದ ಅಬ್ಸರ್ವೇಷನ್ನು!!

ರಾಹುಲ್ ಗಾಂಧಿಗೆ ಇನ್ನಷ್ಟು ಶಿಕ್ಷಣ ಅಗತ್ಯವಿದೆ!

ರಾಹುಲ್ ಗಾಂಧಿ ಪ್ರತಿ ಬಾರಿ ವಿದೇಶಕ್ಕೆ ಹೋದಾಗಲೂ ಏನಾದರೊಂದು ಉಪದ್ವ್ಯಾಪ ಮಾಡಿಕೊಂಡು ಬರುವುದೇಕೆ? ಈ ದೇಶದ ಅತ್ಯಂತ ಪ್ರಸಿದ್ಧ ರಾಜಕೀಯ ಮನೆತನವು ವಿದೇಶಗಳಲ್ಲಿ ಭಾರತದ ಬಗ್ಗೆ ಅಪಪ್ರಚಾರ ಮಾಡುವುದೇಕೆ? ನಿಮಗೆ ನೆನಪಿರಬಹುದು, ಈ ಹಿಂದೆ ಒಮ್ಮೆ ವಿದೇಶಕ್ಕೆ ಹೋದಾಗ ರಾಹುಲ್ ಗಾಂಧಿಯವರು 'ಭಾರತದಲ್ಲಿ ಪ್ರಜಾಪ್ರಭುತ್ವವೇ ಸರ್ವನಾಶವಾಗಿದೆ' ಎಂದು ಹೇಳಿದ್ದರು.

ಕಿವಿಮಾತು
ತವ್ಲೀನ್ ಸಿಂಗ್
vveditoped@gmail.com

ರಾಜಕೀಯ ವಿಶ್ಲೇಷಕರು ಹಾಗೂ ಚುನಾವಣೆಗಳು ಪ್ರತಿ ಬಾರಿ 'ರಾಹುಲ್ ಗಾಂಧಿಯನ್ನು ಸೀರಿಯಸ್ಸಾಗಿ ತೆಗೆದುಕೊಳ್ಳುವ ಸಮಯ ಬಂದಿದೆ' ಎಂಬ ಸುಳಿವು ನೀಡಿದಾಗಲೂ ರಾಹುಲ್ ವಿಮಾನ ಹತ್ತಿ ವಿದೇಶಕ್ಕೆ ಹೋಗಿ ಏನಾದರೂ ಎಡವಟ್ಟು ಹೇಳಿಕೆ ನೀಡಿ ರಾಡಿ ಮಾಡಿಕೊಳ್ಳುತ್ತಾರೆ. ತನ್ಮೂಲಕ ಆ ರಾಜಕೀಯ ವಿಶ್ಲೇಷಕರು ಮತ್ತು ಚುನಾವಣೆಯ ಫಲಿತಾಂಶ ಸುಳ್ಳೆಂದು ಸಾಬೀತು ಮಾಡುತ್ತಾರೆ. ಈ ಬಾರಿ ಅವರು ವಿದೇಶಕ್ಕೆ ಹೋಗಿ ಆಡಿರುವ ಅತ್ಯಂತ ಮೂರ್ಖತನದ ಮಾತುಗಳಲ್ಲಿ ಅಗ್ರಗಣ್ಯ ಸಾಲಿನಲ್ಲಿ ನಿಲ್ಲುವ ಮಾತು ಏನು ಗೊತ್ತೇ? 'ಲೋಕಸಭೆ ಚುನಾವಣೆಯಲ್ಲಿ ಅಕ್ರಮ ನಡೆದಿದೆ' ಎಂಬ ಹೇಳಿಕೆ. ಲೋಕಸಭೆಯ ವಿರೋಧ ಪಕ್ಷದ ನಾಯಕರಾದ ಬಳಿಕ ರಾಹುಲ್ ಗಾಂಧಿ ಕೈಗೊಂಡ ಮೊದಲ ವಿದೇಶ ಪ್ರವಾಸವಿದು. ಈ ಪ್ರವಾಸದಲ್ಲಿ ಅವರು ಅಮೆರಿಕದ ವಿಶ್ವವಿದ್ಯಾಲಯದಲ್ಲಿ ನಿಂತು ಆಡಿರುವ ಮಾತುಗಳು ಮೂರ್ಖತನದಿಂದ ಕೂಡಿವೆ ಎಂದು ನಾನೇಕೆ ಹೇಳುತ್ತಿದ್ದೇನೆ ಗೊತ್ತೇ? ಭಾರತದಲ್ಲಿ ಕೆಲ ತಿಂಗಳ ಹಿಂದೆ ನಡೆದ ಲೋಕಸಭೆ ಚುನಾವಣೆಯಲ್ಲಿ ಪ್ರಧಾನಿ ನರೇಂದ್ರ ಮೋದಿ ಅಕ್ರಮಗಳನ್ನು ಎಸಗಿದ್ದರೆ ಕೊನೆಯ ಪಕ್ಷ ಅವರು ಬಿಜೆಪಿಗೆ ಪೂರ್ಣ ಬಹುಮತ ಬರುವಂತೆಯಾದರೂ ನೋಡಿಕೊಳ್ಳುತ್ತಿದ್ದರು! ಇದನ್ನು ಈ ದೇಶದ ಅನಕ್ಷರಸ್ಥ ಕೂಡ ಹೇಳುತ್ತಾನೆ.

ಆದರೆ, ಈ ಸರಳ ಲೆಕ್ಕಾಚಾರ ನಮ್ಮ ದೇಶದ ವಿರೋಧ ಪಕ್ಷದ ನಾಯಕನಿಗೆ ಏಕೆ ಹೊಳೆಯುತ್ತಿಲ್ಲ? ಆದ್ದರಿಂದಲೇ ಅವರು ಜಾರ್ಜ್‌ಟೌನ್ ವಿಶ್ವವಿದ್ಯಾಲಯದಲ್ಲಿ ಭಾಷಣ ಮಾಡುವಾಗ, 'ಮುಕ್ತ ಹಾಗೂ ನ್ಯಾಯಸಮ್ಮತ ಚುನಾವಣೆ ನಡೆದರೆ ಬಿಜೆಪಿ 240 ಸ್ಥಾನ ಕೂಡ ಗಳಿಸಲು ಸಾಧ್ಯವಿಲ್ಲ ಎಂಬುದರಲ್ಲಿ ನನಗೆ ಅನುಮಾನವಿಲ್ಲ. ಹೀಗಾಗಿ ಈ ಬಾರಿ ನಡೆದಿರುವುದು ನ್ಯಾಯಯುತ ಚುನಾವಣೆ ಅಲ್ಲ. ಬದಲಿಗೆ ಅದು ನಿಯಂತ್ರಿತ ಚುನಾವಣೆ' ಎಂದು ಹೇಳಿದರು. ಅದೇ ಉಸಿರಿನಲ್ಲಿ ಅವರು (ಸಂದರ್ಶನದಲ್ಲಿ ಮಾತನಾಡುವಾಗ) ಹೇಳಿದ ಇನ್ನೊಂದು ಮಾತು ನನಗೆ ಬಹಳ ಆಶ್ಚರ್ಯವೆನಿಸಿತು. ಭಾರತದ ಚುನಾವಣಾ ಆಯೋಗದವರು ಮುಕ್ತ ಹಾಗೂ ನ್ಯಾಯಸಮ್ಮತ ಚುನಾವಣೆ ನಡೆಸುವ ಬದಲು ಮೋದಿಗೆ ಏನು ಬೇಕೋ ಅದನ್ನು ಮಾಡಿದರು ಎಂದೂ ಹೇಳಿಬಿಟ್ಟರು. ಇದು ಆಶ್ಚರ್ಯಕರ ಹೇಳಿಕೆ ಏಕೆಂದರೆ, ಈ ಮಾತನ್ನು ಆಡಿದ ವ್ಯಕ್ತಿಯ ತಾಯಿ ಈ ಹಿಂದೆ ಮುಖ್ಯ ಚುನಾವಣಾ ಆಯುಕ್ತರೊಬ್ಬರು ನಿವೃತ್ತಿಯಾಗುತ್ತಿದ್ದಂತೆ ಅವರನ್ನು ರಾಜ್ಯಸಭೆಗೆ ನಾಮನಿರ್ದೇಶನ ಮಾಡಿ ಸಂಸತ್ತಿಗೆ ಕರೆತಂದು ತಮ್ಮ ನಿಯಂತ್ರಣದಲ್ಲಿದ್ದ ಸರಕಾರದಲ್ಲಿ ಮಂತ್ರಿಯನ್ನಾಗಿಯೂ ಮಾಡಿದ್ದರು. ಅಷ್ಟೇಕೆ, ಈ ಮಾತುಗಳನ್ನು ಆಡಿದ ವ್ಯಕ್ತಿಯ ಕುಟುಂಬದವರು ಜಮ್ಮು ಮತ್ತು ಕಾಶ್ಮೀರದಲ್ಲಿ ದಶಕಗಳ ಕಾಲ ಚುನಾವಣೆಗಳನ್ನು ನಿಯಂತ್ರಿಸಿದ್ದರು ಮತ್ತು ತಿರುಚಿದ್ದರು. ಹೀಗಾಗಿ, ನನ್ನ ಪ್ರಕಾರ, ಈ ಮಾತುಗಳನ್ನು ಆಡುತ್ತಿರುವ ವ್ಯಕ್ತಿಗೆ ಇತಿಹಾಸದ ಬಗ್ಗೆ ಇನ್ನಷ್ಟು ಪಾಠ ಮಾಡುವ ಅಗತ್ಯವಿದೆ. ಮೋದಿಯ ಬಳಿಕ ಇದೇ ವ್ಯಕ್ತಿ ನಮ್ಮ ದೇಶದ ಪ್ರಧಾನಿಯಾಗಲು ಯೋಗ್ಯನೆಂದು ಇತ್ತೀಚಿನ ಚುನಾವಣೆಯ ಫಲಿತಾಂಶ ಹೇಳುತ್ತಿರುವಾಗ ಈ ಪಾಠದ ಜರೂರತ್ತು ಇನ್ನೂ ಹೆಚ್ಚಿದೆ.

ಅಮೆರಿಕದ ಪ್ರವಾಸದಲ್ಲಿ ರಾಹುಲ್ ಗಾಂಧಿ ನೀಡಿದ ಎರಡನೇ ಅತ್ಯಂತ ಮೂರ್ಖತನದ ಹೇಳಿಕೆ ಸಿಖ್ಖರ ಕುರಿತಾಗಿದೆ. ಸಿಖ್ಖರಿಗೆ ಭಾರತದಲ್ಲಿ ಸ್ವಾತಂತ್ರ್ಯವೇ ಇಲ್ಲ, ಅವರಿಗೆ ಪಗಡಿ ಧರಿಸಲು ಆಗುತ್ತಿಲ್ಲ, ಕಠಾರಿ ಹಿಡಿದು ಓಡಾಡಲು ಅವಕಾಶ ನೀಡುತ್ತಿಲ್ಲ ಎಂದು ರಾಹುಲ್ ಹೇಳಿದರು. ಸಂದರ್ಶನದ ವೇಳೆ ಅಲ್ಲೇ ಕುಳಿತಿದ್ದ ಕೆನಡಾದ ಖಲಿಸ್ತಾನಿ ಮುಖಂಡನೊಬ್ಬ ಎದ್ದುನಿಂತು ಎಲ್ಲರಿಗೂ ಕೇಳಿಸುವಂತೆ ಮತ್ತು ಕಾಣಿಸುವಂತೆ ಜೋರಾಗಿ 'ನಾವು ನಿಮಗೆ ಹೇಳಿದ್ದೇವಲ್ಲವೇ' ಎಂದು ಕಿರುಚಿದ ತಕ್ಷಣ ರಾಹುಲ್ ಗಾಂಧಿಯ ಬಾಯಿಯಲ್ಲಿ ಈ ಮಾತು ಬಂದಿತು ಎಂಬುದು ಗಮನಾರ್ಹ ಸಂಗತಿ. ಸಿಖ್ಖರಿಗೆ ಭಾರತದಲ್ಲಿ ಸ್ವಾತಂತ್ರ್ಯವಿಲ್ಲ ಎಂದು ಹೇಳಿದರೆ ಯಾರಾದರೂ ನಂಬುತ್ತಾರೆಯೇ? ಏಕೆ ರಾಹುಲ್ ಗಾಂಧಿ ಪ್ರತಿ ಬಾರಿ ವಿದೇಶಕ್ಕೆ ಹೋದಾಗಲೂ ಏನಾದರೊಂದು ಉಪದ್ವ್ಯಾಪ ಮಾಡಿಕೊಂಡು ಬರುತ್ತಾರೆ? ಏಕೆ ಈ ದೇಶದ ಅತ್ಯಂತ ಪ್ರಸಿದ್ಧ ರಾಜಕೀಯ ಮನೆತನವು ವಿದೇಶಗಳಲ್ಲಿ ಭಾರತದ ಬಗ್ಗೆ ಅಪಪ್ರಚಾರ ಮಾಡುತ್ತದೆ? ನಿಮಗೆ ನೆನಪಿರಬಹುದು, ಈ ಹಿಂದೆ ಒಮ್ಮೆ ವಿದೇಶಕ್ಕೆ ಹೋದಾಗ ರಾಹುಲ್ ಗಾಂಧಿಯವರು 'ಭಾರತದಲ್ಲಿ ಪ್ರಜಾಪ್ರಭುತ್ವವೇ ಸರ್ವನಾಶವಾಗಿದೆ' ಎಂದು ಹೇಳಿದ್ದರು.

ಭಾರತದ ಬಗ್ಗೆ ಇಂಥ ಬೇಜವಾಬ್ದಾರಿಯ ಹೇಳಿಕೆಗಳನ್ನು ಕೇಳಿದಾಗ ನನಗೆ ಇನ್ನೂ ಹೆಚ್ಚು ಬೇಸರವಾಗುವುದು ಏಕೆಂದರೆ, ನಮ್ಮ ದೇಶಕ್ಕೆ ಪ್ರಬಲವಾದ ಹಾಗೂ ಬುದ್ಧಿವಂತ ವಿರೋಧ ಪಕ್ಷದ ನಾಯಕನ ಅಗತ್ಯವಿದೆ. ಅದರಲ್ಲೂ, ಕಳೆದ ಹತ್ತು ವರ್ಷಗಳಲ್ಲಿ ನರೇಂದ್ರ ಮೋದಿ ಅತಿಯಾದ ಆತ್ಮವಿಶ್ವಾಸವನ್ನು ಪ್ರದರ್ಶಿಸುತ್ತಾ ಭ್ರಮಾತ್ಮಕ ಸಂಗತಿಗಳಲ್ಲಿ ಜನರನ್ನು ಮುಳುಗಿಸುತ್ತಿರುವಾಗ ಅದನ್ನು ತಡೆಯಲು ಒಳ್ಳೆಯ ವಿಪಕ್ಷ ನಾಯಕನೊಬ್ಬ ಬೇಕಿದೆ. ಪ್ರಧಾನಿಯ ಸರ್ವಾಧಿಕಾರಿ ಧೋರಣೆಯ ಆಡಳಿತ ಶೈಲಿ ಹಾಗೂ ಅವರ ಕೆಲವು ಮಂತ್ರಿಗಳು ಆಡುವ ಮಾತುಗಳು ಮೋದಿಯವರ ಕಟ್ಟರ್ ಬೆಂಬಲಿಗರನ್ನೂ ಕೆಲವೊಮ್ಮೆ ಬೇಸರಗೊಳಿಸುತ್ತವೆ. ಈ ಬಾರಿ ಮೋದಿ ನಾಯಕತ್ವದಲ್ಲಿ ಭಾರತೀಯ ಜನತಾ ಪಾರ್ಟಿಗೆ ಪೂರ್ಣ ಬಹುಮತ ಬಾರದೆ ಇದ್ದಾಗ ದೇಶದ ಉದ್ದಗಲಕ್ಕೂ ಜನರು ನಿಟ್ಟುಸಿರು ಬಿಟ್ಟಿದ್ದು ನಿಮಗೆ ಕೇಳಿಸಿರಬಹುದು. ಚುನಾವಣೆಯಲ್ಲಿ ಈ ಸಲ ಬಿಜೆಪಿಗೆ ಸರಿಯಾದ ಪಾಠ ಕಲಿಸಲಾಯಿತು ಎಂಬ ಅಭಿಪ್ರಾಯ ಎಲ್ಲೆಡೆ ಕೇಳಿಬಂತು. ಆದರೆ ಇದರರ್ಥ ಭಾರತದ ಮತದಾರರು ಮೋದಿಯ ಬದಲು ರಾಹುಲ್ ಗಾಂಧಿಯನ್ನು ಆಯ್ಕೆ ಮಾಡಲು ಬಯಸುತ್ತಿದ್ದಾರೆ ಎಂಬುದಲ್ಲ. ರಾಹುಲ್ ಇದನ್ನು ಚೆನ್ನಾಗಿ ನೆನಪಿಟ್ಟುಕೊಳ್ಳಬೇಕು. ಆಗ ಎಲ್ಲದಕ್ಕೂ ತನ್ನಲ್ಲಿ ಉತ್ತರವಿದೆ ಎಂಬ ಭ್ರಮೆಯಿಂದ ಹೊರಗೆ ಬರುವುದಕ್ಕೆ ಸಾಧ್ಯವಾದೀತು.

ರಾಹುಲ್ ಗಾಂಧಿ ಒಂದು ವಿಷಯವನ್ನು ಅರ್ಥ ಮಾಡಿಕೊಳ್ಳಬೇಕು. 'ಭಾರತದ ಶೇ.90ರಷ್ಟು ಜನರು' ಈ ದೇಶದ ಅಭಿವೃದ್ಧಿಯ ಪಯಣದಲ್ಲಿ ಪಾಲ್ಗೊಳ್ಳಲು ಸಾಧ್ಯವಾಗದೇ ಇರುವುದಕ್ಕೆ ಜಾತಿ ಒಂದೇ ಕಾರಣವಲ್ಲ. ಭಾರತ ಇನ್ನೂ ಶ್ರೀಮಂತವಾಗದೆ ಇರುವುದಕ್ಕೆ ಜಾತಿಯೇ ಏಕೈಕ ಹೊಣೆಗಾರನಲ್ಲ. ಏಕೆಂದರೆ, ರಾಹುಲ್ ಪದೇಪದೆ 'ನಮ್ಮ ದೇಶದ ಅಧಿಕಾರದ ಕುರ್ಚಿಗಳಲ್ಲಿ ಕೆಳಜಾತಿಯವರು ಸಾಕಷ್ಟು ಸಂಖ್ಯೆಯಲ್ಲಿ ಇಲ್ಲ' ಎಂದು ಹೇಳುತ್ತಿರುತ್ತಾರೆ. ಆದರೆ, ಏಕೆ ಅವರು ಪ್ರಮುಖ ಸ್ಥಾನಗಳಲ್ಲಿ ಇಲ್ಲ ಎಂಬುದನ್ನು ಅವಲೋಕಿಸುವಾಗ ಅವರಿಗೆ ಬಡತನ ಹಾಗೂ ಅವಕಾಶ ವಂಚಿತತೆಯನ್ನು ಮೀರಿ ಎದ್ದುನಿಲ್ಲುವುದಕ್ಕೆ ಅಸ್ತ್ರವೇ ಸಿಕ್ಕಿಲ್ಲ ಎಂಬುದನ್ನು ರಾಹುಲ್ ಕಡೆಗಣಿಸಿಬಿಡುತ್ತಾರೆ. ನಮ್ಮ ದೇಶದಲ್ಲಿ ಕೆಳಜಾತಿಯವರಿಗೆ ಮತ್ತು ಬಡವರಿಗೆ ಸಿಗಬೇಕಿದ್ದ ಅತ್ಯಂತ ಪ್ರಬಲವಾದ ಅಸ್ತ್ರವೆಂದರೆ ಶಿಕ್ಷಣ. ಕೆಳಜಾತಿಯ ಮಕ್ಕಳಿಗೆ ಒಳ್ಳೆಯ ಶಾಲೆಗಳಲ್ಲಿ ಶಿಕ್ಷಣ ಲಭಿಸಿದ್ದರೆ ಅವರು ಸುಲಭವಾಗಿ ಮೇಲ್ಜಾತಿಯ ಮಕ್ಕಳಿಗೆ ಪೈಪೋಟಿ ನೀಡುತ್ತಿದ್ದರು. ನಿಜ ಹೇಳಬೇಕೆಂದರೆ ಇದು ಭಾರತದ ರಾಜಕಾರಣದ ನಿಗೂಢಗಳಲ್ಲಿ ಒಂದು. ಇಲ್ಲಿ ಎಷ್ಟೊಂದು ಸಮಾಜವಾದಿ ಪ್ರಧಾನಿಗಳು ಅಧಿಕಾರ ನಡೆಸಿದ್ದಾರೆ. ಆದರೂ ಅವರು ಕೆಳಜಾತಿಯವರು ಮತ್ತು ಬಡವರಿಗೆ ಕೇವಲ ಪ್ರಾಥಮಿಕ ಶಿಕ್ಷಣ ನೀಡುವುದರ ಬದಲು ನಿಜವಾದ ಶಿಕ್ಷಣ ಲಭಿಸುವಂತೆ ಮಾಡಲು ಶಾಲೆಗಳನ್ನು ಕಟ್ಟುವ ತುರ್ತು ಅಗತ್ಯವಿದೆ ಎಂಬುದನ್ನು ಮನಗಾಣಲೇ ಇಲ್ಲ. ಇದು ನಿಜಕ್ಕೂ ಚೋದ್ಯ.

ಮೋದಿಯವರ ಅತಿದೊಡ್ಡ ವೈಫಲ್ಯಗಳಲ್ಲಿ ಇದೂ ಒಂದು. ಅವರು ನಮ್ಮ ಶಾಲಾ ಶಿಕ್ಷಣ ವ್ಯವಸ್ಥೆಯನ್ನು ಸುಧಾರಿಸಲು ಗಮನಾರ್ಹವಾದ ಯಾವುದೇ ಕೆಲಸ ಮಾಡಲಿಲ್ಲ. ಸ್ವಚ್ಛ ಭಾರತ ಯೋಜನೆಗೆ ಕೊಟ್ಟ ಮಹತ್ವದಂತೆ ಶಿಕ್ಷಣ ವ್ಯವಸ್ಥೆಯ ಸುಧಾರಣೆಗೂ ಅವರು ಮಹತ್ವ ನೀಡಿದ್ದರೆ ಕಳೆದ ಹತ್ತು ವರ್ಷಗಳಲ್ಲಿ ಸಾಕಷ್ಟು ಬದಲಾವಣೆಯನ್ನು ತರಬಹುದಿತ್ತು. ಅದರಲ್ಲೂ, ನಮ್ಮ ದೇಶದ ಅತ್ಯಂತ ದೊಡ್ಡ ಹಾಗೂ ಅತ್ಯಂತ ಅಶಿಕ್ಷಿತ ರಾಜ್ಯಗಳೆಲ್ಲ ಬಿಜೆಪಿಯ ಆಳ್ವಿಕೆಯಲ್ಲೇ ಇರುವಾಗ ಅವರು ಶಿಕ್ಷಣ ಕ್ಷೇತ್ರದಲ್ಲಿ ಭಾರಿ ಸುಧಾರಣೆ ತರಲು ಸಾಧ್ಯವಿತ್ತು. ಆದರೆ ಇಂದು ಪರಿಸ್ಥಿತಿ ಎಷ್ಟು ಕೆಟ್ಟದಾಗಿದೆ ಅಂದರೆ, ಕೆಳಜಾತಿಯವರು ಹಾಗೂ ಬಡವರಿಗೆ ಸರಿಯಾದ ಶಿಕ್ಷಣ ಲಭಿಸದೆ ಇಷ್ಟು ದೊಡ್ಡ ದೇಶದ ಯುವಶಕ್ತಿಯಲ್ಲಿ ಒಂದು ದೊಡ್ಡ ವರ್ಗವು ಈಗಲೂ ನಿಷ್ಪ್ರಯೋಜಕವಾಗಿಯೇ ಕಳೆದುಹೋಗುತ್ತಿದೆ.

ಕಳೆದ ಹತ್ತು ವರ್ಷಗಳಲ್ಲಿ ನಮಗೆ ಇನ್ನೂ ಸಾಕಷ್ಟು ಆಡಳಿತಾತ್ಮಕ ವೈಫಲ್ಯಗಳು ಕಾಣಿಸುತ್ತವೆ. ಆದರೆ, ರಾಹುಲ್ ಗಾಂಧಿಗಾಗಲೀ ಅವರ ಸಲಹೆಗಾರರಿಗಾಗಲೀ ಅವು ಕಾಣಿಸುತ್ತಿಲ್ಲ ಎಂಬುದೇ ಆಶ್ಚರ್ಯ. ಹಳಿಯಲ್ಲಿ ಬಿದ್ದ ಸೂಜಿಯನ್ನು ಹುಡುಕಿದಂತೆ ಈಗಲೂ ಅವರು 'ನಮ್ಮ ದೇಶದ ಶಿಕ್ಷಣ ಸಂಸ್ಥೆಗಳನ್ನೆಲ್ಲ ಕೇಸರೀಕರಣಗೊಳಿಸಲಾಗುತ್ತಿದೆ, ರಾಷ್ಟ್ರೀಯ ಸ್ವಯಂಸೇವಕ ಸಂಘದವರು (ಆರ್‌ಎಸ್‌ಎಸ್) ಶಾಲೆಗಳನ್ನೆಲ್ಲ ತಮ್ಮ ಕಪಿಮುಷ್ಟಿಗೆ ತೆಗೆದುಕೊಳ್ಳುತ್ತಿದ್ದಾರೆ' ಎಂದೇ ಹೋದಲ್ಲಿ ಬಂದಲ್ಲಿ ಹಳಹಳಿಸುತ್ತಿದ್ದಾರೆ. ಆದರೆ, ಕಪಿಮುಷ್ಟಿಗೆ ತೆಗೆದುಕೊಳ್ಳುವುದಕ್ಕೆ ಇನ್ನೇನೂ ಉಳಿದಿಲ್ಲ ಎಂಬುದೇ ಅವರಿಗೆ ಗೊತ್ತಿಲ್ಲ. ಈಗಾಗಲೇ ಅವರು ಇತಿಹಾಸದ ಪಠ್ಯಪುಸ್ತಕಗಳನ್ನು ಬದಲಿಸುತ್ತಿದ್ದಾರೆ. ಆದರೆ, ಅವರು ಕೂಡ ದೇಶದ ನಿಜವಾದ ಸಮಸ್ಯೆಯನ್ನು ಅರ್ಥ ಮಾಡಿಕೊಳ್ಳುವಲ್ಲಿ ವಿಫಲರಾಗಿದ್ದಾರೆ. ಆದ್ದರಿಂದಲೇ ಇಂದು ಭಾರತದ ಬಹುತೇಕ ಮಕ್ಕಳು ಶಾಲೆಗಳಿಂದ ಹೊರಬರುವಾಗ ವಿಶೇಷವಾದ ಕೌಶಲಗಳನ್ನಾಗಲೀ, ಒಳ್ಳೆಯ ಶಿಕ್ಷಣವನ್ನಾಗಲೀ ಪಡೆದಿರುವುದಿಲ್ಲ.

ರಾಹುಲ್ ಗಾಂಧಿ ಈಗ ತಮ್ಮೆಲ್ಲಾ ಗಮನವನ್ನೂ, ತಮ್ಮ ಪಕ್ಷದ ಎಲ್ಲಾ ಶಕ್ತಿಯನ್ನೂ ಶಿಕ್ಷಣ ಕ್ಷೇತ್ರದತ್ತ ತಿರುಗಿಸಿದರೆ ತಮಗೂ, ತಮ್ಮ ಪಕ್ಷಕ್ಕೂ, ಈ ದೇಶಕ್ಕೂ ಬಹಳ ದೊಡ್ಡ ಉಪಕಾರ ಮಾಡಿದಂತಾಗುತ್ತದೆ. ಆಗ ಭಾರತದ ಭವಿಷ್ಯದ ಪ್ರಜೆಗಳಿಗೆ ಉತ್ತಮ ಶಿಕ್ಷಣ ಸಿಗುತ್ತದೆ ಮತ್ತು ನಿಜವಾದ ಉಜ್ವಲ ಭವಿಷ್ಯ ತೆರೆದುಕೊಳ್ಳುತ್ತದೆ. ವಿದೇಶ ಪ್ರವಾಸದಲ್ಲಿ ಅವರು 'ಶೇ.90ರಷ್ಟು ಭಾರತೀಯರಿಗೆ ಅವಕಾಶಗಳು ಸಿಗುತ್ತಿಲ್ಲ' ಎಂದು ಹೇಳಿದ್ದಾರೆ. 'ಇದಕ್ಕೆ ಜಾತಿ ವ್ಯವಸ್ಥೆಯೇ ಕಾರಣ' ಎಂದೂ ಹೇಳಿದ್ದಾರೆ. ಭಾರತದಲ್ಲೂ ತಿಂಗಳುಗಳ ಕಾಲ ಅವರು ಇದೇ ತೌಡು ಕುಟ್ಟಿದ್ದಾರೆ. ಇದೆಲ್ಲ ಸರಿಹೋಗಬೇಕು ಅಂದರೆ ಜಾತಿ ಗಣತಿ ನಡೆಯಬೇಕು ಎಂದು ಮೇಜು ಕುಟ್ಟಿ ಕುಟ್ಟಿ ಹೇಳಿದ್ದಾರೆ. ಆದರೆ, ಜಾತಿ ಗಣತಿಯಿಂದ ಏನಾಗುತ್ತದೆ? ಉದ್ಯೋಗದಲ್ಲಿ ಇನ್ನಷ್ಟು ಮೀಸಲಾತಿ ಸೃಷ್ಟಿಯಾಗುತ್ತದೆ. ಶಾಲೆ ಮತ್ತು ಕಾಲೇಜುಗಳಲ್ಲಿ ಇನ್ನಷ್ಟು ಮೀಸಲು ಸೀಟುಗಳು ಬೇರೆ ಬೇರೆ ಜಾತಿಯವರಿಗೆ ಲಭಿಸುತ್ತವೆ.

ಆದರೆ ಭಾರತದ ಸಮಸ್ಯೆಗಳಿಗೆ ಉತ್ತರ ಇರುವುದು ಮೀಸಲಾತಿಯನ್ನು ಇನ್ನಷ್ಟು ವಿಸ್ತರಿಸುವುದರಲ್ಲಿ ಅಲ್ಲ. ಭಾರತ ಯಾವತ್ತಾದರೂ ಸಂಪೂರ್ಣ ಅಭಿವೃದ್ಧಿ ಹೊಂದಿದ ದೇಶವಾಗಬೇಕು ಅಂದರೆ ಈ ದೇಶದ ಮಕ್ಕಳಿಗೆ ಒಳ್ಳೆಯ ಶಾಲೆಗಳಲ್ಲಿ ಉತ್ತಮ ಶಿಕ್ಷಣ ಸಿಗುವಂತಾಗಬೇಕು ಎಂಬ ಸಂಗತಿ ನಮ್ಮ ರಾಜಕೀಯ ನಾಯಕರಿಗೆ ಅರ್ಥವಾಗಬೇಕು. ಅದು ಅರ್ಥವಾದ ದಿನ ನಿಜವಾದ ಬದಲಾವಣೆ ಆರಂಭವಾಗುತ್ತದೆ.

(ಲೇಖಕಿ ಹಿರಿಯ ಅಂಕಣಕಾರ್ತಿ)

ಪ್ರತಿಸ್ಪಂದನ

ಅರ್ಚನಾ ಅಶೋಕ್

ವಿದ್ಯೆಗೆ ವಿನಯವೇ ಭೂಷಣ

ಸೆಲೆಬ್ರಿಟಿಗಳ ಸರಳತೆ ಮತ್ತು ಸಜ್ಜನಿಕೆ ಬಗ್ಗೆ ಶ್ರೀವತ್ಸ ಜೋಶಿಯವರು 'ತಿಳಿರು ತೋರಣ' ಅಂಕಣದಲ್ಲಿ (ವಿಶ್ವವಾಣಿ ಸೆ.15) ಸೋದಾಹರಣವಾಗಿ ಬರೆದಿರುವುದು ಹೃದಯಸ್ಪರ್ಶಿಯಾಗಿದೆ. ಇದೇ ರೀತಿಯ ಒಂದು ಅನುಭವ ಇತ್ತೀಚೆಗೆ ನಮಗೂ ಆಗಿದ್ದು, ಅದನ್ನು ಇಲ್ಲಿ ಹಂಚಿಕೊಳ್ಳಲು ಬಯಸುವೆ.

ಬೆಂಗಳೂರಿನ ಶ್ರೀ ರಾಧಾಮಾಧವ ಕಲಾವೇದಿಕೆಯವರು ಆಯೋಜಿಸಿದ್ದ ಸಾಂಸ್ಕೃತಿಕ ಉತ್ಸವದಲ್ಲಿ, ನಮ್ಮ ಪುಟ್ಟ ಮಕ್ಕಳಾದ ಅದಿತಿ ಮತ್ತು ಅನೀಶಾ ಸಂಸ್ಕೃತದಲ್ಲಿ ನಡೆಸಿಕೊಡುವ ಚಿಕ್ಕದೊಂದು ಹರಿಕಥಾ ಕಾರ್ಯಕ್ರಮಕ್ಕೆ ಅವಕಾಶ ಕಲ್ಪಿಸಲಾಗಿತ್ತು.

ಕಾರ್ಯಕ್ರಮಕ್ಕೆ ಎರಡು ದಿನಗಳಿರುವಾಗ, ಅವರೊಡನೆ ಮೃದಂಗ ನುಡಿಸಲಿಕ್ಕೆ ನಿಯೋಜಿಸಲ್ಪಟ್ಟಿದ್ದವರು ತಮಗೆ ಬರಲಿಕ್ಕಾಗುವುದಿಲ್ಲ ಎಂದು ಹೇಳಿದರು. ಅವರು ಬೇರೆ ಯಾರನ್ನಾದರೂ ವ್ಯವಸ್ಥೆ ಕೂಡ ಮಾಡಿಕೊಡದ ಕಾರಣ ನಮಗೆ ಆತಂಕವಾಗಿತ್ತು. ಗಣಪತಿ ಹಬ್ಬದ ಸಮಯವಾಗಿದ್ದರಿಂದ ನಮಗೆ ಗೊತ್ತಿದ್ದ ಕಲಾವಿದರೆಲ್ಲರೂ ಪೂರ್ವನಿಯೋಜಿತ ಕಾರ್ಯಕ್ರಮಗಳಲ್ಲಿ ವ್ಯಸ್ತರಾಗಿದ್ದರು.

ಆಗ, ಅದಿತಿಯ ಸಂಗೀತಗುರು ಶಿಲ್ಪಾ ಶಶಿಧರ್ ಅವರು ಗಾನಕಲಾಶ್ರೀ ವಿದ್ವಾನ್ ಎ.ಎಸ್.ಎನ್. ಸ್ವಾಮಿಯವರಿಗೆ ಕರೆಮಾಡಿ ವಿಷಯ ತಿಳಿಸಿ, 'ನಿಮ್ಮ ಶಿಷ್ಯರು ಯಾರಾದರೂ ಇದ್ದರೆ ಕಳುಹಿಸಿ ಸಹಾಯ ಮಾಡಬಹುದೇ?' ಎಂದು ಕೇಳಿಕೊಂಡರು. ಕಾರ್ಯಕ್ರಮದ ವಿವರ ಕೇಳಿದ ಸ್ವಾಮಿಯವರು ಸ್ವತಃ ತಾವೇ ಬರುವುದಾಗಿ ತಿಳಿಸಿದರು. ಅದರಂತೆಯೇ ಬಂದರು. ಅದಿತಿ ಮತ್ತು ಅನೀಶಾ ಇಬ್ಬರೂ ಪಕ್ಕವಾದ್ಯಗಳೊಂದಿಗೆ ಹಾಡಿ ಪಳಗಿದವರಲ್ಲ; ಒಂದೂ ರಿಹರ್ಸಲ್ ಇಲ್ಲದೆಯೇ ವೇದಿಕೆಯ ಮೇಲೆ ಅವರು ಕೂರಬೇಕಾಯ್ತು. ಸ್ವಾಮಿಯವರು ಬಹಳ ಚೆನ್ನಾಗಿ ಕಾರ್ಯಕ್ರಮವನ್ನು ತೂಗಿಸಿಕೊಟ್ಟರು. ಲಾಲ್‌ಗುಡಿ ಜಯರಾಮನ್, ಮ್ಯಾಂಡೊಲಿನ್ ಶ್ರೀನಿವಾಸ್, ಡಾ. ಟಿ.ಎಲ್.ಸತ್ಯವತಿ, ಡಾ. ಎನ್.ರಮಣಿ ಮುಂತಾದ ಬಹುದೊಡ್ಡ ಕಲಾವಿದರಿಗೆ ಮೃದಂಗ, ಖಂಜೀರ ವಾದ್ಯಗಳ ಸಹಕಾರ ಕೊಟ್ಟಿರುವ ಸ್ವಾಮಿಯವರು, ಎಂದೂ ನೋಡಿರದ, ಕೇಳಿರದ, ಅದಿತಿ–ಅನೀಶಾರ ಕಾರ್ಯಕ್ರಮಕ್ಕೆ ಪಕ್ಕವಾದ್ಯ ನುಡಿಸಿದರು. 2–3 ಸಂಗೀತ ಕಛೇರಿಗಳನ್ನು ಮಾಡಿದವರು ಕೂಡ ತಮ್ಮದೊಂದು 'ಸ್ಟ್ಯಾಂಡರ್ಡ್' ಸೆಟ್ ಮಾಡಿಕೊಂಡು, ಸಣ್ಣಪುಟ್ಟದು ಅನಿಸುವ ಕಾರ್ಯಕ್ರಮಕ್ಕೆ ಒಪ್ಪದ ಈ ಕಾಲದಲ್ಲಿ, ಪುಟ್ಟ ಮಕ್ಕಳ ಕಾರ್ಯಕ್ರಮಕ್ಕೆ ಬಂದು, ಅವರ ಮಟ್ಟಕ್ಕೇ ನುಡಿಸಿ, ಪ್ರೋತ್ಸಾಹಿಸಿ ಆಶೀರ್ವದಿಸಿದ್ದು ಎಂದಿಗೂ ಮರೆಯಲಾಗದು. 'ವಿದ್ಯೆಯು ವಿನಯದಿಂದ ಶೋಭಿಸುತ್ತದೆ' ಎಂಬ ನುಡಿಯನ್ನು ಬದುಕಿ ತೋರುವ ಈ ಎಲ್ಲ ವ್ಯಕ್ತಿತ್ವಗಳನ್ನು ನಾವು ಅನುಸರಿ ಸುವಂತಾಗುವ ಸದ್ಬುದ್ಧಿಯನ್ನು ಭಗವಂತ ನಮಗೆ ಕರುಣಿಸಲಿ ಎಂದಷ್ಟೇ ಬೇಡಿಕೊಂಡೆವು.

(ಲೇಖಕಿ ಹವ್ಯಾಸಿ ಬರಹಗಾರ್ತಿ)

ಅಚ್ಚುಕಟ್ಟು ಪ್ರದೇಶ
RNI: KARKAN/2016/67914
VISHVAVANI, Printed & Published by: VISHWESHWAR BHAT, On behalf of Vishwakshara Media Private Ltd., No.1687, Nisarga Serenity, Complex Road, Near Raghavendra Swamy Temple, BEML Layout, 5th Stage, Rajarajeshwarinagar, Bangalore.560098. PH: 6332393988/6362393942
Printed MNS Printers PVT.Ltd,345/4,Bhatrahalli,Near KR Puram RTO, Old Madras Road,Bengalore 560049
Editor-in Chief : Vishweshwar Bhat. ಪ್ರಧಾನ ಸಂಪಾದಕ: ವಿಶ್ವೇಶ್ವರ ಭಟ್
CopyRight: Vishwakshara Media Private Ltd. All rights reserved. Reproduction in any manner electronic or otherwise, in whole or in part, without prior written permission is prohibited.
ನಮ್ಮ ಆವೃತ್ತಿಗಳು: ಬೆಂಗಳೂರು, ಹುಬ್ಬಳ್ಳಿ ಮಂಗಳೂರು, ಬೆಳಗಾವಿ ಕಲಬುರಗಿ, ದಾವಣಗೆರೆ
Vol:9, Issue: 268

ಸಮಾಚಾರ ಸಣ್ಣದಲ್ಲ

ಪೋಲಿಯೊ ಲಸಿಕೆಗೆ ತಾಲಿಬಾನ್ ಅಡ್ಡಿ

ಕಾಬೂಲ್: ಅಫ್ಘಾನಿಸ್ತಾನದಲ್ಲಿ ಪೋಲಿಯೊ ಲಸಿಕೆ ಅಭಿಯಾನಕ್ಕೆ ತಾಲಿಬಾನ್ ತಡೆಯೊಡ್ಡಿದೆ ಎಂದು ವಿಶ್ವಸಂಸ್ಥೆ ಹೇಳಿದೆ. ಪೋಲಿಯೊದಿಂದಾಗಿ ಪಾರ್ಶ್ವವಾಯು ಸಮಸ್ಯೆ ಅಫ್ಘಾನಿಸ್ಥಾನದಲ್ಲಿ ದೊಡ್ಡದಾಗಿದೆ. ಅದಕ್ಕೆ ಅಂತ್ಯಹಾಡಲು ಆಡಳಿತ ಸಹಕರಿಸುತ್ತಿಲ್ಲ. ಲಸಿಕೆ ನಿಷೇಧಕ್ಕೆ ತಾಲಿಬಾನ್ ಕಾರಣವನ್ನೂ ತಿಳಿಸಿಲ್ಲ ಎಂದು ವಿಶ್ವಸಂಸ್ಥೆ ಅಸಮಾಧಾನ ವ್ಯಕ್ತಪಡಿಸಿದೆ.

ಹಿಜಾಬ್ ಕೈಬಿಟ್ಟು ಕೇಶ ಹರಡಿದ ಇರಾನ್ ವನಿತೆ

ಟೆಹರಾನ್: ಇರಾನ್‌ನಲ್ಲಿ ಹಿಜಾಬ್ ವಿರುದ್ಧ ದೊಡ್ಡ ಪ್ರತಿಭಟನಾ ಅಭಿಯಾನಕ್ಕೆ ಕಾರಣರಾದ 22ರ ಹರೆಯದ ಮೆಹ್ಸಾ ಅಮಿನಿ 2ನೇ ವರ್ಷದ ಪುಣ್ಯಸ್ಮರಣೆ ಭಾಗವಾಗಿ ಇರಾನ್ ವನಿತೆಯರು ತಲೆಯಿಂದ ಹಿಜಾಬ್ ತೆಗೆದೆಸೆದು, ತಲೆಗೂದಲನ್ನು ಬೆನ್ನು-ಭುಜದ ಮೇಲೆ ಹರವಿಕೊಂಡು ಬೀದಿಗಿಳಿದು ಗಮನ ಸೆಳೆದಿದ್ದಾರೆ. ಮಹಿಳೆಯರು ಕೇಶ ಸ್ವಚ್ಛಂದ ಹಾರಾಡಲು ಬಿಟ್ಟು 'ಜೀವನ ಮತ್ತು ಸ್ವಾತಂತ್ರ್ಯ'ದ ಘೋಷಣೆ ಕೂಗುತ್ತಾ ಸೋಮವಾರ ಟೆಹರಾನ್‌ನ ಪ್ರಮುಖ ಬೀದಿಗಳಲ್ಲಿ ಸಂಚರಿಸಿದ್ದಾರೆ. ಆಯತುಲ್ಲಾ ಅಲಿ ಖೊಮೇನಿ ಸರಕಾರಕ್ಕೆ ಸವಾಲೆಸೆದಿದ್ದಾರೆ. ಜೈಲಿನಲ್ಲಿರುವ ಮಹಿಳೆಯರಲ್ಲಿ ಹಲವರು ಉಪವಾಸ ಕೈಗೊಂಡು ಪ್ರತಿಭಟನೆಗೆ ಬೆಂಬಲ ಸೂಚಿಸಿದ್ದಾರೆ. ಸಾಮಾಜಿಕ ಮಾಧ್ಯಮಗಳಲ್ಲಿ ಇದಕ್ಕೆ ಅಪಾರ ಬೆಂಬಲ ವ್ಯಕ್ತವಾಗಿದೆ.

ಕಾಶ್ಮೀರದಲ್ಲಿ ಇಂದು ಮೊದಲ ಹಂತ ಮತ

ಶ್ರಿನಗರ: ಕೇಂದ್ರಾಡಳಿತ ಪ್ರದೇಶ ಜಮ್ಮು-ಕಾಶ್ಮೀರ ವಿಧಾನಸಭೆಗೆ ಬುಧವಾರ ಮೊದಲ ಹಂತದ ಮತದಾನ ನಡೆಯುತ್ತಿದೆ. ಕಾಶ್ಮೀರದ 4 ದಕ್ಷಿಣ ಜಿಲ್ಲೆಗಳು ಮತ್ತು ಬಿಜ್‌ಬೆಹೆರಾದ 24 ವಿಧಾನಸಭಾ ಕ್ಷೇತ್ರಗಳಿಗೆ ಚುನಾವಣೆ ನಡೆಯುತ್ತಿದ್ದು 23 ಲಕ್ಷ ಮತದಾರರು ಹಕ್ಕು ಚಲಾಯಿಸಲಿದ್ದಾರೆ. ಕೇಂದ್ರ ಸಶಸ್ತ್ರ ಅರೆ ಸೇನಾಪಡೆ, ಜಮ್ಮು ಮತ್ತು ಕಾಶ್ಮೀರ ಸಶಸ್ತ್ರ ಪಡೆ ಮತ್ತು ಜಮ್ಮು ಕಾಶ್ಮೀರ ಪೊಲೀಸ್ ಭದ್ರತೆಗೆ ನಿಯೋಜನೆಗೊಂಡಿದ್ದು, ಚುನಾವಣೆ ನಿರ್ಭೀತಿ, ಶಾಂತಿಯುತ ನಡೆಸಲು 3 ಹಂತದ ಭದ್ರತೆ ಒದಗಿಸಲಾಗಿದೆ.

ಕೇಂದ್ರ ಗೃಹ ಸಚಿವ ಅಮಿತ್ ಶಾ ಘೋಷಣೆ | ಪ್ರಥಮ ಡಿಜಿಟಲ್ ಗಣತಿಗೆ ವೆಬ್‌ಪೋರ್ಟಲ್
ಜಾತಿ ಗಣತಿಗೂ ಅವಕಾಶ ಸಂಭವ | ಜನತೆ ಮಾಹಿತಿಗೆ ಆಧಾರ್, ಮೊಬೈಲ್ ಸಂಖ್ಯೆ

ಶೀಘ್ರವೇ ಡಿಜಿಟಲ್ ಜನಗಣತಿ

ದೆಹಲಿ: ದೇಶದಲ್ಲಿ ಶೀಘ್ರದಲ್ಲೇ ಜನಗಣತಿ ನಡೆಯಲಿದೆ, ಅದೂ ಡಿಜಿಟಲ್ ಮಾರ್ಗದಲ್ಲಿ ನಡೆಸಲಾಗುತ್ತದೆ ಎಂದು ಕೇಂದ್ರ ಗೃಹ ಸಚಿವ ಅಮಿತ್ ಶಾ ಹೇಳಿದ್ದಾರೆ.

ಪ್ರಧಾನಿ ನರೇಂದ್ರ ಮೋದಿ ನೇತೃತ್ವದ ಎನ್‌ಡಿಎ 3.0 ಸರಕಾರ 100 ದಿನಗಳನ್ನು ಪೂರೈಸಿದ ಹಿನ್ನೆಲೆ ದೆಹಲಿಯಲ್ಲಿ ಮಂಗಳವಾರ ಸುದ್ದಿಗೋಷ್ಠಿ ನಡೆಸಿದ ಸಚಿವರನ್ನು ಸುದ್ದಿಗಾರರ ಜನಗಣತಿ ಕುರಿತ ಪ್ರಶ್ನೆ ಕೇಳಿದಾಗ, 'ಶೀಘ್ರದಲ್ಲೇ ಜನಗಣತಿ ದಿನಾಂಕ ಘೋಷಿಸುತ್ತೇವೆ' ಎಂದು ಉತ್ತರಿಸಿದರು. ಆದರೆ, ಯಾವಾಗ ಆರಂಭ ಎಂಬ ಸ್ಪಷ್ಟ ಮಾಹಿತಿ ನೀಡಲಿಲ್ಲ. 2011ರಂದು ದೇಶದಲ್ಲಿ ಜನಗಣತಿ ನಡೆದಿದ್ದು, 2021ರಲ್ಲಿ ನಡೆಸಬೇಕಿದ್ದ ಜನಗಣತಿ ಕರೋನಾ ಸೋಂಕು ದೇಶಾದ್ಯಂತ ವ್ಯಾಪಿಸಿದ ಕಾರಣ ಮುಂದೂಡಿಕೆಯಾಯಿತು.

1881ರಲ್ಲಿ ದೇಶದಲ್ಲಿನ ಜನಗಣತಿ ಆರಂಭಗೊಂಡಿದೆ. ಬಳಿಕ ಪ್ರತಿ 10 ವರ್ಷಗಳಿಗೊಮ್ಮೆ ಜನಗಣತಿ ನಡೆಯುತ್ತಿದೆ. ದಶವಾರ್ಷಿಕ ಜನಗಣತಿಯ ಮೊದಲ ಹಂತ 2020ರ ಏ.1ರಂದು ಆರಂಭವಾಗಬೇಕಿತ್ತು. ಆದರೆ ಕೋವಿಡ್-19 ಸಾಂಕ್ರಾಮಿಕ ರೋಗದ ಕಾರಣ ಮುಂದೂಡಬೇಕಾಯಿತು ಎಂದರು.

ಜಾತಿ ಆಧಾರಿತ ಜನಗಣತಿ ಬಗೆಗೂ ಸಚಿವ ಶಾ ಮಾತನಾಡಿದರು. ಜನಗಣತಿ ನಡೆಸಲು ಆರಂಭಿಸಿದಾಗ ಅದು ಹೇಗೆ ನಡೆಯುತ್ತದೆ ಎಂಬ ಎಲ್ಲಾ ಮಾಹಿತಿಯನ್ನೂ ಸಾರ್ವಜನಿಕಗೊಳಿಸುತ್ತೇವೆ ಎಂದು ಹೇಳಿದರು. ಜಾತಿ ಆಧಾರಿತ ಜನಗಣತಿ ನಡೆಸಬೇಕೆಂಬ ರಾಜಕೀಯ ಪಕ್ಷಗಳ ಆಗ್ರಹದ ನಡುವೆಯೇ ಶಾ ಅವರಿಂದ ಈ ಹೇಳಿಕೆ ಬಂದಿರುವುದು ಗಮನಾರ್ಹ. ಕೇಂದ್ರ ಸರಕಾರದ ವಿವಿಧ ಸಂಸ್ಥೆಗಳು 2011ರ ಜನಗಣತಿ ಆಧರಿಸಿಯೇ ನೀತಿಗಳನ್ನು ರೂಪಿಸುತ್ತಿವೆ. ಅದೇ ಆಧಾರದಲ್ಲೇ ಸಬ್ಸಿಡಿ ಮೊದಲಾದ ಆರ್ಥಿಕ ನೆರವನ್ನೂ ಹಂಚಿಕೆ ಮಾಡುತ್ತಿವೆ ಎಂದು ಮತ್ತೊಂದು ಪ್ರಶ್ನೆಗೆ ಸಚಿವ ಶಾ ಉತ್ತರಿಸಿದರು.

ವಕ್ಫ್ ತಿದ್ದುಪಡಿ ವಿಧೇಯಕಕ್ಕೆ ಸಂಸತ್ತಿನ ಉಭಯ ಸದನಗಳಲ್ಲಿ ಶೀಘ್ರವೇ ಅಂಗೀಕಾರ ಪಡೆಯಲಾಗುವುದು ಎಂದು ಪ್ರಶ್ನೆಯೊಂದಕ್ಕೆ ಶಾ ಉತ್ತರಿಸಿದರು. ಮಾಹಿತಿ ಮತ್ತು ಪ್ರಸಾರ ಖಾತೆ ಸಚಿವ ಅಶ್ವಿನಿ ವೈಷ್ಣವ್, ಜಂಟಿ ಸುದ್ದಿಗೋಷ್ಠಿಯಲ್ಲಿದ್ದರು.



12 ಸಾವಿರ ಕೋಟಿ ರು. ವೆಚ್ಚದ ಅಂದಾಜು

ಈ ಬಾರಿಯ ಜನಗಣತಿ ಸಂಪೂರ್ಣ ಪ್ರಮಾಣದ್ದಾಗಿರಲಿದೆ. ಅಲ್ಲದೇ, ಡಿಜಿಟಲ್ ಶೈಲಿಯಲ್ಲಿ ನಡೆಯಲಿದೆ. ಜನಗಣತಿ ಮತ್ತು ಎನ್‌ಪಿಆರ್ ಪ್ರಕ್ರಿಯೆಗೆ ಕೇಂದ್ರ ಸರಕಾರ ಅಂದಾಜು 12 ಸಾವಿರ ಕೋಟಿ ರು.ಗೂ ಅಧಿಕ ಹಣ ವೆಚ್ಚ ಮಾಡುವ ಸಾಧ್ಯತೆಯಿದೆ ಎಂದು ಕೇಂದ್ರ ಸರಕಾರದ ಅಧಿಕಾರಿಗಳು ಸುದ್ದಿಸಂಸ್ಥೆಗೆ ಮಂಗಳವಾರ ತಿಳಿಸಿದ್ದಾರೆ. ಇದು ದೇಶದ ಮೊದಲ ಡಿಜಿಟಲ್ ಜನಗಣತಿಯಾಗಲಿದೆ. ಅದಕ್ಕಾಗಿ ಜನಗಣತಿ ಪ್ರಾಧಿಕಾರ 'ಸ್ವಯಂ ಗಣತಿ' ಪೋರ್ಟಲ್ ಸಿದ್ಧಪಡಿಸಿದ್ದು, ಅದು ಇನ್ನಷ್ಟೇ ಬಿಡುಗಡೆ ಆಗಬೇಕಿದೆ. ಸ್ವಯಂ ಜನಗಣತಿ ಸಂದರ್ಭ ಜನರ ಆಧಾರ್ ಅಥವಾ ಮೊಬೈಲ್ ಸಂಖ್ಯೆ ಕಡ್ಡಾಯವಾಗಿರಲಿದೆ. ಜನರು ಸ್ವತಃ ನಾಗರಿಕರು ತಮ್ಮನ್ನು ತಾವು ಎಣಿಸುವ ಅವಕಾಶವನ್ನು ಪಡೆಯುತ್ತಾರೆ ಎಂದು ಅಧಿಕಾರಿ ವಿವರ ನೀಡಿದ್ದಾರೆ.

ಮಣಿಪುರ 'ಶಾಶ್ವತ' ಶಾಂತಿಗಾಗಿ ಮೈತೇಯಿ-ಕುಕಿ ಜತೆ ಮಾತು

ದೆಹಲಿ: ಮಣಿಪುರದಲ್ಲಿ ಶಾಶ್ವತ ಶಾಂತಿ ನೆಲೆಸುವಂತೆ ಮಾಡಲು ಕೇಂದ್ರ ಸರಕಾರ ಮೈತೇಯಿ ಮತ್ತು ಕುಕಿ ಸಮುದಾಯಗಳೊಂದಿಗೆ ಮಾತುಕತೆ ನಡೆಸುತ್ತಿದೆ. ಕಳೆದ ವಾರ 3 ದಿನ ಹಿಂಸಾಚಾರವಾಗಿದೆ. ಅದರ ಹೊರತು ಮಣಿಪುರದಲ್ಲಿ ಪರಿಸ್ಥಿತಿ ಶಾಂತವಾಗಿದೆ. ಕೇಂದ್ರ ಸರಕಾರ ಪ್ರಕ್ಷುಬ್ಧ ಈಶಾನ್ಯ ರಾಜ್ಯದಲ್ಲಿ ಶಾಂತಿ ಪುನಃಸ್ಥಾಪಿಸುವ ಕೆಲಸ ಮಾಡುತ್ತಿದೆ ಎಂದು ಕೇಂದ್ರ ಗೃಹ ಸಚಿವ ಅಮಿತ್ ಶಾ ಹೇಳಿದರು. ನೆರೆಯ ದೇಶಗಳಿಂದ ಅಕ್ರಮವಾಗಿ ಒಳನುಸುಳುವಿಕೆಯನ್ನು ತಡೆಯಲು ಮ್ಯಾನ್ಮಾರ್ ದೇಶದ ಗಡಿಯಲ್ಲಿ ತಂತಿ ಬೇಲಿ ಹಾಕಬೇಕಿದೆ. ಸದ್ಯ ಅಂತಾರಾಷ್ಟ್ರೀಯ ಗಡಿಯಲ್ಲಿ 30 ಕಿಮೀ ಬೇಲಿ ಇದೆ. ಒಟ್ಟು 1,500 ಕಿಮೀ ತಂತಿಬೇಲಿ ನಿರ್ಮಾಣಕ್ಕೆ ಹಣ ಮಂಜೂರಾಗಿದ್ದು, ಶೀಘ್ರವೇ ಕೆಲಸ ಪ್ರಾರಂಭವಾಗಲಿದೆ. ಗಡಿ ಸಮೀಪ ವಾಸಿಸುವ ಜನ ದಾಖಲೆಗಳಿಲ್ಲದೆ ಬಂದುಹೋಗುವ ಕ್ರಮವನ್ನು ಈಗಾಗಲೇ ರದ್ದುಗೊಳಿಸಲಾಗಿದೆ ಎಂದರು.

ಸುಷ್ಮಾ, ಶೀಲಾ ಬಳಿಕ 3ನೇ ಮಹಿಳಾ ಸಿಎಂ

ಶಿಕ್ಷಕಿ ಈಗ ದೆಹಲಿ ಸಿಎಂ

ದೆಹಲಿ: ಬಿಜೆಪಿ ನಾಯಕಿ ಸುಷ್ಮಾ ಸ್ವರಾಜ್, ಕಾಂಗ್ರೆಸ್ ನಾಯಕಿ ಶೀಲಾ ದೀಕ್ಷಿತ್ ನಂತರ ದೆಹಲಿ ಸಿಎಂ ಗದ್ದುಗೆ ಏರಿದ 3ನೇ ಮಹಿಳೆ ಎಂಬ ಹೆಗ್ಗಳಿಕೆಗೆ 43 ವರ್ಷದ ಅತಿಶಿ ಪಾತ್ರರಾಗಲಿದ್ದಾರೆ. ಅಲ್ಲದೇ, ಸದ್ಯ ದೇಶದಲ್ಲಿರುವ ಏಕೈಕ ಮಹಿಳಾ ಸಿಎಂ ಮಮತಾ ಬ್ಯಾನರ್ಜಿ ಜತೆಗೆ ಈಗ ಅತಿಶಿ ಸೇರ್ಪಡೆಯಾಗಲಿದ್ದಾರೆ.

ಸುಷ್ಮಾ ಸ್ವರಾಜ್ 1988ರಲ್ಲಿ 52 ದಿನಗಳ ಕಾಲ ದೆಹಲಿ ಸಿಎಂ ಆಗಿದ್ದರು. ಶೀಲಾ ದೀಕ್ಷಿತ್ 15 ವರ್ಷ ದೆಹಲಿ ಸಿಎಂ ಆಗಿ ಕಾರ್ಯನಿರ್ವಹಿಸಿದ್ದರು. ಆ ಮೂಲಕ ದೆಹಲಿಯ ದೀರ್ಘಾವಧಿ ಸಿಎಂ ಎನಿಸಿಕೊಂಡಿದ್ದರು. ಅಬಕಾರಿ ಹಗರಣದಲ್ಲಿ ಡಿಸಿಎಂ ಮನೀಷ್ ಸಿಸೋಡಿಯ ಬಂಧನವಾದ ನಂತರ ಕಲ್ಕಾಜಿ ಕ್ಷೇತ್ರದ ಶಾಸಕಿ ಅತಿಶಿಗೆ ಸಚಿವೆ ಹುದ್ದೆ ಅರಸಿ ಬಂದಿತ್ತು. ಕೇಜ್ರಿವಾಲ್, ಸಿಸೋಡಿಯ ನ್ಯಾಯಾಂಗ ಬಂಧನದಲ್ಲಿದ್ದಾಗ ಪಕ್ಷದ ಕಾರ್ಯಕ್ರಮ, ಮಾಧ್ಯಮಗಳಲ್ಲಿ ಪಕ್ಷ ಹಾಗೂ ನಾಯಕರನ್ನು ಸಮರ್ಥಿಸಿಕೊಳ್ಳುವ ಜವಾಬ್ದಾರಿಯನ್ನೂ ಆತಿಷಿ ನಿರ್ವಹಿಸಿದ್ದರು. ಆ.15ರಂದು ಸ್ವಾತಂತ್ರ ದಿನಾಚರಣೆಯಂದು ದೆಹಲಿ ಸರಕಾರದ ಕಾರ್ಯಕ್ರಮದಲ್ಲಿ ಧ್ವಜಾರೋಹಣ ನೆರವೇರಿಸುವ ಅವಕಾಶವೂ ಆತಿಷಿ ಅವರಿಗೆ ಸಿಕ್ಕಿತ್ತು. ಇನ್ನೈದು ತಿಂಗಳಿಗೆ ಚುನಾವಣೆ ಎದುರಿಸಲಿರುವ ದೆಹಲಿಯ ಆಡಳಿತ ಚುಕ್ಕಾಣಿ ಹಿಡಿದು ಕಸರತ್ತು ಮಾಡಬೇಕಾದ ಜವಾಬ್ದಾರಿ ಆತಿಷಿ ಮರ್ಲೆನಾ ಅವರ ಹೆಗಲೇರಿದೆ.

ಶಿಕ್ಷಕಿಯಿಂದ ಸಿಎಂವರೆಗೆ

ರಾಜಕೀಯ ಪ್ರವೇಶಕ್ಕೆ ಮೊದಲು ಆತಿಷಿ ಆಂಧ್ರದ ರಿಷಿ ವ್ಯಾಲಿ ಶಾಲೆಯಲ್ಲಿ ಇತಿಹಾಸ ಮತ್ತು ಇಂಗ್ಲಿಷ್ ಬೋಧಿಸುತ್ತಿದ್ದರು. ಸದ್ಯ ಅವರಿಗೆ ಇಷ್ಟದ ಶಿಕ್ಷಣ ಖಾತೆ ಸೇರಿದಂತೆ ದೆಹಲಿ ಸರಕಾರದ ಹಣಕಾಸು, ಯೋಜನೆ, ಪಿಡಬ್ಲ್ಯುಡಿ, ಜಲಸಂಪನ್ಮೂಲ, ವಿದ್ಯುತ್, ಸೇವೆಗಳು, ಸಾರ್ವಜನಿಕ ಸಂಪರ್ಕ ಮತ್ತು ವಿಜಿಲೆನ್ಸ್ ಸೇರಿದಂತೆ 11 ಇಲಾಖೆಗಳ ಜವಾಬ್ದಾರಿ ನಿರ್ವಹಿಸುತ್ತಿದ್ದಾರೆ. ಅಲ್ಲದೇ, ದೆಹಲಿ ಸಂಪುಟದಲ್ಲಿನ ಏಕೈಕ ಸಚಿವೆಯಾಗಿದ್ದಾರೆ. ದೆಹಲಿಯ ಸೇಂಟ್ ಸ್ಟೀಫನ್ಸ್ ಕಾಲೇಜಿನಲ್ಲಿ ಇತಿಹಾಸ ಅಧ್ಯಯನ ಮಾಡಿದ್ದಾರೆ. ಚೆವೆನಿಂಗ್ ವಿದ್ಯಾರ್ಥಿವೇತನದಲ್ಲಿ ಆಕ್ಸ್‌ಫರ್ಡ್ ವಿವಿಯಲ್ಲಿ ಸ್ನಾತಕೋತ್ತರ ಪದವಿ ಪಡೆದಿದ್ದಾರೆ. 2006ರಲ್ಲಿ 'ರೋಡ್ಸ್' ವಿದ್ವಾಂಸರಾಗಿ ಆಕ್ಸ್‌ಫರ್ಡ್‌ನಲ್ಲಿ ಶೈಕ್ಷಣಿಕ ಸಂಶೋಧನೆ ನಡೆಸಿ ಮತ್ತೊಂದು ಸ್ನಾತಕೋತ್ತರ ಪದವಿ ಗಳಿಸಿದ್ದಾರೆ.

ನುಸುಳುಕೋರನಿಗೆ ಬಿಎಸ್‌ಎಫ್ ಗುಂಡು

ಅಮೃತಸರ: ಅಂತಾರಾಷ್ಟ್ರೀಯ ಗಡಿ ಬಳಿ ಭಾರತದೊಳಗೆ ನುಸುಳುತ್ತಿದ್ದ ಪಾಕಿಸ್ತಾನದ ವ್ಯಕ್ತಿಯನ್ನು ಗಡಿ ಭದ್ರತಾ ಪಡೆ(ಬಿಎಸ್‌ಎಫ್) ಸೋಮವಾರ ರಾತ್ರಿ 9 ಗಂಟೆಯಲ್ಲಿ ಹೊಡೆದುರುಳಿಸಿದೆ. ಪಂಜಾಬ್‌ನ ಅಮೃತಸರದ ಗಡಿ ಗ್ರಾಮ ರತನ್‌ಖುರ್ದ್ ಬಳಿ ಗಡಿ ದಾಟಿ ಬರುತ್ತಿದ್ದ ವ್ಯಕ್ತಿಯನ್ನು ಗಮನಿಸಿದ ಬಿಎಸ್‌ಎಫ್ ಯೋಧರು, ವಾಪಸ್ ಹೋಗಲು ಸೂಚಿಸಿದರೂ ಆತ ಭದ್ರತಾ ಪಡೆಗಳಿಗೆ ಆಕ್ರಮಣಕಾರಿ ಸನ್ನೆ ಮಾಡಿದ್ದಾನೆ. ಬಳಿಕ ನುಸುಳುವ ಯತ್ನ ಮುಂದುವರಿಸಿದ್ದಾನೆ. ನುಸುಳುಕೋರನ ಜೇಬಿನಲ್ಲಿ 270 ಪಾಕಿಸ್ತಾನಿ ರುಪಿ ಪತ್ತೆಯಾಗಿದೆ.

ವೈದ್ಯರ ಬೇಡಿಕೆ ಭಾಗಶಃ ಈಡೇರಿಕೆ: ಮಮತಾ

ಕೋಲ್ಕತ್ತ: ಪಶ್ಚಿಮ ಬಂಗಾಳ ಸರಕಾರ ಮತ್ತು ಪ್ರತಿಭಟನಾ ನಿರತ ಕಿರಿಯ ವೈದ್ಯರ ನಡುವಿನ 5ನೇ ಸಭೆ ಭಾಗಶಃ ಯಶ ಕಂಡಿದೆ. ಕೋಲ್ಕತ್ತ ನಗರ ಪೊಲೀಸ್ ಆಯುಕ್ತ ವಿನೀತ್ ಗೋಯಲ್, ಉತ್ತರ ವಿಭಾಗದ ಉಪ ಆಯುಕ್ತ ಅಭಿಷೇಕ್ ಗುಪ್ತಾ ಹಾಗೂ ಆರೋಗ್ಯ ಇಲಾಖೆ ನಿರ್ದೇಶಕರನ್ನು ಮಮತಾ ಸರಕಾರ ವರ್ಗಾವಣೆ ಮಾಡಿದೆ.

ಮನೋಜ್ ಕುಮಾರ್ ವರ್ಮಾ ಹೊಸ ಆಯುಕ್ತರಾಗಿ ಮಂಗಳವಾರ ಸಂಜೆ 4 ಗಂಟೆಗೆ ನೇಮಕಗೊಂಡಿದ್ದಾರೆ. ಆದರೆ, ಸರಕಾರದ ಪ್ರಧಾನ ಕಾರ್ಯದರ್ಶಿ ವಿರುದ್ಧ ಕ್ರಮದ ವಿಚಾರವಾಗಿ ಸರಕಾರ ಯಾವುದೇ ಭರವಸೆ ನೀಡಿಲ್ಲ. ಕಾಳಿಘಾಟ್‌ನಲ್ಲಿರುವ ಸಿಎಂ ನಿವಾಸಕ್ಕೆ ಸಂಜೆ 6.20ಕ್ಕೆ ಆಗಮಿಸಿದ ಕಿರಿಯ ವೈದ್ಯರ ನಿಯೋಗ ರಾತ್ರಿ 9ರವರೆಗೆ ಸಭೆ ನಡೆಸಿದೆ. ಸಭೆಯಲ್ಲಿ ಚರ್ಚೆಯಾದ ವಿಷಯಗಳ ದಾಖಲೆಗೆ 42 ವೈದ್ಯರು ಹಾಗೂ ಸರಕಾರದ ಮುಖ್ಯ ಕಾರ್ಯದರ್ಶಿ ಮನೋಜ್ ಪಂತ್ ಸಹಿ ಮಾಡಿದ್ದಾರೆ. ಕಿರಿಯ ವೈದ್ಯರ ಶೇ.99ರಷ್ಟು ಬೇಡಿಕೆ ಈಡೇರಿವೆ ಎಂದು ಸಿಎಂ ಮಮತಾ ಹೇಳಿದ್ದಾರೆ. ಸಭೆ ಬಳಿಕ ಪ್ರತಿಭಟನೆ ನಿಲ್ಲಿಸುವಂತೆ ಮಮತಾ ಕಿರಿಯ ವೈದ್ಯರಲ್ಲಿ ಮನವಿ ಮಾಡಿದ್ದಾರೆ.

ಸಿಎಂ ನಿವಾಸದಿಂದ ಹೊರ ಬಂದ ಕಿರಿಯ ವೈದ್ಯರ ನಿಯೋಗ 5 ಬೇಡಿಕೆಗಳ ವಿಚಾರದಲ್ಲಿ ಕೆಲವು ಒಪ್ಪಂದ ಕೆಲವು ಭಿನ್ನಾಭಿಪ್ರಾಯಗಳಿವೆ. ನಮ್ಮ ಬೇಡಿಕೆಗಳನ್ನು ಸರಕಾರಕ್ಕೆ ತಿಳಿಸಿದ್ದೇವೆ. ಪ್ರತಿಭಟನೆ ಕೈ ಬಿಡುವ ವಿಚಾರ ಚರ್ಚಿಸಿ ನಿರ್ಧರಿಸುತ್ತೇವೆ ಎಂದು ಹೇಳಿದೆ. ಸಿಎಂ ನುಡಿದಂತೆ ನಡೆದರಷ್ಟೇ ಪ್ರತಿಭಟನೆ ಕೈಬಿಡಲಾಗುವುದು ಎಂದಿದ್ದಾರೆ.

ಕೇಜ್ರಿವಾಲ್ ರಾಜೀನಾಮೆ

ದೆಹಲಿ: ಆಮ್ ಆದ್ಮಿ ಪಕ್ಷದ(ಎಎಪಿ) ನಾಯಕ ಅರವಿಂದ ಕೇಜ್ರಿವಾಲ್ ಮಂಗಳವಾರ ಲೆಫ್ಟಿನೆಂಟ್ ಗವರ್ನರ್ ವಿ.ಕೆ.ಸಕ್ಸೆನಾ ಅವರನ್ನು ಭೇಟಿಯಾಗಿ ಸಿಎಂ ಸ್ಥಾನಕ್ಕೆ ರಾಜೀನಾಮೆ ಸಲ್ಲಿಸಿದರು. ಇದೇ ವೇಳೆ ನಿಯೋಜಿತ ಸಿಎಂ ಆತಿಷಿ ಮರ್ಲೆನಾ ಹೊಸದಾಗಿ ಸರಕಾರ ರಚನೆಗೆ ಹಕ್ಕು ಮಂಡಿಸಿದರು.

ಸಿಎಂ ಸ್ಥಾನಕ್ಕೆ ರಾಜೀನಾಮೆ ನೀಡುವುದಾಗಿ ಸೆ.17ರಂದು ಘೋಷಿಸಿದ್ದ ಕೇಜ್ರಿವಾಲ್ ಮಂಗಳವಾರ ಬೆಳಗ್ಗೆ ಶಾಸಕಾಂಗ ಪಕ್ಷದ ಸಭೆ ಕರೆದು ನೂತನ ಸಿಎಂ ಆಯ್ಕೆ ಚರ್ಚಿಸಿದರು. ನಿರೀಕ್ಷೆಯಂತೆಯೇ ಸಚಿವೆ ಆತಿಷಿ ಆಯ್ಕೆಯಾದರು. ಸಂಜೆ 4.30ಕ್ಕೆ ಲೆಫ್ಟಿನೆಂಟ್ ಗವರ್ನರ್ ಅವರನ್ನು ಕೇಜ್ರಿವಾಲ್ ಮತ್ತು ಆತಿಷಿ ಭೇಟಿಯಾದರು. ಬಳಿಕ ಸುದ್ದಿಗಾರರ ಜತೆ ಮಾತನಾಡಿದ ಆತಿಷಿ 'ಕೇಜ್ರಿವಾಲ್ ರಾಜೀನಾಮೆ ಆಪ್ ಪಕ್ಷ-ದೆಹಲಿ ಜನತೆಗೆ ಭಾವುಕ ಕ್ಷಣ. ದೆಹಲಿ ಜನ ಕೇಜ್ರಿವಾಲ್‌ರನ್ನು ಮತ್ತೆ ಸಿಎಂ ಮಾಡುವರು. ಮುಂದಿನ ಚುನಾವಣೆವರೆಗಷ್ಟೇ ದೆಹಲಿ ನನ್ನ ಜವಾಬ್ದಾರಿ'ಎಂದರು. 'ದೆಹಲಿಗೆ ಒಬ್ಬರೇ ಸಿಎಂ, ಅವರು ಅರವಿಂದ ಕೇಜ್ರಿವಾಲ್' ಎಂದು ಹೇಳಿದರು. ಮುಂಬರುವ ಚುನಾವಣೆಯಲ್ಲಿ ಕೇಜ್ರಿವಾಲ್ ಅವರನ್ನು ಮತ್ತೆ ಸಿಎಂ ಸ್ಥಾನಕ್ಕೆ ತರುವಂತೆ ಮನವಿ ಮಾಡಿದರು.

ನಿರ್ಬಂಧಿಸದಿರಿ, ಮಹಿಳೆಯರಿಗೆ ಸುರಕ್ಷತೆ ಕೊಡಿ

ನೈಟ್ ಶಿಫ್ಟ್: ದೀದಿಗೆ ಸುಪ್ರೀಂ ಚಾಟಿ

ದೆಹಲಿ: ಆರ್‌ಜಿ ಕರ್ ಸರಕಾರಿ ವೈದ್ಯಕೀಯ ಕಾಲೇಜು-ಆಸ್ಪತ್ರೆಯಲ್ಲಿ ವೈದ್ಯೆ ಮೇಲಿನ ಹತ್ಯಾಚಾರ ಪ್ರಕರಣದಲ್ಲಿ ಸುಮೊಟೊ ಕೇಸ್ ದಾಖಲಿಸಿ ವಿಚಾರಣೆ ನಡೆಸುತ್ತಿರುವ ಸುಪ್ರೀಂ ಕೋರ್ಟ್, ಮಹಿಳಾ ವೈದ್ಯರಿಗೆ ರಾತ್ರಿ ಪಾಳಿ ಕೆಲಸ ನಿರ್ಬಂಧಿಸಿದ ಪಶ್ಚಿಮ ಬಂಗಾಳ ಸರಕಾರಕ್ಕೆ ಚಾಟಿ ಬೀಸಿದೆ. ಮಹಿಳೆಯರಿಗೆ ಸುರಕ್ಷತೆ ನೀಡಬೇಕೆ ಹೊರತು ನಿರ್ಬಂಧಿಸುವುದಲ್ಲ ಎಂದು ಹೇಳಿದೆ.

ಮುಖ್ಯ ನ್ಯಾಯಮೂರ್ತಿ ಡಿ.ವೈ.ಚಂದ್ರಚೂಡ್ ನೇತೃತ್ವದ ಪೀಠ, ಮಂಗಳವಾರ ವಿಚಾರಣೆ ವೇಳೆ ಪಶ್ಚಿಮ ಬಂಗಾಳದ ಸರಕಾರಿ ಆಸ್ಪತ್ರೆಗಳಲ್ಲಿ ಮಹಿಳಾ ವೈದ್ಯಕೀಯ ಸಿಬ್ಬಂದಿಗೆ ರಾತ್ರಿ ಪಾಳಿ ನಿರ್ಬಂಧಿಸಿ ಹೊರಡಿಸಿದ ಅಧಿಸೂಚನೆಗೆ ಅಸಮಾಧಾನ ವ್ಯಕ್ತಪಡಿಸಿದೆ. ಸರಕಾರವೇಕೆ ಮಹಿಳಾ ವೈದ್ಯರನ್ನು ರಾತ್ರಿ ಪಾಳಿಯಿಂದ ನಿರ್ಬಂಧಿಸುತ್ತಿದೆ ಎಂದು ಸರಕಾರದ ಪರ ವಕೀಲ ಕಪಿಲ್ ಸಿಬಲ್ ಅವರನ್ನು ಪೀಠ ಪ್ರಶ್ನಿಸಿದೆ. ಮಹಿಳೆಯರೂ ಎಲ್ಲಾ ಶಿಫ್ಟ್‌ನಲ್ಲಿಯೂ ಕೆಲಸ ಮಾಡಲು ಸಿದ್ಧರಿರುವಾಗ ಏಕೆ ನಿರ್ಬಂಧಿಸಬೇಕು? ಅವರಿಗೆ ಬೇಕಿರುವುದು ಸುರಕ್ಷತೆ ಎಂದು ಹೇಳಿದೆ. ಜತೆಗೆ ರಾತ್ರಿ ಪಾಳಿ ಅಧಿಸೂಚನೆ ಬದಲಿಸುವಂತೆ ರಾಜ್ಯ ಸರಕಾರಕ್ಕೆ ಆದೇಶಿಸಿದೆ.

ಜನ ಸ್ಮಾಲ್ ಫೈನಾನ್ಸ್ ಬ್ಯಾಂಕ್
ಎ ಶೆಡ್ಯೂಲ್ಡ್ ಕಮರ್ಷಿಯಲ್ ಬ್ಯಾಂಕ್
CIN No. L65923KA2006PLC040028
ನೋಂದಾಯಿತ ಕಚೇರಿ: ದಿ ಫೇರ್‌ವೇ ಬ್ಯುಸಿನೆಸ್ ಪಾರ್ಕ್ #10/1, 11/2, 12/2B, ದೊಮ್ಮೂರ್ ಆಫ್, ಕೋರಮಂಗಲ ಒಳವರ್ತುಲ ರಸ್ತೆ, EGL ಪಕ್ಕ , ಚಲ್ಲಘಟ್ಟ , ಬೆಂಗಳೂರು - 560071.
ದೂರವಾಣಿ: +91 - 8046020100; ಇಮೇಲ್: info@janabank.com; ವೆಬ್‌ಸೈಟ್: www.janabank.com

ಅಂಚೆ ಮತದಾನದ ನೋಟೀಸ್

ಸದಸ್ಯರಿಗೆ ಈ ಮೂಲಕ ತಿಳಿಸುವುದೇನೆಂದರೆ ಕಂಪನಿಗಳ ಕಾಯಿದೆ, 2013 ರ ಸೆಕ್ಷನ್ 108 ಮತ್ತು 110 ರ ನಿಬಂಧನೆಗಳು ಮತ್ತು ಇತರ ಅನ್ವಯವಾಗುವ ಇತರ ನಿಬಂಧನೆಗಳಿಗೆ ಅನುಸಾರವಾಗಿ, ತಿದ್ದುಪಡಿ ಮಾಡಿದಂತೆ, ಕಂಪನಿಗಳ (ನಿರ್ವಹಣೆ ಮತ್ತು ಆಡಳಿತ) ನಿಯಮಗಳು, 2014 ರೊಂದಿಗೆ ಒಟ್ಟಿಗೆ ಅನ್ವಯವಾಗುವಂತೆ, ತಿದ್ದುಪಡಿ ಮಾಡಿದಂತೆ ಮತ್ತು ಕಾರ್ಪೊರೇಟ್ ವ್ಯವಹಾರಗಳ ಸಚಿವಾಲಯ ("MCA"), ಭಾರತ ಸರ್ಕಾರದಿಂದ ಆ ನಿಟ್ಟಿನಲ್ಲಿ ಹೊರಡಿಸಲಾದ ಇತರ ಸಾಮಾನ್ಯ ಸುತ್ತೋಲೆಗಳು, ಇನ್‌ಸ್ಟಿಟ್ಯೂಟ್ ಆಫ್ ಕಂಪನಿ ಸೆಕ್ರೆಟರೀಸ್ ಆಫ್ ಇಂಡಿಯಾ ಹೊರಡಿಸಿದ ಸಾಮಾನ್ಯ ಸಭೆಗಳ ಕಾರ್ಯದರ್ಶಿ ಮಾನದಂಡಗಳು, ಸೆಕ್ಯುರಿಟೀಸ್ ಅಂಡ್ ಎಕ್ಸ್‌ಚೇಂಜ್ ಬೋರ್ಡ್ ಆಫ್ ಇಂಡಿಯಾದ 44 ನೇ ನಿಯಮಾವಳಿ (ಪಟ್ಟಿ ಮಾಡುವ ಜವಾಬ್ದಾರಿಗಳು ಮತ್ತು ಬಹಿರಂಗಪಡಿಸುವಿಕೆಯ ಅವಶ್ಯಕತೆಗಳು) ನಿಯಮಗಳು, 2015, ತಿದ್ದುಪಡಿ ಮಾಡಿದಂತೆ ("ಪಟ್ಟಿ ಮಾಡುವ ನಿಯಮಾವಳಿಗಳು") ಯಾವುದೇ ಇತರ ಅನ್ವಯವಾಗುವ ಕಾನೂನು, ನಿಯಮ ಮತ್ತು ನಿಬಂಧನೆಗಳಿಗೆ (ಯಾವುದೇ ಶಾಸನಬದ್ಧ ಮಾರ್ಪಾಡು(ಗಳು) ಅಥವಾ ಮರು-ಅನುಷ್ಠಾನ(ಗಳು) ಸೇರಿದಂತೆ, ಸದ್ಯಕ್ಕೆ ಜಾರಿಯಲ್ಲಿರುವ), ಅನುಸಾರವಾಗಿ ಜನ ಸ್ಮಾಲ್ ಫೈನಾನ್ಸ್ ಬ್ಯಾಂಕ್ ಲಿಮಿಟೆಡ್ ("ಕಂಪನಿ/ಬ್ಯಾಂಕ್") ಸದಸ್ಯರ ಅನುಮೋದನೆಯನ್ನು ರಿಮೋಟ್ ಇ-ವೋಟಿಂಗ್ (ಇ-ವೋಟಿಂಗ್") ಪ್ರಕ್ರಿಯೆಯ ಮೂಲಕ ಈ ಕೆಳಗಿನ ವಿಶೇಷ ರೆಸಲ್ಯೂಶನ್‌ಗಾಗಿ ಕೋರಲಾಗಿದೆ:

ಕ್ರಮ ಸಂ	ವಿಶೇಷ ರೆಸಲ್ಯೂಶನ್ ವಿವರಣೆ
1.	ಶ್ರೀ ದಿನೇಶ್ ಸಿ ಪಟ್ವಾರಿ (DIN: 10060352) ಅವರನ್ನು ಬ್ಯಾಂಕಿನ ಕಾರ್ಯನಿರ್ವಾಹಕೇತರ ಸ್ವತಂತ್ರ ನಿರ್ದೇಶಕರಾಗಿ ನೇಮಕ

MCA ಸುತ್ತೋಲೆಗಳ ಅನುಸಾರವಾಗಿ, ಬ್ಯಾಂಕ್ 13ನೇ ಸೆಪ್ಟೆಂಬರ್ 2024 ("ಕಟ್-ಆಫ್ ದಿನಾಂಕ") ಶುಕ್ರವಾರದಂದು ಬ್ಯಾಂಕ್/ ಠೇವಣಿ ಭಾಗವಹಿಸುವವರ (ರುಗಳ) ಇಮೇಲ್ ವಿಳಾಸಗಳನ್ನು ಬ್ಯಾಂಕ್‌ನಲ್ಲಿ ನೋಂದಾಯಿಸಿದ ಸದಸ್ಯರಿಗೆ ಎಲೆಕ್ಟ್ರಾನಿಕ್ ಮೋಡ್ ಮೂಲಕ 17 ಸೆಪ್ಟೆಂಬರ್ 2024 ಮಂಗಳವಾರದಂದು ವಿವರಣಾತ್ಮಕ ಹೇಳಿಕೆಯೊಂದಿಗೆ ಅಂಚೆ ಮತಪತ್ರ ನೋಟೀಸ್‌ನ ಎಲೆಕ್ಟ್ರಾನಿಕ್ ಪ್ರತಿಗಳ ರವಾನೆಯನ್ನು ಬ್ಯಾಂಕ್ ಪೂರ್ಣಗೊಳಿಸಿದೆ.

ಅಂಚೆ ಮತಪತ್ರದ ನೋಟೀಸ್ ಬ್ಯಾಂಕ್‌ನ ವೆಬ್‌ಸೈಟ್ www.janabank.com, ಮತ್ತು BSE ಲಿಮಿಟೆಡ್‌ನ ವೆಬ್‌ಸೈಟ್‌ನ ಸಂಬಂಧಿತ ವಿಭಾಗ: www.bseindia.com ಭಾರತದ ನ್ಯಾಷನಲ್ ಸ್ಟಾಕ್ ಎಕ್ಸ್‌ಚೇಂಜ್ ಆಫ್ ಇಂಡಿಯಾ: www.nseindia.com ಮತ್ತು ನ್ಯಾಷನಲ್ ಸೆಕ್ಯುರಿಟೀಸ್ ಡಿಪಾಸಿಟರಿ ಲಿಮಿಟೆಡ್‌ನ ವೆಬ್‌ಸೈಟ್: www.evoting.nsdl.com.ನಲ್ಲಿ ಸಹ ಲಭ್ಯವಿದೆ

MCA ಸುತ್ತೋಲೆಗಳ ಪ್ರಕಾರ, ಸದಸ್ಯರು ಇ-ವೋಟಿಂಗ್ ಪ್ರಕ್ರಿಯೆಯ ಮೂಲಕ ಮಾತ್ರ ಮತ ಚಲಾಯಿಸಬಹುದು. ಕಟ್-ಆಫ್ ದಿನಾಂಕದಂದು ಅವರು ಹೊಂದಿರುವ ಬ್ಯಾಂಕ್‌ನ ಈಕ್ವಿಟಿ ಷೇರುಗಳ ಆಧಾರದ ಮೇಲೆ ಸದಸ್ಯರ ಮತದಾನದ ಹಕ್ಕುಗಳನ್ನು ಲೆಕ್ಕಹಾಕಲಾಗುತ್ತದೆ. ಕಟ್-ಆಫ್ ದಿನಾಂಕದಂದು ಬ್ಯಾಂಕಿನ ಷೇರುದಾರರಲ್ಲದ ಯಾವುದೇ ವ್ಯಕ್ತಿ, ಮಾಹಿತಿ ಉದ್ದೇಶಗಳಿಗಾಗಿ ಮಾತ್ರ ಅಂಚೆ ಮತಪತ್ರವನ್ನು ಬಳಸತಕ್ಕದ್ದು.

ಕಂಪನಿಯು ಇ-ವೋಟಿಂಗ್ ಸೌಲಭ್ಯವನ್ನು ಒದಗಿಸುವ ಏಜೆನ್ಸಿಯಾಗಿ ನ್ಯಾಷನಲ್ ಸೆಕ್ಯುರಿಟೀಸ್ ಡಿಪಾಸಿಟರಿ ಲಿಮಿಟೆಡ್‌ನ ("ಎನ್‌ಎಸ್‌ಡಿಎಲ್") ಸೇವೆಗಳನ್ನು ನಿಯೋಜಿಸಿಕೊಂಡಿದೆ. ರಿಮೋಟ್ ಇ-ವೋಟಿಂಗ್ ಅವಧಿಯು ಬುಧವಾರ, ಸೆಪ್ಟೆಂಬರ್ 18, 2024 ರಂದು 09:00 AM (IST) ಕ್ಕೆ ಪ್ರಾರಂಭವಾಗುತ್ತದೆ. 17 ಅಕ್ಟೋಬರ್ 2024 (ಅಂದರೆ ವಿದ್ಯುನ್ಮಾನ ಮತಗಳನ್ನು ಚಲಾಯಿಸಲು ಕೊನೆಯ ದಿನಾಂಕ) ಗುರುವಾರ 05:00 PM (IST) ಕ್ಕಿಂತ ಮೊದಲು ಯಾವುದೇ ಸಮಯದಲ್ಲಿ ರಿಮೋಟ್ ಇ-ವೋಟಿಂಗ್ ಮೂಲಕ ಮತ ಚಲಾಯಿಸಲು ಸದಸ್ಯರನ್ನು ವಿನಂತಿಸಲಾಗಿದೆ. ಇದರ ನಂತರ ರಿಮೋಟ್ ಇ-ವೋಟಿಂಗ್ ಮಾಡ್ಯೂಲ್ ಅನ್ನು ನಿಷ್ಕ್ರಿಯಗೊಳಿಸಲಾಗುತ್ತದೆ. ಮತದಾನದ ಕೊನೆಯ ದಿನ ಅಂದರೆ ಗುರುವಾರ, 17ನೇ ಅಕ್ಟೋಬರ್ 2024 ರಂದು, ಅಗತ್ಯವಿರುವ ಬಹುಮತದಿಂದ ಅಂಗೀಕರಿಸಲ್ಪಟ್ಟರೆ, ರೆಸೊಲ್ಯೂಷನ್ ಅನ್ನು ಅಂಗೀಕರಿಸಲಾಗಿದೆ ಎಂದು ಪರಿಗಣಿಸುವ ದಿನಾಂಕವಾಗಿರುತ್ತದೆ..

ಇ-ವೋಟಿಂಗ್ ಸೌಲಭ್ಯವನ್ನು ಪ್ರವೇಶಿಸಲು ಷೇರುದಾರರು ತಮ್ಮ ಡಿಮ್ಯಾಟ್ ಖಾತೆಯಲ್ಲಿ ತಮ್ಮ ಮೊಬೈಲ್ ನಂಬರ್ ಮತ್ತು ಇಮೇಲ್ ಐಡಿಯನ್ನು ಸರಿಯಾಗಿ ನವೀಕರಿಸಲು ವಿನಂತಿಸಲಾಗಿದೆ.

ನಿರ್ದೇಶಕರ ಮಂಡಳಿಯು 13 ನೇ ಸೆಪ್ಟೆಂಬರ್ 2024 ರಂದು ಹೊರಡಿಸಲಾದ ಅಧಿಸೂಚನೆಯ ಪ್ರಕಾರ ನ್ಯಾಯಯುತ ಮತ್ತು ಪಾರದರ್ಶಕ ರೀತಿಯಲ್ಲಿ ರಿಮೋಟ್ ಇ-ವೋಟಿಂಗ್ ಪ್ರಕ್ರಿಯೆಯ ಮೂಲಕ ಅಂಚೆ ಮತಪತ್ರವನ್ನು ನಡೆಸಲು ಸ್ಕ್ರುಟಿನೈಸರ್ ಆಗಿ ಶ್ರೀ ನಾಗೇಂದ್ರ ಡಿ ರಾವ್, ಪ್ರಾಕ್ಟೀಸ್ ಕಂಪನಿ ಕಾರ್ಯದರ್ಶಿ (ಎಫ್‌ಸಿಎಸ್ ಸಂ. 5553; ಸಿಪಿ ಸಂ. 7731) ಅವರನ್ನು ನೇಮಿಸಿದೆ.

ಯಾವುದೇ ಪ್ರಶ್ನೆಗಳಿದ್ದಲ್ಲಿ, ನೀವು www.evoting.nsdl.com ನ ಡೌನ್‌ಲೋಡ್ ವಿಭಾಗದಲ್ಲಿ ಲಭ್ಯವಿರುವ ಷೇರುದಾರರಿಗಾಗಿ ಪದೇ ಪದೇ ಕೇಳಲಾಗುವ ಪ್ರಶ್ನೆಗಳು (FAQ ಗಳು) ಮತ್ತು ಇ-ವೋಟಿಂಗ್ ಬಳಕೆದಾರರ ಕೈಪಿಡಿಯನ್ನು ಉಲ್ಲೇಖಿಸಬಹುದು ಅಥವಾ 022 – 4886 7000 ಗೆ ಕರೆ ಮಾಡಬಹುದು ಅಥವಾ evoting@nsdl.com. ನಲ್ಲಿ ಶ್ರೀ ಫಲ್ಗುಣಿಗೆ ವಿನಂತಿಯನ್ನು ಕಳುಹಿಸಬಹುದು.

ಸ್ಕ್ರುಟಿನೈಸರ್ ತನಿಖೆಯನ್ನು ಪೂರ್ಣಗೊಳಿಸಿದ ನಂತರ, ತನ್ನ ವರದಿಯನ್ನು ಬ್ಯಾಂಕಿನ ಅಧ್ಯಕ್ಷರಿಗೆ ಅಥವಾ ಅವರಿಂದ ಅಧಿಕಾರ ಪಡೆದ ಯಾವುದೇ ವ್ಯಕ್ತಿಗೆ ಸಲ್ಲಿಸತಕ್ಕದ್ದು. ಅಂಚೆ ಮತದಾನದ ಫಲಿತಾಂಶಗಳು ಮತ್ತು ಸ್ಕ್ರುಟಿನೈಸರ್ ವರದಿಯನ್ನು ಮತದಾನದ ಅವಧಿಯ ಮುಕ್ತಾಯದಿಂದ ಎರಡು ಕೆಲಸದ ದಿನಗಳಲ್ಲಿ ಪ್ರಕಟಿಸಲಾಗುವುದು ಮತ್ತು ಕಂಪನಿಯ ವೆಬ್‌ಸೈಟ್ www.janabank.com ಮತ್ತು NSDL ವೆಬ್‌ಸೈಟ್ : www.evoting.nsdl.com ನಲ್ಲಿ ಪ್ರದರ್ಶಿಸಲಾಗುತ್ತದೆ ಮತ್ತು BSE ಲಿಮಿಟೆಡ್ ಮತ್ತು ನ್ಯಾಷನಲ್ ಸ್ಟಾಕ್ ಎಕ್ಸ್‌ಚೇಂಜ್ ಆಫ್ ಇಂಡಿಯಾ ಲಿಮಿಟೆಡ್‌ನಲ್ಲಿ ಪ್ರಕಟಿಸಲಾಗುವುದು, ಬ್ಯಾಂಕ್‌ನ ಈಕ್ವಿಟಿ ಷೇರುಗಳನ್ನು ಪಟ್ಟಿ ಮಾಡಲಾದ ಸ್ಟಾಕ್ ಎಕ್ಸ್‌ಚೇಂಜ್‌ಗಳಲ್ಲಿ ಸಹ ನೀಡಲಾಗುವುದು.

ವಿದ್ಯುನ್ಮಾನ ವಿಧಾನದ ಮೂಲಕ ಮತದಾನ ಸೇರಿದಂತೆ ಅಂಚೆ ಮತಪತ್ರದ ಮೂಲಕ ಮತದಾನಕ್ಕೆ ಸಂಬಂಧಿಸಿದ ಪ್ರಶ್ನೆ/ಕುಂದುಕೊರತೆಗಳು, ಯಾವುದಾದರೂ ಇದ್ದರೆ, ಪರಿಹರಿಸಲು ಜವಾಬ್ದಾರಿಯುತ ವ್ಯಕ್ತಿಯ ಸಂಪರ್ಕ ವಿವರಗಳು:

ಶ್ರೀಮತಿ ಲಕ್ಷ್ಮಿ ಆರ್ ಎನ್
ಕಂಪನಿ ಸೆಕ್ರೆಟರಿ ಮತ್ತು ಕಂಪ್ಲಿಯನ್ಸ್ ಆಫೀಸರ್
ಜನ ಸ್ಮಾಲ್ ಫೈನಾನ್ಸ್ ಬ್ಯಾಂಕ್ ಲಿಮಿಟೆಡ್
ದಿ ಫೇರ್‌ವೇ ಬ್ಯುಸಿನೆಸ್ ಪಾರ್ಕ್, ಮೊದಲ ಮಹಡಿ, # 10/1, 11/2 & 12/2B ಕಚೇರಿ ದೊಮ್ಮಲೂರು, ಕೋರಮಂಗಲ ಒಳ ವರ್ತುಲ ರಸ್ತೆ, EGL ಬಿಸಿನೆಸ್ ಪಾರ್ಕ್ ಪಕ್ಕ , ಚಲ್ಲಘಟ್ಟ , ಬೆಂಗಳೂರು - 560071.
ದೂರವಾಣಿ: +91- 8046020100; ಇಮೇಲ್: investor.grievance@janabank.com

ಮಂಡಳಿಯ ಆದೇಶದ ಮೇರೆಗೆ
ಜನ ಸ್ಮಾಲ್ ಫೈನಾನ್ಸ್ ಬ್ಯಾಂಕ್ ಲಿಮಿಟೆಡ್‌ಗೆ ಪರವಾಗಿ

ಸ್ಥಳ: ಬೆಂಗಳೂರು
ದಿನಾಂಕ: 18ನೇ ಸೆಪ್ಟೆಂಬರ್ 2024

ಲಕ್ಷ್ಮಿ ಆರ್ ಎನ್
ಕಂಪನಿ ಸೆಕ್ರೆಟರಿ & ಕಂಪ್ಲಿಯನ್ಸ್ ಆಫೀಸರ್

ಅಮೆರಿಕ ಹಿಂದೂ ದೇಗುಲದ ಮೇಲೆ ದುಷ್ಕರ್ಮಿಗಳ ದಾಳಿ



ನ್ಯೂಯಾರ್ಕ್: ಅಮೆರಿಕದ ನ್ಯೂಯಾರ್ಕ್‌ನ ಮೆಲ್ವಿಲ್ಲೆಯಲ್ಲಿರುವ ಬಿಎಪಿಎಸ್ ಸ್ವಾಮಿ ನಾರಾಯಣ ದೇಗುಲದ ಮೇಲೆ ದುಷ್ಕರ್ಮಿಗಳು ಸೋಮವಾರ ದಾಳಿ ನಡೆಸಿ ಕಟ್ಟಡದ ಹೊರಭಾಗದಲ್ಲಿನ ಗೋಡೆಗಳನ್ನು ವಿರೂಪಗೊಳಿಸಿದ್ದಾರೆ.

ಘಟನೆಯನ್ನು ಭಾರತ ತೀವ್ರವಾಗಿ ಖಂಡಿಸಿದ್ದು, ದುಷ್ಕರ್ಮಿಗಳ ವಿರುದ್ಧ ತಕ್ಷಣವೇ ಕಠಿಣ ಕಾನೂನು ಕ್ರಮ ಕೈಗೊಳ್ಳುವಂತೆ ಅಮೆರಿಕ ಸರಕಾರಕ್ಕೆ ಆಗ್ರಹಿಸಿದೆ. ದೇಗುಲದ ಹೊರಾವರಣದಲ್ಲಿನ ಫಲಕದ ಗೋಡೆಯ ಮೇಲೆ, 'ಮೋದಿ ಟೆರರಿಸ್ಟ್. ಹಿಂದೂ-ಸ್ಥಾನ್ ಮುರ್ದಾಬಾದ್' ಎಂದು ಬಣ್ಣದಲ್ಲಿ ಬರೆದಿದ್ದರೆ, ಪ್ರವೇಶ ದ್ವಾರದ ಬಳಿ ರಸ್ತೆ ಮೇಲೆ 'ಎಫ್... ಮೋದಿ' ಎಂದೂ ದುಷ್ಕರ್ಮಿಗಳು ಗೀಚಿದ್ದಾರೆ. ನ್ಯೂಯಾರ್ಕ್‌ನಲ್ಲಿನ ಭಾರತದ ಕಾನ್ಸುಲೇಟ್ ಜನರಲ್, 'ಇಂಥ ಕಿಡಿಗೇಡಿ ಕೃತ್ಯವನ್ನು ಸಹಿಸಲಾಗದು. ದುಷ್ಕರ್ಮಿಗಳ ವಿರುದ್ಧ ತ್ವರಿತ ಹಾಗೂ ಕಠಿಣ ಕ್ರಮ ಕೈಗೊಳ್ಳಬೇಕು ಎಂದು ಅಮೆರಿಕದ ಅಧಿಕಾರಿಗಳಿಗೆ ಒತ್ತಾಯಿಸಲಾಗಿದೆ' ಎಂದು 'ಎಕ್ಸ್'ನಲ್ಲಿ ಬರೆದಿದ್ದಾರೆ. ದೇಗುಲದ ಮೇಲಿನ ದಾಳಿ ಸುದ್ದಿ ತಿಳಿಯುತ್ತಲೇ ಆ ಭಾಗದ ಅನಿವಾಸಿ ಭಾರತೀಯರು, ಸ್ಥಳೀಯ ಅಧಿಕಾರಿಗಳು, ರಾಜ್ಯ ಸರಕಾರದ ಪ್ರತಿನಿಧಿಗಳು ದೇಗುಲದ ಬಳಿ ಮಂಗಳವಾರ ನಸುಕಿನಲ್ಲೇ ಆಗಮಿಸಿ ಶಾಂತಿಸಭೆ ನಡೆಸಿದರು. ಹಿಂದೂಗಳ ಜತೆಗಿರುವುದಾಗಿ ಒಗ್ಗಟ್ಟು ಪ್ರದರ್ಶಿಸಿದರು ಎಂದು ಬಿಎಪಿಎಸ್ ಸಾರ್ವಜನಿಕ ಸಂಪರ್ಕ ವಿಭಾಗ 'ಎಕ್ಸ್'ನಲ್ಲಿ ಮಾಹಿತಿ ಹಂಚಿಕೊಂಡಿದೆ.

ಎಸ್‌ಎಫ್‌ಜೆ ಮೇಲೆ ಶಂಕೆ

ಇದು ಖಲಿಸ್ತಾನ್ ಪರವಾಗಿರುವ ಉಗ್ರ, ಅಮೆರಿಕ ವಾಸಿ ಗುರುಪತ್ವಂತ್ ಪನ್ನೂನ್‌ನ ಕಡೆಯವರ ಹಾಗೂ 'ಸಿಖ್ ಫಾರ್ ಜಸ್ಟೀಸ್'(ಎಸ್‌ಎಫ್‌ಜೆ) ಸಂಘಟನೆಯ ದುಷ್ಕೃತ್ಯವಾಗಿದೆ ಎಂದು ಹಿಂದೂ ಅಮೆರಿಕನ್ ಫೌಂಡೇಷನ್ 'ಎಕ್ಸ್' ಖಾತೆಯಲ್ಲಿ ಆರೋಪಿಸಿದೆ.

4000 ಕೆಜಿ ಸಸ್ಯಾಹಾರಿ ಲ್ಯಾಂಗರ್ | ರಿಯಾಯಿತಿ ಮಾರಾಟ | ಲಡ್ಡು ಹಂಚಿಕೆ

ದೇಶದೆಲ್ಲೆಡೆ ಮೋದಿ ಜನ್ಮದಿನ ಆಚರಣೆ

ದೆಹಲಿ: ಪ್ರಧಾನಿ ನರೇಂದ್ರ ಮೋದಿ ಅವರ 74ನೇ ಜನ್ಮದಿನವನ್ನು ದೇಶದ ವಿವಿಧೆಡೆ ಸಾರ್ವಜನಿಕರು, ಬಿಜೆಪಿ ಸೇರಿದಂತೆ ವಿವಿಧ ಪಕ್ಷಗಳ ನಾಯಕರು, ಧಾರ್ಮಿಕ ಸಂಸ್ಥೆಗಳು, ಕಲಾವಿದರು, ವಿದ್ಯಾರ್ಥಿಗಳು ವಿವಿಧ ಬಗೆಯಲ್ಲಿ ಆಚರಿಸಿ ಸಂಭ್ರಮಿಸಿದ್ದಾರೆ.

1000 ಚಿತ್ರ ಪ್ರದರ್ಶನ: ನರೇಂದ್ರ ಮೋದಿ ಅವರ ಒಂದು ಸಾವಿರ ಛಾಯಾಚಿತ್ರಗಳ ಪ್ರದರ್ಶನಕ್ಕೆ ದೆಹಲಿಯ ಲಲಿತಕಲಾ ಅಕಾಡೆಮಿಯಲ್ಲಿ ಮಂಗಳವಾರ ಚಾಲನೆ ನೀಡಲಾಗಿದ್ದು, ಇದು ಸೆ.30ರವರೆಗೂ ವೀಕ್ಷಣೆಗೆ ಲಭ್ಯವಿದೆ. ಉದ್ಘಾಟನಾ ಕಾರ್ಯಕ್ರಮದಲ್ಲಿ ಕೇಂದ್ರದ ಕಾನೂನು ಸಚಿವ ಅರ್ಜುನ್‌ರಾಮ್ ಮೇಘವಾಲ್, ಸುಪ್ರೀಂ ಕೋರ್ಟ್‌ನ ನಿವೃತ್ತ ಮುಖ್ಯ ನ್ಯಾಯಮೂರ್ತಿ ಕೆ.ಜಿ.ಬಾಲಕೃಷ್ಣನ್ ಛಾಯಾಚಿತ್ರ ಪ್ರದರ್ಶನ ಉದ್ಘಾಟಿಸಿದರು.

4000 ಕೆಜಿ ಸಸ್ಯಾಹಾರಿ ಲ್ಯಾಂಗರ್: ರಾಜಸ್ಥಾನದ ಅಜ್ಮೀರ್ ಷರೀಫ್ ದರ್ಗಾದಲ್ಲಿ 4 ಸಾವಿರ ಕೆಜಿ ತೂಕದ ಸಸ್ಯಾಹಾರಿ ಲ್ಯಾಂಗರ್ ತಯಾರಿಸಿ ಜನರಿಗೆ ಹಂಚಿ ಪ್ರಧಾನಿ ನರೇಂದ್ರ ಮೋದಿ ಜನ್ಮದಿನ ಆಚರಿಸಲಾಗಿದೆ. ಅಕ್ಕಿ, ತುಪ್ಪ, ಒಣ ಹಣ್ಣುಗಳು, ದರ್ಗಾದಲ್ಲಿನ ಸಯ್ಯದ್ ಅಫ್ಸಾನ್ ಛಿಸ್ತಿ, ಗಡ್ಡಿನಾಶಿನ್ ಬಳಸಿ 'ಇಂಡಿಯನ್ ಮೈನಾರಿಟಿ ಫೌಂಡೇಷನ್ ಮತ್ತು ಅಜ್ಮೀರ್ ಷರೀಫ್ ಛಿಸ್ತಿ ಫೌಂಡೇಷನ್' ಸಹಭಾಗಿತ್ವದಲ್ಲಿ ಈ ಲ್ಯಾಂಗರ್ ತಯಾರಿಸಲಾಗಿದೆ.

ಮಾಜಿ ರಾಜ್ಯಪಾಲೆ ಸಂಭ್ರಮ..
ತೆಲಂಗಾಣದ ಮಾಜಿ ರಾಜ್ಯಪಾಲರಾದ ತಮಿಳ್‌ಸಾಯಿ ಸೌಂದರರಾಜನ್ ಚೆನ್ನೈನಲ್ಲಿ ಸಿಹಿ ಹಂಚಿ ಪ್ರೀತಿಯ ನಾಯಕನ ಜನ್ಮದಿನ ಆಚರಿಸಿದರು.

ಸೂರತ್ ಕಟೌಟ್: ಗುಜರಾತ್‌ನ ಸೂರತ್‌ನಲ್ಲಿ ಪೋಸ್ಟರ್ ತಯಾರಕ ಪ್ರವೀಣ್ ಗುಪ್ತಾ ಮತ್ತು ತಂಡ ನರೇಂದ್ರ ಮೋದಿ ಅವರ ಚಿತ್ರವಿರುವ 35 ಮೀ. ಎತ್ತರ, 20 ಮೀ. ಅಗಲದ ಕಟೌಟ್ ಪೋಸ್ಟರ್ ತಯಾರಿಸಿ ತಮ್ಮ ಪ್ರೀತಿಯ ಪ್ರಧಾನಿಯ 74ನೇ ಜನ್ಮದಿನ ಆಚರಿಸಿದ್ದಾರೆ. 20 ಜನರು ಸೇರಿಕೊಂಡು 4 ದಿನ ಶ್ರಮಿಸಿ 500 ಮೀಟರ್ ಗುಣಮಟ್ಟದ ಬಟ್ಟೆ ಬಳಸಿ ಬೃಹತ್ ಕಟೌಟ್ ರಚಿಸಿದ್ದಾಗಿ ಪ್ರವೀಣ್ ಹೇಳಿದ್ದಾರೆ. ಬೃಹತ್ ಕಟ್ಟಡದಲ್ಲಿ ಮೋದಿ ವಿಶೇಷ ಕಟೌಟ್ ಅಳವಡಿಸಲಾಗಿದೆ.

ವಿಶೇಷ ರಿಯಾಯಿತಿ ಮಾರಾಟ: ಗುಜರಾತ್ ರಾಜ್ಯದ ವಿವಿಧೆಡೆ ವರ್ತಕರು, ಶಾಪಿಂಗ್ ಮಾಲ್‌ಗಳು ತಮ್ಮದೇ ರಾಜ್ಯದ ಮೋದಿಜಿ ಜನ್ಮದಿನವನ್ನು ಭಿನ್ನ ರೀತಿಯಲ್ಲಿ ಆಚರಿಸಿದ್ದಾರೆ. ಶೇ.10ರಿಂದ ಶೇ.90ರವರೆಗೂ ವಿಶೇಷ ರಿಯಾಯಿತಿ ಘೋಷಿಸಿ ಮಾರಾಟ ವಹಿವಾಟು ನಡೆಸಿದರು. ಆ ಮೂಲಕ ಗ್ರಾಹಕರನ್ನು ಖುಷಿಪಡಿಸಿದರು.

ವಿಶ್ವಕರ್ಮ ವೇಷ: ವಿಶ್ವಕರ್ಮ ಪೂಜೆ ದಿನವೇ ನರೇಂದ್ರ ಮೋದಿ ಅವರ ಜನ್ಮದಿನ ಬಂದಿರುವುದರಿಂದ ಬಿಹಾರದ ಪಟನಾದಲ್ಲಿ ಬಿಜೆಪಿ ಕಾರ್ಯಕರ್ತರು ಶ್ರೀ ವಿಶ್ವಕರ್ಮ ಭಗವಾನರ ವೇಷದಲ್ಲಿ ಮೋದಿ ಅವರನ್ನು ಚಿತ್ರಿಸಿದ ಕಟೌಟ್ ರಚಿಸಿ ವೇದ ಶಾಲೆಯಲ್ಲಿ ಹಾಲಿನ ಅಭಿಷೇಕ ಮಾಡಿ ಸಂಭ್ರಮಿಸಿದ್ದಾರೆ.

ಅಮೂಲ್ ವಿಶೇಷ: ಗುಜರಾತ್‌ನ ಕ್ಷೀರೋತ್ಪನ್ನ ಸಂಸ್ಥೆ 'ಅಮೂಲ್' ಮೋದಿ ಅವರ 74ನೇ ಜನ್ಮದಿನದಂದು 74 ಬಗೆಯ ವಿಶೇಷ ಟಾಪಿಕಲ್ಸ್ ತಯಾರಿಸಿ ಪ್ರದರ್ಶಿಸಿದೆ.

74 ಕಿಲೊ ಲಡ್ಡು

ಪಟನಾದಲ್ಲಿ ಬಿಜೆಪಿ ಬಿಹಾರ ಕಚೇರಿಯಲ್ಲಿ ಪಕ್ಷದ ರಾಜ್ಯಾಧ್ಯಕ್ಷ ದಿಲೀಪ್ ಕುಮಾರ್ ಜೈಸ್ವಾಲ್, ಡಿಸಿಎಂಗಳಾದ ಸಾಮ್ರಾಟ್ ಚೌಧರಿ ಮತ್ತು ವಿಜಯ್ ಕುಮಾರ್ ಸಿನ್ಹಾ 74 ಕಿಲೋ ತೂಕದ ಒಂದೇ ಲಡ್ಡುವನ್ನು ಕೇಕ್ ರೀತಿ ಕತ್ತರಿಸುವ ಮೂಲಕ ಮೋದಿ ಜನ್ಮದಿನ ಆಚರಿಸಿದರು.



ಮರಳು ಶಿಲ್ಪ

ದೆಹಲಿಯಲ್ಲಿ ಮತ್ತೊಂದೆಡೆ ಖ್ಯಾತ ಮರಳು ಶಿಲ್ಪ ಕಲಾವಿದ ಸುದರ್ಶನ್ ಪಟ್ನಾಯಕ್ 'ಪುರಿ ಜಗನ್ನಾಥ ದೇವರಿಗೆ ಮೋದಿ ಕೈಮುಗಿಯುತ್ತಿರುವ' ಚಿತ್ರವನ್ನು ಮರಳಿನಲ್ಲಿ ರಚಿಸಿದ್ದಾರೆ. ಅದರ ಜತೆಗೇ 2500 ಹಣತೆಗಳನ್ನು ಬೆಳಗಿಸಿ ಮೋದಿ ಜನ್ಮದಿನ ಸಂಭ್ರಮ ಆಚರಿಸಲಾಗಿದೆ.

ಕಾಶ್ಮೀರ ಚುನಾವಣೆಗೆ ಕಾಂಗ್ರೆಸ್ ಪ್ರಣಾಳಿಕೆ

ಶ್ರೀನಗರ: ಜಮ್ಮು-ಕಾಶ್ಮೀರ ವಿಧಾನಸಭೆ ಚುನಾವಣೆಗೆ ಕಾಂಗ್ರೆಸ್ ಪ್ರಣಾಳಿಕೆ ಬಿಡುಗಡೆ ಮಾಡಿದ್ದು, 'ಹಾತ್ ಬದ್ಲೇಗಾ ಹಾಲಾತ್' ಘೋಷವಾಕ್ಯದಡಿ ರೈತರು, ಯುವಕರು, ಮಹಿಳೆಯರಿಗೆ ಹಲವು ಭರವಸೆ ನೀಡಿದೆ.

ಪಕ್ಷದ ಕಾಶ್ಮೀರ ಘಟಕ ಕಚೇರಿಯಲ್ಲಿ ಎಐಸಿಸಿ ಮುಖ್ಯ ವಕ್ತಾರ ಪವನ್ ಖೇರಾ ಮತ್ತು ಪಿಸಿಸಿ ಅಧ್ಯಕ್ಷ ತಾರಿಕ್ ಹಮೀದ್ ಕರಾರ್ ಪ್ರಣಾಳಿಕೆ ಬಿಡುಗಡೆ ಮಾಡಿ, ಸೇಬಿಗೆ ಕನಿಷ್ಠ ಬೆಂಬಲ ಬೆಲೆ(ಎಂಎಸ್‌ಪಿ) 72 ರು. ನಿಗದಿ, ಪ್ರಕೃತಿ ವಿಕೋಪವಾದಾಗ ಹಾನಿಗೀಡಾಗುವ ಬೆಳೆಗಳಿಗೆ ವಿಮೆ ಭರವಸೆ ನೀಡಿದರು. ಅಲ್ಲದೇ, ಭೂರಹಿತರು, ಸಣ್ಣ ಹಿಡುವಳಿದಾರರಿಗೆ ವರ್ಷಕ್ಕೆ 4,000 ರು. ಆರ್ಥಿಕ ಬೆಂಬಲ, ಭೂರಹಿತ ರೈತರಿಗೆ ಸಾಗುವಳಿಗಾಗಿ 99 ವರ್ಷ ಭೂಮಿ ಗುತ್ತಿಗೆ ವ್ಯವಸ್ಥೆ, ಶೇ.100ರಷ್ಟು ನೀರಾವರಿ ಖಚಿತ, ಜಿಲ್ಲಾ ಮಟ್ಟದ ನೀರಾವರಿ ಯೋಜನೆಗೆ 2,500 ಕೋಟಿ ರು. ನಿಧಿ ಸ್ಥಾಪನೆ ಹಾಗೂ ಯುವಕರಿಗಾಗಿ 30 ದಿನದಲ್ಲಿ ಉದ್ಯೋಗ ಕ್ಯಾಲೆಂಡರ್, 1 ಲಕ್ಷ ಸರಕಾರಿ ಹುದ್ದೆಗಳ ಭರ್ತಿ, ಪೊಲೀಸ್, ಅಗ್ನಿಶಾಮಕ ದಳ ಮತ್ತು ಅರಣ್ಯ ಸಂರಕ್ಷಣಾ ಪಡೆಗಳಿಗೆ ವಿಶೇಷ ಗಡಿ ನೇಮಕ ಪುನಾರಂಭ, ಪದವಿ ವ್ಯಾಸಂಗ ಮುಗಿಸಿದ ಯುವಕರಿಗೆ 1 ವರ್ಷ ಮಾಸಿಕ 3,500 ರು. ನಿರುದ್ಯೋಗ ಭತ್ಯೆ ಮೊದಲಾದ ಅಂಶಗಳನ್ನು ಕಾಂಗ್ರೆಸ್ ಪ್ರಣಾಳಿಕೆ ಒಳಗೊಂಡಿದೆ.

ಪಟಾಕಿ ಘಟಕ ಸ್ಫೋಟ: ಮಕ್ಕಳು ಸೇರಿ 12 ಸಾವು

ಫಿರೋಜಾಬಾದ್: ಉತ್ತರ ಪ್ರದೇಶದ ಫಿರೋಜಾಬಾದ್‌ನಲ್ಲಿನ ಪಟಾಕಿ ಘಟಕದಲ್ಲಿ ಸ್ಫೋಟವಾಗಿದ್ದು, ಪಕ್ಕದಲ್ಲಿದ್ದ ಮನೆ ಕುಸಿದಿದೆ. ಪರಿಣಾಮ 3 ವರ್ಷ ಮತ್ತು 1.5 ವರ್ಷದ ಇಬ್ಬರು ಮಕ್ಕಳು ಸೇರಿದಂತೆ 12 ಮಂದಿ ಮೃತಪಟ್ಟಿದ್ದಾರೆ. 10ಕ್ಕೂ ಹೆಚ್ಚು ಮಂದಿ ಗಾಯಗೊಂಡಿದ್ದು, ಆಸ್ಪತ್ರೆಗೆ ದಾಖಲಿಸಲಾಗಿದೆ.

ಸ್ಫೋಟದ ತೀವ್ರತೆಗೆ ಪಕ್ಕದ ಮನೆ ಪೂರ್ಣ ಕುಸಿದಿದೆ. ಆ ಮನೆಯಲ್ಲಿದ್ದ ಇಬ್ಬರು ಮಕ್ಕಳು ಮತ್ತು ಮೂವರು ವಯಸ್ಕರು ಸಾವಿಗೀಡಾಗಿದ್ದಾರೆ. ಸಮೀಪದಲ್ಲಿದ್ದ ಮತ್ತೊಂದು ಕಟ್ಟಡದ ಗೋಡೆ ಕುಸಿದು, ಒಂದೇ ಕುಟುಂಬದ 7 ಮಂದಿ ಅವಶೇಷಗಳಡಿ ಸಮಾಧಿಯಾಗಿದ್ದಾರೆ. ಪಟಾಕಿ ಘಟಕದಲ್ಲಿ ಸೋಮವಾರ ರಾತ್ರಿ 10.30ರ ವೇಳೆ ಸ್ಫೋಟ ಸಂಭವಿಸಿದೆ. ಸಮೀಪದಲ್ಲಿದ್ದ ಹತ್ತಕ್ಕೂ ಹೆಚ್ಚು ಮನೆಗಳು ಕುಸಿದು ಬಿದ್ದಿವೆ. ಅವಶೇಷಗಳಡಿ ಹಲವರು ಸಿಲುಕಿರುವ ಸಾಧ್ಯತೆ ಇದೆ. ಶೋಧ ನಡೆಸಲಾಗುತ್ತಿದೆ ಎಂದು ಸ್ಥಳೀಯರು ಹೇಳಿದ್ದಾರೆ.

ಚಂದ್ರಪಾಲ್ ಎಂಬವರ ಮನೆ ಬಾಡಿಗೆಗೆ ಪಡೆದಿದ್ದ ಪಟಾಕಿ ವ್ಯಾಪಾರಿ, ಅಲ್ಲಿ ಪಟಾಕಿ ಘಟಕ ನಡೆಸುತ್ತಿದ್ದರು. ಕಟ್ಟಡದಲ್ಲಿ ಭಾರಿ ಪ್ರಮಾಣದಲ್ಲಿ ಗನ್ ಪೌಡರ್ ಶೇಖರಿಸಿಡಲಾಗಿತ್ತು. ಅದರಿಂದಲೇ ಸ್ಫೋಟವಾಗಿದೆ ಎನ್ನಲಾಗಿದೆ.

1.87 ಕೋಟಿ ರು.ಗೆ ಗಣೇಶ ಲಡ್ಡು ಹರಾಜು

ಹೈದರಾಬಾದ್: ತೆಲಂಗಾಣದಲ್ಲಿ ಈ ಬಾರಿಯ ಗಣೇಶೋತ್ಸವ ಸಂಭ್ರಮ ಹಿಂದೆಂದಿಗಿಂತಲೂ ಅಧಿಕವಾಗಿದೆ. ಗಣೇಶೋತ್ಸವ ಮಂಟಪಗಳಲ್ಲಿನ ಲಡ್ಡು ಪ್ರಸಾದದ ಹರಾಜು ಈ ಸಂಭ್ರಮದ ಪ್ರಮಾಣವನ್ನು ಎತ್ತಿ ತೋರಿಸುತ್ತಿದೆ.

ಹೈದರಾಬಾದ್‌ನಲ್ಲಿ ಗಣೇಶ ಚತುರ್ಥಿ ಹಬ್ಬದ ಅಂಗವಾಗಿ ನಡೆಯುವ ಲಡ್ಡು ಪ್ರಸಾದ ಹರಾಜು ಈ ಬಾರಿ ದಾಖಲೆ ನಿರ್ಮಿಸಿದೆ. ಬಂಡ್ಲಗುಡ್ಡಾದಲ್ಲಿನ 'ಕೀರ್ತಿ ರಿಚ್ಮಂಡ್ ವಿಲ್ಲಾ'ದ ಗಣೇಶ ಮಹೋತ್ಸವದಲ್ಲಿನ ಪ್ರಸಾದದ ಲಡ್ಡು ಸೋಮವಾರ ರಾತ್ರಿ 1.87 ಕೋಟಿ ರು.ಗೆ ಹರಾಜಾಗಿದೆ. ಕಳೆದ ವರ್ಷಕ್ಕಿಂತ ಈ ಬಾರಿ 60 ಲಕ್ಷ ರು. ಅಧಿಕ ಬೆಲೆಗೆ ಹರಾಜಾಗಿದೆ. ಇದು ಗಣೇಶೋತ್ಸವ ಆಯೋಜಕರು ಮತ್ತು ಭಕ್ತರಲ್ಲಿ ಹರುಷ ಉಂಟು ಮಾಡಿದೆ. 1.87 ಕೋಟಿ ರು. ನೀಡಿ ಲಡ್ಡು ಪ್ರಸಾದ ಖರೀದಿಸಿದವರು ಯಾರು? ಎಂಬ ಮಾಹಿತಿಯನ್ನು ಗಣೇಶೋತ್ಸವ ಮಂಡಳಿಯವರು ಸದ್ಯ ಬಹಿರಂಗಗೊಳಿಸಿಲ್ಲ. ಹೀಗೆ ಲಡ್ಡು ಪ್ರಸಾದ ಹರಾಜಿನಿಂದ ಬರುವ ಹಣವನ್ನು ಪ್ರತಿವರ್ಷ ವಿವಿಧ ಸೇವಾ ಕಾರ್ಯಗಳಿಗೆ ಬಳಸಲಾಗುತ್ತದೆ. ಇನ್ನೊಂದೆಡೆ ಬಾಲಾಪುರದಲ್ಲಿನ ಗಣೇಶ ಲಡ್ಡು ಪ್ರಸಾದವೂ 30.01 ಲಕ್ಷ ರು.ಗೆ ಮಾರಾಟವಾಗಿದೆ. ಇದು 3 ದಶಕಗಳಲ್ಲೇ ಅಧಿಕ ಹರಾಜು ಮೊತ್ತವಾಗಿದೆ. ಕಳೆದ ಬಾರಿ 27 ಲಕ್ಷ ರು.ಗೆ ಇಲ್ಲಿನ ಲಡ್ಡು ಪ್ರಸಾದ ಮಾರಾಟವಾಗಿತ್ತು.

ಕೇರಳದಲ್ಲಿ ಶಂಕಿತ ಮಂಕಿಪಾಕ್ಸ್ ಪತ್ತೆ

ಮಲ್ಲಪುರಂ: ದುಬೈನಿಂದ ಕೇರಳಕ್ಕೆ ಬಂದಿದ್ದ ವ್ಯಕ್ತಿಯಲ್ಲಿ ಶಂಕಿತ ಮಂಕಿಪಾಕ್ಸ್ ಸೋಂಕು ಪತ್ತೆಯಾಗಿದೆ. ಆತನ ಮೇಲೆ ತೀವ್ರ ನಿಗಾ ಇಡಲಾಗಿದೆ. ಮಲ್ಲಪುರಂನ 38 ವರ್ಷದ ವ್ಯಕ್ತಿಯ ಮಂಜೇರಿ ಆಸ್ಪತ್ರೆಯಲ್ಲಿ ತೀವ್ರ ಜ್ವರಕ್ಕೆ ಚಿಕಿತ್ಸೆಗೆಂದು ಹೋದಾಗ ವೈದ್ಯರು ಅತನ ದೇಹದ ಮೇಲೆ ಗುಳ್ಳೆಗಳನ್ನು ಗಮನಿಸಿದ್ದು ಮಂಕಿಪಾಕ್ಸ್ ಲಕ್ಷಣಗಳಿರಬಹುದು ಎಂದು ಶಂಕಿಸಿದರು. ವ್ಯಕ್ತಿಯ ರಕ್ತದ ಮಾದರಿ ಕೊಝಿಕ್ಕೋಡ್ ವೈದ್ಯಕೀಯ ಆಸ್ಪತ್ರೆಗೆ ತಪಾಸಣೆಗೆ ಕಳುಹಿಸಿದ್ದು ವರದಿ ನಿರೀಕ್ಷಿಸಲಾಗಿದೆ. ಯುಎಇನಲ್ಲಿ ಈಗಾಗಲೇ ಕೆಲವು ಮಂಕಿಪಾಕ್ಸ್ ಪ್ರಕರಣಗಳು ವರದಿಯಾಗಿವೆ. ಹೀಗಾಗಿ ಆತಂಕ ಹೆಚ್ಚಿಸಿದೆ.

ಸಮಾಚಾರ ಸಣ್ಣದಲ್ಲ

ಆತಿಶಿ ಕುಟುಂಬ ಅಫ್ಜಲ್ ಗುರು ಬೆಂಬಲಿಸಿತ್ತು: ಸ್ವಾತಿ

ದೆಹಲಿ: ದೆಹಲಿಗೆ ಹೊಸ ಮುಖ್ಯಮಂತ್ರಿಯಾಗಿ ಆತಿಷಿ ಆಯ್ಕೆ ಮಾಡಿರುವುದಕ್ಕೆ ಎಎಪಿ ರಾಜ್ಯಸಭಾ ಸದಸ್ಯೆ ಸ್ವಾತಿ ಮಲಿವಾಲ್ ಟೀಕಿಸಿದ್ದಾರೆ. ಆತಿಶಿ ಕುಟುಂಬ ಸಂಸತ್ ದಾಳಿ ಪ್ರಕರಣದ ಅಪರಾಧಿ ಅಪ್ಜಲ್ ಗುರು ಬಿಡುಗಡೆ ಬೆಂಬಲಿಸಿ ಅಭಿಯಾನ ನಡೆಸಿತ್ತು ಎಂದು ಗಂಭೀರ ಆರೋಪ ಮಾಡಿದ್ದಾರೆ. ಆಯ್ಕೆ 'ದುರದೃಷ್ಟಕರ' ಎಂದೂ ಕಿಡಿಕಾರಿದ್ದಾರೆ. ಅಪರಾಧಿ ಅಫ್ಜಲ್ ಗುರುವಿಗೆ ಮರಣದಂಡನೆ ತಪ್ಪಿಸಲು ರಾಷ್ಟ್ರಪತಿಗಳಿಗೆ ಕ್ಷಮಾದಾನ ಪತ್ರ ಬರೆದಿದ್ದ ಕುಟುಂಬದ ಪುತ್ರಿ ಆತಿಷಿಯನ್ನು ದೆಹಲಿ ಸಿಎಂ ಆಗಿ ಆಯ್ಕೆ ಮಾಡಿರುವುದಕ್ಕೆ ಬೇಸರವಾಗಿದೆ. ಅವರ ಪ್ರಕಾರ ಅಫ್ಜಲ್ ಗುರು ನಿರಪರಾಧಿ. ರಾಜಕೀಯ ಷಡ್ಯಂತ್ರಕ್ಕೆ ಬಲಿಯಾದವ. ಇಂಥ ಕುಟುಂಬವದರ ಆಡಳಿತದಲ್ಲಿ ದೆಹಲಿಯನ್ನು ದೇವರೇ ಕಾಪಾಡಬೇಕು ಎಂದು ಮಲಿವಾಲ್ ಹೇಳಿದ್ದಾರೆ.

ರಾಜೀನಾಮೆಗೆ ಆಗ್ರಹ: ದೆಹಲಿ ನಿಯೋಜಿತ ಸಿಎಂ ಆತಿಶಿ ಟೀಕಿಸಿದ ಸಂಸದೆ ಸ್ವಾತಿ ಮಲಿವಾಲ್ ವಿರುದ್ಧ ಎಎಪಿ ಆಕ್ರೋಶ ವ್ಯಕ್ತಪಡಿಸಿದೆ. ರಾಜ್ಯಸಭಾ ಸ್ಥಾನಕ್ಕೆ ರಾಜೀನಾಮೆ ನೀಡುವಂತೆ ಆಗ್ರಹಿಸಿದೆ.

ವಂದೇ ಭಾರತ್ ಹಳಿಗೆ ಜಾರಿಬಿದ್ದ ಶಾಸಕಿ ರಕ್ಷಣೆ

ದೆಹಲಿ: ಉತ್ತರ ಪ್ರದೇಶದ ಆಗ್ರಾದ ಇಟಾವಾ ರೈಲ್ವೆ ಜಂಕ್ಷನ್‌ನಲ್ಲಿ ಮಂಗಳವಾರ ವಂದೇ ಭಾರತ್ ರೈಲಿಗೆ ಹಸಿರು ನಿಶಾನೆ ತೋರುವ ವೇಳೆ ಪಕ್ಷದ ಕಾರ್ಯಕರ್ತರು, ಫೋಟೋ ಗ್ರಾಫರ್‌ಗಳು ಅಧಿಕ ಸಂಖ್ಯೆಯಲ್ಲಿ ಸೇರಿದ್ದರಿಂದ ನುಗ್ಗಾಟವಾಗಿ ಬಿಜೆಪಿ ಶಾಸಕಿ ಹಳಿ ಮೇಲೆ ಬಿದ್ದುಬಿಟ್ಟರು. ಅವರಿಗೆ ಸಣ್ಣದಾಗಿ ಗಾಯವಾಗಿದೆ. ಘಟನೆಯ ವಿಡಿಯೋ ವೈರಲ್ ಆಗಿದೆ. ಆಗ್ರಾ, ಕಂಟೋನ್ಮೆಂಟ್-ಬನಾರಸ್ ವಂದೇ ಭಾರತ್ ಎಕ್ಸ್‌ಪ್ರೆಸ್‌ಗೆ ಸೋಮ ವಾರ ಹಸಿರು ನಿಶಾನೆ ತೋರುವ ಸಂದರ್ಭ ಹಠಾತ್ ನೂಕುನುಗ್ಗಲು ಉಂಟಾಯಿತು. ಜನರನ್ನು ನಿಯಂತ್ರಿಸುತ್ತಿದ್ದ ಭದ್ರತಾ ಸಿಬ್ಬಂದಿ ಆಯ ತಪ್ಪಿದ್ದರಿಂದ ಎದುರಿಗೇ ಇದ್ದ ಶಾಸಕಿ ಸರಿತಾ ಭದೋರಿಯಾ ಪ್ಲಾಟ್ ಫಾರಂನಿಂದ ಜಾರಿ ಹಳಿ ಮೇಲೆ ಬಿದ್ದರು. ತಕ್ಷಣವೇ ಭದ್ರತಾ ಸಿಬ್ಬಂದಿ ಹಳಿಗೆ ಇಳಿದು ಶಾಸಕಿಯನ್ನು ಮೇಲೆತ್ತಿ ರಕ್ಷಿಸಿದರು. ಕೂದಲೆಳೆ ಅಂತರದಲ್ಲಿ ದೊಡ್ಡ ಅನಾಹುತ ತಪ್ಪಿದೆ.

ರಾಂಚಿ: ಹಳಿತಪ್ಪಿದ 2 ರೈಲು ಇಂಜಿನ್

ರಾಂಚಿ: ಜಾರ್ಖಂಡ್‌ನ ರಾಂಚಿಯಲ್ಲಿನ ರೈಲ್ವೆ ಯಾರ್ಡ್‌ನಲ್ಲಿ 2 ರೈಲುಗಳ ಇಂಜಿನ್ ಮಂಗಳವಾರ ಬೆಳಗ್ಗೆ ಹಳಿ ತಪ್ಪಿ ಬಫರ್ ಸ್ಟಾಪ್‌ಗೆ ಡಿಕ್ಕಿ ಹೊಡೆದಿವೆ. ಮುರಿ ಪ್ರದೇಶದಲ್ಲಿನ ಸುಯಿಸಾ ರೈಲು ನಿಲ್ದಾಣದ ಯಾರ್ಡ್‌ನಲ್ಲಿ ಅವಘಡವಾಗಿದೆ. ಒಂದು ಎಂಜಿನ್ ಬದಿಯಲ್ಲಿ ಉರುಳಿ ಬಿದ್ದಿದೆ. ಇಂಜಿನ್‌ಗಳಿಗೆ ಬೋಗಿ ಜೋಡಿಸಲಾಗಿರಲಿಲ್ಲ, ಹಾಗಾಗಿ ಹಾನಿ ಸಂಭವಿಸಿಲ್ಲ ಎಂದು ರಾಂಚಿ ರೈಲ್ವೆ ವಿಭಾಗದ ಸಿಪಿಆರ್‌ಒ ನಿಶಾಂತ್ ಕುಮಾರ್ ಹೇಳಿದ್ದಾರೆ.

ಹಣದುಬ್ಬರ 4 ತಿಂಗಳ ಕನಿಷ್ಠ

ದೆಹಲಿ: ದೇಶದಲ್ಲಿನ ಸಗಟು ಹಣದುಬ್ಬರ 4 ತಿಂಗಳಲ್ಲೇ ಕನಿಷ್ಠ ಮಟ್ಟಕ್ಕೆ ಇಳಿಕೆಯಾಗಿದೆ. ಮೇ ತಿಂಗಳಲ್ಲಿ ಶೇ.3.43ರಷ್ಟಿದ್ದ ಸಗಟು ದರ ಸೂಚ್ಯಂಕದ ಹಣದುಬ್ಬರ, ಆಗಸ್ಟ್ ತಿಂಗಳಲ್ಲಿ ಶೇ. 1.31ಕ್ಕೆ ತಗ್ಗಿದೆ. ಜುಲೈನಲ್ಲಿ ಶೇ.2.04ರಷ್ಟಿತ್ತು. ತೈಲದರ ಇಳಿಕೆ ಮತ್ತು ಹಣ್ಣು-ತರಕಾರಿಗಳ ಧಾರಣೆ ತಗ್ಗಿರುವುದರಿಂದ ಸಗಟು ದರ ಹಣದುಬ್ಬರ ಆಗಸ್ಟ್ ತಿಂಗಳಲ್ಲಿ ಕನಿಷ್ಠ ಮಟ್ಟಕ್ಕೆ ಇಳಿಕೆ ಆಗಲು ಅವಕಾಶವಾಗಿದೆ.

ಮೋದಿ ನೇತೃತ್ವದಲ್ಲಿ ದೇಶ ಅಭಿವೃದ್ಧಿ: ಬಿವೈವಿ

ಬೆಂಗಳೂರು: ಕಳೆದ 100 ದಿನಗಳಲ್ಲಿ ಮೋದಿ ನೇತೃತ್ವದ ಎನ್‌ಡಿಎ ಸರಕಾರ ಅಭಿವೃದ್ಧಿಯತ್ತ ದಾಪುಗಾಲು ಇಡುತ್ತಿದ್ದು, ಮಹಿಳಾ ಮತ್ತು ಯುವ ಸಬಲೀಕರಣ, ಆರೋಗ್ಯ ಸೇವೆ ಸೇರಿ ಎಲ್ಲ ಕ್ಷೇತ್ರಗಳ ಅಭಿವೃದ್ಧಿಗೆ ಒತ್ತು ನೀಡುತ್ತಿದೆ ಎಂದು ಬಿಜೆಪಿ ರಾಜ್ಯಾಧ್ಯಕ್ಷ ವಿಜಯೇಂದ್ರ ಮೆಚ್ಚುಗೆ ವ್ಯಕ್ತಪಡಿಸಿದ್ದಾರೆ. ನರೇಂದ್ರ ಮೋದಿ ನೇತೃತ್ವದ ಬಿಜೆಪಿ- ಎನ್‌ಡಿಎ ಸರಕಾರ ಮಹತ್ತರ ಸಾಧನೆ ಮಾಡಿದ್ದು, ಕಿಸಾನ್ ಸಮ್ಮಾನ್ ನಿಧಿ, ರಸ್ತೆ ಸಂಪರ್ಕ ಜಾಲದ ಅಭಿವೃದ್ಧಿ, ಬೆಂಗಳೂರು ಮೆಟ್ರೊ ಸಂಪರ್ಕ, ರೈಲು ಮಾರ್ಗಗಳ ಅಭಿವೃದ್ಧಿ ಸೇರಿ ವಿವಿಧ ಯೋಜನೆಗಳಿಗೆ ಗರಿಷ್ಠ ಹಣ ನೀಡಿದೆ ಎಂದು ತಿಳಿಸಿದ್ದಾರೆ. ಆಯುಷ್ಮಾನ್ ಭಾರತ್ ಯೋಜನೆ ವಿಸ್ತರಿಸಲಾಗಿದ್ದು, 70 ವರ್ಷಕ್ಕಿಂತ ಹೆಚ್ಚಿನ 6 ಕೋಟಿ ಹಿರಿಯರಿಗೆ ಲಾಭ ನೀಡಲಿದೆ. ಎಲ್ಲರ ಹಿತಕ್ಕಾಗಿ, ಸರ್ವರ ಅಭಿವೃದ್ಧಿಗೆ ಪಣ ತೊಟ್ಟು ಕೆಲಸ ಮಾಡುತ್ತಿದ್ದಾರೆ ಎಂದು ತಿಳಿಸಿದ್ದಾರೆ.

ಒಡಿಶಾದಲ್ಲಿ ಸುಭದ್ರಾ ಯೋಜನೆ ಚಾಲನೆ | ಪಿಎಂ ಆವಾಸ್ ಫಲಾನುಭವಿಗಳ ಜತೆ ಚರ್ಚೆ
74 ಕೆಜಿ ಲಡ್ಡು ಹಂಚಿ ಸಂಭ್ರಮ ಆಚರಣೆ | ಶ್ರೀನಗರದಲ್ಲೂ ಮೋದಿ ಜನ್ಮದಿನ ಸಂಭ್ರಮ

ಪ್ರಧಾನಿ ಮೋದಿಗೆ 74ರ ಸಂಭ್ರಮ

ದೆಹಲಿ: ಪ್ರಧಾನಿ ನರೇಂದ್ರ ಮೋದಿ 74ನೇ ಜನ್ಮದಿನ ನಿಮಿತ್ತ ಒಡಿಶಾದಲ್ಲಿ 'ಸುಭದ್ರಾ' ಯೋಜನೆಗೆ ಮಂಗಳವಾರ ಚಾಲನೆ ನೀಡುವ ಮೂಲಕ ರಾಜ್ಯದ ಮಹಿಳೆಯರಿಗೆ ಎನ್‌ಡಿಎ ಸರಕಾರ ಉಡುಗೊರೆ ನೀಡಿದೆ.

ಮೋದಿ ಜನ್ಮದಿನ ಪ್ರಯುಕ್ತ ಈ ವರ್ಷವೂ ಬಿಜೆಪಿ ದೇಶಾದ್ಯಂತ 'ಸೇವಾ ಪರ್ವ' ಅಭಿಯಾನ ನಡೆಸಿದೆ. 15 ದಿನಗಳ ಕಾಲ ಸ್ವಚ್ಛತಾ ಕಾರ್ಯಕ್ರಮ, ರಕ್ತದಾನ ಶಿಬಿರ ಸೇರಿ ಹಲವು ಸೇವಾ ಕಾರ್ಯಕ್ರಮ ಆಯೋಜಿಸಲಾಗಿದೆ.

1 ಕೋಟಿ ಫಲಾನುಭವಿ: ಭುವನೇಶ್ವರದಲ್ಲಿ ಒಡಿಶಾ ಸರಕಾರದ 'ಸುಭದ್ರಾ' ಯೋಜನೆಗೆ ಪ್ರಧಾನಿ ಮೋದಿ ಚಾಲನೆ ನೀಡಿದ್ದು, ರಾಜ್ಯದ 21ರಿಂದ 60 ವರ್ಷದ ಮಹಿಳೆಯರಿಗೆ ವಾರ್ಷಿಕ 10 ಸಾವಿರ ರು.ಗಳಂತೆ 5 ವರ್ಷ ಕಾಲ (ಒಟ್ಟು 50 ಸಾವಿರ ರು.) ನೀಡುವ ಯೋಜನೆ ಇದಾಗಿದೆ. ಒಂದು ಕೋಟಿ ಮಹಿಳೆಯರು ಯೋಜನೆಯ ಲಾಭ ಪಡೆಯಲಿದ್ದಾರೆ. ಫಲಾನುಭವಿಗಳ ಬ್ಯಾಂಕ್ ಖಾತೆಗೆ ಹಣ ಜಮಾ ಆಗಲಿದೆ. ಸುಭದ್ರಾ ಯೋಜನೆ ಆರ್ಥಿಕವಾಗಿ ಮಹಿಳೆಯರನ್ನು ಸಬಲಗೊಳಿಸುವ ಮತ್ತು ಜೀವನಮಟ್ಟ ಎತ್ತರಿಸುವ ಉದ್ದೇಶ ಹೊಂದಿದೆ ಎಂದರು. ಇದೇ ವೇಳೆ ಪ್ರಧಾನಿ 3800 ಕೋಟಿ ರು ಮೌಲ್ಯದ ಅಭಿವೃದ್ಧಿ ಯೋಜನೆಗೂ ಚಾಲನೆ ನೀಡಿದರು.

ಪ್ರಧಾನಿ ನರೇಂದ್ರ ಮೋದಿ 74ನೇ ಜನ್ಮದಿನ ನಿಮಿತ್ತ ಒಡಿಶಾದ ಭುವನೇಶ್ವರದಲ್ಲಿ ರಾಜ್ಯ ಸರಕಾರದ 'ಸುಭದ್ರಾ' ಯೋಜನೆಗೆ ಮಂಗಳವಾರ ಚಾಲನೆ ನೀಡಿದರು. ಒಡಿಶಾ ಸಿಎಂ ಮೋಹನ್ ಚರಣ್ ಮಾಜಿ ಮತ್ತಿತರರಿದ್ದರು.

ಅಮ್ಮನನ್ನ ನೆನೆದು ಭಾವುಕ: ಪ್ರಧಾನ ಮಂತ್ರಿ ಆವಾಸ್ ಯೋಜನೆಯ ಫಲಾನುಭವಿಗಳ ಗೃಹ ಪ್ರವೇಶದಲ್ಲಿ ಭಾಗಿಯಾದ ಮೋದಿ ತಮ್ಮ ತಾಯಿ ಹೀರಾಬೆನ್ ಅವರನ್ನು ನೆನೆದು ಭಾವುಕರಾದರು. ಫಲಾನುಭವಿಗಳ ಮನೆಗೆ ಮೋದಿ ಭೇಟಿ ನೀಡಿದ್ದು ಮಹಿಳೆಯರು ಮೋದಿಗೆ 'ಪಾಯಸ' ನೀಡಿ ಧನ್ಯವಾದ ಅರ್ಪಿಸಿದ್ದಾರೆ. ಈ ವಿಚಾರವನ್ನು ಪ್ರಸ್ತಾಪಿಸಿ ಮಾತನಾಡಿದ ಮೋದಿ 'ಪ್ರತಿ ವರ್ಷ ಜನ್ಮದಿನದಂದು ನನ್ನ ತಾಯಿ ಬೆಲ್ಲವನ್ನು ತಿನ್ನಿಸುತ್ತಿದ್ದರು. ಈ ಬಾರಿ ನನ್ನ ಸಹೋದರಿಯರು ನನಗೆ ಪಾಯಸ ನೀಡಿದ್ದಾರೆ' ಎಂದು ಹೇಳಿ ಭಾವುಕರಾದರು.

ಫಲಾನುಭವಿಗಳ ಜತೆ ಮೋದಿ ಸಾಕಷ್ಟು ಸಂವಾದವನ್ನು ನಡೆಸಿದ್ದು ಈ ಸಮಯದಲ್ಲಿ ಸಿಎಂ ಮೋಹನ್ ಚರಣ್ ಮಾಝಿ ಕೂಡ ಪ್ರಧಾನಿಗೆ ಸಾಥ್ ನೀಡಿದ್ದಾರೆ.

ಕಾಶಿಯಲ್ಲಿ ಯೋಗಿ ವಿಶೇಷ ಪೂಜೆ

ಪ್ರಧಾನಿ ಮೋದಿ 74ನೇ ಜನ್ಮ ದಿನ ನಿಮಿತ್ತ ಉತ್ತರಪ್ರದೇಶ ಸಿಎಂ ಯೋಗಿ ಆದಿತ್ಯನಾಥ ಕಾಶಿಯ ಧಾರ್ಮಿಕ ಕ್ಷೇತ್ರಗಳಲ್ಲಿ ಬೆಳಗಿನಿಂದಲೇ ವಿಶೇಷ ಪೂಜೆ ನೆರವೇರಿಸಿದರು. ವಿಶ್ವನಾಥ ದೇವಾಲಯ ದಲ್ಲಿ ಹೋಮ-ಹವನ ನಡೆಸಿದ ಯೋಗಿ, ಕಾಲಭೈರವ್ ಮತ್ತು ಜ್ಞಾನವ್ಯಾಪಿ ಬಳಿಯ ನಿಕುಂಭ ವಿನಾಯಕ ದೇವಾಲಯದಲ್ಲೂ ವಿಶೇಷ ಪೂಜೆ ಕೈಗೊಂಡರು. 74 ಕೆಜಿ ಲಡ್ಡು ಪ್ರಸಾದ ಹಂಚಲಾಯಿತು

ಶ್ರೀನಗರದಲ್ಲೂ ಸಂಭ್ರಮ: ಶ್ರೀನಗರದ ಲಾಲ್ ಚೌಕ್ ಬಳಿ ಪ್ರಧಾನಿ ಮೋದಿ ಅವರ ದೊಡ್ಡದಾದ ಪೋಸ್ಟರ್ ಹಾಕಿ ಅಖಿಲ ಭಾರತೀಯ ಮೋದಿ ಅಭಿಮಾನಿಗಳ ಸಂಘ ಮೋದಿ ಜನ್ಮದಿನ ಆಚರಿಸಿದೆ. ಹಾಡು, ನೃತ್ಯ ಮಾಡಿ ಸಂಭ್ರಮಿಸಿದೆ. ಸಂಘಟನೆ ಅಧ್ಯಕ್ಷ ಜಮಾಲ್ ಬುದ್ಗಾಮಿ ಪ್ರಧಾನಿ ಮೋದಿಗೆ ಶುಭ ಕೋರಿದ್ದಾರೆ.

60 ವರ್ಷ ಬಳಿಕ ದೇಶದಲ್ಲಿ ರಾಜಕೀಯ ಸ್ಥಿರತೆ: ಶಾ



ದೆಹಲಿ: ಪ್ರಧಾನಿ ನರೇಂದ್ರ ಮೋದಿ ನೇತೃತ್ವದಲ್ಲಿ, ಮಿತ್ರ ಪಕ್ಷಗಳ ಸಹಕಾರದಿಂದ ಬಿಜೆಪಿ ಮೂರನೇ ಅವಧಿಗೆ ಸರಕಾರ ರಚಿಸಿ ಇಂದಿಗೆ 100 ದಿನಗಳು ಪೂರ್ಣಗೊಂಡಿವೆ. 60 ವರ್ಷಗಳ ಬಳಿಕ ದೇಶದಲ್ಲಿ ರಾಜಕೀಯ ಸ್ಥಿರತೆ ಕಾಣುತ್ತಿದ್ದೇವೆ ಎಂದು ಗೃಹ ಸಚಿವ ಅಮಿತ್ ಶಾ ಹೇಳಿದರು. ಮೋದಿ ಪ್ರಧಾನಿಯಾಗಿ ಮೊದಲ 10 ವರ್ಷಗಳ ಕಾಲ ಸರಕಾರದ ನೀತಿಗಳ ದಿಕ್ಕು-ನೀತಿಗಳ ವೇಗ ಮತ್ತು ನೀತಿಗಳ ಅನುಷ್ಠಾನದ ನಿಖರತೆ ಕಾಪಾಡಿಕೊಳ್ಳಬೇಕಿತ್ತು. ಅದರ ಮೂಲಕ 11ನೇ ವರ್ಷಕ್ಕೆ ಪ್ರವೇಶಿಸುವುದು ತುಂಬಾ ಸವಾಲಿನದಾಗಿತ್ತು ಎಂದು ಶಾ ಹೇಳಿದರು.

ಭಾರತದ ಅಭಿವೃದ್ಧಿ, ರಾಷ್ಟ್ರೀಯ ಭದ್ರತೆ, ಬಡವರ ಕಲ್ಯಾಣಕ್ಕಾಗಿ ಮೊದಲ 10 ವರ್ಷಗಳನ್ನು ಮೀಸಲಿಟ್ಟ ನಂತರ ಬಿಜೆಪಿ ಮತ್ತು ಮಿತ್ರಪಕ್ಷಗಳು 3ನೇ ಬಾರಿಗೂ ಸರಕಾರ ಮುಂದುವರಿಸುವ ಜನಾದೇಶ ಪಡೆದಿರುವುದು ದೊಡ್ಡ ಸಾಧನೆ ಎಂದರು. ಮೋದಿ ಸರಕಾರ ಭಾರತದ ಬಾಹ್ಯ-ಆಂತರಿಕ ಭದ್ರತೆ ಮತ್ತು ರಕ್ಷಣಾ ವ್ಯವಸ್ಥೆಗಳನ್ನು ಬಲಪಡಿಸುವಲ್ಲಿ ಮಹತ್ತರ ಯಶಸ್ಸು ಸಾಧಿಸಿದೆ. ಭಾರತ ಹಿಂದೆಂದಿಗಿಂತಲೂ ಈಗ ಬಹಳ ಸುರಕ್ಷಿತವಾಗಿದೆ. ಶಿಕ್ಷಣ ಕ್ಷೇತ್ರದಲ್ಲಿ ದೊಡ್ಡ ಸಾಧನೆಯಾಗಿದೆ. 'ಮೇಕ್ ಇನ್ ಇಂಡಿಯಾ' ಘೋಷಿಸಿದಾಗ ಕೆಲವರು ಗೇಲಿ ಮಾಡಿದರು.

100 ದಿನಗಳಲ್ಲಿ 15 ಲಕ್ಷ ಕೋಟಿ ರು. ಯೋಜನೆಗಳನ್ನು ಆರಂಭಿಸಲಾಗಿದೆ. 3 ಲಕ್ಷ ಕೋಟಿ ರು.ಗಳ ಯೋಜನೆಗಳನ್ನು ಘೋಷಿಸಿ ಕಾಮಗಾರಿ ಆರಂಭಿಸಿದ್ದೇವೆ. ಮಹಾರಾಷ್ಟ್ರದ ವಾಧ್ವಾನ್‌ನಲ್ಲಿ 76 ಸಾವಿರ ಕೋಟಿ ರು. ವೆಚ್ಚದಲ್ಲಿ ಬೃಹತ್ ಬಂದರು ನಿರ್ಮಾಣವಾಗಲಿದೆ. ಮೊದಲ ದಿನವೇ ವಿಶ್ವದ ಪ್ರಮುಖ 10 ಬಂದರುಗಳ ಪಟ್ಟಿಗೆ ಸೇರ್ಪಡೆಯಾಗಲಿದೆ.

-**ಅಮಿತ್ ಶಾ** ಕೇಂದ್ರ ಗೃಹ ಸಚಿವ

ಪ್ರಧಾನಿ ನರೇಂದ್ರ ಹುಟ್ಟುಹಬ್ಬದ ಸಂಭ್ರಮ | ಆರೋಗ್ಯ, ರಕ್ತದಾನ ಶಿಬಿರ, ಸ್ವಚ್ಛತಾ ಅಭಿಯಾನ, ಚಿತ್ರಕಲಾ ಪ್ರದರ್ಶನ ಆಯೋಜನೆ

ಸ್ವಂತಕ್ಕಾಗಿ ಸ್ವಲ್ಪ, ದೇಶಕ್ಕಾಗಿ ಸರ್ವಸ್ವ:ಮೋದಿ ಚಿಂತನೆ

ಬೆಂಗಳೂರು: ಸ್ವಂತಕ್ಕಾಗಿ ಸ್ವಲ್ಪ, ದೇಶಕ್ಕಾಗಿ ಸರ್ವಸ್ವ ಎಂಬ ಮಾದರಿ ಜೀವನ ನಡೆಸುವ ಮೂಲಕ ಕಾರ್ಯಕರ್ತರು ಮತ್ತು ಯುವಪೀಳಿಗೆಗೆ ನರೇಂದ್ರ ಮೋದಿ ಸಂದೇಶ ನೀಡಿದ್ದಾರೆ ಎಂದು ಕೇಂದ್ರ ಸಚಿವೆ ಶೋಭಾ ಕರಂದ್ಲಾಜೆ ತಿಳಿಸಿದ್ದಾರೆ.

ನರೇಂದ್ರ ಮೋದಿ ಹುಟ್ಟುಹಬ್ಬದ ಪ್ರಯುಕ್ತ ಬಿಜೆಪಿ ಕಲೆ ಮತ್ತು ಸಾಂಸ್ಕೃತಿಕ ಪ್ರಕೋಷ್ಠ ವತಿಯಿಂದ ಮಲ್ಲೇಶ್ವರದ ಬಿಜೆಪಿ ರಾಜ್ಯ ಕಚೇರಿಯಲ್ಲಿ ಏರ್ಪಡಿಸಿದ್ದ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, ಮೋದಿ ಹುಟ್ಟುಹಬ್ಬದ ಸಂದರ್ಭದಲ್ಲಿ ವಿವಿಧ ಸೇವಾ ಚಟುವಟಿಕೆಯಲ್ಲಿ ಕಾರ್ಯಕರ್ತರು ತೊಡಗಿಸಿಕೊಳ್ಳುತ್ತಿದ್ದು, ಆರೋಗ್ಯ ಶಿಬಿರ, ರಕ್ತದಾನ ಶಿಬಿರ, ಸ್ವಚ್ಛತಾ ಅಭಿಯಾನ, ಚಿತ್ರಕಲಾ ಪ್ರದರ್ಶನಗಳನ್ನು ಏರ್ಪಡಿಸಲಾಗುತ್ತಿದೆ. ಸ್ವಾತಂತ್ರ್ಯ ಹೋರಾಟಗಾರರು ಮತ್ತು ದೇಶಕ್ಕಾಗಿ ದುಡಿವ ಮಹನೀಯರನ್ನು ಸ್ಮರಿಸುವ ಕೆಲಸ ನಡೆಸಲಾಗುತ್ತಿದ್ದು, ಸುಮಾರು 25 ವರ್ಷಗಳ ಕಾಲ ಎಲ್ಲವನ್ನೂ ಬಡವರ ಉದ್ಧಾರಕ್ಕೆ ಶ್ರಮಿಸಿದ್ದಾರೆ. ಪ್ರತಿಪಕ್ಷ ನಾಯಕ ಆರ್.ಅಶೋಕ್ ಮಾತನಾಡಿ, ಮೋದಿ ದೇಶ ಕಂಡ ಅಪರೂಪದ ನಾಯಕ. 3ನೇ ಬಾರಿ ಈ ದೇಶದ ಪ್ರಧಾನಿಯಾಗಿ ಸಮರ್ಥವಾಗಿ ಯಾವುದೇ ಭ್ರಷ್ಟಾಚಾರದ ಆಪಾದನೆ ಇಲ್ಲದೆ ಮುನ್ನಡೆಸಿದ್ದಾರೆ. ಸೇವಾ ಪಾಕ್ಷಿಕದ ಮೂಲಕ ವಿಭಿನ್ನ ರೀತಿಯಲ್ಲಿ ಹುಟ್ಟುಹಬ್ಬವನ್ನು ಆಚರಿಸಲಾಗುತ್ತಿದ್ದು, ಸುಮಾರು 25,000 ಕಾರ್ಯಕರ್ತರು 58,000 ಬೂತ್‌ಗಳಲ್ಲಿ ರಕ್ತದಾನ ಮಾಡಿದ್ದಾರೆ. ದೇಶದ ನಾಯಕತ್ವ ವಹಿಸಿಕೊಂಡ ನಂತರ ಭಾರತ ಅಭಿವೃದ್ಧಿ ಪಥದತ್ತ ನಡೆಯುತ್ತಿದೆ. ಬಾಹ್ಯಾಕಾಶ ವಿಜ್ಞಾನ ಕ್ಷೇತ್ರದಲ್ಲಿ ದೇಶ ಮುಂಚೂಣಿಯಲ್ಲಿದೆ. ವಂದೇ ಭಾರತ್ ರೈಲಿನ ಮೂಲಕ ವಿಶ್ವದರ್ಜೆಯ ಸೇವೆ ದೊರೆತಿದೆ ಎಂದರು.



ನರೇಂದ್ರ ಮೋದಿ ಹುಟ್ಟುಹಬ್ಬದ ಪ್ರಯುಕ್ತ ಬಿಜೆಪಿ ಕಲೆ ಮತ್ತು ಸಾಂಸ್ಕೃತಿಕ ಪ್ರಕೋಷ್ಠ ವತಿಯಿಂದ ಮಲ್ಲೇಶ್ವರದ ಬಿಜೆಪಿ ರಾಜ್ಯ ಕಚೇರಿಯಲ್ಲಿ ಏರ್ಪಡಿಸಿದ್ದ ಕಾರ್ಯಕ್ರಮದಲ್ಲಿ ಭಾಗಿಯದ ಕೇಂದ್ರ ಸಚಿವೆ ಶೋಭಾ ಕರಂದ್ಲಾಜೆ. ವಿಪಕ್ಷ ನಾಯಕ ಆರ್. ಅಶೋಕ್, ಬಿಜೆಪಿ ರಾಜ್ಯ ಪ್ರಧಾನ ಕಾರ್ಯದರ್ಶಿಗಳಾದ ಪಿ. ರಾಜೀವ್, ನಂದೀಶ್ ರೆಡ್ಡಿ, ಪ್ರಕೋಷ್ಠಗಳ ರಾಜ್ಯ ಸಂಯೋಜಕ ಎಸ್. ದತ್ತಾತ್ರೀ ಇದ್ದರು.

ಒಕ್ಕಲಿಗ ಸಮುದಾಯದ ಸರ್ವೋಚ್ಚ ನಾಯಕ ಮಾಜಿ ಪ್ರಧಾನಿ ಎಚ್.ಡಿ.ದೇವೇಗೌಡರ ಗೌರವ ಹಾಳು ಮಾಡಲು ಕಾಂಗ್ರೆಸ್ ನಾಯಕರು ಯತ್ನಿಸಿದ್ದಾರೆ. ಒಕ್ಕಲಿಗರ ಮೇಲೆ ಅಷ್ಟು ಒಲವಿದ್ದರೆ ಸಿದ್ದರಾಮಯ್ಯನವರನ್ನು ಸಿಎಂ ಸ್ಥಾನದಿಂದ ತೆಗೆದುಹಾಕಿ ಒಕ್ಕಲಿಗರನ್ನೇ ಮುಖ್ಯಮಂತ್ರಿ ಮಾಡಲಿ. ಡಿ.ಕೆ.ಶಿವಕುಮಾರ್ ಪೇಪರ್, ಪೆನ್ನು ಹಿಡಿದುಕೊಂಡು ಅಮೆರಿಕಕ್ಕೆ ಹೋಗಿದ್ದಾರೆ ಎಂದು ವ್ಯಂಗ್ಯವಾಡಿದರು.

-**ಆರ್.ಅಶೋಕ**, ವಿರೋಧ ಪಕ್ಷದ ನಾಯಕ

ಜಮ್ಮು-ಕಾಶ್ಮೀರಕ್ಕೆ ಹೊಸ ರೂಪ ಕೊಟ್ಟ ಮೋದಿ: ಒಂದು ದೇಶದಲ್ಲಿ ಎರಡು ಧ್ವಜ, ಎರಡು ಸಂವಿಧಾನ ಇರಬಾರದೆಂಬುದು ಬಿಜೆಪಿ ಸಿದ್ಧಾಂತ. ಅದನ್ನು ಪ್ರಧಾನಿ ಮೋದಿ ಅನುಷ್ಠಾನಕ್ಕೆ ತಂದು, ಜಮ್ಮು-ಕಾಶ್ಮೀರಕ್ಕೆ ಹೊಸತನ ತಂದಿದ್ದಾರೆ. ಅಲ್ಲಿನ ಜನರು ಭೀತಿಯಿಲ್ಲದೆ ಓಡಾಡುತ್ತಿದ್ದಾರೆ. ರಾಮ ಮಂದಿರ ಕೂಡ ಸುಗಮವಾಗಿ ನಿರ್ಮಾಣವಾಗಿ ಹಿಂದೂಗಳ ಕನಸು ನನಸಾಗಿದೆ. ಆರ್ಥಿಕತೆಯು ಬಲಿಷ್ಠಗೊಂಡಿದೆ. ರಷ್ಯಾ- ಉಕ್ರೇನ್ ಯುದ್ಧದ ಸಮಸ್ಯೆಯನ್ನು ಮಾತನಾಡಿ ಬಗೆಹರಿಸಬಹುದೆಂಬ ಮಟ್ಟಕ್ಕೆ ವಿಶ್ವನಾಯಕರಾಗಿ ಹೊರಹೊಮ್ಮಿದ್ದಾರೆ ಎಂದರು.

ಡೆಂಘೀ ಪ್ರಕರಣ ನಿಯಂತ್ರಣಕ್ಕೆ ಕ್ರಮ

ಬೆಂಗಳೂರು: ಪಾಲಿಕೆ ವ್ಯಾಪ್ತಿಯಲ್ಲಿ ಡೆಂಘೀ ಪ್ರಕರಣಗಳನ್ನು ನಿಯಂತ್ರಿಸಲು ಸಾಕಷ್ಟು ಮುಂಜಾಗ್ರತಾ ಕ್ರಮಗಳನ್ನು ಕೈಗೊಳ್ಳಲಾಗಿದೆ ಎಂದು ಆರೋಗ್ಯ ವಿಭಾಗದ ವಿಶೇಷ ಆಯುಕ್ತ ಸುರಳ್ಕರ್ ವಿಕಾಸ್ ಕಿಶೋರ್ ಹೇಳಿದರು.

ನಗರದ ಪುರಭವನದಲ್ಲಿ ಡೆಂಘೀ ಪ್ರಕರಣಗಳನ್ನು ನಿಯಂತ್ರಿಸುವ ನಿಟ್ಟಿನಲ್ಲಿ ಪಾಲಿಕೆಯ ಆರೋಗ್ಯ ವಿಭಾಗವು ಜುಲೈ 2024ರಲ್ಲಿ ನಾಗರಿಕರು ಹಾಗೂ ವಿದ್ಯಾರ್ಥಿಗಳಿಗೆ ಏರ್ಪಡಿಸಿದ್ದ ಡೆಂಘೀ ವಾರಿಯರ್ ಸ್ಪರ್ಧೆಯ ವಿಜೇತರಿಗೆ ಪ್ರಶಸ್ತಿ ಪುರಸ್ಕಾರ ಕಾರ್ಯಕ್ರಮಕ್ಕೆ ಚಾಲನೆ ನೀಡಿ ಮಾತನಾಡಿ, ನಗರದಲ್ಲಿ ಜುಲೈ ತಿಂಗಳಲ್ಲಿ ಹೆಚ್ಚು ಡೆಂಘೀ ಪ್ರಕರಣಗಳು ಕಂಡು ಬರುತ್ತಿದ್ದವು. ಅದನ್ನು ನಿಯಂತ್ರಿಸುವ ನಿಟ್ಟಿನಲ್ಲಿ ಪಾಲಿಕೆ ವತಿಯಿಂದ ಸಾಕಷ್ಟು ಮುಂಜಾಗ್ರತಾ ಕ್ರಮಗಳನ್ನು ಕೈಗೊಳ್ಳಲಾಗಿತ್ತು. ಆರೋಗ್ಯ ವಿಭಾಗದ ಎಲ್ಲಾ ಅಧಿಕಾರಿಗಳು ಶ್ರಮಿಸಿರುವ ಪರಿಣಾಮ ಡೆಂಘೀ ನಿಯಂತ್ರಿಸಲು ಸಾಧ್ಯವಾಯಿತು. ಸಾಂಕ್ರಾಮಿಕ ರೋಗಗಳು ಬಂದಾಗ ಸಮುದಾಯವು ಆಡಳಿತದೊಂದಿಗೆ ಕೈಜೋಡಿಸಿದರೆ ತ್ವರಿತಗತಿಯಲ್ಲಿ ಪರಿಣಾಮಕಾರಿಯಾಗಿ ತಡೆಯಬಹುದು. ಸಾಮಾಜಿಕ ಜಾಲತಣ ಬಳಸಿಕೊಂಡು ನಾಗರಿಕರಲ್ಲಿ ಜಾಗೃತಿ ಮೂಡಿಸುವ ಕೆಲಸ 'ಾಡಿದಾಗ ಹೆಚ್ಚು ಮಂದಿಗೆ ವಿಷಯ ತಲುಪಲಿದೆ ಎಂದರು.

ಡೆಂಘೀ ನಿಯಂತ್ರಣಕ್ಕಾಗಿ ನಾಗರೀಕರು ಅಥವಾ ವಿದ್ಯಾರ್ಥಿಗಳು ತಮ್ಮ ಮನೆಗಳಲ್ಲಿ ಏನೆಲ್ಲಾ ಕ್ರಮಗಳನ್ನು ಕೈಗೊಂಡಿದ್ದಾರೆ, ಯಾವ ರೀತಿ ಇತರರಿಗೆ ಅರಿವು ಮೂಡಿಸಲಾಗಿದೆ ಎಂಬುದರ ಕುರಿತು ಕಿರು ಚಿತ್ರ(ರೀಲ್ಸ್)ಗಳನ್ನು ಮಾಡಿ ಆ ವಿಡಿಯೊವನ್ನು ಸಾಮಾಜಿಕ ಜಾಲತಾಣದಲ್ಲಿ ಅಪ್‌ಲೋಡ್ ಮಾಡುವಂತೆ ತಿಳಿಸಲಾಗಿತ್ತು. ಅದರಂತೆ ಈ ಸ್ಪರ್ಧೆಯಲ್ಲಿ 250ಕ್ಕೂ ಹೆಚ್ಚು ವಾರಿಯರ್ಸ್ ಭಾಗವಹಿಸಿ ಡೆಂಘೀ ಮೂಲ ಗುರುತಿಸುವಿಕೆ, ವರದಿ ಮಾಡುವಿಕೆ ಮತ್ತು ತಡೆಗಟ್ಟುವ ಕುರಿತು ವಿಡಿಯೊಗಳನ್ನು ಮಾಡಿ ಸಾಮಾಜಿಕ ಜಾಲತಾಣದಲ್ಲಿ ಅಪ್‌ಲೋಡ್ ಮಾಡಿದ್ದರು ಎಂದು ಹೇಳಿದರು. ಡೆಂಘೀ ವಾರಿಯರ್ಸ್ ಸಿದ್ದಪಡಿಸಿದ ವಿಡಿಯೊ ಗಳು 58 ಲಕ್ಷಕ್ಕೂ ಹೆಚ್ಚು ವೀಕ್ಷಣೆಗಳು ಮತ್ತು 4 ಲಕ್ಷಕ್ಕೂ ಹೆಚ್ಚು ಲೈಕ್ಸ್ ಬಂದಿವೆ. ವಿವಿಧ ಸಂಸ್ಥೆಗಳಿಂದ ಪ್ರಾಯೋಜಕತ್ವ ಪಡೆದು ಪ್ರಶಸ್ತಿ ಪ್ರದಾನ ಮಾಡಲಾಗಿದೆ. ನಾಗರೀಕರು ಹಾಗೂ ವಿದ್ಯಾರ್ಥಿಗಳು ಇದೇ ರೀತಿ ಮುಂದೆ ಬಂದು ಅರಿವು ಮೂಡಿಸುವ ಕೆಲಸ ಮಾಡಬೇಕು ಎಂದರು.

ಪ್ರಶಸ್ತಿ ವಿಜೇತರು: ಡೆಂಘೀ ಕುರಿತು ಮಾಡಿರುವ ರೀಲ್ಸ್ ಗಳಲ್ಲಿ ಹೆಚ್ಚು ಲೈಕ್ಸ್ ಹಾಗೂ ವೀಕ್ಷಣೆ ಮಾಡಿರುವ ವಿಡಿಯೊಗಳ ಅನುಸಾರ ಪ್ರಶಸ್ತಿ ವಿತರಣೆ ಮಾಡಲಾಗುತ್ತಿದೆ. ಆಯ್ಕೆಯಾಗಿರುವ 10 ಮಂದಿಯ ಪೈಕಿ ಮೊದಲ ಐದು ವಿಜೇತರಿಗೆ ಮೊದಲ ಪ್ರಶಸ್ತಿ ಹಾಗೂ ನಂತರದ ಐದು ಮಂದಿಗೆ ದ್ವಿತೀಯ ಬಹುಮಾನ ನೀಡಲಾಗಿದೆ. ಅದಲ್ಲದೆ ಹೆಚ್ಚು ಮಕ್ಕಳಿಗೆ ಪ್ರೇರಣೆ ನೀಡಿದ ಶಿಕ್ಷಕಿ ಹಾಗೂ ಉತ್ತಮ ಶಿಕ್ಷಣ ಸಂಸ್ಥೆಯನ್ನು ಗುರುತಿಸಿ ಪ್ರಶಸ್ತಿ ಪುರಸ್ಕರಿಸಲಾಯಿತು.

ಮುಖ್ಯ ಆರೋಗ್ಯಾಧಿಕಾರಿ ಡಾ. ಸೈಯದ್ ಸಿರಾಜುದ್ದೀನ್ ಮದನಿ, ವಲಯ ಆರೋಗ್ಯಾಧಿಕಾರಿಗಳು, ಆರೋಗ್ಯ ವೈದ್ಯಾಧಿಕಾರಿಗಳು, ಆಶಾ ಕಾರ್ಯಕರ್ತೆಯರು, ಲಿಂಕ್ ವರ್ಕರ್ಸ್ ಇದ್ದರು.

ನಾಗರಿಕರು ಹಾಗೂ ವಿದ್ಯಾರ್ಥಿಗಳಿಗೆ ಏರ್ಪಡಿಸಿದ್ದ ಡೆಂಘೀ ವಾರಿಯರ್ ಸ್ಪರ್ಧೆಯ ವಿಜೇತರಿಗೆ ಪ್ರಶಸ್ತಿ ಪುರಸ್ಕಾರ ಸಮಾರಂಭದಲ್ಲಿ ವಿಜೇತರಿಗೆ ಸನ್ಮಾನ ಮಡಲಾಯಿತು.

ಗಣೇಶನನ್ನೂ ಕಂಬಿ ಹಿಂದೆ ದೂಡಿದವರು: ಟೀಕೆ

ಸಿಜೆಐ ಮನೆಗೆ ಭೇಟಿ ವಿಚಾರ: ಕಾಂಗ್ರೆಸ್‌ಗೆ ಮೋದಿ ತಿರುಗೇಟು

ಭುವನೇಶ್ವರ: ಮುಖ್ಯ ನ್ಯಾಯಮೂರ್ತಿ ಡಿ.ವೈ.ಚಂದ್ರಚೂಡ್ ಅವರ ನಿವಾಸದಲ್ಲಿ ಗಣೇಶ ಚತುರ್ಥಿ ದಿನ ಪೂಜೆಯಲ್ಲಿ ಪ್ರಧಾನಿ ಮೋದಿ ಭಾಗಿಯಾಗಿದ್ದಕ್ಕೆ ಪ್ರತಿಪಕ್ಷಗಳು ಭಾರಿ ಟೀಕೆ ಮಾಡಿದ್ದವು. ಬ್ರಿಟಿಷರಂತೆ ಕಾಂಗ್ರೆಸ್‌ಗೂ ಗಣೇಶ ಪೂಜೆ ಇಷ್ಟವಾಗಲ್ಲ ಎಂದು ಮೋದಿ ಮಂಗಳವಾರ ತಿರುಗೇಟು ನೀಡಿದ್ದಾರೆ. ಭುವನೇಶ್ವರದಲ್ಲಿ ಮಾತನಾಡಿದ ಮೋದಿ,'ಕಾಂಗ್ರೆಸ್ ಮತ್ತು ಅದರ ಮಿತ್ರರು ಗಣೇಶನ ಪೂಜೆಯಲ್ಲಿ ನಾನು ಭಾಗಿಯಾಗಿದ್ದಕ್ಕೆ ಕೋಪಗೊಂಡಿದ್ದಾರೆ. ಗಣೇಶ ಪೂಜೆ ಕೇವಲ ನಂಬಿಕೆಯ ಹಬ್ಬವಷ್ಟೇ ಅಲ್ಲ, ಸ್ವಾತಂತ್ರ್ಯ ಸಂಗ್ರಾಮದಲ್ಲೂ ಈ ಆಚರಣೆ ಮಹತ್ವದ ಪಾತ್ರ ವಹಿಸಿದೆ. ಒಡೆದು ಆಳುವ ನೀತಿ ಅನುಸರಿಸುತ್ತಿದ್ದ ಬ್ರಿಟಿಷರಿಗೂ ಈ ಆಚರಣೆ ಇಷ್ಟವಾಗುತ್ತಿರಲಿಲ್ಲ. ಈಗ ಸಮಾಜ ಒಡೆಯುತ್ತಿರುವ ಅಧಿಕಾರದಾಹಿಗಳಿಗೂ ಇಷ್ಟವಾಗುತ್ತಿಲ್ಲ' ಎಂದು ಕಾಂಗ್ರೆಸ್ ಮತ್ತು ಇಂಡಿ ಒಕ್ಕೂಟದ ಪಕ್ಷಗಳನ್ನು ಮೋದಿ ಟೀಕಿಸಿದ್ದಾರೆ.

ಕರ್ನಾಟಕದಲ್ಲಿ ಬೆಂಗಳೂರು ಸೇರಿದಂತೆ ಕೆಲವೆಡೆ ಪ್ರತಿಭಟನೆ ವೇಳೆ ಗಣೇಶ ಮೂರ್ತಿಗಳನ್ನು ಪೊಲೀಸರು ಸೆರೆಯಿಟ್ಟಿದ್ದರು ಎಂಬ ವಿಚಾರ ಪ್ರಸ್ತಾಪಿಸಿದ ಮೋದಿ, ಕರ್ನಾಟಕ ಕಾಂಗ್ರೆಸ್ ಗಣೇಶನ ವಿಚಾರದಲ್ಲಿ ದೊಡ್ಡ ಅಪರಾಧ ಮಾಡಿದೆ. ಗಣೇಶನನ್ನು ಕಂಬಿ ಹಿಂದೆ ದೂಡಿತ್ತು. ಇಂತಹ ಘಟನೆ ನಡೆಯಲು ಬಿಡಬಾರದು' ಎಂದು ಮೋದಿ ಅಸಮಾಧಾನ ವ್ಯಕ್ತಪಡಿಸಿದರು.

ಹಿಜ್ಬುಲ್ಲಾ ಪೇಜರ್‌ಗಳ ಸ್ಫೋಟ: 9 ಸಾವು, ಸಾವಿರಾರು ಮಂದಿಗೆ ಗಾಯ

ಬೈರುತ್: ಹಿಜ್ಬುಲ್ಲಾ ಸದಸ್ಯರು ಸಂವಹನಕ್ಕೆ ಬಳಸುತ್ತಿದ್ದ ಸಾವಿರಾರು ಹ್ಯಾಂಡ್ ಹೆಲ್ಡ್ ಪೇಜರ್‌ಗಳು ಏಕಾಏಕಿ ಸ್ಫೋಟಗೊಂಡಿದೆ. ಘಟನೆಯಲ್ಲಿ 9 ಮಂದಿ ಸಾವನ್ನಪ್ಪಿದ್ದು 2750 ಮಂದಿ ಗಾಯಗೊಂಡಿದ್ದಾರೆ ಎಂದು ವರದಿಯಾಗಿದೆ. ಅನೇಕ ಮಂದಿ ರಸ್ತೆಯಲ್ಲೇ ರಕ್ತದ ಮಡುವಿನಲ್ಲಿ ಬಿದ್ದು ಒದ್ದಾಡುತ್ತಿರುವ ವಿಡಿಯೋಗಳು ವೈರಲ್ ಆಗಿವೆ.

ಇರಾನ್ ಬೆಂಬಲಿತ ಹಿಜ್ಬುಲ್ಲಾ ಸಂಘಟನೆ ಹಮಾಸ್ ಪರವಾಗಿ 2023ರಿಂದಲೂ ಗಾಜಾ ಪಟ್ಟಿಯಲ್ಲಿ ಇಸ್ರೇಲ್ ವಿರುದ್ಧ ಹೋರಾಡುತ್ತಿದೆ. ಲೆಬನೀಸ್ ಸಂಸತ್‌ನ ಹಿಜ್ಬುಲ್ಲಾ ಪ್ರತಿನಿಧಿ ಅಲಿಮ್ಮರ್ ಮಗ ಈ ಪೇಜರ್ ಸ್ಫೋಟದಲ್ಲಿ ಸಾವನ್ನಪ್ಪಿದ್ದಾನೆ ಎಂದು ಸೌದಿ ಮೂಲದ ಮಾಧ್ಯಮಗಳು ವರದಿ ಮಾಡಿವೆ. ಹಿಜ್ಬುಲ್ಲಾ ಸಂಘಟನೆ ಪೇಜರ್‌ಗಳ ಸ್ಫೋಟಕ್ಕೆ ಇಸ್ರೇಲ್ ಕಾರಣ ಎಂದು ನೇರ ಆರೋಪ ಮಾಡಿದ್ದು 'ದೊಡ್ಡ ಮಟ್ಟದ ಭದ್ರತಾ ಲೋಪ' ಎಂದಿದೆ.

ಕೆಲವು ವರದಿಗಳ ಪ್ರಕಾರ ಪೇಜರ್‌ನಲ್ಲಿನ ಲಿಥಿಯಮ್ ಬ್ಯಾಟರಿಗಳು ಶಾಖಕ್ಕೆ ಕಾದು ಸ್ಫೋಟಗೊಂಡಿದೆ ಎಂದು ಹೇಳಲಾಗಿದ್ದು , ಇನ್ನೂ ಕೆಲವು ವರದಿಗಳು ಪೇಜರ್‌ಗಳನ್ನು ಸರಬರಾಜು ಮಾಡುವ ಮುನ್ನವೇ ಸ್ಫೋಟಕಗಳನ್ನು ಅಳವಡಿಸಲಾಗಿದೆ ಎಂದು ಆರೋಪಿಸಲಾಗಿದೆ. ಸದ್ಯ ಈ ಬಗ್ಗೆ ಇಸ್ರೇಲ್ ಯಾವ ಪ್ರತಿಕ್ರಿಯೆಯನ್ನೂ ನೀಡಿಲ್ಲ. ಗಾಜಾ ಸಂಘರ್ಷ ಆರಂಭವಾದಾಗಿನಿಂದಲೂ ಹಿಜ್ಬುಲ್ಲಾ ಸಂಘಟನೆ ತನ್ನ ಸದಸ್ಯರಿಗೆ ಯಾವುದೇ ಖಾಸಗಿ ಫೋನ್‌ಗಳನ್ನು ಸಂವಹನಕ್ಕೆ ಬಳಸಲು ಅನುಮತಿ ನೀಡಿಲ್ಲ. ಎಲ್ಲವೂ ಪೇಜರ್‌ಗಳ ಮೂಲಕವೇ ಸಂವಹನ ನಡೆಯುತ್ತಿದ್ದು ಈ ವಿಚಾರವನ್ನೇ ಲಾಭವಾಗಿಸಿಕೊಂಡು ದಾಳಿ ನಡೆಸಲಾಗಿದೆ ಎಂಬ ಆರೋಪ ಹಿಜ್ಬುಲ್ಲಾ ಕಡೆಯಿಂದ ಕೇಳಿ ಬಂದಿದೆ.

ರಾಜ್ಯ ಅಥ್ಲೆಟಿಕ್ಸ್: ನಾಲ್ಕು ದಾಖಲೆ ನಿರ್ಮಾಣ

ಮೈಸೂರು: ಇಲ್ಲಿನ ಚಾಮುಂಡಿ ವಿಹಾರ ಕ್ರೀಡಾಂಗಣದಲ್ಲಿ ನಡೆಯುತ್ತಿರುವ ಕರ್ನಾಟಕ ರಾಜ್ಯ ಅಂತರ ಜಿಲ್ಲಾ ಜೂನಿಯರ್ ಮತ್ತು 23 ವರ್ಷದ ಒಳಗಿನವರ ಅಥ್ಲೆಟಿಕ್ಸ್‌ನಲ್ಲಿ ದಾಖಲೆಗಳ ನಿರ್ಮಾಣಕ್ಕೆ ಅಥ್ಲೀಟ್‌ಗಳು ಉತ್ಸಾಹ ತೋರಿದ್ದು, ಮೂರನೇ ದಿನವಾದ ಸೋಮವಾರ ನಾಲ್ಕು ಕೂಟ ದಾಖಲೆಗಳು ನಿರ್ಮಾಣವಾದವು.

23 ವರ್ಷದ ಒಳಗಿನ ಪುರುಷರ ಹ್ಯಾಮರ್ ಥ್ರೋನಲ್ಲಿ ಕೊಪ್ಪಳದ ಸಚಿನ್ 57.24 ಮೀಟರ್ ದೂರಕ್ಕೆ ಎಸೆಯುವ ಮೂಲಕ ಕಳೆದ ವರ್ಷ ತಮ್ಮದೇ ಹೆಸರಿನಲ್ಲಿದ್ದ 55.33 ಮೀ. ದಾಖಲೆಯನ್ನು ಉತ್ತಮ ಪಡಿಸಿಕೊಂಡರು. ಟ್ರಿಪಲ್ ಜಂಪ್‌ನಲ್ಲಿ ಮೈಸೂರಿನ ಯಶಸ್ ಗೌಡ 15 ಮೀಟರ್ ಉದ್ದಕ್ಕೆ ಜಿಗಿದು 2021ರಲ್ಲಿ ಬಿ. ಮಹಾಂತ್ ನಿರ್ಮಿಸಿದ್ದ ದಾಖಲೆಯನ್ನು (14.82 ಮೀ) ಸರಿಗಟ್ಟಿದರು.

ಇದೇ ವಿಭಾಗದ 1500 ಮೀ. ಓಟದಲ್ಲಿ ಯಾದಗಿರಿಯ ಕೆ. ಲೋಕೇಶ್ 3ನಿ, 58.23 ಸೆಕೆಂಡುಗಳಲ್ಲಿ ಗುರಿ ಕ್ರಮಿಸುವ ಮೂಲಕ ಕಳೆದ ವರ್ಷ ಬಿ.ಎಲ್. ಶಶಿಧರ್ ಹೆಸರಿನಲ್ಲಿದ್ದ ದಾಖಲೆಯನ್ನು (4ನಿ, 00.70 ಸೆ) ಮುರಿದರು. ಡಿಸ್ಕಸ್ ಥ್ರೋನಲ್ಲಿ ದಕ್ಷಿಣ ಕನ್ನಡದ ನಾಗೇಂದ್ರ ಅಣ್ಣಪ್ಪ 50.83 ಮೀಟರ್ ದೂರಕ್ಕೆ ಥ್ರೋ ಮಾಡಿ, 2022 ರಲ್ಲಿ ಎಸ್.ಎ. ಮೊಹಮ್ಮದ್ ನಿರ್ಮಿಸಿದ್ದ 50.20 ಮೀಟರ್‌ನ ದಾಖಲೆಯನ್ನು ಅಳಿಸಿದರು.

{ಒಮರ್ ಅಬ್ದುಲ್ಲಾ} ನ್ಯಾಷನಲ್ ಕಾನ್ಫರೆನ್ಸ್‌ನಾಯಕ

370ನೇ ವಿಧಿಯಡಿ ನೀಡಲಾಗಿದ್ದ ವಿಶೇಷ ಸ್ಥಾನಮಾನ ರದ್ದತಿ ಸಂಸತ್‌ನ ನಿರ್ಣಯ, ದೇವರ ನಿರ್ಣಯವಲ್ಲ. ಅದನ್ನು ಬದಲಾಯಿಸಬಹುದು ಯಾವುದೂ ಅಸಾಧ್ಯವಲ್ಲ, 370ರ ವಿಧಿ ವಿರುದ್ಧ ತೀರ್ಪು ನೀಡಿದ್ದ ಸುಪ್ರೀಂ ಕೋರ್ಟ್‌ನ ಪೀಠ ನಾಳೆ ವಿಶೇಷ ಸ್ಥಾನಮಾನದ ಪರವಾಗಿಯೂ ತೀರ್ಪು ನೀಡಬಹುದು.

ಜನರ ಹಸಿವು ನೀಗಿಸಲು 200 ಆನೆಗಳ ಹತ್ಯೆಗೆ ಜಿಂಬಾಬ್ವೆ ನಿರ್ಧಾರ

ಹರಾರೆ: ಜಿಂಬಾಬ್ವೆ 4 ದಶಕಗಳಲ್ಲಿ ಕಂಡಿರದಂತಹ ಭೀಕರ ಬರಗಾಲಕ್ಕೆ ತುತ್ತಾಗಿದೆ. ಜನರ ಹಸಿವು ನೀಗಿಸಲು ದೇಶಾದ್ಯಂತ 200 ಆನೆಗಳನ್ನು ಕೊಲ್ಲಲು ನಿರ್ಧರಿಸಿದೆ ಎಂದು ಜಿಂಬಾಬ್ವೆ ವನ್ಯಜೀವಿ ಪ್ರಾಧಿಕಾರದ ಅಧಿಕಾರಿಗಳು ಮಂಗಳವಾರ ಖಚಿತಪಡಿಸಿದ್ದಾರೆ.

'ಎಲ್ ನಿನೊ' ಚಂಡಮಾರುತ ಪರಿಣಾಮ ದಕ್ಷಿಣ ಆಫ್ರಿಕಾ ಖಂಡದ ದೇಶಗಳಲ್ಲಿ ಭೀಕರ ಬರಗಾಲ ಉಂಟಾಗಿ ಬೆಳೆಗಳು ಪೂರ್ಣ ನಾಶವಾಗಿವೆ. ಜನರಿಗೆ ತಿನ್ನಲು ಏನೂ ಸಿಗದ ಸ್ಥಿತಿ ಬಂದಿದೆ. ಆನೆಗಳನ್ನಾದರೂ ಕೊಂದು ಮಾಂಸವನ್ನು ಆಹಾರವಾಗಿ ಹಂಚಲು ಸರಕಾರ ನಿರ್ಧರಿಸಿದೆ. 6.8 ಕೋಟಿ ಜನರು ಹಸಿವಿನಿಂದ ಬಳಲುತ್ತಿದ್ದಾರೆ ಎಂದು ಅಧಿಕಾರಿಗಳು ಹೇಳಿದ್ದಾರೆ.

ವನ್ಯಜೀವಿ ಮಂಡಳಿ ವಕ್ತಾರ ತಿನಾಶೆ ಫರಾವೋ ಮಾಹಿತಿ ಪ್ರಕಾರ1988ರ ಬಳಿಕ ಇದೇ ಮೊದಲ ಬಾರಿಗೆ ಹ್ವಾಂಗೆ, ಮ್ಬಿರೆ, ತ್ಶೊಲೊತ್ಶೊ ಮತ್ತಿ ಚಿರೆಡ್ಜಿ ಜಿಲ್ಲೆಗಳಲ್ಲಿ ಆನೆಗಳನ್ನು ಕೊಲ್ಲುವ ನಿರ್ಧಾರ ಕೈಗೊಳ್ಳಲಾಗಿದೆ. ನೆರೆಯ ರಾಷ್ಟ್ರ ನಮೀಬಿಯಾ ಕೂಡ 83 ಆನೆಗಳನ್ನು ಕೊಂದು ಬರಗಾಲ ಪೀಡಿತ ಪ್ರದೇಶದ ಜನರಿಗೆ ಮಾಂಸ ಹಂಚಿಕೆ ಮಾಡಿದೆ ಎಂದು ತಿಳಿಸಿದ್ದಾರೆ.



ಜಿಂಬಾಬ್ವೆ, ಜಾಂಬಿಯಾ, ಬೋಟ್ಸ್‌ವಾನಾ, ಅಂಗೋಲಾ ಮತ್ತು ನಮೀಬಿಯಾದಲ್ಲಿ 2 ಲಕ್ಷ ಆನೆಗಳಿವೆ. ವಿಶ್ವದಲ್ಲೇ ದಕ್ಷಿಣ ಆಫ್ರಿಕಾ ಅತಿಹೆಚ್ಚು ಆನೆಗಳನ್ನು ಹೊಂದಿರುವ ಪ್ರದೇಶವಾಗಿದೆ. ಜಿಂಬಾಬ್ವೆಯಲ್ಲೇ 84 ಸಾವಿರ ಆನೆಗಳಿವೆ. 55 ಸಾವಿರ ಆನೆ ಹೊಂದುವ ಸಾಮರ್ಥ್ಯವಷ್ಟೇ ಈ ದೇಶಕ್ಕಿದೆ ಎಂದು ಅಧಿಕಾರಿ ತಿನಾಶೆ ಫರಾವೋ ಮಾಹಿತಿ ನೀಡಿದ್ದಾರೆ.

15 ದಿನಕ್ಕೆ ಸ್ವರ್ಗ ಕುಸಿಯುವುದಿಲ್ಲ: ಬುಲ್ಡೋಜರ್ ಕ್ರಮಕ್ಕೆ ಸುಪ್ರೀಂ ತಡೆ

ದೆಹಲಿ: ಉತ್ತರ ಪ್ರದೇಶ ಸೇರಿದಂತೆ ದೇಶದ ವಿವಿಧ ರಾಜ್ಯಗಳಲ್ಲಿ ನಡೆಸುತ್ತಿರುವ 'ಬುಲ್ಡೋಜರ್ ಕ್ರಮ' ವಿರುದ್ಧ ಸಲ್ಲಿಕೆಯಾದ ಅರ್ಜಿಗಳ ವಿಚಾರಣೆ ವೇಳೆ ಅಸಮಾಧಾನ ವ್ಯಕ್ತಪಡಿಸಿದ ಸುಪ್ರೀಂ ಕೋರ್ಟ್, ಅ.1ರವರೆಗೆ ಅಕ್ರಮ ಕಟ್ಟಡ ತೆರವು ಹೊರತುಪಡಿಸಿ ಖಾಸಗಿ ಆಸ್ತಿಗಳ ಮೇಲೆ ಬುಲ್ಡೋಜರ್ ಕಾರ್ಯಾಚರಣೆ ನಡೆಸುವಂತಿಲ್ಲ ಎಂದು ಆದೇಶಿಸಿದೆ.

ವಿಚಾರಣೆ ನಡೆಸಿದ ನ್ಯಾ. ಬಿ.ಆರ್.ಗವಾಯಿ ಮತ್ತು ನ್ಯಾ.ಕೆ.ವಿ.ವಿಶ್ವನಾಥನ್ ಪೀಠ, ಈ ಆದೇಶವು ಅಕ್ರಮ ಕಟ್ಟಡ-ಜಾಗಗಳ ತೆರವು ಕಾರ್ಯಾಚರಣೆಗೆ ಅನ್ವಯಿಸುವುದಿಲ್ಲ ಎಂದು ಸ್ಪಷ್ಟಪಡಿಸಿದೆ. ನ್ಯಾಯಾಲಯದ ಸೂಚನೆಗೆ ಸಾಲಿಸಿಟರ್ ಜನರಲ್ ತುಷಾರ್ ಮೆಹ್ತಾ ವಿರೋಧ ವ್ಯಕ್ತಪಡಿಸಿದರು. ಈ ಸೂಚನೆ ಕಾನೂನು ಪ್ರಕಾರವೇ ಕ್ರಮ ಕೈಗೊಳ್ಳುವ ಅಧಿಕಾರಿಗಳ ಕೈಕಟ್ಟಿ ಹಾಕಲಿದೆ ಎಂದು ವಾದಿಸಿದರು. ಅದಕ್ಕೆ, '15 ದಿನಗಳ ಕಾಲ ಕೈಕಟ್ಟಿಕೊಂಡಿರಿ, ಸ್ವರ್ಗವೇನೂ ಕುಸಿಯುವುದಿಲ್ಲ' ಎಂದು ಪೀಠ ಹೇಳಿತು. ಕೋರ್ಟ್ ಅನುಮತಿ ಇಲ್ಲದೇ ಬುಲ್ಡೋಜರ್ ಕಾರ್ಯಾಚರಣೆ ನಡೆಸುವಂತಿಲ್ಲ ಎಂದು ಕಟುವಾಗಿ ಹೇಳಿತು.

ಈ ಹಿಂದೆ ಕೂಡ ರಾಜ್ಯ ಸರಕಾರಗಳ 'ಬುಲ್ಡೋಜರ್ ನೀತಿ' ವಿರುದ್ಧ ಸುಪ್ರೀಂ ಕೋರ್ಟ್ ಎರಡು ಬಾರಿ ಕಳವಳ ವ್ಯಕ್ತಪಡಿಸಿತ್ತು. ಬುಲ್ಡೋಜರ್ ಕ್ರಮವನ್ನು ವೈಭವೀಕರಿಸದಂತೆ ಎಚ್ಚರಿಕೆಯನ್ನೂ ನೀಡಿತ್ತು.

ಚಿತ್ತ ವಿಹಾರ

ಅಸೂಯೆ ಬೇಡ

• ಮಹಾದೇವ ಬಸರಕೋಡ

ನಮ್ಮ ಹಲವು ದೌರ್ಬಲ್ಯಗಳಲ್ಲಿ ಅಸೂಯೆ ಕೂಡ ಒಂದು. ನಮ್ಮ ಸುತ್ತಲಿನ ಜನರ, ಇಲ್ಲವೇ ನಮ್ಮದೇ ಸ್ನೇಹಿತರ ಸಾಧನೆ, ಹಿತೈಷಿಗಳ ಉತ್ತಮ ನಡೆ-ನುಡಿ, ಬಂಧು ಬಳಗದ ಚೆಂದದ ಬೆಳವಣಿಗೆಯನ್ನು ಕಂಡು ಕೆಲವು ಬಾರಿ ಸಂತೋಷವಾಗುವುದೇ ಇಲ್ಲ. ಇದಕ್ಕೆ ಹೊರತಾಗಿ ನಮಗೆ ಸಾಧ್ಯವಾಗದದ್ದು ಅವರಿಗೆ ಸಿದ್ಧಿಸುತ್ತಿದೆಯಲ್ಲ ಎಂದು ಮನಸ್ಸು ಸಿಡಿಮಿಡಿಗೊಳ್ಳುತ್ತದೆ. ಒಂದಷ್ಟು ಕೋಪ ಆವರಿಸುತ್ತದೆ. ಇನ್ನು ಒಂದು ಹೆಜ್ಜೆ ಮುಂದೆ ಹೋಗಿ ಅವರ ಬೆಳವಣಿಗೆಗೆ ಹೇಗಾದರೂ ಸರಿ ತಡೆಯನ್ನು ತರಬೇಕೆಂದು ನಮ್ಮ ಮನಸ್ಸು ಹಾತೊರೆಯುತ್ತದೆ. ಇದಕ್ಕೆ ಬಹುಮುಖ್ಯ ಕಾರಣ ನಮ್ಮಲ್ಲಿ ಅಡಕವಾಗಿರುವ ಅಸೂಯೆಯ ಭಾವ. ಇದು ತಾಮಸಿಕ ಲಕ್ಷಣವೇ ಸರಿ. ಇದು ನಮ್ಮದೇ ಸಿಟ್ಟು, ಅಸಮಾಧಾನ, ಅಸಹಾಯಕತೆ ಮತ್ತು ಜಿಗುಪ್ಸೆಯ ಭಾವನೆಗಳ ಸಂಯೋಜನೆಯಾಗಿದೆ. ಒಬ್ಬನ ಮುಖಕ್ಕೆ ಮಸಿ ಬಳಿಯಲು ನಾವು ಬಯಸಿದರೆ ಮೊದಲು ನಮ್ಮ ಕೈಗೆ ಮಸಿ ಹಚ್ಚಿಕೊಳ್ಳಲೇ ಬೇಕು. ನಮ್ಮ ಕೈಗೆ ಮಸಿ ಹಚ್ಚಿಕೊಳ್ಳದೇ ಹೋದರೆ ಅದು ಸಾಧ್ಯವಾಗಲಾರದು. ಇತರರಿಗೆ ಅಹಿತ ಮಾಡುವುದಕ್ಕೆ ಹೋದಾಗ ನಮಗೂ ಕೂಡ ಸ್ವಲ್ಪವಾದರೂ ಅಹಿತಕ್ಕೆ ಕಾರಣವಾಗುತ್ತದೆ. ಅಸೂಯೆ ನಮ್ಮನ್ನು ಒಳಗೊಳಗೆ ಸುಡುವ ಜ್ವಾಲೆಯಂತೆ. ನಮ್ಮ ಮನಸ್ಸಿನಲ್ಲಿ ಕ್ಷೋಭೆ ಉಂಟಾಗಿ ಮನಸ್ಸಿನ ತಳಮಳಕ್ಕೆ ಕಾರಣವಾಗುತ್ತದೆ. ನಮ್ಮದೇ ನಿರ್ಲಕ್ಷತೆಯಿಂದಾಗಿ ಸೃಜನಶೀಲತೆಯೆಲ್ಲ ನೇಪಥ್ಯಕ್ಕೆ ಜಾರುತ್ತದೆ. ಬಾನಿನಲ್ಲಿಯ ಸೂರ್ಯ ಜಗತ್ತಿಗೆ ಬೇಕಾದ ಬೆಳಕು, ಶಕ್ತಿ, ಶಾಖವನ್ನು ಕೊಡಬಲ್ಲನಾದರೂ ಮೋಡವೊಂದು ಬಂದು ಅವನನ್ನು ಆವರಿಸಿದರೆ ಅವನೂ ಏನನ್ನೂ ಮಾಡದೇ ಅಸಹಾಯಕನಾಗಬೇಕಾಗುವಂತೆ ಅಸೂಯೆ ನಮ್ಮನ್ನು ಆವರಿಸಿದಾಗ ನಮ್ಮ ಸ್ಥಿತಿಯೂ ಇದಕ್ಕಿಂತ ಭಿನ್ನವಾಗಿರುವುದಿಲ್ಲ. ಇದರಿಂದ ನಮ್ಮ ನೆಮ್ಮದಿ ಹಾಳಾಗುತ್ತದೆ. ಬೆಳವಣಿಗೆ ಕುಂಠಿತಗೊಳ್ಳುತ್ತದೆ. ನಮ್ಮೆಲ್ಲ ಶಕ್ತಿಯೂ ಅಡಗಿಹೋಗುತ್ತದೆ. ಸಾಧ್ಯವಾದಷ್ಟು ಇಂತಹ ಸಲ್ಲದ ಅಸೂಯೆ ಗುಣವನ್ನು ದೂರಕ್ಕೆ ಸರಿಸಿ ನಾವೆಲ್ಲ ಅನಸೂಯರಾಗಬೇಕು. ಮತ್ತೊಬ್ಬರ ಶ್ರೇಯಸ್ಸು ಬಯಸಬೇಕು. ಅವರ ಶ್ರೇಯಸ್ಸಿನಲ್ಲಿ ಸಂತಸವನ್ನು ಕಾಣಬೇಕು. ಒಳ್ಳೆಯ ಗುಣಗಳನ್ನು ಗುರುತಿಸಬೇಕು. ನಮ್ಮ ಕುರಿತಾಗಿ ನಾವು ಜಂಭ ಕೊಚ್ಚಿಕೊಳ್ಳುವುದರ ಹೊರತಾಗಿ ಮತ್ತೊಬ್ಬರ ಸಾಧನೆಯನ್ನು ಶ್ಲಾಘಿಸಬೇಕು. ಇದು ಇತರರ ಸಂಭ್ರಮಕ್ಕೆ ಕಾರಣವಾಗುವುದರ ಜೊತೆಗೆ ನಮ್ಮ ಮನಸ್ಸಿಗೆ ಆಹ್ಲಾದಕರ ಅನುಭವ ನೀಡುತ್ತದೆ. ನಮ್ಮ ಸಕಾರಾತ್ಮಕ ಬೆಳವಣಿಗೆಗೆ ಇದು ಕಾರಣವಾಗುತ್ತದೆ.

ನಂಬಿಕೆಯೇ ಬದುಕಿನ ಶಕ್ತಿ

• ಪರಮೇಶ ಕೆ.ಉತ್ತನಹಳ್ಳಿ

ಮಾನವನ ಬದುಕ ನಂಬಿಕೆಯ ಅಡಿಗಲ್ಲ ಮೇಲೆ ನಿಂತಿದೆ. ನಂಬಿಕೆ ಇಲ್ಲದಿದ್ದರೆ ಮಾನವನ ಬದುಕಿಗೆ ಅರ್ಥವೇ ಇರುತ್ತಿರಲಿಲ್ಲ. ನಂಬಿಕೆಯಲ್ಲಿ ಭರವಸೆ ಇದೆ, ನೆಮ್ಮದಿ ಇದೆ, ನಂಬಿಕೆಯ ಊರುಗೋಲು ಮುರಿದರೆ ಅಪನಂಬಿಕೆ, ಸಂಶಯ, ದುಗುಡ, ದುಮ್ಮಾನಗಳ ಭಾವರೂಪಗಳು ಗರಿಗೆದರುತ್ತವೆ. ಯಾವಾಗ ನಮ್ಮ ನಮ್ಮ ಮಾತುಗಳಲ್ಲಿ, ನಡತೆಯಲ್ಲಿ ನಂಬಿಕೆಗಳು ಮೂಡುತ್ತವೆಯೋ ಆಗ ನಿಜಕ್ಕೂ ಅದೆಷ್ಟೋ ವ್ಯವಹಾರಗಳು, ವ್ಯಾಪಾರ ಕುದುರಲು ಸಾಧ್ಯ. ನಂಬಿಕೆಯಂದ ನಾಳಿನ ಬದುಕಿಗೆ ಭರವಸೆಯ ಬೆಳಕು ಕಾರಂಜಿಯಾಗಲು ಸಾಧ್ಯ. ಈ ದಿನ ನಾವು ಎಷ್ಟೇ ಕಷ್ಟ ಕಾರ್ಪಣ್ಯದಿಂದ ನೋವಿನ ದಳ್ಳುರಿಯಲ್ಲಿ ದಹಿಸುತ್ತಿದರೂ ನಾಳೆಯ ದಿನವಾದರೂ ಸಂತಸದ ಕ್ಷಣಗಳು

ಅರಸುತ್ತಾ ಬರಬಹುದೆಂದು ನಂಬಿವುದು ಜೀವಂತಿ ಬದುಕಿನ ಲಕ್ಷಣ. ರೈತ ಬರಲಿರುವ ಮಳೆಯನ್ನು ನಂಬಿ ಹೊಲವನ್ನು ಹಸನು ಮಾಡಿ ಆಸೆಗಣ್ಣಿನಲ್ಲಿ ಕಾಯುವಿಕೆ, ಗಂಡು-ಹೆಣ್ಣು ಪರಸ್ಪರ ನಂಬಿಕೆಯ ಬನದೊಳಗೆ ಬದುಕುತ್ತಲೇ ಹೂ ಗಿಡಗಳ ಬೆಳೆಸುವ ಪರಿ ವಿನೂತನ. ಈ ಬಗೆಯ ನಂಬಿಕೆಗಳೇ ನಮ್ಮ ಬದುಕಿನ ಮುನ್ನಡೆಗೆ ಸಹಾಯ ಮಾಡುತ್ತದೆ. ಈ ರೀತಿಯಲ್ಲಿ ನಂಬಿಕೆಯ ವಿಚಾರಗಳು-ಸಂಗತಿಗಳು ಕೇವಲ ಮನುಷ್ಯರಿಗೆ ಮಾತ್ರ ಅನ್ವಯವಾಗದೆ ಪ್ರಾಣಿ-ಪಕ್ಷಿಗಳು ಆತ್ಮೀಯ ಬಾಂಧವ್ಯತೆಯಿಂದ ಒಮ್ಮೊಮ್ಮೆ ಕೋಪವನ್ನು ವ್ಯಕ್ತಪಡಿಸಿದರೂ ತಾವು ನಂಬಿಕೆ ಇಟ್ಟಿರುವುದನ್ನು ದೂರ ಮಾಡಿಕೊಳ್ಳದೆ ಸದಾ ಕಾಲ ನಮ್ಮ ನೆರಳಲ್ಲಿಯೇ ಉಳಿಯುವುದು, ಮರಳಿ ಬರುವುದು ನಂಬಿಕೆಯ ಬಲವನ್ನು ವೃದ್ಧಿಸುತ್ತದೆ. ಅವುಗಳಿಗೆ ಕಾಡುವ ಭಾವ ಅನ್ನದ ಋಣ ಹಾಗೂ ಸ್ವಾಮಿ ನಿಷ್ಠೆಯ ನಂಬಿಕೆ. ಅದೇ ಜಾಗದಲ್ಲಿ ಮಕ್ಕಳಿದ್ದು ಗದರಿಸುದು ಅಥವಾ ನಂಬಿಕೆಯನ್ನು ಕಳೆದುಕೊಂಡರೆ ಇಲ್ಲವೇ ದೂರವಾದರೆ ನೂರು ಬಾಣಗಳು ಒಮ್ಮೆಲೆ ಎದೆಯನ್ನು ಬಗೆದಂತೆ ಭಾಸವಾಗುತ್ತದೆ. ಅದಕ್ಕೆ ಬಲ್ಲವರು ಹೇಳುವುದು ನಂಬಿದರೆ ಇಂಬು, ನಂಬದಿರೆ ಅಂಬು ಎಂದು. ನಂಬಿಕೆಯ ಹಂಬಲದಿಂದ-ಬೆಂಬಲದಿಂದ ಬದುಕುತ್ತಿದ್ದೇವೆ. ಆಕಾಶವು ನಮ್ಮ ಮೇಲೆ ಬೀಳುವುದಿಲ್ಲ ಎಂಬ ಬಲವಾದ ನಂಬಿಕೆ-ವಿಶ್ವಾಸದಲ್ಲಿಯೇ ಅದರ ಅಡಿಯಲ್ಲಿ ನಾವು ನಿತ್ಯ ಬದುಕನ್ನು ಸಾಕುತ್ತಿದ್ದೇವೆ. ಜೀವನ ಸದಾ ಹಸಿರಾಗಿರಬೇಕು. ಪರಸ್ಪರ ಒಡನಾಟದಲ್ಲಿ ಬದುಕುವ ಮನುಷ್ಯ ನಂಬಿಕೆಯಿಂದ ತನ್ನ ಬಾಳಿನ ಬಂಡಿಯನ್ನು ಎಳೆದು ಸಾಗಬೇಕು. ನಂಬಿಕೆ ಎಂಬುದು ಆಂತರ್ಯದ ಮನೋಭಾವ. ನಂಬಿಕೆಗೆ ಮತ್ತೊಂದು ಅರ್ಥವೇ ವಿಶ್ವಾಸ, ಭರವಸೆ. ವಿಶ್ವಾಸ ಗಳಿಸಿದ್ದರ ಜತೆಯಲ್ಲೇ, ಗಳಿಸಿರುವ ವಿಶ್ವಾಸವನ್ನು ಸಾಯೋತನಕ ಉಳಿಸಿಕೊಂಡು ಹೋಗುವುದು ಮುಖ್ಯ. ವಿಶ್ವಾಸ ಗಳಿಕೆಗೆ ಕ್ಷಣ ಸಾಕು. ಅದರ ಉಳಿಕೆಗೆ ಜೀವಮಾನವೇ ಬೇಕು. ನಂಬಿಕೆಯು ವ್ಯಕ್ತಿಯ ವ್ಯಕ್ತಿತ್ವಕ್ಕೊಂದು ಶೋಭೆ ತರುವ ಅಂಶವಾಗಿದೆ. ನಂಬಿಕೆಯಿಂದ ಬದುಕಬೇಕು. ಏಕೆಂದರೆ ನಂಬಿಕೆಯೇ ಜೀವನದ ತಳಹದಿ. ತನ್ನ ಮೇಲೆ ತನಗೆ ನಂಬಿಕೆ ಇರಬೇಕು. ನಾನು ಈ ಕೆಲಸವನ್ನು ಮಾಡುತ್ತೇನೆ. ನನಗೆ ಇದು ಸಾಧ್ಯವಿದೆ ಎಂಬ ಅಚಲ ನಂಬಿಕೆ ಇದ್ದರೆ ಅರ್ಧ ಕೆಲಸ ಆದಂತೆಯೇ ಸರಿ.

ನೀವೂ ಬರೆಯಬಹುದು

ನಮ್ಮ ವಿಳಾಸ:
ಪುರವಣಿ ವಿಭಾಗ, ನಂ.1687,
3ನೇ ಮಹಡಿ, ನಿಸರ್ಗ ಸೆರೆನಿಟಿ ಕಾಂಪ್ಲೆಕ್ಸ್, ರಾಘವೇಂದ್ರ ಸ್ವಾಮಿ ಮಠದ ಹತ್ತಿರ, ಬಿಇಎಂಎಲ್ ಬಡಾವಣೆ, ರಾಜರಾಜೇಶ್ವರಿ ನಗರ, ಬೆಂಗಳೂರು-560098
ಇ-ಮೇಲ್:
vishwavanimagazine@gmail.com

ತೇಜಸ್ವಿ ಬಿಡಿಸಿದ ಪೇಂಟಿಂಗ್!

ಪರಿಸರಕ್ಕೆ ಸಂಬಂಧಿಸಿದ ಪುಸ್ತಕಗಳನ್ನು ಪ್ರಕಟಿಸುವ ಮೂಲಕ ಲಕ್ಷಾಂತರ ಕನ್ನಡಿಗರನ್ನು ತಲುಪಿದ ತೇಜಸ್ವಿಯವರ, ಜತೆಯಲ್ಲೇ ಇನ್ನೊಂದು ಕೆಲಸವನ್ನೂ ಮಾಡಿದ್ದಾರೆ. ಅದೆಂದರೆ, ಸಾವಿರಾರು ಪರಿಸರ ಪ್ರೇಮಿಗಳನ್ನು, ಪರಿಸರ ರಕ್ಷಕರನ್ನು ಹುಟ್ಟುಹಾಕಿರುವುದು!



• ಡಾ.ಸಂಪತ್ ಬೆಟ್ಟಗೆರೆ

ಕೆ.ಪಿ.ಪೂರ್ಣಚಂದ್ರ ತೇಜಸ್ವಿಯವರು ನಮ್ಮ ತಲೆಮಾರಿನ ಹುಡುಗ ಹುಡುಗಿಯರಿಗೆ ಮೊದಮೊದಲು ಪಠ್ಯಪುಸ್ತಕಗಳ ಮೂಲಕ ಚಿರಪರಿತರಾದವರು. ಅದರೊಟ್ಟಿಗೆ ನಮ್ಮ ಶಿಕ್ಷಕರು ಪಠ್ಯ ಪ್ರಾರಂಭಕ್ಕೂ ಮೊದಲು ಇವರು ಪೂರ್ಣಚಂದ್ರ ತೇಜಸ್ವಿ ಅಂತ. ನಮ್ಮ ನಾಡಗೀತೆ, ರೈತಗೀತೆ, ಅನಿಕೇತನ ಗೀತೆ (ಈಗದು ವಿಶ್ವಮಾನವ ಗೀತೆ), ಶ್ರೀ ರಾಮಾಯಣ ದರ್ಶನಂ ಮಹಾಕಾವ್ಯ ಬರೆದಿದ್ದಾರಲ್ಲ ಕುವೆಂಪು; ಅವರ ಮಗ. ಇವರು ಹಾಗಂತೆ ಹೀಗಂತೆ ಎಂದು ಕೆಲವು ದಂತಕಥೆಗಳ ಸ್ವರೂಪದ ಮಾತುಗಳಿಂದ ಕೃತಿಕರ್ತೃ ವಿಚಾರವನ್ನು ಒಂದಷ್ಟು ವಿಸ್ತತವಾಗಿ ಹೇಳುತ್ತಿದ್ದುರಲ್ಲೂ ಇನ್ನೊಂದಿಷ್ಟು ಕುತೂಹಲಕ್ಕೆ ಕಾರಣಕರ್ತರಾಗಿದ್ದವರು.

ಅದೇನೆ ಇದ್ದರೂ ಈಗ ತೇಜಸ್ವಿಯವರ ವ್ಯಕ್ತಿತ್ವವನ್ನು ಒಟ್ಟಂದವಾಗಿ ಅವರು ಬರೆದ ಸಾಹಿತ್ಯ ಹಾಗೂ ಬದುಕಿದ ಪರಿಸರದ ಹಿನ್ನೆಲೆಯಲ್ಲಿ ಕಣ್ಣಾಡಿಸಿದರೆ ತುಂಬಾ ವಿಶಿಷ್ಟ ಎನಿಸುತ್ತದೆ. ಅವರ ಕೃಷ್ಣೇಗೌಡನ ಆನೆಯ ಕಥೆಯಲ್ಲಿನ ಜೀಪು ರಿಪೇರಿ ವಿವರ ಹಾಗೂ ಸ್ಕೂಟರ್ ರಿಪೇರಿ ಲೇಖನವು ಅವರಿಗಿದ್ದ ವಾಹನಗಳ ಬಿಡಿಭಾಗಗಳನ್ನು ಕಳಚಿ ಕೂಡಿಸಿ ನೋಡುವ ತಾಂತ್ರಿಕ ಆಸಕ್ತಿಯನ್ನು ತೋರಿಸುತ್ತದೆ. ಮೂಡಿಗೆರೆಯ ಬಹುತೇಕ ಕೃಷಿಕರು, ಕಾರ್ಮಿಕರ ವಲಯದ ಒಂದಿಷ್ಟು ಸ್ಥಿತಿವಂತರೆನಿಸಿದವರು ಹಳೆಯ ವಾಹನಗಳಾದ ರೇನಂತೆ? ಹೊಸ ಪೈಂಟ್ ಮಾಡಿಸಿದರಾಯ್ತು, ಜೊತೆಗೆ ಲಕ್ಷಣವಾಗಿ ಕಾಣೋಣ ಅಂತ ಪೇಟೆಗೆ ಹೊರಡಲು ಪ್ರತ್ಯೇಕವಾದ ಬಟ್ಟೆ ಧರಿಸಿ ಸವಾರಿ ಹೊರಟರೆ ತೇಜಸ್ವಿಯವರು ತಮ್ಮ ಸ್ಕೂಟರಿನ ಹಿಂಬದಿಯಲ್ಲಿ ಆಲ್‌ರೆಡಿ ಇದ್ದಂತಹ ಸೀಟನ್ನೂ ಬಿಚ್ಚಿ ತೆಗೆದಿಟ್ಟು, ಶರ್ಟಿನ ಕೆಲವು ಬಟನ್‌ಗಳನ್ನು ಹಾಗೇ ಬಿಟ್ಟುಕೊಂಡು, ಜೀನ್ಸ್‌ಪ್ಯಾಂಟನ್ನು ಕೂಡ ಒಂದು ಕಾಲಿಗೆ ಅರ್ಧ ಮಡಚಿ ಇನ್ನೊಂದು ಬದಿಗೆ ಹಾಗೇ ಪೂರ್ಣ ಇಳಿಬಿಟ್ಟುಕೊಂಡು ಅವರೆಲ್ಲರ ನಡುನಡುವೆಯೇ ಆಗೊಮ್ಮೆ ಈಗೊಮ್ಮೆ ಎಂಬಂತೆ ಸಹಜವಾಗಿಯೇ ಪಯಣಿಸಿ ಯಾರಪ್ಪ ಯಜಮಾನ್ರು ಇವರು? ಮೂಡಿಗೆರೆಯ ಪುಟ್ಟಪೇಟೆಯಲ್ಲಿ ಹೀಗೆ!

ತೇಜಸ್ವಿ ಸ್ವಲ್ಪ ವಿಭಿನ್ನ ಎನ್ನಿಸಲು ಕಾರಣ ತಮ್ಮ ಸೃಜನಶೀಲತೆಯ ಪ್ರತಿಭೆಯ ಸಾಹಿತ್ಯ ರಚನೆಯ ಜೊತೆಜೊತೆಗೆ ಕೃಷಿ, ಸಮಾಜಮುಖಿ ಚಿಂತನೆ, ಸಂಗೀತಾಸಕ್ತಿ, ಫೋಟೋಗ್ರಫಿ, ಚಾರಣ, ಪರಿಸರ ವೀಕ್ಷಣೆ. ಅದರಲ್ಲೂ ಹಳ್ಳದ ಮೀನುಗಳ ಅವಲೋಕನ, ಹಕ್ಕಿಗಳ ಅಧ್ಯಯನ, ಜಗತ್ತಿನ ವಿಸ್ಮಯಗಳ ಕುರಿತ ಓದು ಹಾಗೂ ಭಾಷಾಂತರ - ಭಾವಾನುವಾದ, ಕಂಪ್ಯೂಟರ್ ಕಲಿಕೆ, ಕನ್ನಡ ತಂತ್ರಾಂಶ ಅಭಿವೃದ್ಧಿಗಾಗಿ ಸಾಫ್ಟ್‌ವೇರ್ ಇಂಜಿನಿಯರ್‌ಗಳೊಂದಗಿನ ಒಡನಾಟ, ಸಣ್ಣಕಾಫಿ ಬೆಳೆಗಾರರ ಒಕ್ಕೂಟದೊಂದಿಗೆ ಮುಕ್ತ ಮಾರುಕಟ್ಟೆಗೆ ಒತ್ತಾಯಿಸಿ ಮಾಡಿದ ಹೋರಾಟ ಇತ್ಯಾದಿ. ಇದನ್ನು ಬೇರೊಂದು ಆಯಾಮವಾಗಿ ಕವಿಭಾಷೆಯಲ್ಲಿ ವರ್ಣಿಸುವುದಾದರೆ ಇಲ್ಲಿ ಯಾವುದು ಮೊದಲುಗೊಂಡಿದ್ದು ಎಂಬುವುದರಿಂದ ಹಿಡಿದು ಯಾವುದಕ್ಕೂ ಕೊನೆಯೂ ಇಲ್ಲದ ಜೀವನಯಾನ ಅವರದ್ದಾಗಿದೆ. ಹೀಗೆ ತೇಜಸ್ವಿಯವರ ಬದುಕಿನ ವೃತ್ತಾಂತವನ್ನು ನಾವು ಕಂಡುಕೊಳ್ಳಬಹುದಾಗಿದೆ.

ನಿರುತ್ತರಕ್ಕೆ ಭೇಟಿ

ಕೆಲವು ವರ್ಷಗಳ ಹಿಂದೆ ಮೂಡಿಗೆರೆಯ ಹ್ಯಾಂಡ್‌ಪೋಸ್ಟ್‌ನಲ್ಲಿರುವ ಅವರ ತೋಟದ ಮನೆ ನಿರುತ್ತರಕ್ಕೆ ನಾನು, ನನ್ನ ಸಹೋದರಿ ಭೇಟಿಕೊಟ್ಟಿದ್ದೇವು. ತೇಜಸ್ವಿಯವರು ನಿಧನರಾಗಿದ್ದ ಗಾಢಮೌನವು ನಿರುತ್ತರವನ್ನು ಇನ್ನೂ ಹಾಗೇ ಆವರಿಸಿಕೊಂಡಿದ್ದಿತು. ಅವರ ಮಡದಿ ರಾಜೇಶ್ವರಿ ಮೇಡಂ ಅವರು ನಮಗೆ ಪ್ರೀತಿಯಿಂದ ಮನೆಯ ಚಾವಡಿಯಲ್ಲಿ ಕುಳಿತುಕೊಳ್ಳಲು ಹೇಳಿ ಮಾತನಾಡಿಸುತ್ತಿದ್ದಾಗ ಕಣ್ಣಿಗೆ ಕಂಡದ್ದು, ಚಿತ್ರಪಟ. ಅದರಲ್ಲಿ ಲಂಬಾಣಿ ಸಮುದಾಯದ ಹೆಂಗಸು ಸಾಂಪ್ರದಾಯಿಕ ಬಟ್ಟೆ ಧರಿಸಿದ್ದರು! ಅದನ್ನು ತಮ್ಮ ಕೈಯಾರೆ ರಚಿಸಿರುವವರು ಇದೇ ಪೂರ್ಣಚಂದ್ರ ತೇಜಸ್ವಿ. ಅದಕ್ಕೆ ಫೋಟೋಫ್ರೇಮ್ ಹಾಕಿಸಿ ಅಲ್ಲಿನ ಗೋಡೆಯಲ್ಲಿ ಇಡಲಾಗಿತ್ತು. ಈಗಲೂ ಅದು ಅಲ್ಲಿ ಹಾಗೇ ಇದೆ. 26-10-1998 ರಲ್ಲಿ ರಚಿಸಲ್ಪಟ್ಟಿರುವ ಇದು ತೇಜಸ್ವಿ ಸಹಿಯೊಂದಿಗೆ ಮಂದಸ್ಮಿತ ಮುಖಭಾವದ ಸುಂದರ ರಚನೆಯಾಗಿದೆ. 'ಈ ಚಿತ್ರವನ್ನು ಬಿಡಿಸಿದವರು ತೇಜಸ್ವಿಯವರಾ ಮೇಡಂ?' ಎಂದು ಅಚ್ಚರಿಯಿಂದ ರಾಜೇಶ್ವರಿಯವರನ್ನು ಕೇಳಿದಾಗ 'ಹೌದು ಆಗಾಗ ಇಂತಹ ಚಿತ್ರಗಳನ್ನ ಟ್ರೈ ಮಾಡುತ್ತಿದ್ದರೆಂದು ತಿಳಿಸಿದ್ದರು. ಜೊತೆಗೆ ಅವರ ಬರಹದಷ್ಟು ಈ ವಿಷಯ ಯಾರಿಗೂ ಗೊತ್ತಿಲ್ಲದೆ ಇರುವುದರಿಂದ ಮೊದಮೊದಲು ನೋಡಿದಾಗ ನಿಮ್ಮಂತೆ ಆಶ್ಚರ್ಯಪಡುವುದು ಸಹಜವೇ' ಎಂದು ನಸುನಕ್ಕಿದ್ದರು. ಹೀಗೆ ತೇಜಸ್ವಿಯವರೊಳಗೊಬ್ಬ ಕವಿ, ಕಥೆಗಾರನಂತೆ ಕಲಾಕಾರನೂ ಇದ್ದ ಎಂಬುವುದು ವಿಶೇಷವೇ.

ಅಂದಹಾಗೆ ಅವರ ಮಾಯಲೋಕ ಕಾದಂಬ ರಿಯ ಪ್ರವೇಶ ನುಡಿಯಲ್ಲಿ ಇದೊಂದು ಕೋಲಾಜ್ ಮಾದರಿಯ ಬರಹ ಎಂದು ಪ್ರಸ್ತಾಪಿ ಸುವ ತೇಜಸ್ವಿ ಅದರಲ್ಲಿ ಮೂಡಿಗೆರೆಯ ಸಾಮಾನ್ಯ ಜನರನ್ನು ಒಳಗೊಂಡಂತೆ ವಿವಿಧ ದೃಶ್ಯಾವಳಿಗ ಳನ್ನು ತಮ್ಮ ಕ್ಯಾಮೆರಾದಲ್ಲಿ ಸೆರೆ ಹಿಡಿದು ನಡುನಡುವೆ ಕೊಟ್ಟಿರುವುದು ಕಂಡುಬರುತ್ತದೆ. ಇದರಿಂದ ಅವರು ಕ್ರಿಮಿಕೀಟ, ಪಕ್ಷಿಗಳ ಚಿತ್ರಗಳನ್ನು ಮಾತ್ರವಲ್ಲದೆ ತಮ್ಮ ಮನಸಿನ ಭಾವಕ್ಕೆ ಅನನ್ಯರೆನಿಸಿದ ಮನುಷ್ಯರು ಹಾಗೂ ಮಾನವ ಜಗತ್ತನ್ನೂ ವಿಶೇಷವಾಗಿ ಕಣ್ತುಂಬಿಕೊಂಡಿರುವುದು ಗೊತ್ತಾಗುತ್ತದೆ. ಅಂದಹಾಗೆ ವ್ಯಕ್ತಿ ವಿಶಿಷ್ಟ ಸಿದ್ಧಾಂತ ಕೃತಿಯ ಪಿಂಕುಬಣ್ಣದ ಮುಖಪುಟದಲ್ಲಿ ಗೋಡೆಗೆ ಹೊಡೆಯುವ ಪೈಂಟ್ ಹನಿಯೊಂದು ನೆಲಕ್ಕೆ ಹಂತಿರುವಂತೆ ಒಂದು ಸಾಮಾನ್ಯ ನಮೂನೆಯ ಬಿಳಿಚುಕ್ಕೆ ಇದೆ. ಅದು ಅವರದೆ ಕಲೆಯಂತೆ. ಹೀಗೆ ಹುಡುಕಿದರೆ ಇನ್ನೂ ಇದೆ ಎಂಬುವುದೇ ಸದ್ಯದ ನಿದರ್ಶನಗಳು.

ಈಗ ತೇಜಸ್ವಿ ಹಾಗೂ ರಾಜೇಶ್ವರಿ ದಂಪತಿಗಳು ಭೌತಿಕವಾಗಿ ಮೂಡಿಗೆರೆಯ ಪರಿಸರದಲ್ಲಿ ಇರದ ಹೊತ್ತು. ಆದ್ದರಿಂದ ಅವರ ಕಾರ್ಯಚಟುವ ಟಿಕೆಗಳ ನೆನಪುಗಳನ್ನು ಅಷ್ಟೇ ಹಸಿರಾಗಿಸಿಟ್ಟುಕೊಳ್ಳುವ ನಿಟ್ಟಿನಲ್ಲಿ ಮತ್ತು ಇವೆಲ್ಲಕ್ಕೂ ಒಂದು ವೇದಿಕೆ ಎಂಬಂತೆ ಮೂಡಿಗೆರೆಯ ಕೊಟ್ಟಿಗೆಹಾರದ ಸಮೀಪ ತೇಜಸ್ವಿ ಪ್ರತಿಷ್ಠಾನವು ಸುಂದರವಾದ ಕಟ್ಟಡದಲ್ಲಿ ಅನಾವರಣಗೊಂಡಿದೆ. ಇದರ ಸುತ್ತಲು ಒಂದು ಪ್ರಾಕೃತಿಕ ವಾತವರಣವಿರುವಂತೆ ನೋಡಿಕೊಳ್ಳಲಾಗುತ್ತಿದೆ. ಕಟ್ಟಡದ ಒಳ ಆವರ ಣವು ಮಲೆನಾಡಿನ ತೊಟ್ಟಿಮನೆಯ ವಿನ್ಯಾಸವನ್ನು ಹೊಲುವಂತಿದೆ. ಮಲೆನಾಡಿನ ಕೆಲವು ಪಾರಂಪಾರಿಕ ಪರಿಕರಗಳನ್ನು ವಿವಿಧ ಮೂಲಗಳಿಂದ ಸಂಗ್ರಹಿಸಿ ಇಲ್ಲಿ ಇಡಲಾಗಿದೆ.

ವಾಚನಾಲಯ

ತೇಜಸ್ವಿ ಪುಸ್ತಕದ ಕೆಲವು ಪುಟಗಳನ್ನು ಅಲ್ಲೇ ಕುಳಿತು ಓದಿ, ಆಸಕ್ತಿ ಇದ್ದರೆ ಖರೀದಿಸುವ ಅವಕಾಶವನ್ನೂ ನೀಡುವ ವಿಶೇಷವಾದ ಗಾಜಿನ ಕೋಣೆಯ ವಾಚನಾಲಯ ಕೂಡ ಈಚೆಗೆ ರೂಪುಗೊಂಡಿದೆ. ತೇಜಸ್ವಿಯವರ ಚಿಂತನೆಗೆ ಪೂರಕವಾದ ಹಾಗೂ ತೇಜಸ್ವಿಯವರ ಸಾಹಿತ್ಯ ಕುರಿತ ಉಪನ್ಯಾಸ, ಚರ್ಚೆ, ಸಂವಾದಗಳು ಇಲ್ಲಿ ನಡೆಸಲಾಗುತ್ತಿದೆ. ಕೀಟಪ್ರಪಂಚ ಒಳಗೊಂಡ ವಿಸ್ಮಯ ಲೋಕದ ನಿಜ ಪ್ರಾತ್ಯಾಕ್ಷಿಕೆಗಳನ್ನು ಇಲ್ಲಿ ವೀಕ್ಷಣೆಮಾಡಲು ಅನುಕೂಲ ಮಾಡಿಕೊಡಲಾ ಗಿದೆ. ಇದಕ್ಕೆ ಕರ್ನಾಟಕ ಸರ್ಕಾರದ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಆರ್ಥಿಕ ಹಾಗೂ ಸಾಂಸ್ಕೃತಿಕ ಸಹಕಾರವೂ ಇದೆ. ಕನ್ನಡ ಸಾಹಿತ್ಯ ಲೋಕದ ಬೆರಗು ಎನಿಸಿರುವ, ಛಾಯಾಚಿತ್ರಗ್ರಾಹಕರೂ ಆಗಿರುವ, ಕಲಾವಿದರೂ ಆಗಿರುವ, ಚಿಂತಕರೂ ಆಗಿರುವ ತೇಜಸ್ವಿಯವರನ್ನು ಇಂದಿನ ಮತ್ತು ಮುಂದಿನ ತಲೆಮಾರು, ಹೆಚ್ಚು ಹೆಚ್ಚು ಅರ್ಥ ಮಾಡಿಕೊಳ್ಳಲು ಈ ಪ್ರತಿಷ್ಠಾನದ ಕೆಲಸಗಳು ಪೂರಕವಾಗಿವೆ; ಅಲ್ಲಿರುವ ವಾಚನಾಲಯವೂ ಅಷ್ಟೇ ಅನನ್ಯ ಎನಿಸಿದೆ. ಮೂಡಿಗೆರೆಯ ಹತ್ತಿರ ಹಾದುಹೋಗುವವರು, ಅವಶ್ಯವಾಗಿ ಈ ಪ್ರತಿಷ್ಠಾನದ ಆವರಣಕ್ಕೆ ಭೇಟಿ ನೀಡಿ, ಅಲ್ಲಿನ ವಾಚನಾಲಯದಲ್ಲಿ ಕೆಲವು ಪುಸ್ತಕಗಳನ್ನು ತಿರುವಿ ಹಾಕಿ, ತೇಜಸ್ವಿಯವರನ್ನು ನೆನಪಿಸಿಕೊಂಡರೆ, ಅವರ ಪರಿಸರ ಪ್ರೇಮಕ್ಕೆ ಬೆಲೆ ನೀಡಿದಂತೆ!

ಓ ಶಿಲ್ಪಿ... ನಿನಗೊಂದು ನಮಸ್ಕಾರ!

• ನಿವೇದಿತಾ ಎಚ್. ಮೈಸೂರು

ಭಾರತದ ಬಗ್ಗೆ ಮಾತು ಬಂದಾಗಲೆಲ್ಲಾ ಮೊದಲು ಪ್ರಸ್ತಾಪವಾಗುವುದು ಇಲ್ಲಿನ ವಾಸ್ತು ಮತ್ತು ಶಿಲ್ಪಕಲೆಯ ಬಗ್ಗೆ. ಭಾರತದ ನಾಲ್ಕೂ ದಿಕ್ಕುಗಳಲ್ಲಿರುವ ದೇವಸ್ಥಾನಗಳು, ಬಸದಿಗಳು, ಸ್ತೂಪಗಳು, ನಿಷಧಿಗಳು, ಶಾಸನಗಳು, ವೀರಗಲ್ಲುಗಳು, ಸ್ಮಾರಕಗಳು ಭಾರತದ ಅಸಾಮಾನ್ಯತೆಯನ್ನು ವಿಶ್ವಮಟ್ಟದಲ್ಲಿ ಎತ್ತಿಹಿಡಿಯುತ್ತವೆ. ಕೊನಾರ್ಕಿನ ಸೂರ್ಯ ದೇವಾಲಯ, ಪುರಿಯ ಜಗನ್ನಾಥನ ಮಂದಿರ, ಖಜುರಾಹೋನ ಅಪ್ರತಿಮ ಶಿಲ್ಪಗಳು, ಆಂಧ್ರ-ತಮಿಳುನಾಡಿನ ಬೃಹತ್‌ಸುಂದರ ದೇವಸ್ಥಾನಗಳು, ಕೇರಳದ ವಿಶಿಷ್ಟ ಶೈಲಿಯ ದೇವಳಗಳು, ನಮ್ಮ ರಾಜ್ಯದ ಬೇಲೂರು, ಹಳೆಬೀಡು, ಹಂಪೆ ಇವೆಲ್ಲವೂ ಶಿಲ್ಪಕಲೆಯ ಮಹತ್ವವನ್ನು ಎತ್ತಿ ಹಿಡಿದಿವೆ.

ಇಂತಹ ಶಿಲಾ ವಾಸ್ತು ಅದ್ಭುತಗಳ ಕುರಿತು ಮಾತನಾಡುವಾಗ ಸಾಮಾನ್ಯವಾಗಿ ಆ ದೇವಸ್ಥಾನಗಳನ್ನು ನಿರ್ಮಿಸಿದ ರಾಜ ಮಹಾರಾಜರ ಬಗ್ಗೆ ಮಾತನಾಡುತ್ತೇ ವೆಯೇ ಹೊರತು, ಶಿಲ್ಪಿಯ ಬಗ್ಗೆ ಹೆಚ್ಚು ಚರ್ಚೆ ನಡೆಯುವುದಿಲ್ಲ. ಕರ್ನಾಟಕದಲ್ಲಿ ಜಕ್ಕಣಾಚಾರಿ ಅವನ ಮಗ ಡಂಕಣನ ಕುರಿತು ಪ್ರಸಿದ್ಧ ದಂತಕತೆಗಳಿವೆ. ಈ ನಾಡಿಗೆ ಅದ್ಭುತವಾದ ರಚನೆಗಳನ್ನು ನೀಡಿದ ಇತರ ಶಿಲ್ಪಿಗಳ ಬಗ್ಗೆ ನಮಗೆ ಹೆಚ್ಚು ತಿಳಿದಿಲ್ಲದಿರುವುದು ನಿಜಕ್ಕೂ ವಿಷಾದದ ಸಂಗತಿ. ಇದಕ್ಕೆ ನಮ್ಮ ಅವಜ್ಞೆ ಮಾತ್ರವಲ್ಲ, ಶಿಲ್ಪಿಗಳ ಅನಾಮಿಕಪ್ರಿಯತೆಯೂ ಕಾರಣ. ಸೆಪ್ಟೆಂಬರ್ 17 ರಂದು ನಮ್ಮ ದೇಶದಲ್ಲಿ ವಿಶ್ವಕರ್ಮ ಜಯಂತಿಯ ನೆಪದಲ್ಲಿ ದೇಶದ ಎಲ್ಲಾ ಶಿಲ್ಪಿಗಳಿಗೆ ಗೌರವ ನೀಡುವ ಸಂಪ್ರದಾಯ ನಿಜಕ್ಕೂ ಉತ್ತಮ ಎನಿಸಿದೆ.

ರಾಮ ಸೇತು ನಿರ್ಮಿಸಿದವರು!

ದೇವಶಿಲ್ಪಿ ಎಂದು ಕರೆಯಲಾಗುವ ವಿಶ್ವಕರ್ಮ ಅಷ್ಟವಸುಗಳಲ್ಲಿ ಒಬ್ಬನಾದ ಪ್ರಭಾಸ ಮತ್ತು ಯೋಗಸಿದ್ಧಿಯ ಪುತ್ರ. ಮನು, ದೈವಜ್ಞ, ಸಂಜ್ಞಾ, ವಿಶ್ವರೂಪರನ್ನೊಳಗೊಂಡಂತೆ ರಾಮಸೇತು ನಿರ್ಮಾಣದ ಹಿಂದಿನ ಶಕ್ತಿನಳ ಮತ್ತು ನೀಲ ಕೂಡ ವಿಶ್ವಕರ್ಮನ ಮಕ್ಕಳು ಎಂದು ನಂಬಲಾಗಿದೆ. ದೇವತೆ ಗಳ ಆಯುಧಗಳು, ರಥಗಳನ್ನಲ್ಲದೆ ಇಂದ್ರನ ವಜ್ರಾಯು ಧವನ್ನೂ ವಿಶ್ವಕರ್ಮ ತಯಾರಿಸಿಕೊಟ್ಟನೆನ್ನಲಾಗಿದೆ.

ಉವಜ್ಝಾಯ ಮತ್ತು ಆಚಾರ್ಯ ಎಂಬ ಸಂಸ್ಕೃತ ಪದಗಳ ಕನ್ನಡ ಅವತರಣಿಕೆ ಓಜ ಮತ್ತು ಆಚಾರ್ ಅನ್ನು ತಮ್ಮ ಹೆಸರುಗಳೊಂದಿಗೆ ಜೋಡಿಸಿಕೊಳ್ಳುವ ಪರಂಪರೆ ವಿಶ್ವಕರ್ಮರಲ್ಲಿಬೆಳೆದು ಬಂದಿದೆ.

ವಿಶ್ವಕರ್ಮನ ಸಂತತಿಯೆನ್ನಲಾಗುವ ವಿಶ್ವಕರ್ಮರು ಹೇಮ ಕರ್ಮ, ಲೋಹಕರ್ಮ, ಶಿಲಾಕರ್ಮ,ಕಾಷ್ಠಕರ್ಮ, ರತ್ನಕರ್ಮ, ಚಿತ್ರಕರ್ಮ, ಪತ್ರಕರ್ಮ, ಪ್ರತಿಮಾ ಲಕ್ಷಣ ಮತ್ತು ಇತರ ಹಸ್ತ ಕುಶಲಕರ್ಮಗಳಲ್ಲಿ ಪರಿಣತರು.

ಇತಿಹಾಸಕಾರರಾದ ಷ.ಶೆಟ್ಟರ್‌ಅವರ ಪ್ರಕಾರ, ಭಾರತದಲ್ಲಿ ಅತಿ ಹೆಚ್ಚು ಅವಜ್ಞೆಗೆ ಒಳಗಾದವರು ಶಿಲ್ಪಿಗಳು. ಕಳಿಂಗ ಯುದ್ಧದ ನಂತರ, ಅಶೋಕ ಕೈಗೊಂಡ ಬೌದ್ಧಮತ ಪ್ರಚಾರದೊಂದಿಗೆ ಭಾರತದಲ್ಲಿ ಶಿಲ್ಪಿಗಳ ಅಧಿಕೃತ ಇತಿಹಾಸ ಪ್ರಾರಂಭವಾಗುತ್ತದೆ. ಅಶೋಕ ಭಾರತದ ನಾನಾ ಕಡೆಗೆ ತನ್ನ ಶಾಸನ, ಆಜ್ಞೆ, ನಿರೂಪಗಳನ್ನು ಪ್ರಚುರ ಪಡಿಸಲು ಅನೇಕ ಸ್ಥಪತಿಗಳನ್ನು ನೇಮಕಮಾಡಿ ಅವರಿಂದ ಶಾಸನಗಳು, ಸ್ತೂಪಗಳು, ಸ್ಮಾರಕಗಳನ್ನು ಮಾಡಿಸುತ್ತಾನೆ. ಅವನೇ ಮಾಡಿಸಿದ ಸಾರನಾಥದ ಸಿಂಹಲಾಂಛನ ಕೆತ್ತಿದಶಿಲ್ಪಿಯ ಬಗ್ಗೆ ನಮಗೆ ತಿಳಿಯುವುದು ಸಾಧ್ಯವಾಗಿಲ್ಲವಾದರೂ, ಕನ್ನಡದಮೊದಲ ಶಾಸನ, ಖರೋಷ್ಠಿ ಲಿಪಿಯಲ್ಲಿಕೆತ್ತಿದ 'ಚಪಡ'ಎಂಬ ಸ್ಥಪತಿಯ ಬಗ್ಗೆ ದೊರೆತಿರುವ ಆಧಾರ ಕರ್ನಾಟಕದ ಸ್ಥಪತಿಗಳ ಅಧಿಕೃತ ಇತಿಹಾಸದಲ್ಲಿ ದಾಖಲಾಗಿರುವ ಮೊದಲ ಹೆಸರು ಎಂದು ಶೆಟ್ಟರ್ ಸಾಬೀತು ಮಾಡಿದ್ದಾರೆ. ಬಹುಶಃ ಇಂದಿನ ಅಫ್ಘಾನ್ ಮೂಲದ, ಬಹುಭಾಷೆಗಳನ್ನು ಬಲ್ಲ ಚಪಡ, ದಕ್ಷಿಣ ಭಾರತದೆಡೆಗೆ ಅಶೋಕನ ಆಜ್ಞೆಯಂತೆ ಬಂದು ಚಿತ್ರದುರ್ಗ ಜಿಲ್ಲೆಯ ಅಶೋಕ ಸಿದ್ದಾಪುರದ ಬಂಡೆಗಳ ಮೇಲೆ ಧಮ್ಮಶಾಸನಗಳನ್ನು ಕೆತ್ತಿದ್ದಾನೆ. ಇವನು ಒಬ್ಬ ಕಂಡರಣೆಕಾರನಾಗಿದ್ದ. ಕರ್ನಾಟಕವನ್ನು ಆಳಿದ ವಿವಿಧ ರಾಜವಂಶಗಳ ಕಾಲದಲ್ಲಿದ್ದ ಶಿಲ್ಪಿಗಳು ಹಲವರು. ಆರಂಭದಲ್ಲಿ ನಮನಕಲ್ಲುಗಳು, ನಿಷಧಿಕಲ್ಲುಗಳು, ವೀರಗಲ್ಲುಗಳೇ ಹೆಚ್ಚಾಗಿದ್ದವು.

ನಮ್ಮ ನಾಡಿನ ಶಿಲ್ಪ ಕಲಾವೈಭವ ಮತ್ತು ವಾಸ್ತು ವೈಭವವನ್ನು ನೆನಪಿಸಿಕೊಳ್ಳಲು 'ವಿಶ್ವಕರ್ಮ ಜಯಂತಿ' ಒಂದು ಸೂಕ್ತ ಸಂದರ್ಭ ಎನಿಸಿದೆ.



ಕರ್ನಾಟಕದಲ್ಲಿ 14000 ಕ್ಕೂ ಹೆಚ್ಚು ನಮನಕಲ್ಲುಗಳು ದೊರೆತಿವೆ ಮತ್ತು 314 ಶಿಲ್ಪಿಗಳ ಹೆಸರಷ್ಟೇ ತಿಳಿಯಲಾಗಿದೆ. ಗಂಗರ ಕಾಲದಲ್ಲಿ, ಪರಶುರಾ ಮಯ್ಯ, ದುಗ್ಗಯ್ಯ, ಬೆರ್ದಮಯ್ಯ ಮತ್ತು ವಿಭೋಗಗಂಗಾ ಎನ್ನುವ ಶಿಲ್ಪಿಗಳ ಹೆಸರು ದೊರೆತಿವೆ. ಗಂಗೋಜ ಮತ್ತು ಹಕ್ಕಯ್ಯ ಎನ್ನುವವರು ಕದಂಬರ ಕಾಲದ ಶಿಲ್ಪಿಗಳು. ಕಲ್ಯಾಣ ಚಾಲುಕ್ಯರ ಕಾಲದಲ್ಲಿ ನಾ, ಸಿಗ್ಗೋಜ, ಪದೋಜ, ಆಯೋಜ, ಹೊಲ್ಲೋಜ, ಕಟುಕೋಜ, ಕೇತೋಜ, ಲೋಕೋಜ, ಹೋಜ ಎಂಬ ಶಿಲ್ಪಿಗಳಿದ್ದರು. ವಿಜಯನಗರ ಕಾಲದ ಮಡೇಜ ಎಂಬ ಶಿಲ್ಪಿಯು ,ತನ್ನನ್ನು 'ಸುಜನರ ಮನೋರಂಜನ' ಎಂದು ಕರೆದುಕೊಂಡಿದ್ದಾನೆ. ನಾಗೋಜ, ಮಲಿಯೋಜ, ಗುಂಡೋಜ, ದೇವೋಜ, ಈಶ್ವರಾಚಾರಿ, ಮನಿಯಾಚಾರಿ, ವೀರೋಜ, ಬಾಚಾಚಾರಿ ಮತ್ತು ತಿಮ್ಮಯ ಇವರುಗಳ ಹೆಸರುಗಳು ಇತಿಹಾಸದಲ್ಲಿ ದಾಖಲಾಗಿವೆ.

ಹೊಯ್ಸಳರ ಕಾಲದಲ್ಲಿ

ಹೊಯ್ಸಳರ ಶಿಲ್ಪವೈಭವ ಅಚ್ಚಳಿಯದ್ದು. ದಾಸೋಜ, ಚಾವಣ, ಚಿಕ್ಕಹಂಪ,ಮೈನಾ, ಮಲ್ಲಿಯಯ್ಯ, ಏಚಣ್ಣ, ಕೆಂಚಮಲ್ಲಿಯಣ್ಣ, ಮಲ್ಲಣ್ಣಲಾಸೆ, ಧರ್ಮಾಚಾರಿ, ಬಿರುದು ರೂವಾರಿ ಮುಖತಿಲಕ ನೆಂದು ಕರೆದುಕೊಂಡ ವರ್ಧಮಾನಾ ಚಾರಿ ಅಥವಾ ಗಂಗಾಚಾರಿ, ಕೇತಾಚಾರಿ, ಕಾಂವಾಚಾರಿ, ಭೋಗೋಜ, ಮಲೋಜ, ಬೈಕೋಜ, ಮಧುಕೋಜ, ಹೊಯ್ಸಳಾಚಾರಿ ಮತ್ತು ಮಲ್ಲಿತಮ್ಮ ದಾಖಲಾಗಿರುವ ಪ್ರಮುಖರು. ಬಾಹುಬಲಿಯನ್ನು ನಿರ್ಮಿ ಸಿದ ಅರಿಷ್ಟನೇಮಿಯ ಹೆಸರು ದಾಖಲಾಗಿದೆ. ಶ್ರವಣಬೆಳ ಗೊಳದಲ್ಲಿ ಕಂಡುಬರುವ ನೂರಾರು ಶಾಸನಗಳನ್ನು ಹಲವು ಶಿಲ್ಪಿಗಳು ನಿರ್ಮಿಸಿದ್ದಾರೆ.ಇವರಲ್ಲಿ ಗಂಗಾಚಾರಿ ಪ್ರಮುಖ.

ಮಲ್ಲಿತಮ್ಮ

ಮಲ್ಲಿತಮ್ಮನ ಬಗ್ಗೆ ವಿಶೇಷವಾಗಿ ಹೇಳಲೇಬೇಕು. ಕರ್ನಾಟಕ ಕಂಡ ಶ್ರೇಷ್ಠಶಿಲ್ಪಿ ಮಲ್ಲಿತಮ್ಮ, 60 ವರ್ಷಗಳ ತನ್ನ ದೀರ್ಘ ವೃತ್ತಿಜೀವನದಲ್ಲಿ 6 ಪ್ರಮುಖ ದೇವಸ್ಥಾನಗಳ ನಿರ್ಮಾಣದಲ್ಲಿ ತನ್ನನ್ನು ತಾನು ತೊಡಗಿಸಿಕೊಂಡಿದ್ದ. ಸುಬುಜಗ,ಮಲಯ, ಪರುಣಣ, ಪದ್ಮಮಯ, ಬಲುಗ, ಬೂತಯ, ಮೂಲಣ ರನ್ನೊಳಗೊಂಡಂತೆ 22 ಸಹೋದ್ಯೋಗಿಗಳೊಂದಿಗೆ ಇವನು ನಿರ್ಮಾಣಕಾರ್ಯದಲ್ಲಿ ತೊಡಗಿಕೊಂಡಿದ್ದ. ಅಮೃತಾಪುರದ ಅಮೃತೇಶ್ವರ ದೇವಾಲಯ(1196-1206), ಹಾರನಹಳ್ಳಿಯ ಲಕ್ಷ್ಮೀನರಸಿಂಹ ದೇವಸ್ಥಾನ(1234-46), ಕೆ.ಆರ್.ಪೇಟೆಯ ಗೋವಿಂದನಹಳ್ಳಿಯ ಪಂಚಲಿಂಗೇಶ್ವರ ದೇವಾಲಯ(1237), ನುಗ್ಗೇಹಳ್ಳಿಯ ಲಕ್ಷ್ಮೀನರಸಿಂಹ ದೇವಸ್ಥಾನ(1246-1250), ಜಾವಗಲ್ಲಿನ ಲಕ್ಷ್ಮೀನರಸಿಂಗ ದೇವಾಲಯ(1250), ನಾಗಲಾಪುರದ ಚೆನ್ನಕೇಶವ ಮತ್ತು ಕೇದಾರೇಶ್ವರ ದೇವಸ್ಥಾನ ಹಾಗು ಅತ್ಯಂತ ಪ್ರಮುಖವಾದ ಸೋಮನಾಥಪುದ ದೇವಸ್ಥಾನ(1268) ದೇಗುಲ ನಿರ್ಮಾಣದಲ್ಲಿ ಈತ ತೊಡಗಿಕೊಂಡಿದ್ದ. ವಿಷ್ಣುಮೂರ್ತಿಯ ಶಿಲ್ಪಶಾಸ್ತ್ರದಲ್ಲಿ ಪರಿಣತನಾಗಿದ್ದ ಮಲ್ಲಿತಮ್ಮ ತನ್ನ ಜೀವಮಾನದಲ್ಲಿ ರಚಿಸಿದ ವಿಷ್ಣುಮೂರ್ತಿಗಳ ಸಂಖ್ಯೆ 79! ಇಂದು ಅವನ ಹೆಸರಿನಲ್ಲಿ ಒಂದು ಪ್ರಶಸ್ತಿಯು ಸ್ಥಾಪನೆಯಾಗಿದ್ದು ಸಂತಸದ ವಿಚಾರ. ಷ.ಶೆಟ್ಟರ್‌ತಮ್ಮ ಕೃತಿ 'ಸ್ಥಪತಿ'ಯಲ್ಲಿ, 'ಜಕ್ಕಣ'ನಿಜವಾದ ವ್ಯಕ್ತಿಯಲ್ಲ, ಆದರೆ ಒಂದು ಪರಂಪರೆ; ಯಕ್ಷ ಎಂಬ ಪದದಿಂದ ವ್ಯುತ್ಪತ್ತಿಯಾಗಿರಬಹುದಾದ 'ಜಕ್ಕಣ'ಎಂಬ ಪದ, ಆಗಿನ ಕಾಲದ ಸ್ಥಪತಿಗಳ ಪರಂಪರೆಯನ್ನು ಸೂಚಿಸುತ್ತಿತ್ತು ಎಂದು ಪ್ರತಿಪಾದಿಸಿದ್ದಾರೆ. ಆದರೂ ಜಕ್ಕಣ ನಮಗೆ ಆತ್ಮೀಯ. ಶಿಲ್ಪಿ ಎಂದ ತಕ್ಷಣ ನಮಗೆ ಅವನ ನೆನಪೇ ಆಗುವುದು!

ಅವೆನ್ಯೂ ರೋಡ್

ನಿತ್ಯದ ವಿಂಡೋ ಶಾಪಿಂಗ್

ವಿಶ್ವವಾಣಿ
18.09.2024 ಬುಧವಾರ
vishwavani.news

ದಿನ ದರ್ಶಿಕೆ

ಭಾದ್ರಪದ ಮಾಸ, ಶುಕ್ಲ ಪಕ್ಷ, ಚತುರ್ದಶಿ ತಿಥಿ, ಶತಭಿಷ್ಹಾ ನಕ್ಷತ್ರ, ಗಂಡ ಯೋಗ, ಪೂರ್ವ ಭಾದ್ರಪದ ನಕ್ಷತ್ರ, 1946 ಕ್ರೋಧಿನಾಮ ಸಂವತ್ಸರ, 2081 ವಿಕ್ರಮನಾಮ ಸಂವತ್ಸರ, ದ್ರಿಕ್ ಋತು ಶರದ್, ದ್ರಿಕ್ ಆಯನ ದಕ್ಷಿಣಾಯನ

ಮನೆಮದ್ದು

ನೆಲ್ಲಿಕಾಯಿಯನ್ನು ತೊಳೆದು, ಸಣ್ಣ ತುಂಡುಗಳಾಗಿ ಕತ್ತರಿಸಿ ಬೀಜ ತೆಗೆಯಿರಿ. ಇದಕ್ಕೆ ಜೀರಿಗೆ, ಉಪ್ಪು, ನೀರು ಹಾಕಿ ಮಿಕ್ಸಿಯಲ್ಲಿ ರುಬ್ಬಿಕೊಳ್ಳಿ. ಈ ರಸಕ್ಕೆ ಜೇನುತುಪ್ಪ ಬೆರೆಸಿ ಪ್ರತಿದಿನ 2 ಚಮಚ ಸೇವಿಸುವುದರಿಂದ ಯಕೃತ್ತನ್ನು ಆರೋಗ್ಯವಾಗಿರಿಸುತ್ತದೆ. ಜಾಂಡೀಸ್‌ನಿಂದ ಬಳಲುತ್ತಿರುವವರಿಗೆ ಪರಿಣಾಮಕಾರಿ, ತೂಕವನ್ನು ತ್ವರಿತವಾಗಿ ಕಳೆದುಕೊಳ್ಳಬಹುದು.

ಸೌಂದರ್ಯ ಸೂತ್ರ

ಬಿಳಿ ಕೂದಲು ಕಪ್ಪಾಗಲು ಸಾಸಿವೆ ಎಣ್ಣೆಗೆ, 1 ಮೊಟ್ಟೆ ಮತ್ತು ನಿಂಬೆ ರಸ ಸೇರಿಸಿ ಮಿಶ್ರಣ ತಯಾರಿಸಿ. ಈ ಹೇರ್ ಪ್ಯಾಕ್‌ನ್ನು ನಿಮ್ಮ ಕೂದಲಿಗೆ ಪ್ರತಿದಿನ ಹಚ್ಚಿ, ಸುಮಾರು 30 ನಿಮಿಷಗಳ ಕಾಲ ಬಿಡುವುದರಿಂದ ಕೂದಲು ಸಂಪೂರ್ಣ ಪೋಷಣೆಯನ್ನು ಪಡೆಯುತ್ತದೆ. ಇದು ಕೂದಲನ್ನು ಮೃದು ಮತ್ತು ದಟ್ಟವಾಗಿಸುತ್ತದೆ.

ದಿನ ಭವಿಷ್ಯ

ಮೇಷ – ಉತ್ತಮವಾಗಿಸುವ ಯೋಜನೆಗಳಲ್ಲಿ ಶಕ್ತಿ ಮತ್ತು ಶ್ರದ್ಧೆಯನ್ನು ಹಾಕಿ. ಹಾಕಿ. ಹಣಕಾಸು ವಿಚಾರದಲ್ಲಿ ಇಂದು ಲಾಭವಿರುತ್ತದೆ.

ವೃಷಭ – ಆಕರ್ಷಕ ವರ್ತನೆ ಗಮನ ಸೆಳೆಯುತ್ತದೆ. ಹಣಕಾಸಿನಲ್ಲಿ ಸುಧಾರಣೆ ನಿಶ್ಚಿತ. ಹೆತ್ತವರ ಆರೋಗ್ಯದ ಗಮನ ಮತ್ತು ಎಚ್ಚರಿಕೆ ಅಗತ್ಯವಿದೆ.

ಮಿಥುನ – ಅನಾರೋಗ್ಯದಿಂದ ಬಳಲುತ್ತಿದ್ದವರು, ಇಂದು ಚೇತರಿಸಿಕೊಳ್ಳುವ ಸಾಧ್ಯತೆಗಳಿವೆ. ಅನಿರೀಕ್ಷಿತ ಆರ್ಥಿಕ ಲಾಭಗಳನ್ನು ನಿರೀಕ್ಷಿಸಬಹುದು.

ಕಟಕ – ಸರ್ವತೋಮುಖ ಅಭಿವೃದ್ಧಿ ಸಾಧ್ಯವಿದ್ದಾಗ ಮಾತ್ರ ಮಾನಸಿಕ ಮತ್ತು ದೈಹಿಕ ಶಿಕ್ಷಣವನ್ನೂ ತೆಗೆದುಕೊಳ್ಳಿ. ಮನಸ್ಸು ಮತ್ತು ದೇಹ ಆರೋಗ್ಯಕರವಾಗಿಟ್ಟುಕೊಳ್ಳಿ.

ಸಿಂಹ – ವಿಪರೀತವಾಗಿ ಖರ್ಚು ಮಾಡುವುದನ್ನು ನಿಲ್ಲಿಸಿ, ಹಣವು ನಿಮ್ಮ ಕೆಲಸಕ್ಕೆ ಬರುತ್ತದೆ. ಕುಟುಂಬಕ್ಕೆ ಮತ್ತೊರ್ವ ಸದ್ಯಸ ಆಗಮನವಾಗಬಹುದು.

ಕನ್ಯಾ – ಕಾಳಜಿಯಿರುವವರ ಸಂಗದಲ್ಲಿ ಒಳ್ಳೆಯ ಸಮಯ ಕಳೆಯಿರಿ. ಪ್ರೀತಿಯ ಆಪ್ತತೆಯನ್ನು ಅನುಭವಿಸಲು ಯಾರಾದರೂ ದೊರಕಬಹುದು.

ತುಲಾ – ಎಲ್ಲರಿಗೂ ಸಹಾಯ ಮಾಡುತ್ತಾ ದಣಿವಾಗುತ್ತದೆ. ಊಹೆಗಳು ಲಾಭ ತರುತ್ತವೆ. ಸಂಜೆ ಸ್ನೇಹಿತರೊಡನೆ ಹೊಗಿ-ಖುಷಿ ನೀಡುತ್ತದೆ.

ವೃಶ್ಚಿಕ – ವಾಹನ ಓಡಿಸುವಾಗ ಜಾಗೃತೆಯಿರಲಿ, ಹಳೆ ಪ್ರೇಮಿಯ ಜತೆ ಮಾತನಾಡುವುದರಿಂದ ಸಂತಸವಾಗಲಿದೆ.

ಧನು – ಸಾಮಾನ್ಯ ಜ್ಞಾನದ ಜೊತೆಗೆ ನಿರಂತರ ಪ್ರಯತ್ನ ಖಂಡಿತವಾಗಿಯೂ ಯಶಸ್ಸು ತರುವುದರಿಂದ ತಾಳ್ಮೆಯಿಂದಿರಿ. ಹಣವನ್ನು ಉಳಿಸಲು ಪ್ರಯತ್ನಿಸಿ.

ಮಕರ – ಖಂಡಿತವಾಗಿಯೂ ಆರೋಗ್ಯದ ಆರೈಕೆಯ ಅಗತ್ಯವಿದೆ. ಅನಿರೀಕ್ಷಿತವಾದ ಒಳ್ಳೆಯ ಸುದ್ದಿ ಇಡೀ ಕುಟುಂಬಕ್ಕೆ ಸಂತೋಷ ತರುತ್ತದೆ.

ಕುಂಭ – ಸಾಮಾಜಿಕ ಕಾರ್ಯಕ್ರಮಗಳು ಆರಾಮ ಮತ್ತು ಸಂತೋಷ ತರುತ್ತದೆ. ವ್ಯಾಪಾರದ ಸ್ಥಳ ಅಥವಾ ಕಚೇರಿಯ ಕೆಲಸ ಮಾಡುವಾಗ ಎಚ್ಚರದಿಂದಿರಿ.

ಮೀನ – ಭೂಮಿಗೆ ಸಂಬಂಧಿಸಿದ ಯಾವುದೇ ವಿಷಯಕ್ಕೆ ಹಣವನ್ನು ಖರ್ಚು ಮಾಡಬೇಕಾಗಬಹುದು. ಕಠಿಣ ಪರಿಶ್ರಮದಿಂದ ಮಾತ್ರ ಫಲಿತಾಂಶ ಸಿಗುತ್ತದೆ.

● ಕೆ.ಬಿ.ಸಂತೋಷ್ ಗುರೂಜಿ

ಈ ದಿನ ಇತಿಹಾಸ

- ಕನ್ನಡದ ಖ್ಯಾತ ನಟ ದಿ. ಡಾ. ವಿಷ್ಣುವರ್ಧನ್ ಅವರ ಜನ್ಮದಿನ
- 2016: ಉರಿ ಸೆಕ್ಟರ್‌ನಲ್ಲಿ ಭಯೋತ್ಪಾದಕರ ದಾಳಿಯಾಯಿತು.
- 1851: ಅಮೆರಿಕದ ಖ್ಯಾತ ದಿನಪತ್ರಿಕೆ ದಿ ನ್ಯೂ ಯಾರ್ಕ್ ಟೈಮ್ಸ್ ಸಂಸ್ಥಾಪಿತಗೊಂಡಿತು.
- ಖ್ಯಾತ ನಟ, ನಿರ್ದೇಶಕ ಉಪೇಂದ್ರ ಅವರ ಹುಟ್ಟುಹಬ್ಬ

ಚಿತ್ರಸ್ಫೂರ್ತಿ

ಚಿಂತೆ ಇಲ್ಲದವನಿಗೆ ಸಂತೆಯಲ್ಲೂ ನಿದ್ದೆ ಬರುತ್ತಂತೆ ಎನ್ನುವ ಗಾದೆಯ ಹಾಗೇ ನಾರ್ವೇನಲ್ಲಿ ಹಿಮದ ಮೇಲೆ ಹಾಯಾಗಿ ಮಲಗಿರುವ ಹಿಮಕರಡಿ.
ಚಿತ್ರಕೃಪೆ: ನಿಮ ಸರಿಖಾನಿ

ವಿಶ್ವಕರ್ಮ ಮತ್ತು ಪುರಿ ಜಗನ್ನಾಥ ರಥಗಳ ವೈಶಿಷ್ಟ್ಯ...

ಒಂದೊಳ್ಳೆ ಮಾತು

ರೂಪಾ ಗುರುರಾಜ್
rgururaj628@gmail.com

ವಾಸ್ತುಶಿಲ್ಪದ ಮೂಲ ಕರ್ತೃ ಬ್ರಹ್ಮನ ಮಾನಸ ಪುತ್ರರಲ್ಲಿ, ಧರ್ಮಪ್ರಜಾಪತಿ ಎಂಬುವನಿದ್ದ. ಇವನು ದಕ್ಷ ಪ್ರಜಾಪತಿಯ ಹೆಣ್ಣು ಮಕ್ಕಳಲ್ಲಿ ಒಬ್ಬಳಾದ 'ಕುಸು' ಎಂಬುವಳನ್ನು ಮದುವೆಯಾದನು. ಇವನಿಗೆ ಎಂಟು ಮಕ್ಕಳಾದರು. ಇವರನ್ನು ಅಷ್ಟವಸುಗಳು ಎನ್ನುತ್ತಾರೆ. ಇವರಲ್ಲಿ ಪ್ರಭಾಸ ಎನ್ನುವವನಿಗೆ ದೇವಗುರು ಬೃಹಸ್ಪತಿ ಮಗಳಾದ ಬ್ರಹ್ಮವಾದಿನಿ ಎಂಬುವಳನ್ನು ಕೊಟ್ಟು ಮದುವೆ ಮಾಡಿದನು. ಇವರಿಗೆ ಹುಟ್ಟಿದ ಮಗ 'ವಿಶ್ವಕರ್ಮ'.

ವಿಶ್ವಕರ್ಮನಿಗೆ ಬಾಲ್ಯದಲ್ಲಿಯೇ ಆಶ್ರಮದಲ್ಲಿ ವಾಸಿಸುವ ಋಷಿಮುನಿಗಳಿಗೆ ಸೊಪ್ಪು ಸದೆಗಳಿಂದ ಕಟ್ಟಿದ ಮನೆಗಳ ಬದಲಾಗಿ ಮಣ್ಣು, ಮರ ಇವುಗಳನ್ನು ಬಳಸಿ ಮನೆ ಕಟ್ಟಿಕೊಟ್ಟರೆ ಹೇಗೆ ಎಂದು ಚಿಂತಿಸುತ್ತಾ ಮುಂದೆ ಅದನ್ನೇ ಮಾಡಿದ. ಚಿಕ್ಕಂದಿನಲ್ಲೆ ಬಂಡಿ, ಗಾಡಿ, ದೋಣಿ, ಹಡಗು, ಪಕ್ಷಿಯಂತೆ ಹಾರುವ ಆಟಿಕೆಗಳನ್ನು ಮಾಡಿ, ಅದರಲ್ಲಿ ಓಡಾಡಿ ಬೆರಗು ಗೊಳಿಸುತ್ತಿದ್ದನು. ಮುಂದೆ ಇವನು ದೇವಲೋಕ, ಸ್ವರ್ಗಲೋಕಗಳನ್ನು ನಿರ್ಮಿಸಿದನು. ವಿಶ್ವಕರ್ಮನು ಕಟ್ಟಡಗಳ ನಿರ್ಮಾಣ, ರಥ, ಮಂಟಪ, ಆಯುಧ, ಪ್ರಸಿದ್ಧ ದೇವಸ್ಥಾನಗಳು, ಕಲ್ಲಿನ ಕೆತ್ತನೆಗಳು, ಅಪರೂಪದ ಪುಷ್ಪಕ ವಿಮಾನ ನಿರ್ಮಿಸಿದನು. ಎಲ್ಲರೂ ವಿಮಾನದಲ್ಲಿ ಕುಳಿತು ಪೂರ್ತಿಯಾದ ಮೇಲೂ ಮತ್ತೊಬ್ಬರು ಬಂದರೆ ವಿಮಾನವೇ ಹಿಗ್ಗಿ ಸ್ಥಳವಾಗು ತ್ತಿತ್ತು. ಸುಂದ ರವಾದ ಅದ್ಭುತವಾದ ಲೋಕಗಳನ್ನು ನಿರ್ಮಿಸುತ್ತಾ, ದ್ವಾಪರ ಯುಗದಲ್ಲಿ ದ್ವಾರಕಾ ನಗರ ನಿರ್ಮಾಣ ವನ್ನು ವಿಶ್ವಕರ್ಮನೇ ನಿರ್ಮಾಣ ಮಾಡಿದ್ದು.

ವಿಶ್ವಕರ್ಮನ ಬಾಲ್ಯದಲ್ಲೇ ಆಶ್ರಮದಲ್ಲಿ ಒಮ್ಮೆ ನೀರಿನಲ್ಲಿ ಕೆಸರಿನಲ್ಲಿ ನಡೆದರರೂ ಒದ್ದೆ ಆಗದಂತ ಪಾದಕೆಗಳನ್ನು, ಒಲೆಯ ಮೇಲಿಟ್ಟು ಬಗೆ ಬಗೆ ಭಕ್ಷ ಮಾಡುವ ಪಾತ್ರೆಯನ್ನೂ, ಎಂದಿಗೂ ಕೊಳೆಯಾಗದ, ಹರಿಯದ, ಒದ್ದೆಯಾಗದ ಸುಂದರವಾದ ರವಿಕೆಯನ್ನು ಗುರು ಪತ್ನಿಗೆ ಮಾಡಿಕೊಡುತ್ತಿದ್ದನು. ಭಗವಂತನ ಇನ್ನೊಂದು ರೂಪವೇ ವಿಶ್ವಕರ್ಮ ಎನ್ನುವಷ್ಟರ ಮಟ್ಟಿಗೆ ಅವನ ಪ್ರಸಿದ್ಧಿ ಇತ್ತು. ಮಹಾಭಾರತದಲ್ಲಿ ದ್ವಾರಕಾ ನಗರವನ್ನು ನಿರ್ಮಿಸಿ ಕಲೆಗಳ ಚಕ್ರವರ್ತಿ ಎಂಬ ಬಿರುದನ್ನು ಪಡೆದವನು. ಇಂಥ ವಿಶ್ವಕರ್ಮನ ಮೂಲದಿಂದ ಮಯಾಸುರ ನೆಂಬ ರಾಕ್ಷಸ ಬಂದವನೆಂದು ನಂಬಲಾಗಿದೆ.

ಪುರಿ ಜಗನ್ನಾಥ ರಥ ಯಾತ್ರೆಯಲ್ಲಿ ಪ್ರತಿ ವರುಷವೂ ರಥಯಾತ್ರೆಗಾಗಿ ಹೊಸ ರಥವನ್ನೇ ಮಾಡುತ್ತಾರೆ. ಅದೂ ಮೂರು ರಥಗಳು. ರಥ ತಯಾರಿಕೆಗೆ ಪ್ರತ್ಯೇಕ ಜಾತಿಯ ಮರಗಳನ್ನು ಬಳಸುತ್ತಾರೆ. ಕಬ್ಬಿಣ ಅಥವಾ ಯಾವುದೇ ಲೋಹಗಳನ್ನು ರಥ ನಿರ್ಮಾಣಕ್ಕೆ ಬಳಸುವುದಿಲ್ಲ 'ವಸಂತ ಪಂಚಮಿ' ದಿನ ರಥಕ್ಕೆ ಬೇಕಾಗುವ ಮರದ ಆಯ್ಕೆ ಮಾಡಿದರೆ, ಪವಿತ್ರ ದಿನವಾದ ಅಕ್ಷಯ ತದಿಗೆಯಂದು ರಥವನ್ನು ತಯಾರಿಸುವ ಕೆಲಸ ಆರಂಭ ಮಾಡುತ್ತಾರೆ. ವಂಶಪಾರಂಪರ್ಯವಾಗಿ ಬಂದ ವಿಶ್ವಕರ್ಮ ಬಡಗಿಗಳೇ ರಥಕ್ಕೆ ಬೇಕಾದ ಮರಮುಟ್ಟುಗಳನ್ನು ತರುತ್ತಾರೆ. ಈ ಬಡಗಿಗಳು ವಿಶೇಷ ಗೌರವಕ್ಕೆ ಪಾತ್ರರಾಗಿರುತ್ತಾರೆ. ಪೂರ್ವದಲ್ಲಿ ರಾಜ ಇಂದ್ರದ್ಯುಮ್ನನು 'ನೀಲ ಮಾಧವನ' ಕುರಿತು ತಪಸ್ಸು ಮಾಡಿದಾಗ ಕೃಷ್ಣನು ಅನುಗ್ರಹಿಸಿದನು. ಸಮುದ್ರದಲ್ಲಿ ತೇಲಿಬರುವ ಮರದ ದಿಮ್ಮಿಯಿಂದ ಸಾಕ್ಷಾತ್ ವಿಶ್ವಕರ್ಮನೇ ಬಂದು ಜಗನ್ನಾಥ- ಬಲಬದ್ರ- ಸುಭದ್ರ ದೇವಿಯರ ವಿಗ್ರಹಗಳನ್ನು ಕಡೆಯುತ್ತಿದ್ದಾಗ ನಡುವೆ ಮಾತಿಗೆ ತಪ್ಪಿ ನಡೆದ ಕಾರಣ ಅರ್ಧ ಭಾಗ ಮಾತ್ರ ಆಗಿತ್ತು. ನಾರದರ ಸಲಹೆಯ ಮೇರೆಗೆ ಅವೇ ವಿಗ್ರಹಗಳನ್ನು (ನಾರದರೇ) ಪ್ರತಿಷ್ಠಾಪನೆ ಮಾಡಿದರು. ಅದೇ ಪದ್ಧತಿಯನ್ನು ಮುಂದುವರೆಸಿಕೊಂಡು ರಥಗಳನ್ನು ತಯಾರಿಸಲು ಈಗಲೂ ಸಹ ಮರದ ದಿಮ್ಮಿಗಳನ್ನು 'ಮಹಾನದಿ' ಎಂಬ ನದಿಯಲ್ಲಿ ತೆಪ್ಪಗಳ ರೀತಿ ಕಟ್ಟಿ ಸಾಂಪ್ರದಾಯಿಕವಾಗಿ ತೇಲಿಬಿಡುತ್ತಾರೆ. ಆನಂತರ ರಸ್ತೆ ಮಾರ್ಗದಿಂದ ಸಾಗಣೆ ಮಾಡುತ್ತಾರೆ. ಇಂತಹ ಶ್ರೇಷ್ಠ ಪರಂಪರೆ ನಮ್ಮ ಭರತ ಭೂಮಿಯದ್ದು. ಇಂತಹ ಪಾರಂಪರಿಕ ವೈಶಿಷ್ಟ್ಯತೆಗಳನ್ನು ತಿಳಿದುಕೊಂಡು ಅಂತಹ ಸ್ಥಳಗಳಿಗೆ ಭೇಟಿ ಕೊಟ್ಟು, ಅವುಗಳನ್ನು ಕಣ್ಣಾರೆ ಕಂಡು ಧನ್ಯರಾಗೋಣ.

ಪ್ರವಾಸ ಹೋಗುವುದೆಂದರೆ ಯಾವುದೋ ಒಂದು ರೆಸಾರ್ಟಿಗೆ ಹೋಗಿ 3-4 ದಿನಗಳ ಕಾಲ ಕೋಣೆಯಲ್ಲಿ ಕಳೆದು ಹೋಗುವುದಲ್ಲ. ಇಂತಹ ಭವ್ಯ ಇತಿಹಾಸವಿರುವ ನಮ್ಮ ಭರತ ಭೂಮಿಯನ್ನ ಇಂಚಿಂಚು ನೋಡಿ, ಕೃತಾರ್ಥರಾಗಲು ಏಳು ಜನ್ಮ ಎತ್ತಿ ಬರಬೇಕು.

ಪ ದ ಬಂ ಧ



ಎಡದಿಂದಬಲಕ್ಕೆ:
2. ಅಮಲು ಅಥವಾ ಸೊಕ್ಕು (2)
3. ಮನೆ ಅಥವಾ ದೇಹವೂ ಆಗಬಲ್ಲುದು (2)
6. ಬಟ್ಟೆ ಒಗೆದು ಶುಚಿಮಾಡುವವನು (3)
8. ಚಂದ್ರನಿಗೆ ಹೀಗೊಂದು ಹೆಸರಿದೆ (3)
9. ಸಮರದ ಆರಂಭದಲ್ಲಿ ಊದುವ ಕಹಳೆ (5)
10. ಬಲದಂತೆ ಕಾಣುವ ಒಂದು ಲೋಹ (2)
12. ನೀರಿನ ಹಬೆ (2)
13. ಮೂರಕ್ಷರದ ಮತ್ತೊಂದು ಉಪ್ಪು (3)
14. ಅಜಾಗರೂಕತೆ ಅಥವಾ ದೋಷ (3)
15. ಎರಡಕ್ಷರದ ಪಲ್ಲಕ್ಕಿ (2)
17. ತಿರುಗಿ ಬಂದ ದೆವ್ವ, ಭೂತ ಮುಂತಾದ ದುಷ್ಟ ಶಕ್ತಿಗಳು (2)
19. ಕಾಡನ್ನು ಕಾಯುವವನು, ಕಾಪಾಡುವವನು (5)
21. ತರುವಿನ ಬಳಿ ಕಂಡ ಯುವತಿ (3)
22. ರೂಪಾಯಿಯ ನಾಲ್ಕನೆಯ ಒಂದು ಭಾಗ (3)
23. ಬಾವಿಯೊಳಗಿನ ಮಂಡೂಕ (2)
24. ಮತ್ತೊಂದು ತಟ್ಟೆ (2)

ಮೇಲಿನಿಂದಕೆಳಕ್ಕೆ:
1. ಕೆಟ್ಟದಾದ ಹವ್ಯಾಸ (4)
2. ಮತ್ತೊಂದು ಕೈಯನ್ನು ಕಟ್ಟಿಕೊಂಡಿರುವ ಮೊಸಳೆ (3)
4. ನಾರಿ, ಹೆಂಗಸು (3)
5. ನಿಂತ ಕ್ಷಣದಲ್ಲೇ ಕವನ ಬರೆಯಬಲ್ಲವನು (4)
7. ಶಕ್ತಿಯನ್ನು ಹೀಗೆಯೂ ಹೇಳಬಹುದು (3)
11. ಹೋಲಿಕೆಗೆ ಮತ್ತೊಂದು ಹೆಸರು (3)
12. ಉಪಚಾರವೂ ಆಗಬಲ್ಲ ಗೌರವ (3)
15. ಮೇಲಿನ ಉಪ್ಪರಿಗೆ (4)
16. ಗಲಾಟೆ, ಕೋಲಾಹಲ (3)
18. ಈಗಿನ ಯುಗ ತಲೆಕೆಳಗಾಗಿದೆ (4)
19. ವ್ಯಾಪಾರಿಗೆ ಮತ್ತೊಂದು ಹೆಸರು (3)
20. ಬಾಗಿಲು ಅಥವಾ ಬೀರುವಿಗೆ ಮತ್ತೊಂದು ಹೆಸರು (3)

ನಿನ್ನೆಯ ಉತ್ತರ

ಎಡದಿಂದ ಬಲಕ್ಕೆ: 1. ತಾಡನ 3. ಅವಿರತ 6. ಗೆಲ್ಲು 7. ರುಚಿ 9. ನೆನಪು 11. ಕದಡು 13. ರಮಣಿ 15. ವಿಲೋಮ 16. ಹಾವುಗೆ 18. ವಿರಸ 20. ರೇಆಸ 22. ಸೆಮೂ 24. ವಿಷ 25. ಕಸವರ 26. ಕರೀಸ

ಮೇಲಿನಿಂದ ಕೆಳಕ್ಕೆ: 1. ತಾತ್ಕಾಲಿಕ 2. ನಗೆಗೇಡು 4. ವಿಧಾನ 5. ತರು 8. ಚಿಮಣಿ 9. ನೆಚಲೋಮಾಸ 10. ಪುರ 12. ದಣಿವು 14. ಮತ್ಸರ 16. ಹಾವಸೆ 17. ಗೆರೆ 18. ವಿದೂಷಕ 19. ಸಮಂಜಸ 21. ಆರವ 23. ಮೂಕ

● ಸಿ. ರವಿಶಂಕರ ಶಾಸ್ತ್ರಿ, ದಂಬೆ

ದಿನಕ್ಕೊಂದು ಮಾಹಿತಿ

ಕಿವಿಯ ಸಂದೇಶ

ಸಂಪರ್ಕಕ್ಕೆ ವಾಟ್ಸ್ ಆ್ಯಪ್, ಫೇಸ್‌ಬುಕ್, ಮೆಸ್ಸೇಜ್‌ಗಳ ಬಗ್ಗೆ ಕೇಳಿಯೇ ಇದ್ದೇವೆ. ಅದನ್ನು ಬಿಟ್ಟರೆ ಮೊದಲಿನ ಕಾಲದಲ್ಲಿ ಮೇಘ ಸಂದೇಶ ಕೇಳಿದ್ದೇವೆ, ಪಾರಿವಾಳಗಳ ಮೂಲಕ ಸಂಪರ್ಕವೂ ಕೇಳಿದ್ದೇವೆ. ಇನ್ನೂ ಕೈಸನ್ನೆ, ಬಾಯ್‌ಸನ್ನೆ, ಕಣ್‌ಸನ್ನೆಗಳನ್ನಂತೂ ಈಗಲು ಮಾಡುತ್ತಿರುತ್ತೇವೆ. ಕೆಲವೊಮ್ಮೆ ಯಾರಿಗೂ ಗೊತ್ತಾಗಬಾರದು ಅಂತ ಕೈಸನ್ನೆ, ಕಣ್ ಸನ್ನೆ ಇರುತ್ತದೆ. ಆದರೆ, ಕಿವಿ ಸನ್ನೆಯ ಮೂಲಕ ಸಂಪರ್ಕ ಮಾಡುವುದನ್ನು ಎಂದಾದರೂ ಕೇಳಿದ್ದೀರಾ? ಆಶ್ಚರ್ಯಪಟ್ಕೋಬೇಡಿ, ಕಿವಿಸನ್ನೆ ಮಾಡೋದು ಮನುಷರಲ್ಲ, ಬದಲಿಗೆ ಹುಲಿಗಳು. ಹುಲಿಗಳ ಘರ್ಜನೆಯ ಬಗ್ಗೆ ಕೇಳಿದ್ದವರಿಗೆ, ಅದರ ಸಂಪರ್ಕ ಸಾಧನ ಆಶ್ಚರ್ಯವನ್ನೂ ಕೊಡಬಹುದು. ಹುಲಿಯ ಕಿವಿಗಳ ಹಿಂದೆ ಬಿಳಿಯ ಮಚ್ಚೆ ಇರುತ್ತಲ್ಲ, ಅದೇ ಸಂಪರ್ಕಕ್ಕೆ ಬಳಕೆಯಾಗುವುದು. ಅದು ಹುಲಿ ಮರಿಗಳಿಗೆ ಜ್ಞಾನೋದಯದ ರೀತಿಯಲ್ಲಿಯೂ ಕೆಲಸಮಾಡುತ್ತದೆ. ತಾಯಿ ಹುಲಿಗೆ ಆಪತ್ತಿನ ಅರಿವಾದಾಗ ಅದು ತನ್ನ ಕಿವಿಗಳನು ಸಮವಾಗಿ ಮಾಡುತ್ತದೆ. ಅದನ್ನು ಆಪತ್ತೆಂದು ತಿಳಿದುಕೊಳ್ಳುವ ಹುಲಿಮರಿಗಳು, ಬಚ್ಚಿಟ್ಟುಕೊಳ್ಳುವದನ್ನು ಮಾಡುತ್ತದೆ. ಅದರ ಜತೆಗೆ ಇನ್ನೂ ಹಲವು ರೀತಿಯಲ್ಲಿ ಹುಲಿಗಳು ತನ್ನ ಕಿವಿಯ ಮುಖಾಂತರ ಸಂಪರ್ಕವನ್ನು ಸಾಧಿಸುತ್ತದೆ.

ಪುಸ್ತಕ ಲೋಕ

ಶಾಮಣ್ಣ ಮತ್ತೆ ಕುಳಿತು ಮೊದಲಿನಿಂದ ಹೇಳಿದ ಕತೆ

ಈ ಕೃತಿಯು ಕುಂ. ವೀರಭದ್ರಪ್ಪ ಅವರ ರಾಜ್ಯ ಸಾಹಿತ್ಯ ಅಕಾಡೆಮಿ ಬಹುಮಾನ ಪಡೆದ ಕಾದಂಬರಿಯಾಗಿದೆ. ಇದು ಮಹಾಕಾವ್ಯದ ರಚನಾ ವಿನ್ಯಾಸ ಹಾಗು ಆಶಯಗಳನ್ನು ಒಳಗೊಂಡಿರುವ ಆಧುನಿಕ ಕಾದಂಬರಿ. ಇಲ್ಲಿ ಬಳಕೆಯಾಗಿರುವ ಗಂಭೀರ, ಪ್ರೌಢ, ಅಲಂಕಾರಯುಕ್ತ ಭಾಷೆಗೆ ನಿರ್ದಿಷ್ಟ ಉದ್ದೇಶವಿದೆ. ಇದು ಲೇಖಕರ ಪಾಂಡಿತ್ಯ ಪ್ರದರ್ಶನವಲ್ಲ, ಕಥೆಯ ಬಹಿರಾಡಂಬರದ ಅಂತರ್ಯದಲ್ಲಿ ಹುದುಗಿರುವ ಹುಸಿಯನ್ನು ತೀಕ್ಷ್ಣವಾದ ವ್ಯಂಗ್ಯ. ವಿಡಂಬನೆಗಳಿಗೆ ಗುರಿ ಮಾಡುವುದೆ ಈ ಶೈಲಿಯ ಉದ್ದೇಶ. ಆದ್ದರಿಂದ ಇದೊಂದು ಅಣುಕು ಮಹಾಕಾವ್ಯದಂತಿದೆ. ದುರಂತ ಪ್ರಹಸನವೇ ಮನುಷ್ಯ ಜೀವನದ ನಿಜವಾದ ಸ್ವರೂಪವೆಂಬುದನ್ನು ಇಲ್ಲಿ ಪಾತ್ರಗಳ ಮೂಲಕ ಪ್ರತಿಪಾದಿಸಲಾಗಿದೆ. ಕತೆಗಾರ ಕುಂವೀ ಈ ಬೃಹತ್ ಕಾದಂಬರಿರಿ ಮೂಲಕ ಒಂದು ಘಟ್ಟ ಮುಟ್ಟಿದ್ದಾರೆ. ಪ್ರಯೋಗಶೀಲ ನಿರೂಪಣೆ ದೃಷ್ಟಿಯಿಂದ ಶಾಮಣ್ಣ ಒಂದು ಅಸಾಧಾರಣ ಕೃತಿ.

ದಿನಕ್ಕೊಂದು ಪ್ರಶ್ನೆ

● ಎಲ್.ಪಿ.ಕುಲಕರ್ಣಿ, ಬಾದಾಮಿ

● ಭಾರತದ ಮೊದಲ ಸೋಮಾರಿ ಕರಡಿ(ಸ್ಲಾತ್ ಬೇರ್) ರಕ್ಷಣಾ ಕೇಂದ್ರವು ಯಾವ ರಾಜ್ಯದಲ್ಲಿದೆ?

- ಎ. ಕರ್ನಾಟಕ.
- ಬಿ. ಮಿಜೋರಾಮ್.
- ಸಿ. ಒಡಿಶಾ.
- ಡಿ. ಪಂಜಾಬ್.

ಉತ್ತರ: ಎ. ಕರ್ನಾಟಕ.

ಮಾಹಿತಿ

ಕರ್ನಾಟಕದ ಬನ್ನೇರುಘಟ್ಟ ರಾಷ್ಟ್ರೀಯ ಉದ್ಯಾನವನದಲ್ಲಿ 2000 ರಲ್ಲಿ ಪ್ರಾರಂಭವಾದ ಸ್ಲಾತ್ ಬೇರ್ ಪಾರುಗಾಣಿಕಾ ಕೇಂದ್ರವು ಜಾಗತಿಕವಾಗಿ ಎರಡನೇ ಅತಿ ದೊಡ್ಡ ಸ್ಲಾತ್ ಕರಡಿ ರಕ್ಷಣಾ ಕೇಂದ್ರವೆಂದು ಗುರುತಿಸಲ್ಪಟ್ಟಿದೆ. ಇದು ತನ್ನ 18 ನೇ ವರ್ಷದ ಕಾರ್ಯಾಚರಣೆಯನ್ನು ಗುರುತಿಸಿದೆ. ಸ್ಲಾತ್ ಕರಡಿ ಪುನರ್ವಸತಿ ಕೇಂದ್ರವು ಭಾರತದಲ್ಲಿ ನೃತ್ಯ ಮಾಡುವ ಕರಡಿಗಳ ಪಾಲಕರಿಂದ ಸೋಮಾರಿ ಕರಡಿಗಳನ್ನು ರಕ್ಷಿಸುವ ಮೊದಲ ಕಾರ್ಯಕಾರಿ ಕೇಂದ್ರವಾಗಿದೆ.

ಅಭಿಮಾನಿಗಳು ಅಭಿಮಾನ ಪಡುವಂತಿರಲಿ!

ರವಿಕುಮಾರ್ ಜೀ.ಬಿ.

ಚಪ್ಪಾಳೆ, ಪ್ರೋತ್ಸಾಹ, ಶಿಳ್ಳೆಗಳು ಗೆಲುವಿಗೆ ಟಾನಿಕ್ ಇದ್ದಂತೆ. ಸೋತು ಕೈ ಚೆಲ್ಲಲಾರೆ ಎಂಬ ಕಿಚ್ಚು ಹಚ್ಚಬಲ್ಲ ಸಾಮರ್ಥ್ಯವನ್ನು, ಸಾಮಾನ್ಯನೊಬ್ಬನನ್ನು ಸಾಧಕನನ್ನಾಗಿ ಮಾಡಬಲ್ಲ ಶಕ್ತಿ ಚಪ್ಪಾಳೆಯ ಶಬ್ದಕ್ಕಿದೆ.

ಚಪ್ಪಾಳೆ ಹೊಡೆದವರಲ್ಲ ಅಭಿಮಾನಿಗಳು ಆಗಲಾರರು. ಆದರೆ, ಅಭಿಮಾನಿ ಆದ ಎಲ್ಲರೂ ತಮ್ಮ ನೆಚ್ಚಿನ 'ಹಿರೋ'ಗಳನ್ನು ಹೊತ್ತು ಮೆರೆಯುತ್ತಾರೆ. ತಮ್ಮ ಬದುಕಿನ ಸವಾಲು, ನೋವು, ನಲಿವು, ಜಂಜಾಟ ಇವೆಲ್ಲವನ್ನೂ ಮರೆತು ತಾನೊಬ್ಬ ಅಭಿಮಾನಿ ಯೆಂಬ ಹೆಮ್ಮೆ, ಹೆಗ್ಗಳಿಕೆಯನ್ನೇ ಜೀವಿಸುತ್ತಾರೆ, ಆನಂದಿಸುತ್ತಾರೆ. ಅದರಲ್ಲೂ ಕ್ರೀಡೆ, ನೃತ್ಯ,ಸಂಗೀತ, ಸಿನಿಮಾ ರಂಗಕ್ಕೆ ಅಭಿಮಾನಿಗಳ ಕೃಪಾಕಟಾಕ್ಷ ಹೆಚ್ಚೇ ಇದೆ.

ತಮಗಾಗದ ಎಷ್ಟೋ ಅಸಾಧ್ಯಗಳನ್ನು ತೆರೆಯ ಮೇಲೆ ಮಾಡಿ ತೋರಿಸುವ, ಹಾಡು, ಫೈಟ್, ಸ್ಟಂಟ್ ಮೂಲಕ ತಮ್ಮನ್ನು ರಂಜಿಸುವ ಸಿನಿಮಾ ನಾಯಕನಟರನ್ನೇ ತಮ್ಮ ಬದುಕಿನ ಹೀರೋಗಳನ್ನಾಗಿ ಮಾಡಿಕೊಳ್ಳುತ್ತಾರೆ.

ಹೀಗಾಗಿ, ಬೆಳ್ಳಿ ಪರದೆಯಲ್ಲಿ ಅಬ್ಬರಿಸುವ ಹೀರೋಗಳು ತಮ್ಮ ನಿಜ ಬದುಕಿನಲ್ಲಿ ಆದರ್ಶವಾಗಿ ಇರಲೇಬೇಕು, ಇದು ಅನಿವಾರ್ಯ ಮತ್ತು ಅವಶ್ಯ.

ಅಭಿಮಾನದ ಅನ್ವರ್ಥ, ನಮ್ಮ ವೀರಕಪುತ್ರ:

ಅತ್ಯುತ್ಸಾಹದ ರೂಪದ ಅಪಸವ್ಯಗಳ ನಡುವೆ ಕೆಸರಿನ ನಡುವಿನ ತಾವರೆಯಂತೆ ನಮ್ಮ ನಡುವೆಯೇ ಇರುವ ವೀರಕಪುತ್ರ ಶ್ರೀನಿವಾಸ ಅವರ ಬಗ್ಗೆ ಪ್ರಸ್ತಾಪ ಮಾಡಲೇಬೇಕು.

ವೀರಕಪುತ್ರ ಎಂಬ ಚೆಂದದ ಊರಿನವರಾದ ಶ್ರೀನಿವಾಸ್ ಅವರ ಹೆಸರನ್ನು 'ವೀರಕಪುತ್ರ ಶ್ರೀನಿವಾಸ್' ಎಂದಾಗ ಮಾತ್ರ ಪರಿಪೂರ್ಣ ಎನಿಸುವಂತೆ ನಮ್ಮೆಲ್ಲರ ಮನದಲ್ಲಿ ವೀಶ್ರೀ ವಿರಾಜಮಾನರು.

ಸಾಹಸಸಿಂಹ ಎಂದೇ ಕನ್ನಡ ನಾಡಿನ ಮನೆ - ಮಾನಸದಲ್ಲಿ ಅಜರಾಮರಾಗಿರುವ ವಿಷ್ಣುವರ್ಧನ್ ಅವರ ಅಸಂಖ್ಯ ಅಭಿಮಾನಿಗಳಲ್ಲಿ ವೀರಕಪುತ್ರ ಶ್ರೀನಿವಾಸ್ ಕೂಡ ಒಬ್ಬರು. ಅಭಿಮಾನಿ ಎಂದರೆ ಹೇಗಿರಬೇಕು, ಹೇಗೆ ಇರಬಾರದು ಎಂಬುದನ್ನು ಶ್ರೀನಿವಾಸ್ ಅವರನ್ನೊಮ್ಮೆ ನೋಡಿದರೆ ಸಾಕು.

ತೆರೆಯ ಮೇಲೆನ ಹಾಗೂ ನಿಜ ಬದುಕಿನ ಹೀರೋ ಒಬ್ಬರ ಅಭಿಮಾನಿಗೆ ಅಭಿಮಾನಿಗಳಿರುವ ಏಕೈಕ ಮತ್ತು ಪ್ರಥಮ ನಿದರ್ಶನ ಎಂದರೆ ವೀರಕಪುತ್ರ ಶ್ರೀನಿವಾಸ್ ಎಂದರೆ ಖಂಡಿತ ಹೊಗಳಿಕೆಯಲ್ಲ, ಇದೊಂದು ಹೆಗ್ಗಳಿಕೆ.

ಇಂದಿನ ಕಾಲದಲ್ಲಿ ಸ್ಟಾರ್‌ವಾರ್, ಬೇರೆ ನಟರನ್ನು ಹೀಗಳುವುದು, ಅವರನ್ನು ಹಿಗ್ಗಾಮುಗ್ಗಾ ಬೈಯ್ಯುವುದು. ತಮ್ಮ ಏನೇ ಮಾಡಿದರೂ ಅದನ್ನ ಸಮರ್ಥಿಸಿಕೊಳ್ಳುವುದು. ಯಾರಾದರೂ 'ನೆಚ್ಚಿನ ನಟ' ಮಾಡಿದ್ದನ್ನು ತಪ್ಪು ಎಂದು ಹೇಳಿದರೆ, ಅವರನ್ನೇ ತರಾಟೆಗೆ ತೆಗೆದುಕೊಳ್ಳುವ ರೀತಿಯಲ್ಲಿ ಅಬಿಮಾನಿಗಳಿದ್ದಾರೆ. ಅಭಿಮಾನ ಎಂದರೆ, ಬೇರೆಯವರಿಗೆ ತೊಂದರೆ ಕೊಡುವುದೇ ಎಂದೂ ಹೇಳಿಕೊಂಡು ಹೋಗುವವರಿದ್ದಾರೆ.

ಆದರೆ, ವೀರಕಪುತ್ರ ಶ್ರೀನಿವಾಸ್ ಅವರು ಈ ರೀತಿಯಾದ ಅಪಸ್ಯವಗಳಿಗೆ ಎಡೆಮಾಡಿಕೊಡದೇ, ಸ್ವತಃ ವಿಷ್ಣವರ್ಧನ್ ಅವರ ಅತೀ ದೊಡ್ಡ ಅಭಿಮಾನಿಯಾಗಿ, ವಿಷ್ಣು ನಮ್ಮ ನಡುವೆ ಇಲ್ಲದಿದ್ದರೂ. ಅವರನ್ನು ನೆಪಿನಲ್ಲಿಡಿಸುವಂತಹ ಹಲವಾರು ಕಾರ್ಯಕ್ರಮಗಳನ್ನು ಮಾಡಿಕೊಂಡು, ವಿಷ್ಣುವರ್ಧನ್ ಅಭಿಮಾನಿಗಳ ನಾಯಕತ್ವವನ್ನು ಹೊತ್ತುಕೊಂಡು ನಡೆಯುತ್ತಿರುವುದು ಅಭಿನಂದನಾರ್ಹ.

ಬಿಡಿಸಲಾಗದ ಬಂಧ



ವಿಜಯಕುಮಾರ್ ಕಟ್ಟೆ

ಮೋಹನ ಚಿಕ್ಕ ಹುಡುಗ. ಐದನೆಯ ತರಗತಿಯಲ್ಲಿ ಓದುತ್ತಿದ್ದ. ಅವತ್ತು ಬೆಳಗ್ಗೆ ಊರಿನಿಂದ ಫೋನ್ ಬಂತು. ತಾತಾ ತುಂಬಾ ಸೀರಿಯಸ್ ಆಗಿದ್ದಾರೆಂದು. ತಕ್ಷಣ ಎಲ್ಲರು ಊರಿಗೆ ಹೊರಟರು. ಊರು ತಲುಪಿದಾಗ ಹನ್ನೆರಡು ಆಗಿತ್ತು. ಮೋಹನನ ಅಜ್ಜಿ ಬಾಗಿಲಲ್ಲೇ ಕಾಯುತ್ತಿದ್ದರು. ಆಸ್ಪತ್ರೆಗೆ ಹೋಗೋಣ ಎಂದರು ಮೋಹನನ ತಂದೆ ಮತ್ತು ಚಿಕ್ಕಪ್ಪ. ಆದರೆ ಅಜ್ಜಿ ಒಪ್ಪಲಿಲ್ಲ. ಬೇಡ ಸದ್ಯಕ್ಕೆ ಮನೆಯಲ್ಲೇ ಇರಲಿ. ಹೇಗಿದ್ದರೂ ಡಾಕ್ಟರ್ ಮಾತ್ರೆ ಕೊಟ್ಟಿದ್ದಾರೆ. ಆಮೇಲೆ ಬೇಕಿದ್ರೆ, ಹೋಗೋಣ ಎಂದಾಗ ಎಲ್ಲರು ಸುಮ್ಮನಾಗಬೇಕಾಯಿತು.

ತಾತಾ ಮಲಗಿದ್ದನ್ನು ಕಂಡು ಮೋಹನನಿಗೆ ಕರುಳು ಚುರುಕ್ ಎಂದಿತು. ತಾತನ ಪಕ್ಕದಲ್ಲಿಯೇ ಕುಳಿತು ತಾತನ ಕೆನ್ನೆಗೆ ಮುತ್ತು ಕೊಟ್ಟ, ಇದ್ದಕ್ಕಿದ್ದಂತೆಯೇ ಯಾರೋ ಮುತ್ತಿಕ್ಕಿದ್ದನ್ನು ನೋಡಿದ ತಾತನಿಗೆ ಮೊಮ್ಮಗನನ್ನು ನೋಡಿ ಸಂತೋಷದಿಂದ ಕಣ್ಣು ತುಂಬಿ ಬಂತು. ಹಾಗೇ ಮೊಮ್ಮಗನನ್ನು ಹತ್ತಿರ ಕರೆದು ಮುದ್ದಾಡಿ ತಮ್ಮ ಪಕ್ಕದಲ್ಲಿಯೇ ಮಲಗಿಸಿಕೊಂಡರು.

ಮಾತಾಡಲು ಆಗದೆ ಸುಸ್ತಾಗಿದ್ದ ತಾತ, ಅದನ್ನು ನೋಡಿ ಮೌನವಾಗಿದ್ದ ಮೊಮ್ಮಗ ಇಬ್ಬರು ಪರಸ್ಪರ ಒಬ್ಬರೊನಬ್ಬರು ನೋಡುತ್ತಾ ತಮ್ಮಿಬ್ಬರ ಕಳೆದ ಅಮೂಲ್ಯವಾದ ಸಮಯವನ್ನು ನೆನೆಪಿಸಿ ಕೊಳ್ಳುತ್ತಿದ್ದರು. ಹಠ ಮಾಡಿ ಅಪ್ಪ, ಅಮ್ಮನನ್ನು ಒಪ್ಪಿಸಿ ತಾತನ ಮನೆಗೆ ಓಡಿಬರುತ್ತಿದ್ದ ಮೊಮ್ಮಗ. ದಿನವಿಡೀ ಆಟ ಆಡಿ ಕುಣಿದು ಕುಪ್ಪಳಿಸುತ್ತಾ ತಾತನ ಬೆನ್ನ ಮೇಲೆ ಕುಳಿತು ಇಡೀ ಜಮೀನೆಲ್ಲ ಸುತ್ತು ಹಾಕಿ, ತಾತ ಪ್ರೀತಿಯಿಂದ ಕೊಡುತ್ತಿದ್ದ ಸೀಬೆಹಣ್ಣು, ಹುಣಸೆಹಣ್ಣು, ಕಳ್ಳೇಕಾಯಿ, ನೆಲ್ಲಿಕಾಯಿ, ಮಾವಿನ ಹಣ್ಣು ಎಲ್ಲ ತಿಂದು ರಾತ್ರಿ ತಾತನ ಪಕ್ಕ ಮಲಗಿ ಅವರು ಹೇಳುವ ಕಥೆಗಳನ್ನು ಕೇಳುತ್ತ ನಿದ್ದೆ ಹೋಗುತ್ತಿದ್ದ ಆ ದಿನಗಳು ಪುಟ್ಟ ಮೋಹನನ ಕಣ್ಣ ಮುಂದೆ ಬಂದರೆ , ಹಳ್ಳಿಯಲ್ಲಿ ಬೆಳೆದು ಪಟ್ಟಣ ಸೇರಿದ ಇಬ್ಬರು ಮಕ್ಕಳು ಈಗ ಹಳ್ಳಿ ಎಂದರೆ ತಾತ್ಸಾರ ತೋರುವ ಮಕ್ಕಳು. ಆದರೆ ಈ ಮುದ್ದು ಮೊಮ್ಮಗ ಹಳ್ಳಿ ಅಂದರೆ ಅದೇನು ಪ್ರೀತಿ, ಅಜ್ಜಿ, ತಾತ ಎಂದರೆ ಪ್ರಾಣ. ನಾನು ಸತ್ತರೂ ಇವನು ಹೀಗೆ ಇಲ್ಲಿಗೆ ಬಂದು ಅಜ್ಜಿಯ ಜೊತೆ ಖುಷಿಯಾಗಿರಲಿ ಎಂದು ಪ್ರಾರ್ಥಿಸುತ್ತಿರುವ ತಾತ. ಹೀಗೆ ಯಾವಾಗ ಇಬ್ಬರು ಮಲಗಿದರೋ ಗೊತ್ತೇ ಇಲ್ಲ. ಏಳೋ ಮೋಹನ ಈ ಕಡೆ ಬಾರೋ ತಾತ ಇನ್ನು ಇಲ್ಲ. ಅವರು ದೇವರ ಹತ್ತಿರ ಹೋಗಿಬಿಟ್ಟರು ಅಂದಾಗಲೇ ಅವನಿಗೆ ಎಚ್ಚರ.ಸಾವಿನ ಬಗ್ಗೆ ತಿಳಿಯದ ಮೋಹನ ಇನ್ನು ಮೇಲೆ ತಾತಇಲದಿದ್ದರೆ ಅಜ್ಜಿಯ ಜೊತೆಗೆ ಆಡುತ್ತೇನೆ. ಹಳ್ಳಿಗಂತೂ ಆಗಾಗ ಬಂದೇ ಬರುತ್ತೇನೆ. ತಾತನ ಕೊನೆಯ ಆಸೆಯಂತೆಯೇ ಇತ್ತು ಪುಟ್ಟ ಬಾಲಕನ ಯೋಚನೆ. ವಯಸ್ಸಾದ ತಂದೆ ತಾಯಿಯರು ತಮ್ಮ ಮಕ್ಕಳಿಂದ ದುಡ್ಡು, ಕಾಸು, ಆಸ್ತಿ, ಅಂತಸ್ತನ್ನು ಬಯಸುವುದಿಲ್ಲ. ಮಕ್ಕಳು ಮೊಮ್ಮಕ್ಕಳು ಅವರನ್ನು ಚೆನ್ನಾಗಿ ನೋಡಿಕೊಳ್ಳಬೇಕು ಎಂದು ಬಯಸುತ್ತಾರೆ ಅಷ್ಟೇ.

ಸಮಾಚಾರ ಸಣ್ಣದಲ್ಲ

ದ್ರಾವಿಡ್‌ಗಿಂತ ಭಿನ್ನ ಶೈಲಿಯ ಗಂಭೀರ್

ಚೆನ್ನೈ: ಭಾರತ ಕ್ರಿಕೆಟ್ ತಂಡದ ಮುಖ್ಯ ಕೋಚ್ ಗೌತಮ್ ಗಂಭೀರ್ ಅವರ ಶೈಲಿಯು ಈ ಹಿಂದಿನ ಕೋಚ್ ರಾಹುಲ್ ದ್ರಾವಿಡ್ ಅವರಿಗಿಂತ ಭಿನ್ನವಾಗಿದೆ. ಆದರೆ, ಹೊಸ ತರಬೇತಿ ತಂಡದ ಜೊತೆ ಉತ್ತಮ ಸಂಬಂಧ ಹೊಂದಿದ್ದೇನೆ ಎಂದು ನಾಯಕ ರೋಹಿತ್ ಶರ್ಮಾ ಹೇಳಿದ್ದಾರೆ. ಬುಧವಾರದಿಂದ ಬಾಂಗ್ಲಾದೇಶದ ವಿರುದ್ಧ ಆರಂಭವಾಗಲಿರುವ ಮೊದಲ ಟೆಸ್ಟ್ ಪಂದ್ಯಕ್ಕೂ ಮುನ್ನ ಪತ್ರಿಕಾಗೋಷ್ಠಿ ನಡೆಸಿದ ಅವರು, ಖಂಡಿತವಾಗಿ ರಾಹುಲ್ ಭಾಯ್, ವಿಕ್ರಮ್ ರಾಥೋಡ್ ಮತ್ತು ಪಾರಸ್ ಮಹಾಂಬ್ರೆ ತಂಡವು ಭಿನ್ನ ತಂಡವಾಗಿದೆ. ಹೊಸ ತರಬೇತಿ ತಂಡವು ಭಿನ್ನ ದೃಷ್ಟಿಕೋನವನ್ನು ತರುತ್ತದೆ ಎಂಬುದನ್ನು ನಾವು ಅರ್ಥಮಾಡಿಕೊಳ್ಳಬೇಕು ಎಂದಿದ್ದಾರೆ. ಹೊಸ ತರಬೇತಿ ತಂಡವು ವಿಭಿನ್ನ ಶೈಲಿಯನ್ನು ಹೊಂದಿದೆ. ಆದರೆ, ಅದು ಸಮಸ್ಯೆಯಲ್ಲ. ಪರಸ್ಪರ ಅರ್ಥ ಮಾಡಿಕೊಳ್ಳುವುದು ಮುಖ್ಯ. ಗಂಭೀರ್ ಅವರ ಜೊತೆಯೂ ಉತ್ತಮ ಬಾಂಧವ್ಯವಿದೆ ಎಂದಿದ್ದಾರೆ. ಭಾರತ ಕ್ರಿಕೆಟ್ ತಂಡದ ಮುಖ್ಯ ಕೋಚ್ ಆಗಿ ಜುಲೈನಲ್ಲಿ ಗಂಭೀರ್ ಅಧಿಕಾರ ವಹಿಸಿಕೊಂಡರು. ಅವರ ಅಧಿಕಾರ ಆರಂಭವಾದ ಬಳಿಕ ಭಾರತ ತಂಡ ಮೊದಲ ಟೆಸ್ಟ್ ಪಂದ್ಯವನ್ನು ಆಡುತ್ತಿದೆ.

ಡೇವಿಸ್ ಕಪ್: ಸ್ವೀಡನ್ ವಿರುದ್ಧ ಭಾರತಕ್ಕೆ ಸೋಲು

ಸ್ಟಾಕ್‌ಹೋಮ್: ಭಾರತ ತಂಡವು ಡೇವಿಸ್ ಕಪ್ ವಿಶ್ವ ಗುಂಪು ಒಂದರ ಪಂದ್ಯದಲ್ಲಿ ಸ್ವೀಡನ್ ವಿರುದ್ಧ 0-4ರಿಂದ ಪರಾಭವಗೊಂಡಿತು. ಇದು ಭಾರತ ತಂಡಕ್ಕೆ ಸ್ವೀಡನ್ ವಿರುದ್ಧ ಆರನೇ ಸೋಲಾಗಿದೆ. ಶನಿವಾರ ನಡೆದ ಮೊದಲೆರಡು ಸಿಂಗಲ್ಸ್ ಪಂದ್ಯಗಳಲ್ಲಿ ಶ್ರೀರಾಮ್ ಬಾಲಾಜಿ ಮತ್ತು ರಾಮ್‌ಕುಮಾರ್ ರಾಮನಾಥನ್ ಅವರು ನೇರ ಸೆಟ್‌ಗಳಲ್ಲಿ ಎದುರಾಳಿಗಳಿಗೆ ಮಣಿದಿದ್ದರು. ಭಾನುವಾರ ನಡೆದ ಡಬಲ್ಸ್‌ನಲ್ಲೂ ರಾಮ್‌ಕುಮಾರ್ ಮತ್ತು ಬಾಲಾಜಿ ನಿರಾಸೆ ಅನುಭವಿಸಿದರು. ಈ ಜೋಡಿ 3-6, 4-6ರಿಂದ ಆ್ಯಂಡ್ರೆ ಗೊರಾನ್ಸನ್ ಮತ್ತು ಫಿಲಿಪ್ ಬರ್ಗೆವ್ ಅವರಿಗೆ ಶರಣಾಯಿತು. ನಂತರ ನಡೆದ ರಿವರ್ಸ್ ಸಿಂಗಲ್ಸ್ ಔಪಚಾರಿಕವಾಗಿತ್ತು. ಅದರಲ್ಲಿ ರಾಷ್ಟ್ರೀಯ ಮಾಜಿ ಚಾಂಪಿಯನ್ ಸಿದ್ಧಾರ್ಥ್ ಅವರನ್ನು ಕಣಕ್ಕೆ ಇಳಿದರು. ಅವರು 2-6, 2-6ರಿಂದ ಎಲಿಯಾಸ್ ಯೀಮರ್ ವಿರುದ್ಧ ಸೋತರು.

ವಿರಾಮ
ಪ್ರತಿ ಭಾನುವಾರ

ಏಷ್ಯನ್ ಹಾಕಿ ಚಾಂಪಿಯನ್‌ನಲ್ಲಿ ಸೋಲದ ಭಾರತ | ಚೀನಾದ ವಿರುದ್ಧವೂ ಅಜೇಯ

5ನೇ ಬಾರಿಯೂ ಭಾರತ ಚಾಂಪಿಯನ್

ಬೆಂಗಳೂರು: ಚೀನಾದಲ್ಲಿ ನಡೆದ ಏಷ್ಯನ್ ಚಾಂಪಿಯನ್ಸ್ ಟ್ರೋಫಿ ಹಾಕಿ ಫೈನಲ್ ಪಂದ್ಯದಲ್ಲಿ ಆತಿಥೇಯ ಚೀನಾ ತಂಡವನ್ನು 1-0 ಗೋಲುಗಳಿಂದ ಮಣಿಸಿದ ಹರ್ಮನ್ ಪ್ರೀತ್ ಸಿಂಗ್ ನಾಯಕತ್ವದ ಭಾರತ ಹಾಕಿ ತಂಡ ದಾಖಲೆಯ 5ನೇ ಬಾರಿಗೆ ಏಷ್ಯನ್ ಚಾಂಪಿಯನ್ಸ್ ಕಿರೀಟವನ್ನು ಮುಡಿಗೇರಿಸಿಕೊಂಡಿದೆ. ತೀವ್ರ ರೋಚಕತೆಯಿಂದ ಕೂಡಿದ ಈ ಪಂದ್ಯದಲ್ಲಿ ಉಭಯ ತಂಡಗಳಿಂದ ಸಮಬಲದ ಹೋರಾಟ ಕಂಡುಬಂತು. ಹೀಗಾಗಿಯೇ ಮೊದಲ ಮೂರು ಕ್ವಾರ್ಟರ್‌ಗಳಲ್ಲಿ ಯಾವ ತಂಡಕ್ಕೂ ಗೋಲು ದಾಖಲಿಸಲು ಸಾಧ್ಯವಾಗಲಿಲ್ಲ. ಆದರೆ ನಾಲ್ಕನೇ ಕ್ವಾರ್ಟರ್‌ನಲ್ಲಿ ಗೋಲು ದಾಖಲಿಸುವಲ್ಲಿ ಯಶಸ್ವಿಯಾದ ಭಾರತ ತನ್ನ ಚಾಂಪಿಯನ್ ಪಟ್ಟವನ್ನು ಹಾಗೆಯೇ ಉಳಿಸಿಕೊಳ್ಳುವಲ್ಲಿ ಯಶಸ್ವಿಯಾಯಿತು.

ಟೂರ್ನಿಯ ಮೊದಲ ಪಂದ್ಯದಲ್ಲಿ ಇದೇ ಚೀನಾವನ್ನು 3-0 ಗೋಲುಗಳಿಂದ ಸೋಲಿಸಿದ್ದ ಭಾರತ ತಂಡ, ಫೈನಲ್ ಸೇರಿದಂತೆ ಸತತ 7 ಪಂದ್ಯಗಳನ್ನು ಗೆದ್ದು ಪ್ರಶಸ್ತಿಯನ್ನು ವಶಪಡಿಸಿಕೊಂಡಿದೆ. ಅಂದರೆ ಟೀಂ ಇಂಡಿಯಾ ಈ ಟೂರ್ನಿಯಲ್ಲಿ ಒಂದೇ ಒಂದು ಪಂದ್ಯವನ್ನು ಸೋತಿಲ್ಲ ಅಥವಾ ಡ್ರಾ ಮಾಡಿಕೊಂಡಿಲ್ಲ. ಆದರೆ, ಇಂದು ನಡೆದ ಫೈನಲ್ ಪಂದ್ಯದಲ್ಲಿ ಟೀಂ ಇಂಡಿಯಾ ಗೆಲ್ಲಲು ತೀವ್ರ ಹೋರಾಟ ನಡೆಸಬೇಕಾಯಿತು. ಇಡೀ ಟೂರ್ನಿಯಲ್ಲಿ ಮೊದಲ ಬಾರಿಗೆ ಭಾರತ ತಂಡ ಆರಂಭದಲ್ಲಿ ಗೋಲು ಗಳಿಸಲು ವಿಫಲವಾಯಿತು. ಅಲ್ಲದೆ ಎದುರಾಳಿ ತಂಡದ ಗೋಲ್‌ಪೋಸ್ಟ್ ಅನ್ನು ಭೇದಿಸಲು ಕೊನೆಯ 10 ನಿಮಿಷಗಳವರೆಗೆ ಕಾಯಬೇಕಾಯಿತು.

ಭಾರತಕ್ಕೆ ತೀವ್ರ ಪೈಪೋಟಿ: ವಾಸ್ತವವಾಗಿ ಟೀಂ ಇಂಡಿಯಾವನ್ನು ಮೊದಲಿನಿಂದಲೂ ಪ್ರಶಸ್ತಿಗಾಗಿ ಸ್ಪರ್ಧಿ ಎಂದು ಪರಿಗಣಿಸಲಾಗಿತ್ತು. ಇದಕ್ಕೆ ಪೂರಕವಾಗಿ ಲೀಗ್ ಹಂತ ಮತ್ತು ಸೆಮಿಫೈನಲ್‌ನಲ್ಲಿ ತಂಡವು ತೋರಿದ ಪ್ರದರ್ಶನವನ್ನು ಪರಿಗಣಿಸಿದರೆ, ಫೈನಲ್‌ನಲ್ಲೂ ಸುಲಭ ಜಯವನ್ನು ನಿರೀಕ್ಷಿಸಲಾಗಿತ್ತು. ಆದರೆ, ಇದಕ್ಕೆ ಅವಕಾಶ ನೀಡದ ಚೀನಾ ಈ ಟೂರ್ನಿಯ ಪಂದ್ಯಗಳಲ್ಲಿ ನಿರೀಕ್ಷೆಗಿಂತ ಉತ್ತಮ ಪ್ರದರ್ಶನ ನೀಡಿತು. ಸೆಮಿಫೈನಲ್‌ನಲ್ಲಿ ಪೆನಾಲ್ಟಿ ಶೂಟೌಟ್‌ನಲ್ಲಿ 2-0 ಗೋಲುಗಳಿಂದ ಪಾಕಿಸ್ತಾನವನ್ನು ಮಣಿಸಿದ್ದ ಚೀನಾ, ಫೈನಲ್‌ನಲ್ಲಿಯೂ ಟೀಂ ಇಂಡಿಯಾಕ್ಕೆ ಕಠಿಣ ಹೋರಾಟ ನೀಡಿತು. ಹೀಗಾಗಿಯೇ ಪಂದ್ಯದ 50 ನಿಮಿಷಗಳ ಕಾಲ ಭಾರತಕ್ಕೆ ಯಾವುದೇ ಗೋಲು ಗಳಿಸಲು ಅವಕಾಶ ನೀಡಲಿಲ್ಲ.

- ಚೀನಾದ ವಿರುದ್ಧ 1-0 ನಲ್ಲಿ ಗೆದ್ದ ಭಾರತ
- ತೀವ್ರ ಹಣಾಹಣಿಯಿಂದ ನಡೆದ ಪಂದ್ಯ
- ಸತತ 7ನೇ ಪಂದ್ಯವನ್ನು ಗೆದ್ದ ಭಾರತ ತಂಡ
- ಮೊದಲ 50 ನಿಮಿಷಗಳ ಕಾಲ ಯಾವುದೇ ಗೋಲು ಆಗಿರಲಿಲ್ಲ
- 51ನೇ ನಿಮಿಷಕ್ಕೆ ಅಭಿಷೇಕ್ ನೀಡಿದ್ದ ಪಾಸ್ ಗುಜ್ರಾಲ್ ಅವರಿಗೆ ಗೋಲಾಯಿತು.

ಈ ಪಂದ್ಯವೂ ಪೆನಾಲ್ಟಿ ಶೂಟೌಟ್‌ನತ್ತ ಸಾಗುತ್ತಿರುವಂತೆ ತೋರಿತು. ಆದರೆ 51 ನೇ ನಿಮಿಷದಲ್ಲಿ 'ವಾಲ್ ಆಫ್ ಚೀನಾ' ಅಂತಿಮವಾಗಿ ಕುಸಿಯಿತು. ಅಭಿಷೇಕ್ ನೀಡಿದ ಅತ್ಯುತ್ತಮ ಪಾಸ್ ಅನ್ನು ಜುಗ್ರಾಜ್ ಗೋಲಾಗಿ ಪರಿವರ್ತಿಸುವಲ್ಲಿ ಯಶಸ್ವಿಯಾದರು. ಪಂದ್ಯದ ಕೊನೆಯ 10 ನಿಮಿಷಗಳಲ್ಲಿ 1-0 ಮುನ್ನಡೆ ಸಾಧಿಸಿದ ಭಾರತ, ಕೊನೆಯವರೆಗೂ ಎದುರಾಳಿ ತಂಡಕ್ಕೆ ಗೋಲು ಬಾರಿಸುವ ಅವಕಾಶ ನೀಡಲಿಲ್ಲ. ಅಂತಿಮವಾಗಿ ಭಾರತ ಐದನೇ ಬಾರಿ ಈ ಪ್ರಶಸ್ತಿಯನ್ನು ಗೆದ್ದುಕೊಳ್ಳುವಲ್ಲಿ ಯಶಸ್ವಿಯಾಯಿತು.

ಐದನೇ ಬಾರಿಗೂ ಟ್ರೋಫಿ: ಇದು ಏಷ್ಯನ್ ಚಾಂಪಿಯನ್ಸ್ ಟ್ರೋಫಿಯಲ್ಲಿ ಭಾರತಕ್ಕೆ ಸಿಕ್ಕಿರುವ ಐದನೇ ಪ್ರಶಸ್ತಿಯಾಗಿದೆ. 2011 ರಲ್ಲಿ ಆರಂಭವಾದ ಈ ಪಂದ್ಯಾವಳಿಯಲ್ಲಿ ಟೀಂ ಇಂಡಿಯಾ ಮೊದಲ ಆವೃತ್ತಿಯಲ್ಲೇ ಚಾಂಪಿಯನ್ ಆಯಿತು. ಇದಾದ ಬಳಿಕ 2016ರಲ್ಲಿಯೂ ಭಾರತ ಪ್ರಶಸ್ತಿಯನ್ನು ವಶಪಡಿಸಿಕೊಂಡಿತ್ತು. 2018 ರಲ್ಲಿ ಭಾರತ ಮತ್ತು ಪಾಕಿಸ್ತಾನವನ್ನು ಜಂಟಿ ವಿಜೇತರು ಎಂದು ಘೋಷಿಸಲಾಯಿತು. ನಂತರ 2023 ರಲ್ಲಿ, ಟೀಂ ಇಂಡಿಯಾ ನಾಲ್ಕನೇ ಬಾರಿ ಪ್ರಶಸ್ತಿಯನ್ನು ಗೆದ್ದುಕೊಂಡಿತು. ಇದೀಗ ಟೀಂ ಇಂಡಿಯಾ ಸತತ ಎರಡನೇ ಮತ್ತು ಒಟ್ಟು ಐದನೇ ಬಾರಿ ಏಷ್ಯನ್ ಚಾಂಪಿಯನ್ ಆಗಿದೆ. ಈ ಮೂಲಕ ಪ್ಯಾರಿಸ್ ಒಲಿಂಪಿಕ್ಸ್‌ನಲ್ಲಿ ಕಂಚಿನ ಪದಕ ಗೆದ್ದಿದ್ದ ಟೀಂ ಇಂಡಿಯಾ ತನ್ನ ಯಶಸ್ಸನ್ನು ಮುಂದುವರಿಸಿದೆ.

ಸತತ ಆರನೇ ಗೆಲುವು ಪಡೆದ ಅರ್ಜುನ್
ಚೆಸ್ ಆಟದಲ್ಲಿ ಮಹಿಳೆಯರೂ ಮೇಲುಗೈ

ಒಲಿಂಪಿಯಾಡ್: ಅಗ್ರಸ್ಥಾನದಲ್ಲಿ ಭಾರತ

ಬುಡಾಪೆಸ್ಟ್: ವಿಶ್ವದ ನಾಲ್ಕನೇ ನಂಬರ್ ಆಟಗಾರ ಅರ್ಜುನ್ ಇರಿಗೇಶಿ ಚೆಸ್ ಒಲಿಂಪಿಯಾಡ್‌ನಲ್ಲಿ ಸತತ ಆರನೇ ಗೆಲುವನ್ನು ಪಡೆದರು. 45ನೇ ಚೆಸ್ ಒಲಿಂಪಿಯಾಡ್‌ನ ಓಪನ್ ವಿಭಾಗದಲ್ಲಿ ಭಾರತ ಸೋಮವಾರ ಆರನೇ ಸುತ್ತಿನಲ್ಲಿ 3-1 ಅಂತರದಿಂದ ಹಂಗರಿ ತಂಡವನ್ನು ಸೋಲಿಸಿ ಅಗ್ರಸ್ಥಾನದಲ್ಲೇ ಮುಂದುವರಿದಿದೆ. ಮಹಿಳಾ ವಿಭಾಗದಲ್ಲಿ ಭಾರತ, ಅರ್ಮೇನಿಯಾ ತಂಡವನ್ನು ಮಣಿಸಿತು.

ಆದರೆ ಆರನೇ ಸುತ್ತಿನಲ್ಲಿ ಭಾರತದ ಆಟಗಾರರು ಗೆಲುವಿಗೆ ಹೆಚ್ಚು ಶ್ರಮ ಹಾಕಬೇಕಾಯಿತು. ರಷ್ಯಾದಿಂದ ಈ ವರ್ಷವಷ್ಟೇ ಹಂಗರಿಯಲ್ಲಿ ನೆಲೆಕಂಡಿರುವ ಸುಗಿರೋವ್ ಸನನ್ ಅವರನ್ನು ಅರ್ಜುನ್ ಆರನೇ ಸುತ್ತಿನಲ್ಲಿ ಸೋಲಿಸಿದರು.

ಕಪ್ಪು ಕಾಯಿಗಳಲ್ಲಿ ಆಡಿದ ಗುಕೇಶ್, ಮೊದಲ ಬೋರ್ಡ್‌ನಲ್ಲಿ ಹಂಗರಿಯ ಅಗ್ರ ಆಟಗಾರ ರಿಚರ್ಡ್ ರ್ಯಾಪೋರ್ಟ್ ಅವರ ಜೊತೆ ಸುಲಭವಾಗಿ ಡ್ರಾ ಮಾಡಿಕೊಂಡರು. ಪ್ರಜ್ಞಾನಂದ ಅವರೂ ಮಾಜಿ ದಿಗ್ಗಜ ಪೀಟರ್ ಲೆಕೊ ಜೊತೆ ಡ್ರಾ ಕರಾರಿಗೆ ಸಹಿಹಾಕಿದರು. ಕೊನೆಯ ಬೋರ್ಡ್‌ನಲ್ಲಿ ವಿದಿತ್ ಗುಜರಾತಿ, ಬೆಂಜಮಿನ್ ಗ್ಲೆಡುರಾ ವಿರುದ್ಧ ಜಯ ಗಳಿಸಿದರು.

ಸ್ಫೂರ್ತಿಯುತ ಪ್ರದರ್ಶನ ನೀಡಿದ ವಿಯೆಟ್ನಾಮ್ 2-2 ರಿಂದ ಚೀನಾ ತಂಡವನ್ನು ಡ್ರಾಕ್ಕೆ ಒಳಪಡಿಸಿದ ಪರಿಣಾಮ, ಭಾರತ ಈಗ ಏಕಾಂಗಿಯಾಗಿ ಅಗ್ರಸ್ಥಾನಕ್ಕೇರಿದೆ.

ಮಂಗಳವಾರ ವಿರಾಮದ ದಿನ. ಭಾರತ ಬುಧವಾರ ನಡೆಯುವ ಎಂಟನೇ ಸುತ್ತಿನಲ್ಲಿ ಚೀನಾ ವಿರುದ್ಧ ಆಡಲಿದೆ.

ಮಹಿಳಾ ವಿಭಾಗದಲ್ಲಿ ದಿವ್ಯಾ ದೇಶಮುಖ್ ಅವರು, ಎಲೆನಾ ಡೇನಿಲಿಯನ್ ವಿರುದ್ಧ ಅನಿವಾರ್ಯವಾಗಿದ್ದ ಜಯ ಸಾಧಿಸಿದ್ದರಿಂದ ಭಾರತ ಆರನೇ ಸುತ್ತಿನಲ್ಲಿ ಅರ್ಮೇನಿಯಾ ತಂಡವನ್ನು 2.5-1.5 ರಿಂದ ಮಣಿಸಿತು. ಭಾರತ ತಂಡ ಈ ವಿಭಾಗದಲ್ಲಿ ಅಗ್ರ ಶ್ರೇಯಾಂಕ ಪಡೆದಿದೆ.

ಹಾರಿಕಾ ಮೊದಲ ಬೋರ್ಡ್‌ನಲ್ಲಿ ಲಿಲಿಟ್ ಕ್ರಟ್ಚಿಯಾನ್ ಜೊತೆ ಸುರಕ್ಷಿತವಾಗಿ ಡ್ರಾ ಮಾಡಿಕೊಂಡರೆ, ವೈಶಾಲಿ ಅವರೂ ಮರಿಯಮ್ ಕ್ರಟ್ಚಿಯಾನ್ ಜೊತೆ ಡ್ರಾ ಒಪ್ಪಿಕೊಂಡರು. ದಿವ್ಯಾ ತಮ್ಮ ಪಂದ್ಯ ಗೆದ್ದ ಕಾರಣ ಭಾರತ 2-1 ಮುನ್ನಡೆ ಪಡೆಯಿತು. ಹೀಗಾಗಿ ನಾಲ್ಕನೇ ಬೋರ್ಡ್‌ನಲ್ಲಿ ತಾನಿಯಾ ಸಚ್ದೇವ್, ಅನ್ನಾ ಸರ್ಗಾಸಿಯಾನ್ ಜೊತೆ ಡ್ರಾಕ್ಕೆ ಸಹಿಮಾಡಿದರು.

ಮಹಿಳಾ ತಂಡವೂ ಅಗ್ರಸ್ಥಾನದಲ್ಲಿದ್ದು, ಬುಧವಾರ ಏಳನೇ ಸುತ್ತಿನಲ್ಲಿ ಜಾರ್ಜಿಯಾ ತಂಡವನ್ನು ಎದುರಿಸಲಿದೆ.

ಫಿಬಾ ಅಂತಾರಾಷ್ಟ್ರೀಯ ಬಾಸ್ಕೆಟ್ ಬಾಲ್ ಅಸೋಸಿಯೇಷನ್ ಇಂಡೋನೇಷಿಯಾ ಶಾಖೆಯನ್ನು ಮಂಗಳವಾರ ಉದ್ಘಾಟಿಸಲಾಯಿತು. ಏಷ್ಯಾ ಬಾಸ್ಕೆಟ್‌ಬಾಲ್ ಅಸೋಸಿಯೇಷನ್ ಅಧ್ಯಕ್ಷ ಕೆ. ಗೋವಿಂದರಾಜು, ಇಂಡೋನೇಷ್ಯಾ ಅಧ್ಯಕ್ಷ ಜೋಕೋ ವಿಡಾಡೊ ಉದ್ಘಾಟಿಸಿದರು. ಈ ವೇಳೆ ಅಂತಾರಾಷ್ಟ್ರೀಯ ಬಾಸ್ಕೆಟ್ ಬಾಲ್ ಆಟಗಾರ ಎರಿಕ್ ಟಾಯರ್ ಇದ್ದರು.

ಗಂಡ್ಮಕ್ಕಳ ಜತೆ ಸಮಾನ ಗುರು!

ದುಬೈ: ಐತಿಹಾಸಿಕ ನಿರ್ಣಯವೊಂದರಲ್ಲಿ ಪುರುಷ ಮತ್ತು ಮಹಿಳಾ ಕ್ರಿಕೆಟ್ ವಿಶ್ವಕಪ್ ಟೂರ್ನಿಗಳಿಗೆ ಸಮಾನ ಬಹುಮಾನದ ಮೊತ್ತವನ್ನು ಅಂತಾರಾಷ್ಟ್ರೀಯ ಕ್ರಿಕೆಟ್ ಮಂಡಳಿಯು(ಐಸಿಸಿ) ಘೋಷಿಸಿದೆ.

ಮುಂದಿನ ತಿಂಗಳು ಮಹಿಳಾ ಟಿ-20 ವಿಶ್ವಕಪ್ ಟೂರ್ನಿಯು ಆರಂಭವಾಗಲಿದ್ದು, ಅದರ ಬಹುಮಾನ ಮೊತ್ತವನ್ನು ಶೇ 225ರಷ್ಟು ಏರಿಕೆ ಮಾಡಲಾಗಿದೆ. ಅಂದರೆ ಒಟ್ಟು ಬಹುಮಾನದ ಮೊತ್ತ 7.95 ಮಿಲಿಯನ್ ಡಾಲರ್‌ಗೆ(66.58 ಕೋಟಿ ರು.) ಏರಿಕೆ ಮಾಡಲಾಗಿದೆ.

ಮಹಿಳಾ ಟಿ-20 ವಿಶ್ವಕಪ್ ಗೆದ್ದ ತಂಡ ಸುಮಾರು 2.34 ಮಿಲಿಯನ್ ಡಾಲರ್(19.59 ಕೋಟಿ ರು.) ಬಹುಮಾನ ಪಡೆಯಲಿದೆ. 2023ರಲ್ಲಿ ದಕ್ಷಿಣ ಆಫ್ರಿಕಾದಲ್ಲಿ ಮಹಿಳಾ ಟಿ-20 ವಿಶ್ವಕಪ್ ಗೆದ್ದಿದ್ದ ಆಸ್ಟ್ರೇಲಿಯಾ ತಂಡ 1 ಮಿಲಿಯನ್ ಡಾಲರ್(8.37 ಕೋಟಿ ರು.) ಬಹುಮಾನ ಪಡೆದಿತ್ತು. ಈಗ ಬಹುಮಾನದ ಮೊತ್ತ ಶೇ.134ರಷ್ಟು ಹೆಚ್ಚಳವಾಗಿದೆ.

ಈ ವರ್ಷ ಟಿ-20 ವಿಶ್ವಕಪ್ ಗೆದ್ದ ಭಾರತ ಪುರುಷರ ತಂಡವು 2.45 ಮಿಲಿಯನ್ ಡಾಲರ್(20 ಕೋಟಿ ರು.) ಬಹುಮಾನ ಜೇಬಿಗಿಳಿಸಿತ್ತು. ಮಹಿಳಾ ತಂಡವು ಸಹ ಪುರುಷರಿಗೆ ಸಮಾನವಾಗಿ ಬಹುಮಾನದ ಮೊತ್ತವನ್ನು ಸ್ವೀಕರಿಸುತ್ತಿರುವ ಮೊದಲ ಕ್ರೀಡಾಕೂಟ ಐಸಿಸಿ ಮಹಿಳಾ ಟಿ-20 ವಿಶ್ವಕಪ್ ಆಗಿರಲಿದೆ.ಇದು ಕ್ರೀಡಾ ಇತಿಹಾಸದಲ್ಲಿ ಮಹತ್ವದ ಮೈಲಿಗಲ್ಲಾಗಲಿದೆ ಎಂದು ಐಸಿಸಿ ಹೇಳಿದೆ. ಐಸಿಸಿ ಮಹಿಳಾ ಟಿ-20 ವಿಶ್ವಕಪ್ ಟೂರ್ನಿಯ ರನ್ನರ್ ಅಪ್ ತಂಡವು 1.17 ಮಿಲಿಯನ್ ಡಾಲರ್(ಸುಮಾರು 9.8 ಕೋಟಿ ರು.) ಬಹುಮಾನ ಪಡೆಯಲಿದೆ. ಅಂದರೆ, ಕಳೆದ ವರ್ಷ ದಕ್ಷಿಣ ಆಫ್ರಿಕಾದ ಟಿ-20 ಟೂರ್ನಿಯಲ್ಲಿ ಪಡೆದಿದ್ದ 5 ಲಕ್ಷ ಡಾಲರ್ (4.1ಕೋಟಿ ರು.) ಗಿಂತ ಶೇ.134 ರಷ್ಟು ಹೆಚ್ಚಾಗಿದೆ.

ಸೆಮಿಫೈನಲ್‌ನಲ್ಲಿ ಸೋಲುವ ಎರಡು ತಂಡಗಳು ತಲಾ 6.75 ಲಕ್ಷ ಡಾಲರ್(5.65 ಕೋಟಿ ರು.) ಬಹುಮಾನ ಪಡೆಯಲಿವೆ. ಇದು ಶೇ.225ರಷ್ಟು ಏರಿಕೆಯಾಗಿದೆ.

ಗುಂಪು ಹಂತದಲ್ಲಿ ಗೆಲ್ಲುವ ಪ್ರತಿ ತಂಡಕ್ಕೆ 31 ಸಾವಿರ ಡಾಲರ್(26 ಲಕ್ಷ ರು.) ಬಹುಮಾನ ಸಿಗಲಿದೆ. ಸೆಮಿಫೈನಲ್‌ಗೇರಲು ವಿಫಲವಾಗುವ ತಂಡಗಳಿಗೆ ಅವುಗಳ ಸ್ಥಾನ ಆಧಾರದ ಮೇಲೆ 1.35 ಮಿಲಿಯನ್ ಡಾಲರ್ (11.3 ಕೋಟಿ ರು.) ಹಂಚಿಕೆ ಮಾಡಲಾಗುತ್ತದೆ.

ಗಣಪನ ದರುಶನ ಪಡೆದ ಮಿ.ರಾಣಿ

ಸೆಲ್ಫಿ ಮಮ್ಮಿ ಗೂಗಲ್ ಡ್ಯಾಡಿ ಚಿತ್ರವನ್ನು ನಿರ್ದೇಶಿಸಿ ಸೈ ಎನಿಸಿಕೊಂಡ ನಿರ್ದೇಶಕ ಮಧುಚಂದ್ರ ಈಗ ಮತ್ತೊಂದು ಚಿತ್ರವನ್ನು ಹೊತ್ತು ಬರುತ್ತಿದ್ದಾರೆ. ಕಾಮಿಡಿ ಜಾನರ್‌ನ ಮಿ. ರಾಣಿ ಚಿತ್ರವನ್ನು ನಿರ್ದೇಶಿಸಿ ತೆರೆಗೆ ತರುತ್ತಿದ್ದಾರೆ. ಕಿರುತೆರೆಯಲ್ಲಿ ಪ್ರಸಿದ್ಧಿ ಪಡೆದಿರುವ ದೀಪಕ್ ಸುಬ್ರಹ್ಮಣ್ಯ ಈ ಚಿತ್ರದ ಪ್ರಮುಖ ಪಾತ್ರದಲ್ಲಿ ನಟಿಸಿದ್ದಾರೆ. ದೀಪಕ್‌ಗೆ ನಾಯಕಿಯಾಗಿ ಪಾರ್ವತಿ ನಾಯರ್ ನಟಿಸಿದ್ದಾರೆ. ಉಳಿದಂತೆ ಶ್ರೀವತ್ಸ, ರೂಪಾ ಪ್ರಭಾಕರ್, ಲಕ್ಷ್ಮೀ ಕಾರಂತ್, ಮಧುಚಂದ್ರ ಮುಂತಾದವರು ಚಿತ್ರದ ತಾರಾಬಳಗದಲ್ಲಿದ್ದಾರೆ. ಶೀರ್ಷಿಕೆ ಕೇಳಿದಾಕ್ಷಣ ಇದು ಮಹಿಳಾ ಪ್ರಧಾನ ಕಥೆಯ ಸಿನಿಮಾ ಅನ್ನಿಸಬಹುದು. ಅಂತೆಯೇ ಇಲ್ಲಿ ನಾಯಕಿಯ ಪಾತ್ರಕ್ಕೆ ಹೆಚ್ಚಿನ ಒತ್ತು ನೀಡಲಾಗಿದ್ದು, ಕಾಮಿಡಿಯ ಜತೆಗೆ ಸಾಮಾಜಿಕ ಸಂದೇಶವನ್ನು ಸಾರಲಾಗಿದೆ. ಸದ್ಯ ಚಿತ್ರೀಕರಣ ಮುಗಿಸಿರುವ ಮಿ.ರಾಣಿ ಚಿತ್ರತಂಡ ಗಣೇಶನ ದರುಶನ ಪಡೆದು, ಚಿತ್ರದ ಹೊಸ ಪೋಸ್ಟರ್ ಬಿಡುಗಡೆ ಮಾಡಿದೆ.

ಶೂಟಿಂಗ್ ಜತೆಗೆ ಪೋಸ್ಟ್ ಪ್ರೊಡಕ್ಷನ್ ಕಾರ್ಯಗಳನ್ನು ಮುಗಿಸಿರುವ ಮಿ. ರಾಣಿ, ನವೆಂಬರ್‌ನಲ್ಲಿ ರಾಜ್ಯಾದ್ಯಂತ ರಿಲೀಸ್ ಆಗಲಿದೆ. ಎಕ್ಸೆಲ್ ಆರ್ಬಿಟ್ ಕ್ರಿಯೇಷನ್‌ನಲ್ಲಿ ಚಿತ್ರ ನಿರ್ಮಾಣವಾಗಿದೆ. ಜೂಡಾ ಸ್ಯಾಂಡಿ ಸಂಗೀತ ನಿರ್ದೇಶನ, ರವೀಂದ್ರನಾಥ್ ಛಾಯಾಗ್ರಹಣ ಹಾಗೂ ಮಧು ತುಂಬಕೆರೆ ಸಂಕಲನ ಈ ಚಿತ್ರಕ್ಕಿದೆ.

ಬಾಬಾನ ಸನ್ನಿಧಿಯಲ್ಲಿ ತಾಯಿಯೇ ದೇವರು

ಮಮತೆಯ ಬಾಂಧವ್ಯ ಸಾರುವ ತಾಯಿನೇ ದೇವರ ಚಿತ್ರದ ಮುಹೂರ್ತ ದಕ್ಷಿಣ ಶಿರಡಿ ಸಾಯಿ ಮಂದಿರ ನೆರವೇರಿತು. ಡಾ.ಸಾಯಿ ಸತೀಶ್ ತೋಟಯ್ಯ ಕಥೆ, ಚಿತ್ರಕಥೆ ಬರೆದು ಶ್ರೀಸಾಯಿಶಕ್ತಿ ಸಿನಿ ಕಂಬೈನ್ಸ್‌ನಲ್ಲಿ ನಿರ್ಮಾಣ ಮಾಡುತ್ತಿದ್ದಾರೆ. ಅಭಿಮಾನ್.ಹೆಚ್. ಕಾಗಿನಲ್ಲಿ ನಿರ್ದೇಶನ ಮಾಡುತ್ತಿದ್ದಾರೆ. ತಾಯಿಯೇ ದೇವರು ಅಂತ ಯಾಕೆ ಹೇಳುತ್ತಾರೆ ಎಂಬುದನ್ನು ಇದರಲ್ಲಿ ಹೇಳಲು ಹೊರಟಿದ್ದೇವೆ. ಚಿತ್ರದಲ್ಲಿ ಮೂವರು ನಾಯಕರಿದ್ದು, ಮೂವರು ನಾಯಕಿಯರಿದ್ದಾರೆ. ಭವ್ಯಾ ಪ್ರಮುಖ ಪಾತ್ರದಲ್ಲಿ ನಟಿಸುತ್ತಿದ್ದು, ಮಾಲಾಶ್ರೀ ಪವರ್ ಫುಲ್ ಪೋಲೀಸ್ ಅಧಿಕಾರಿಯಾಗಿ ಕಾಣಿಸಿಕೊಳ್ಳಲಿದ್ದಾರೆ. ಉಳಿದಂತೆ ದೊಡ್ಡಣ್ಣ, ಡಿಂಗ್ರಿನಾಗರಾಜ್, ಹೊನ್ನವಳ್ಳಿ ಕೃಷ್ಣ, ಬಾಲರಾಜ್, ಸ್ವಾತಿ ಗುರುದತ್, ರೇಖಾದಾಸ್, ಅಪೂರ್ವಾ, ಅನ್ವಿತಾ ಮೂರ್ತಿ, ಜೀವಿತಾ ಪ್ರಕಾಶ್, ರಾಜ್ ಮನೀಶ್, ಗಣೇಶ್, ಪಂಕಜಾ, ಜ್ಯೂ.ಅಂಬರೀಷ್, ಜ್ಯೂ.ವಿಷ್ಣುವರ್ಧನ್, ಗರುಡಾಚಾರ್, ಗಿಚ್ಚಿ ಗಿಲಿಗಿಲಿ ಖ್ಯಾತಿಯ ಶಿವು ಮುಂತಾದವರು ತಾರಾಗಣದಲ್ಲಿದ್ದಾರೆ. ಬೆಂಗಳೂರು, ಮಂಗಳೂರು, ಚಿಕ್ಕಮಗಳೂರು ಸುತ್ತಮುತ್ತ ಚಿತ್ರೀಕರಣ ನಡೆಸಲು ಚಿತ್ರತಂಡ ಯೋಜನೆ ಹಾಕಿಕೊಂಡಿದೆ.

> **ಇಷ್ಟು ವರ್ಷ ಪೋಲೀಸ್ ಆಫೀಸರ್ ಆಗಿ ವಿಲನ್‌ಗಳೊಂದಿಗೆ ಸೆಣಸಾಡುತ್ತಿದ್ದೆ. ಈ ಚಿತ್ರದಲ್ಲಿ ನನ್ನ ಪಾತ್ರ ಹೊಸತನದಿಂದ ಕೂಡಿದೆ. ಹೃದಯ ಹಾಡಿತು, ಸೋಲಿಲ್ಲದ ಸರದಾರ ಚಿತ್ರಗಳ ಬಳಿಕ ಭವ್ಯಾ ಅವರೊಂದಿಗೆ ತೆರೆ ಹಂಚಿಕೊಳ್ಳುತ್ತಿರುವುದು ಸಂತಸ ತಂದಿದೆ.**
> -ಮಾಲಾಶ್ರೀ ಹಿರಿಯ ನಟಿ

> **ಮನೆಯಲ್ಲಿ ಅಮ್ಮ, ಮಗಳ ಪ್ರೇರಣೆ ಇಟ್ಟುಕೊಂಡು ಕಥೆ ಬರೆದೆ. ವಾಸ್ತವವಾಗಿ ಎಲ್ಲರ ಮನೆಯಲ್ಲಿ ಏನು ನಡೆಯುತ್ತದೆ, ಅದನ್ನೇ ಈ ಚಿತ್ರದಲ್ಲಿ ಹೇಳಲಿದ್ದೇವೆ. ಮೂರು ತಾಯಂದಿರ ಸುತ್ತ ಚಿತ್ರದ ಕಥೆ ಸಾಗುತ್ತದೆ. ಎಲ್ಲರಿಗೂ ಹಿಡಿಸುವ ಕನೆಕ್ಟ್ ಆಗುವ ಸಿನಿಮಾ ಇದಾಗಲಿದೆ.**
> -ಡಾ.ಸತೀಶ್ ತೋಟಯ್ಯ ನಿರ್ಮಾಪಕ

ಗಗನ ಕುಸುಮದ ಮಧುರ ಗಾನ

ಗಗನ ಕುಸುಮ ಶೀರ್ಷಿಕೆಯಲ್ಲಿ ಚಿತ್ರವೊಂದು ಸೆಟ್ಟೇರಿತ್ತು, ಈಗ ಸದ್ದಿಲ್ಲದೆ ಚಿತ್ರೀಕರಣವನ್ನು ಮುಗಿಸಿದೆ. ನಾಗೇಂದ್ರ ಕುಮಾರ್ ಜೈನ್ ಕಥೆ, ಚಿತ್ರಕಥೆ, ಸಂಭಾಷಣೆ ಬರೆದು ನಿರ್ದೇಶನ ಮಾಡಿದ್ದಾರೆ. ಸದ್ಯ ಈ ಚಿತ್ರದ ಹಾಡುಗಳು ಮತ್ತು ಟ್ರೇಲರ್ ಬಿಡುಗಡೆಯಾಗಿದೆ. ವಾಣಿಜ್ಯ ಮಂಡಳಿ ಮಾಜಿ ಅಧ್ಯಕ್ಷ ಎಸ್.ಎ.ಚಿನ್ನೆಗೌಡ ಹಾಡು ಹಾಗೂ ಟ್ರೇಲರ್ ರಿಲೀಸ್ ಮಾಡಿ ಚಿತ್ರಕ್ಕೆ ಶುಭಕೋರಿದರು. ಸಿನಿಮಾದೊಳಗೊಂದು ಸಿನಿಮಾದ ಕಥೆಯನ್ನು ಹೇಳಲಾಗಿದೆ. ಅಂದು ಚಿತ್ರಗಳ ಕೆಲಸ ನಡೆಯುತ್ತಿದ್ದ ಸಮಯದಲ್ಲಿ ನಿರ್ಮಾಪಕರು, ನಿರ್ದೇಶಕರ ವರ್ತನೆಗಳನ್ನು ನೋಡಿ ಅದನ್ನೆ ಚಿತ್ರಕಥೆಗೆ ಬಳಸಲಾಗಿದೆ. ನಾಯಕಿಯ ಧೋರಣೆಗೆ ಬೇಸತ್ತ ನಿರ್ದೇಶಕ ಹಳ್ಳಿಯ ಹುಡುಗಿಯೊಬ್ಬಳನ್ನು ನಾಯಕಿಯಾಗಿ ಮಾಡಿ ಹೇಗೆ ಯಶಸ್ಸು ಗಳಿಸುತ್ತಾನೆ ಎನ್ನುವುದನ್ನು ಸ್ಫೂರ್ತಿದಾಯಕವಾಗಿ ಚಿತ್ರದಲ್ಲಿ ಹೇಳಲಾಗಿದೆ ಎನ್ನುತ್ತಾರೆ ನಿರ್ದೇಶಕರು. ಎಸ್.ಕೆ.ಪ್ರಕಾಶ್ ಸಣ್ಣಕ್ಕಿ, ದಿನೇಶ್‌ಗೌಡ, ಕಾವ್ಯಾ ಪ್ರಕಾಶ್, ಆಶಾ, ಹರಣಿ ನಟರಾಜ್ ಮುಂತಾದವರು ತಾರಾಗಣದಲ್ಲಿದ್ದಾರೆ. ಎಸ್.ಎಸ್.ಕ್ರಿಯೇಶನ್ಸ್ ಬ್ಯಾನರ್‌ನಲ್ಲಿ ಆರ್.ಶೇಖರನ್ ಚಿತ್ರ ನಿರ್ಮಾಣಕ್ಕೆ ಬಂಡವಾಳ ಹೂಡಿದ್ದಾರೆ. ಜತೆಗೆ ಪ್ರಮುಖ ಪಾತ್ರದಲ್ಲಿ ಕಾಣಿಸಿಕೊಂಡಿದ್ದಾರೆ. ಸಂಗೀತ ನಿವೇದ್, ಛಾಯಾಗ್ರಹಣ ಸೂರ್ಯೋದಯ, ಸಂಕಲನ ಅಭಿಷೇಕ್‌ಯೋಗಿ, ನೃತ್ಯ ರಾಜ್‌ದೇವ್ ಅವರದಾಗಿದೆ. ನವೆಂಬರ್‌ನಲ್ಲಿ ಗಗಮ ಕುಸುಮ ತೆರೆಗೆ ಬರಲಿದೆ.

ಕುತೂಹಲಕಾರಿ ಹಗ್ಗ

ಅನು ಪ್ರಭಾಕರ್ ವಿಭಿನ್ನ ಪಾತ್ರದಲ್ಲಿ ಕಾಣಿಸಿಕೊಂಡಿರುವ ಹಗ್ಗ ಚಿತ್ರದ ಟ್ರೇಲರ್ ರಿಲೀಸ್ ಆಗಿದ್ದು ಕುತೂಹಲ ಮೂಡಿಸಿದೆ. ಹಗ್ಗ ಹಾರರ್ ಕಥೆಯ ರೋಚಕ ಸ್ಟೋರಿಯನ್ನು ಒಳಗೊಂಡಿದೆ. ಅವಿನಾಶ್ ಚಿತ್ರದ ಕಥೆ ಹೆಣೆದು ನಿರ್ದೇಶನ ಮಾಡಿದ್ದಾರೆ. ಇದೊಂದು ಹಾರರ್ ಫ್ಯಾಂಟಸಿ ಆ್ಯಕ್ಷನ್, ಥ್ರಿಲ್ಲರ್ ಚಿತ್ರ. ಇಲ್ಲಿ ಸಂದೇಶವಿದೆ, ಸಾಕಷ್ಟು ಗ್ರಾಫಿಕ್ಸ್ ಇದೆ. ಒಂದು ಪಾತ್ರಕ್ಕಾಗಿ ಅನು ಪ್ರಭಾಕರ್ ಇದ್ದರೇ ಚೆನ್ನಾಗಿರುತ್ತದೆ ಎನಿಸಿತು. ಕಥೆ ಕೇಳಿ ಅವರೂ ಒಪ್ಪಿಕೊಂಡರು. ಆ ನಂತರ ಆ ಪಾತ್ರವನ್ನು ಅವರು ಬಿಟ್ಟರೆ ಯಾರಿಂದಲೂ ನಿರ್ವಹಿಸಲು ಸಾಧ್ಯವಿಲ್ಲ ಎಂದನಿಸಿತು ಎಂದು ನಿರ್ದೇಶಕ ಅವಿನಾಶ್ ಹೇಳಿದರು.

ನನಗೆ ಹಾರರ್ ಚಿತ್ರಗಳೆಂದರೆ ಇಷ್ಟವಿಲ್ಲ. ನಾನು ಹಾರರ್ ಚಿತ್ರಗಳನ್ನು ನೋಡುವುದಿಲ್ಲ. ಆದರೂ ನಾನು ಒಪ್ಪಿದ್ದು ಅವರು ಹೇಳಿದ ಕಥೆಗಾಗಿ. ನನಗೆ ಅವರ ಸ್ಪಷ್ಟತೆ ಇಷ್ಟವಾಯಿತು. ಅವರು ಏನು ಹೇಳಿದ್ದರೊ, ಅದನ್ನು ತೆರೆಯ ಮೇಲೆ ತಂದಿದ್ದಾರೆ. ಮೊದಲ ಚಿತ್ರದಲ್ಲೇ ಇಷ್ಟೊಂದು ಚೆನ್ನಾಗಿ ಕೆಲಸ ಮಾಡಿದ್ದು ನೋಡಿ ಖುಷಿಯಾಯಿತು ಎಂದು ಅನು ಪ್ರಭಾಕರ್ ಸಂತಸದಿಂದ ನುಡಿದರು.

ನಮ್ಮ ಟೀಸರ್ ಬಹಳ ಯಶಸ್ವಿಯಾಯಿತು. ಹಲವು ದಿನಗಳ ಕಾಲ ಟ್ರೆಂಡ್ ಆಗಿತ್ತು. ಈ ಚಿತ್ರ ಗೆಲ್ಲುತ್ತದೆ ಎಂಬ ವಿಶ್ವಾಸ ಇದೆ. ಅದರಲ್ಲೂ ಅನು ಪ್ರಭಾಕರ್ ಅವರು ದ್ವಿತೀಯಾರ್ಧವನ್ನು ಯಶಸ್ವಿಯಾಗಿ ಮುನ್ನಡೆಸಿದ್ದು, ತಮ್ಮ ಪಾತ್ರವನ್ನು ಮೆಚ್ಚುವಂತೆ ನಿಭಾಯಿಸಿದ್ದಾರೆ ಎಂದು ನಿರ್ಮಾಪಕ ರಾಜ್ ಭಾರದ್ವಾಜ್ ತಿಳಿಸಿದರು.

ಬಾರ್ಡರ್‌ಗೆ ಬಂದ ಸನ್ನಿ

ಎರಡೂವರೆ ದಶಕಗಳ ಹಿಂದೆ ತೆರೆಗೆ ಬಂದ ಬಾರ್ಡರ್ ಬಾಲಿವುಡ್‌ನಲ್ಲಿ ಹೊಸ ದಾಖಲೆ ಬರೆಯಿತು. ಅದೇ ಯಶಸ್ಸಿನಲ್ಲಿ ಈಗ ಬಾರ್ಡರ್ 2 ಸೆಟ್ಟೇರಲು ಸಿದ್ಧವಾಗುತ್ತಿದೆ. ಈ ಚಿತ್ರದಲ್ಲಿಯೂ ಸನ್ನಿ ಡಿಯೋಲ್ ಪ್ರಮುಖ ಪಾತ್ರದಲ್ಲಿ ನಟಿಸಲಿದ್ದಾರೆ. ಗದರ್ 2 ಗೆಲುವಿನ ಖುಷಿಯಲ್ಲಿರುವ ಸನ್ನಿ, ಬಾರ್ಡರ್ ಚಿತ್ರಕ್ಕಾಗಿ ಭರ್ಜರಿ ತಯಾರಿ ನಡೆಸಿದ್ದಾರೆ. ಬಾರ್ಡರ್‌ನಲ್ಲಿ 1971ರ ಭಾರತ ಮತ್ತು ಪಾಕಿಸ್ತಾನದ ಯುದ್ಧದ ಕುರಿತಂತೆ ಕಥೆಯಿತ್ತು. ಈಗ ಮುಂದಿನ ಭಾಗದಲ್ಲಿಯೂ ವಾರ್ ಸ್ಟೋರಿ ಇರಲಿದೆ ಎಂಬುದು ಖಚಿತವಾಗಿದೆ. ಬಾರ್ಡರ್‌ನಲ್ಲಿ ನಟಿಸಿದ್ದ ಹಲವು ಕಲಾವಿದರು ಈ ಚಿತ್ರದಲ್ಲಿಯೂ ಕಾಣಿಸಿಕೊಳ್ಳಲಿದ್ದಾರೆ. ಜತೆಗೆ ಸಂಜಯ್ ದತ್, ಅಮೀರ್ ಖಾನ್, ವರುಣ್ ದವನ್ ಕೂಡ ಸಿನಿಮಾದಲ್ಲಿ ಅಭಿನಯಿಸಲಿದ್ದಾರೆ. ನವೆಂಬರ್‌ನಲ್ಲಿ ಬಾರ್ಡರ್ 2 ಸೆಟ್ಟೇರಲಿದ್ದು ಚಿತ್ರೀಕರಣವೂ ಆರಂಭವಾಗಲಿದೆ. ಕಾಶ್ಮೀರದಲ್ಲಿ ಬಹುತೇಕ ಚಿತ್ರೀಕರಣ ನಡೆಸಲು ಚಿತ್ರತಂಡ ಪ್ಲಾನ್ ಮಾಡಿದೆ. ಜೆ.ಪಿ.ದತ್ತಾ, ಭೂಷಣ್ ಕುಮಾರ್, ಅನುರಾಗ್ ಸಿಂಗ್ ಮೂವರು ಈ ಚಿತ್ರಕ್ಕಾಗಿ ಒಂದಾಗಿದ್ದಾರೆ. ಹಾಗಾಗಿಯೇ ಸೆಟ್ಟೇರುವ ಮೊದಲೇ ಚಿತ್ರದ ಬಗ್ಗೆ ಕುತೂಹಲ ಹೆಚ್ಚಾಗಿದೆ. ಎರಡು ವರ್ಷಗಳ ಕಾಲ ಚಿತ್ರೀಕರಣ ನಡೆಯಲಿದ್ದು, ಬಲು ಅದ್ದೂರಿಯಾಗಿ ಮೂಡಿಬರಲಿದೆ. 2026ರ ಗಣರಾಜ್ಯೋತ್ಸವದಂದು ಬಾರ್ಡರ್ 2 ಬಿಡುಗಡೆಯಾಗಲಿದೆ. ಬಾರ್ಡರ್ 2 ಹಿಟ್ ಆಗುವುದು ಖಚಿತವಾಗಿದ್ದು, ಸನ್ನಿ ಡಿಯೋಲ್‌ಗೆ ಈ ಚಿತ್ರ ಮತ್ತೊಂದು ಬಿಗ್ ಬ್ರೇಕ್ ನೀಡಲಿದೆ.

ಸುಬ್ರಹ್ಮಣ್ಯನಾಗಿ ಕಂಗೊಳಿಸಿದ ಅದ್ವೈ

ಆರ್ಮುಗ ರವಿಶಂಕರ್ ಪುತ್ರ ಅದ್ವೈ ಚಿತ್ರರಂಗಕ್ಕೆ ಭರ್ಜರಿಯಾಗಿ ಎಂಟ್ರಿಕೊಡಲು ರೆಡಿಯಾಗಿದ್ದಾರೆ. ಸುಬ್ರಹ್ಮಣ್ಯ ಸಿನಿಮಾದ ಮೂಲಕ ಅದ್ವೈ ಸಿನಿಪ್ರಿಯರಿಗೆ ಪರಿಚಿತರಾಗಲಿದ್ದಾರೆ. ಸುಬ್ರಹ್ಮಣ್ಯನ ಫಸ್ಟ್ ಗ್ಲಿಂಪ್ಸ್ ಬಿಡುಗಡೆಯಾಗಿದ್ದು ಭರ್ಜರಿ ರೆಸ್ಪಾನ್ಸ್ ಪಡೆಯುತ್ತಿದೆ. ವಿಷಪೂರಿತ ಹಾವುಗಳಿಂದ ತುಂಬಿದ ಬಾವಿಗೆ ಹಗ್ಗದ ಮೂಲಕ ಎಂಟ್ರಿ ಕೊಡುವ ಅದ್ವೈ ಆ ಬಾವಿಯಲ್ಲಿರುವ ಪುರಾತನ ಪುಸ್ತಕವನ್ನು ಎತ್ತಿಕೊಂಡು ಹೊರ ಬರುತ್ತಾರೆ. ಎಲ್ಲಾ ಹಾವುಗಳು ನಾಯಕನನ್ನು ಬೆನ್ನಟ್ಟುವುದರೊಂದಿಗೆ ಓಡಲು ಪ್ರಾರಂಭಿಸುತ್ತಾರೆ. ಈ ಗ್ಲಿಂಪ್ಸ್ ಅದ್ಭುತವಾಗಿ ಮೂಡಿಬಂದಿದ್ದು, ಮೈಜುಂ ಎನ್ನಿಸುತ್ತದೆ. ಸುಬ್ರಹ್ಮಣ ಗ್ಲಿಂಪ್ಸ್‌ಗಾಗಿ ದೊಡ್ಡ ತಾಂತ್ರಿಕ ಬಳಗವೇ ಶ್ರಮಿಸಿದೆ. ಸುಬ್ರಹ್ಮಣ್ಯ ಸೋಶಿಯೋ-ಫ್ಯಾಂಟಸಿ ಶೈಲಿಯ ಸಿನಿಮಾವಾಗಿದ್ದು, ಆ್ಯಕ್ಷನ್‌ಗೂ ಹೆಚ್ಚಿನ ಒತ್ತು ನೀಡಲಾಗಿದೆ. ರವಿಶಂಕರ್ ತಮ್ಮ ಪುತ್ರನಿಗಾಗಿ ಎರಡು ದಶಕಗಳ ಬಳಿಕ ನಿರ್ದೇಶಕರ ಕ್ಯಾಪ್ ತೊಟ್ಟಿದ್ದಾರೆ. ಎಸ್.ಜಿ ಮೂವಿ ಮೇಕರ್ಸ್ ಬ್ಯಾನರ್‌ನಲ್ಲಿ ತಿರುಮಲ ರೆಡ್ಡಿ ಹಾಗೂ ಅನಿಲ್ ಕಡಿಯಾಲ ಚಿತ್ರ ನಿರ್ಮಾಣ ಮಾಡುತ್ತಿದ್ದಾರೆ. ರವಿ ಬಸ್ರೂರು ಈ ಸಿನಿಮಾಗೆ ಸಂಗೀತ ಸಂಯೋಜಿಸಿದ್ದು, ಚಿತ್ರದ ಬಗ್ಗೆ ನಿರೀಕ್ಷೆ ಹೆಚ್ಚುವಂತೆ ಮಾಡಿದೆ. ವಿಘ್ನೇಶ್ ರಾಜ್ ಛಾಯಾಗ್ರಹಣ, ವಿಜಯ್. ಎಂ.ಕುಮಾರ್ ಸಂಕಲನ ಈ ಚಿತ್ರಕ್ಕಿದೆ.